ಮಂಗಳೂರು
ಸೋಮವಾರ, 4 ಮೇ 2026
ಸಂಪುಟ 48, ಸಂಚಿಕೆ 46 ಪುಟಗಳು 12+6
ಬೆಂಗಳೂರು ಮಂಗಳೂರು ಶಿವಮೊಗ್ಗ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಕಿರುಸುದ್ದಿ

ಅಂಗನವಾಡಿ ಹುದ್ದೆಗೆ ಅರ್ಜಿ ಆಹ್ವಾನ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಕಂ ಕ್ರಷ್‌ನ 48 ಕ್ರಷ್ ಕಾರ್ಯಕರ್ತೆ ಹಾಗೂ 49 ಕ್ರಷ್ ಸಹಾಯಕಿ ಹುದ್ದೆಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಕಾರ್ಯಕರ್ತೆಯರ ಮಾಸಿಕ ಗೌರವಧನ ರೂ.5500 ಹಾಗೂ ಸಹಾಯಕಿಯರ ಮಾಸಿಕ ಗೌರವಧನ ರೂ.3000 ಆಗಿರುತ್ತದೆ.

ಅರ್ಜಿ ಸಲ್ಲಿಸಲು ಮೇ 16 ಕೊನೆಯ ದಿನ. ಸೂಕ್ತ ದಾಖಲೆಗಳೊಂದಿಗೆ ಆದೇ ಅಂಗನವಾಡಿ ಸರ್ವೆ ವ್ಯಾಪ್ತಿಯ 18 ರಿಂದ 35 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅಂಗನವಾಡಿ ಕಂ ಕ್ರಷ್‌ನ ಕಾರ್ಯಕರ್ತೆ ಹುದ್ದೆಗೆ ಕರ್ನಾಟಕ ರಾಜ್ಯದ ಪದವಿ ಪೂರ್ವ ಶಿಕ್ಷಣ ಇಲಾಖೆಯ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ ಕರ್ನಾಟಕ ರಾಜ್ಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುತ್ತದೆ. ಸಹಾಯಕಿ ಹುದ್ದೆಗೆ ಕರ್ನಾಟಕ ರಾಜ್ಯದ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ 10 ನೇ ತರಗತಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಈ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿ ಲಭ್ಯವಿಲ್ಲದೇ ಇದ್ದಲ್ಲಿ 7 ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು ಅಥವಾ ತತ್ಸಮಾನ ವಿದ್ಯಾರ್ಹತೆ ಹೊಂದಿದವರನ್ನು ಪರಿಗಣಿಸಲಾಗುತ್ತದೆ.ಹೆಚ್ಚಿನ ವಿದ್ಯಾರ್ಹತೆಯನ್ನು ಪರಿಗಣಿಸುವುದಿಲ್ಲ. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗೆ ಆಯಾ ವ್ಯಾಪ್ತಿಯ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಮಂಗಳೂರು ನಗರ: 0824-2959809, ಮಂಗಳೂರು ಗ್ರಾಮಾಂತರ : 9620636888, 7760729919, ವಿಟ್ಲ: 08255-238080, ಬೆಳ್ತಂಗಡಿ: 08256-295134, ಸುಳ್ಯ: 08257-298139 ಯನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರೇಖಾ ಕೆ.ಗೆ ಪಿಎಚ್‌ಡಿ ಪದವಿ

ಉಡುಪಿ: ವೈಕುಂಠ ಬಾಳಿಗ ಕಾನೂನು ಕಾಲೇಜಿನ ಪ್ರಾಚಾರ್ಯೆ ಸುರೇಖಾ ಕೆ. ಅವರಿಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು 'ಎ ಕ್ರಿಟಿಕಲ್ ಸ್ಟಡಿ ಆಫ್ ದಿ ಎನ್‌ಫೋರ್ಸ್‌ಮೆಂಟ್ ಆಫ್ ದಿ ಡಿಸಿಶನ್ ಆಫ್ ಇಂಟರ್‌ನ್ಯಾಷನಲ್ ಕೋರ್ಟ್ ಆಫ್ ಜಸ್ಟೀಸ್' ಎಂಬ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿಯನ್ನು ನೀಡಿದೆ.



ಇವರು ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ. ಅನು ಪ್ರಸನ್ನನ್ ಅವರ ಮಾರ್ಗದರ್ಶನದಲ್ಲಿ ಈ ಮಹಾಪ್ರಬಂಧವನ್ನು ಪೂರ್ಣಗೊಳಿಸಿದ್ದಾರೆ. ಸುರೇಖಾ ಕೆ. ಅವರು ಮಲ್ಪೆಯ ಕೃಷ್ಣ ಮತ್ತು ಗಿರಿಜಾ ಮಬಿಯಾನ್ ದಂಪತಿಯ ಪುತ್ರಿಯಾಗಿದ್ದು, ಸದಾಶಿವ ಆದಿಉಡುಪಿ ಅವರ ಪತ್ನಿ ಹಾಗೂ ಸೂರಜ್ ಪೂಜಾರಿ ಮಲ್ಪೆ ಅವರ ಸಹೋದರಿಯಾಗಿದ್ದಾರೆ.

ಮೇ 11ರಿಂದ 16ರ ವರೆಗೆ ಮಕ್ಕಳಿಗಾಗಿ ಬೇಸಿಗೆ ಶಿಬಿರ

ಉಡುಪಿ: ಮಣಿಪಾಲದ ಮುನಿಯಾಲು ಆಯುರ್ವೇದ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಬಾಲರೋಗ ಮತ್ತು ಸ್ವಸ್ಥವೃತ್ತ ವಿಭಾಗವು 6-15 ವಯೋಮಿತಿಯ ಮಕ್ಕಳಿಗೆ ಮೇ 11ರಿಂದ 16ರ ವರೆಗೆ ಬೆಳಗ್ಗೆ 9.30ರಿಂದ ಮಧ್ಯಾಹ್ನ 12.30 ವರೆಗೆ ಆಯೋಜಿಸಿದೆ. ಈ ಶಿಬಿರದಲ್ಲಿ ಮಕ್ಕಳ ಉಚಿತ ರೋಗ್ಯ ತಪಾಸಣೆಯ ಜೊತೆಗೆ ಮಕ್ಕಳಿಗೆ ಯೋಗ, ಆತ್ಮರಕ್ಷಣೆ, ಉತ್ತಮ ಆರೋಗ್ಯಕ್ಕೆ ಆಯುರ್ವೇದ ಆಹಾರ ಪದ್ಧತಿ ಇತ್ಯಾದಿಗಳನ್ನು ಹೇಳಿ ಕೊಡಲಾಗುತ್ತದೆ. ನೋಂದಣಿಗಾಗಿ ಸಂಪರ್ಕಿಸಿ: 8123403233. ನೋಂದಣಿಗೆ ಕೊನೆಯ ದಿನಾಂಕ ಮೇ 5. ಪೋಷಕರು ಮಕ್ಕಳನ್ನು ಶಿಬಿರದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕೆಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಸಂಘ ಶತಾಬ್ದಿ ಪ್ರಯುಕ್ತ ಕುಂಪಲದ ವೀರಮ್ಮರಿಗೆ ನಿರ್ಮಿಸಿದ 'ದೇವಿ ನಿಲಯ' ಗೃಹ ಪ್ರವೇಶದಲ್ಲಿ ರವೀಂದ್ರ ಶೆಟ್ಟಿ ಅಭಿಮತ

ಅಶಕ್ತರಿಗೆ ಸೂರು ಕಟ್ಟಿಸುವುದು ಪುಣ್ಯ ಕಾರ್ಯ

ಉಳ್ಳಾಲ: ಮಾತು ಬಾರದ ಪ್ರಾಣಿ ಪಕ್ಷಿಗಳಿಗೂ ಸಹ ಉಳಿಯಲು ಒಂದು ಸೂರು ಇರುತ್ತದೆ. ಅದೇ ರೀತಿ ಮಾನವರು ಕೂಡಾ ವ್ಯವಸ್ಥಿತ ಜೀವನ ಸಾಗಿಸಲು ಮನೆ ಅತ್ಯಾವಶ್ಯಕವಾಗಿದೆ. ಪತಿ ಮತ್ತು ಪುತ್ರನನ್ನು ಕಳಕೊಂಡು ಸಂಕಷ್ಟದಲ್ಲಿದ್ದ ವೃದ್ಧೆ ವೀರಮ್ಮ ಅವರಿಗೆ ಸುಸಜ್ಜಿತ ಮನೆ ನಿರ್ಮಿಸಿ ಕೊಟ್ಟು ಸಂಘ ಶತಾಬ್ದಿಯನ್ನು ಅರ್ಥಪೂರ್ಣವಾಗಿ ಸಂಭ್ರಮಿಸಿದ ಕುಂಪಲದ ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯ ಕಾರ್ಯ ಸಮಾಜಕ್ಕೆ ಮಾದರಿಯಾಗಿದೆಯೆಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶತಾಬ್ದಿಯ ಪ್ರಯುಕ್ತ ಸಂಘ ಪ್ರೇರಿತ ಸಂಸ್ಥೆಯಾದ ಕುಂಪಲದ ರಾಷ್ಟ್ರೀಯ ಸೇವಾ ಭಾರತಿ ಕೇಸರಿ ಶಾಖೆಯ ಮುಂದಾಳುತ್ವದಲ್ಲಿ ಕುಂಪಲ ಕೇಸರಿ ಮಿತ್ರ ವೃಂದ ಸೇವಾ ಟ್ರಸ್ಟ್, ಕೇಸರಿ ಮಿತ್ರ ವೃಂದ, ಕೇಸರಿ ಮಾತೃ ಮಂಡಳಿಯ ಸಹಯೋಗ ಹಾಗೂ ಸಮಾಜದ ದಾನಿಗಳ ಸಹಕಾರದಿಂದ ಪತಿ ಮತ್ತು ಮಗನನ್ನು ಕಳಕೊಂಡು ವಿಧವೆ ಸೊಸೆ ಹಾಗೂ ಮೂರು ಮೊಮ್ಮಕ್ಕಳೊಂದಿಗೆ ವಾಸವಿರುವ ಕುಂಪಲ ಬಗಂಬಿಲದ ಅಮೃತನಗರ ನಿವಾಸಿ ವೃದ್ಧೆ ವೀರಮ್ಮ ಅವರಿಗೆ ನಿರ್ಮಿಸಿ ಕೊಡಲಾದ 'ದೇವಿ ನಿಲಯ' ನೂತನ ಮನೆಯ ಗೃಹ ಪ್ರವೇಶ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.



ಕುಂಪಲ ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಸ್ಥಾಪಕಾಧ್ಯಕ್ಷ ನಾರಾಯಣ ಕುಂಪಲ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಾ ಸಂಘ ಪ್ರೇರಿತ ವಿವಿಧ ಸಂಘ ಸಂಸ್ಥೆಗಳ ಸಹಯೋಗ ಹಾಗೂ ದಾನಿಗಳ ಸಹಕಾರದಿಂದ ಸಂಘ ಶತಾಬ್ದಿಯ ಪ್ರಯುಕ್ತ ವೀರಮ್ಮ ಅವರ ಕುಟುಂಬಕ್ಕೆ ಸುಸಜ್ಜಿತ ತಾರಸಿ ಮನೆಯನ್ನು ನಿರ್ಮಿಸಿ ಕೊಡಲಾಗಿದೆ. ಸಂಕಷ್ಟದಲ್ಲಿರುವವರಿಗೆ ಸಹಾಯ ಚಾಚುವುದೇ ಸಂಘದ ಮೂಲ ಉದ್ದೇಶವಾಗಿದೆ. ವೀರಮ್ಮ ಅವರು ಸಂಸಾರ ಸಾಗಿಸಲು ತನ್ನ ಇಳಿ ವಯಸ್ಸಲ್ಲಿ ದೇವಸ್ಥಾನಗಳಲ್ಲಿ ಪಾತ್ರೆ ತೊಳೆದು ಬಹಳ ಕಷ್ಟದ ದಿನಗಳನ್ನು ಕಳೆಯುತ್ತಿದ್ದರು. ಅವರ ಕುಟುಂಬಕ್ಕೆ ಆಸರೆಯಾಗುವ ನಿಟ್ಟಿನಲ್ಲಿ ಸಂಘದ ಹಿರಿಯರ ಮಾರ್ಗದರ್ಶನ ಪಡೆದು ಮನೆ ನಿರ್ಮಾಣ ಕಾಮಗಾರಿಗೆ ಇಳಿದಿದ್ದೆವು. ಕಲ್ಲು, ಮರಳು ಅಭಾವದಿಂದ ಮನೆ ನಿರ್ಮಾಣ ಕಾಮಗಾರಿ ಕೊಂಚ ವಿಳಂಬ ಆದರೂ ಸುಂದರ, ಸುಸಜ್ಜಿತ ಮನೆ ನಿರ್ಮಾಣಗೊಂಡಿದೆ. ನೂತನ ಮನೆಯಲ್ಲಿ ವೀರಮ್ಮ ಅವರ ಕುಟುಂಬವು ಸಂತೋಷದಿಂದ ಜೀವನ ನಡೆಸಲಿಯೆಂದು ಹಾರೈಸಿದರು.

ಸೋಮೇಶ್ವರ ಪುರಸಭೆಯ ಅಧ್ಯಕ್ಷರಾದ ಕಮಲ, ಸ್ಥಳೀಯ ಪುರಸಭಾ ಸದಸ್ಯರಾದ ಮಾಲತಿ, ಕುಂಪಲ ಕೇಸರಿ ಮಿತ್ರ ವೃಂದ ಟ್ರಸ್ಟ್‌ನ ಅಧ್ಯಕ್ಷ ಸುಧಾಕರ ಕುಂಪಲ, ಕಾರ್ಯದರ್ಶಿ ವೆಂಕಟೇಶ್ ಕುಂಪಲ, ರಾಷ್ಟ್ರೀಯ ಸ್ವಯಂ ಸೇವಾ ಸಂಘದ ಗ್ರಾಮ ವಿಕಾಸ ವಿಭಾಗ ಟೋಲಿ ಸದಸ್ಯ ರವಿಚಂದ್ರನ್, ಪರ್ಯಾವರಣ ಕರ್ನಾಟಕ ಪ್ರಾಂತ ಸಹ ಸಂಯೋಜಕ ಚಂದ್ರಹಾಸ ಮಾಸ್ಟರ್, ವಿಶ್ವ ಹಿಂದೂ ಪರಿಷತ್‌ನ ಸಹ ಸೇವಾ ಪ್ರಮುಖರಾದ ಗೋಪಾಲ ಕುತ್ತಾರು, ಕರಾವಳಿ ಕರ್ನಾಟಕ ಪರಿಷತ್ ವಿಭಾಗ ಸಂಯೋಜಕರಾದ ಸೂರಜ್ ತೊಕ್ಕೊಟ್ಟು, ಕೇಸರಿ ಮಿತ್ರ ವೃಂದ ಮಾತೃ ಮಂಡಳಿ ಅಧ್ಯಕ್ಷೆ ದಿವ್ಯ ರಾಕೇಶ್, ನಿಕಟ ಪೂರ್ವ ಅಧ್ಯಕ್ಷೆ ಆಶಾ ಸುರೇಶ್, ಸದಸ್ಯರಾದ ಕುಸುಮಾ, ಆಶಾ, ಶಶಿಕಲಾ, ಲಿಸಿತಾ, ಪ್ರಮುಖರಾದ ಜಗನ್ನಾಥ ಕುತ್ತಾರು ಮೊದಲಾದವರು ಉಪಸ್ಥಿತರಿದ್ದರು.

ವೀರಮ್ಮರ ಮೊಮ್ಮಗನಿಗೆ ಉಚಿತ ಆಂಗ್ಲ ಶಿಕ್ಷಣ

ವೃದ್ಧೆ ವೀರಮ್ಮ ಅವರ ಕಿರಿಯ ಮೊಮ್ಮಗ ಮನೋಜ್ ಆರಂಭದಲ್ಲಿ ಖಾಸಗಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕಲಿಯುತ್ತಿದ್ದು, ತಂದೆಯ ಮರಣಾ ನಂತರ ಕುಂಪಲ, ಬಗಂಬಿಲದ ಸರಕಾರಿ ಶಾಲೆಯಲ್ಲಿ ಮೂರನೇ ತರಗತಿಯಲ್ಲಿ ಓದುತ್ತಿದ್ದಾನೆ. ಮನೋಜ್‌ಗೆ ತನ್ನ ಒಡೆತನದ ದೇರಳಕಟ್ಟೆ ವಿದ್ಯಾರತ್ನ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹೈಸ್ಕೂಲ್ ಶಿಕ್ಷಣವನ್ನು ಸಂಪೂರ್ಣ ಉಚಿತವಾಗಿ ನೀಡುವುದಾಗಿ ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಉಳಿದೊಟ್ಟು ಅವರು ವೀರಮ್ಮ ಅವರಿಗೆ ಮಾತು ಕೊಟ್ಟರು.

ಧರ್ಮಸ್ಥಳ ರುಡ್‌ಸೆಟ್ ಸಂಸ್ಥೆಯ ವಾರ್ಷಿಕ ವರದಿ ಬಿಡುಗಡೆ

ಹೆಚ್ಚೆಚ್ಚು ತರಬೇತಿ ನೀಡಿ: ಡಾ.ಹೆಗ್ಗಡೆ



ಬೆಳ್ತಂಗಡಿ: ಉಜಿರೆ ಸಿದ್ದವನದ ರುಡ್ ಸೆಟ್ ಸಂಸ್ಥೆಯ 2025-26ನೇ ಆರ್ಥಿಕ ವರ್ಷದ ವರದಿಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ರುಡ್ ಸೆಟ್ ಸಂಸ್ಥೆಗಳ ಅಧ್ಯಕ್ಷ, ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಬಿಡುಗಡೆಗೊಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಯುವಕರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವಲ್ಲಿ ರುಡ್ ಸೆಟ್ ಸಂಸ್ಥೆ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎಂದು ನುಡಿದರು. 2025-26ನೇ ಸಾಲಿನಲ್ಲಿ ಸಂಸ್ಥೆ ಕೈಗೊಂಡಿರುವ ವಿವಿಧ ತರಬೇತಿ ಕಾರ್ಯಕ್ರಮಗಳು, ಸ್ವಉದ್ಯೋಗ ಪ್ರೋತ್ಸಾಹ ಚಟುವಟಿಕೆಗಳು ಹಾಗು ಸಮಾಜಮುಖಿ ಕಾರ್ಯಗಳನ್ನು ಶ್ಲಾಘಿಸಿ, ಸಂಸ್ಥೆಯ ಪ್ರಗತಿಯ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಇನ್ನಷ್ಟು ಹೊಸ ಯೋಜನೆಗಳ ಮೂಲಕ ಹೆಚ್ಚಿನ ಯುವಕರಿಗೆ ತರಬೇತಿ ನೀಡುವಂತೆ ಸಲಹೆ ನೀಡಿ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ರುಡ್ ಸೆಟ್ ಸಂಸ್ಥೆಗಳ ಕಾರ್ಯನಿರ್ವಾಹಕ ನಿರ್ದೇಶಕ ಬಿ.ಪಿ.ವಿಜಯಕುಮಾರ್, ಸಂಸ್ಥೆಯ ನಿರ್ದೇಶಕ ಅಜೇಯ, ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್, ಕೆ.ಕರುಣಾಕರ ಜೈನ್, ರಶ್ಮಿ, ಪ್ರವೀಣಕುಮಾರ್, ಕಾಶ್ಮೀರ ಡಿಸೋಜಾ , ಸುರೇಶ ಉಪಸ್ಥಿತರಿದ್ದರು.

ವಿವಿಧ ವೃತ್ತಿಪರ, ಸ್ವಉದ್ಯೋಗಾಧಾರಿತ ತರಬೇತಿ

ಸಂಸ್ಥೆಯು 2025-26ನೇ ಸಾಲಿನಲ್ಲಿ 1006 ನಿರುದ್ಯೋಗಿ ಯುವಕ- ಯುವತಿಯರಿಗೆ ವಿವಿಧ ವೃತ್ತಿಪರ, ಸ್ವಉದ್ಯೋಗಾಧಾರಿತ ತರಬೇತಿಗಳನ್ನು ನೀಡಿದೆ. ಈ ತರಬೇತಿಗಳಲ್ಲಿ ಉದ್ಯಮ ಸ್ಥಾಪನೆ, ಆರ್ಥಿಕ ನಿರ್ವಹಣೆ, ಮಾರುಕಟ್ಟೆ ಅರಿವು, ತಾಂತ್ರಿಕ ಕೌಶಲ್ಯಗಳ ಅಭಿವೃದ್ಧಿ ಸೇರಿದಂತೆ ವಿವಿಧ ವಿಷಯಗಳನ್ನು ಒಳಗೊಂಡಿತ್ತು. ತರಬೇತಿ ಪಡೆದವರಲ್ಲಿ 732 ಮಂದಿ ಸ್ವಂತ ಉದ್ಯೋಗ ಆರಂಭಿಸಿ ಯಶಸ್ವಿಯಾಗಿರುವುದು ಸಂಸ್ಥೆಯ ಮಹತ್ವದ ಸಾಧನೆಯಾಗಿದೆ. ಗ್ರಾಮೀಣ ಹಾಗೂ ಅರೆನಗರ ಪ್ರದೇಶಗಳ ಯುವಕರಿಗೆ ಆತ್ಮವಿಶ್ವಾಸ ಬೆಳೆಸಿ, ಸ್ವಾವಲಂಬನೆಯತ್ತ ಮುನ್ನಡೆಸುವಲ್ಲಿ ರುಡ್ ಸೆಟ್ ಸಂಸ್ಥೆ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದು ವರದಿ ಮೂಲಕ ಮತ್ತೊಮ್ಮೆ ಸ್ಪಷ್ಟವಾಗಿದೆ.

ಕ್ಯಾಂಪ್ಕೋ ಚಾಕ್ಲೆಟ್ ಕಾರ್ಖಾನೆಗೆ ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಭೇಟಿ, ಮೆಚ್ಚುಗೆ



ಪುತ್ತೂರು: ಇನ್ಫೋಸಿಸ್ ಸಹ ಸಂಸ್ಥಾಪಕಿ ಡಾ. ಸುಧಾಮೂರ್ತಿ ಭಾನುವಾರ ಪುತ್ತೂರಿನ ಪ್ರತಿಷ್ಠಿತ ಕ್ಯಾಂಪ್ಕೋ ಚಾಕಲೇಟು ಕಾರ್ಖಾನೆಗೆ ಭೇಟಿ ನೀಡಿ ಚಾಕಲೇಟು ಉತ್ಪಾದನಾ ಪ್ರಕ್ರಿಯೆಗಳನ್ನು ವೀಕ್ಷಿಸಿದರು.

ಪುತ್ತೂರು ನೆಹರೂನಗರದ ಡಾ. ರವಿನಾರಾಯಣ ಅವರ ಸಹೋದರ ಎನ್‌ಎಂಪಿಟಿ ಸೀನಿಯರ್ ಡೆಪ್ಯೂಟಿ ಡೈರೆಕ್ಟರ್ ಡಾ. ಪೃಥ್ವಿರಾಜ್ ಅವರು ಸುಧಾ ಮೂರ್ತಿ ಅವರನ್ನು ಕ್ಯಾಂಪ್ಕೋ ಚಾಕಲೇಟು ಫ್ಯಾಕ್ಟರಿಗೆ ಕರೆತಂದರು. ಕ್ಯಾಂಪ್ಕೋ ಚಾಕಲೇಟು ತಯಾರಿಕೆಯ ಹಂತಗಳನ್ನು ವೀಕ್ಷಿಸಿದ ಸುಧಾ ಮೂರ್ತಿಯವರು ಕ್ಯಾಂಪ್ಕೋ ಕಾರ್ಯವೈಖರಿಗಳ ಕುರಿತು ಮೆಚ್ಚುಗೆ ವ್ಯಕ್ತಪಡಿಸಿ ದರು. ಕ್ಯಾಂಪ್ಕೋ ಅಧ್ಯಕ್ಷ ಎಸ್. ಆರ್. ಸತೀಶ್ಚಂದ್ರ, ನಿರ್ದೇಶಕ ರಾಘವೇಂದ್ರ ಭಟ್ ಕೆದಿಲ, ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಕಲ್ಲಡ್ಕ, ಸಂಸ್ಥೆಯ ಪ್ರಮುಖರು ಉಪಸ್ಥಿತರಿದ್ದರು.

ವಾರಣಾಸಿ ಸುಬ್ರಾಯ ಭಟ್ಟರು ಪ್ರಾತ:ಸ್ಮರಣೀಯರು

ಕ್ಯಾಂಪ್ಕೋ ಸಂಸ್ಥೆಗೆ ಭೇಟಿ ನೀಡಿ ಬಹಳ ಸಂತೋಷ ಆಗಿದೆ. ಬಡತನ ರೇಖೆಯಿಂದ ಜನರನ್ನು ಮೇಲೆ ಎತ್ತುವುದು ಬರೀ ಮಾತಲ್ಲ, ಕೃತಿ. ಜನರಿಗೆ ಉದ್ಯೋಗ ಅವಕಾಶವನ್ನು ಅವರಿದ್ದ ಜಾಗದಲ್ಲೇ ಮಾಡಿಕೊಡುವುದು ಉತ್ತಮ. ದೊಡ್ಡ ಪಟ್ಟಣದಲ್ಲಿ ಅವರ ಪರಿಸರ, ಬಂಧುಬಳಗ ಬಿಟ್ಟು ಬಂದು ದುಡ್ಡು ಮಾಡುತ್ತಾರೆ. ಆದರೆ ಅವರ ವ್ಯಕ್ತಿತ್ವ ಕುಂಠಿತವಾಗುತ್ತದೆ. ಆ ದೃಷ್ಟಿಯಿಂದ ವಾರಣಾಸಿ ಸುಬ್ರಾಯ ಭಟ್ಟರು ಪ್ರಾತ:ಸ್ಮರಣೀಯರು. 2 ಸಾವಿರ ಮಂದಿಗೆ ಸಣ್ಣ ಊರಿನಲ್ಲಿ ಉದ್ಯೋಗ ಮಾಡಲು ಕಾರಣರಾಗಿದ್ದಾರೆ. ಸಂಸ್ಥೆಯನ್ನು ಜಾಗತಿಕ ಮಟ್ಟದಲ್ಲಿ ಗುರುತಿಸುವಂತೆ ಮಾಡಿದ್ದಾರೆ. ಭಾರತಕ್ಕೆ ಇಂತಹ ಜನರು ಬೇಕು. ಸಕಾರಾತ್ಮಕ ಯೋಜನೆಗಳನ್ನು ಮಾಡಿಕೊಂಡು ಇಂತಹ ಹಲವು ಸಂಸ್ಥೆಗಳು ಹುಟ್ಟಿ ಭರಲಿ. ಈ ಉದ್ದಿಮೆ ಇನ್ನಷ್ಟು ಬೆಳೆಯಲಿ.

■ ಡಾ. ಸುಧಾಮೂರ್ತಿ

ರಕ್ತೇಶ್ವರಿ, ಧೂಮಾವತಿ, ನಾಗ ಸಾನಿಧ್ಯ ಪ್ರತಿಷ್ಠಾ ವಾರ್ಷಿಕೋತ್ಸವ

ನಿಡ್ವಳ್ಳಿ: ಗ್ರಾಮದ ಮೂಲ ಸಾನಿಧ್ಯ ಕಂಬಳತ್ತಡ್ಡ ಶ್ರೀ ರಕ್ತೇಶ್ವರಿ, ಧೂಮಾವತಿ ಹಾಗೂ ನಾಗ ಸಾನಿಧ್ಯದಲ್ಲಿ ಪ್ರತಿಷ್ಠಾ ವಾರ್ಷಿಕೋತ್ಸವ ಪ್ರಯುಕ್ತ ತಂಬಿಲ ಸೇವೆ ನಡೆಯಿತು. ಶ್ರೀ ಶಾಂತದುರ್ಗಾ ದೇವಸ್ಥಾನದ ಅರ್ಚಕ ನವೀನ್ ಹೆಬ್ಬಾರ್ ಪೂಜಾ ವಿಧಿ ವಿಧಾನವನ್ನು ನೆರವೇರಿಸಿದರು. ರಾಜಾರಾಮ ಭಟ್ ನಾಕುಡೇಲು, ದೇವಸ್ಥಾನದ ಆಡಳಿತ ಮಂಡಳಿ ಅಧ್ಯಕ್ಷ ನಾಗೇಶ ಗೌಡ ಪುಳಿತ್ತಡಿ, ಕಾರ್ಯದರ್ಶಿ ಮಂಜುನಾಥ ರೈ ಕೆ. ಮತ್ತಿತರರು ಪಾಲ್ಗೊಂಡರು.

ಮಂತ್ರಾಕ್ಷತೆ ಜೊತೆ ಪ್ರಮಾಣ ಪತ್ರ, ಕೋಟಿ ಗೀತಾ ಲೇಖನ ಯಜ್ಞ ದೀಕ್ಷೆ

ಶ್ರೀಪುತ್ತಿಗೆ ಸುಗುಣ ಶಿಬಿರಕ್ಕೆ ಸಂಭ್ರಮದ ತೆರೆ



ಉಡುಪಿ: ಸನಾತನ ಹಿಂದೂ ಸಂಸ್ಕೃತಿಯ ಸಂರಕ್ಷಣೆ-ಸಂವರ್ಧನೆಯ ಧ್ಯೇಯದೊಂದಿಗೆ ಪುತ್ತಿಗೆ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದ ಹತ್ತು ದಿನಗಳ ಶ್ರೀಪುತ್ತಿಗೆ ಸುಗುಣ ಶಿಬಿರ-2026, ನೃಸಿಂಹ ಜಯಂತಿಯ ಪರ್ವಕಾಲದಲ್ಲಿ ಹಿರಿಯಡ್ಕ ಪುತ್ತಿಗೆ ಮೂಲಮಠದಲ್ಲಿ ಅನುಗ್ರಹ ಸಂದೇಶ-ಮಂತ್ರಾಕ್ಷತೆಯೊಂದಿಗೆ ಪ್ರಮಾಣ ಪತ್ರ, ಕೋಟಿ ಗೀತಾ ಲೇಖನ ಯಜ್ಞ ದೀಕ್ಷೆ, ನೃಸಿಂಹ ದೇವರ ವಸಂತ ಪೂಜೆ-ಪ್ರಸಾದ ಸ್ವೀಕಾರದೊಂದಿಗೆ ಸಮಾಪನಗೊಂಡಿತು.

ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು ಶಿಬಿರಾರ್ಥಿಗಳನ್ನು ಅಭಿನಂದಿಸಿ ಮಾತನಾಡಿ, ಇದು ಮೊದಲ ಶಿಬಿರವಾಗಿದ್ದು, ಮುಂದೆ ಗೀತಾಮಂದಿರದಲ್ಲಿ ಆಗಾಗ್ಗೆ ತರಗತಿ/ತರಬೇತಿಗಳು ನಡೆಯಲಿದ್ದು, ಮುಂದಿನ ವರ್ಷ ಮುಂದಿನ ಹಂತಗಳು ನಡೆಯಲಿವೆ, ಎಲ್ಲಾ ಹಿಂದೂ ಬಾಂಧವರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಶಿಬಿರದ ಸಂಪನ್ಮೂಲ ವ್ಯಕ್ತಿಗಳಾಗಿ ವಿದ್ವಾನ್ ವೇದವ್ಯಾಸ ಪುರಾಣಿಕ, ಡಾ. ಸುನೀಲ ಆಚಾರ್ಯ, ವಿದ್ವಾನ್ ಕೆ. ವಿ. ರಮಣಾಚಾರ್ಯ, ವಿಕ್ರಮ್ ಕುಂಟಾರ್, ಸಮರ್ಥ ಜೋಷಿ, ಕಾರ್ತಿಕೇಯ, ವೆಂಕಟೇಶ್ ಮೆಹೆಂದಳೆ, ಸದಾಶಿವ ರಾವ್, ವಿದ್ವಾನ್ ಉಷಾ ಹೆಬ್ಬಾರ್, ಸುಮತಿ ಕಾಮತ್, ಪ್ರಾಪ್ತಿ, ಶ್ರೀನಿಧಿ, ಸುಮನ ಆಚಾರ್ಯ, ಸುಮಿತ್ರ ಕೆರೆಮಠ, ಜಯಂತ ಮಲ್ಪೆ ಮತ್ತಿತರರು ತರಬೇತಿ ನೀಡಿದರು.

ಸಂಜೆ ಗಂಟೆ 4ರಿಂದ ಗೀತಾಮಂದಿರದ ಶ್ರೀಪುತ್ತಿಗೆ ನೃಸಿಂಹ ಸಭಾಭವನದಲ್ಲಿ ಸಾರ್ವಜನಿಕರಿಗೂ ಮುಕ್ತ ಪ್ರವೇಶದ ಹಬ್ಬ-ಹರಿದಿನಗಳ ಸರಣಿ-ಉಪನ್ಯಾಸ ಮಾಲಿಕೆಯಲ್ಲಿ ಯುಗಾದಿ, ನಾಗರ ಪಂಚಮಿ, ಚೌತಿ, ಶ್ರೀಕೃಷ್ಣ ಜನ್ಮಾಷ್ಟಮಿ, ನವರಾತ್ರಿ, ನೃಸಿಂಹ ಜಯಂತಿ, ತುಳಸೀಪೂಜೆ-ದೀಪಾವಳಿ-ಗೋಪೂಜೆ ಸಹಿತ ಕಾರ್ತಿಕ ಮಾಸ, ಗೀತಾ ಜಯಂತಿ, ಏಕಾದಶಿ ಮುಂತಾದ ಪರ್ವ ದಿನಗಳ ಕುರಿತಂತೆ ವಿದ್ವಾಂಸರಾದ ಮಹಾ ಮಹೋಪಾಧ್ಯಾಯ ಶತಾವಧಾನಿ ಡಾ. ಉಡುಪಿ ರಾಮನಾಥ ಆಚಾರ್ಯ, ವಿದ್ವಾನ್ ಸಗ್ರಿ ಆನಂದತೀರ್ಥ ಉಪಾಧ್ಯಾಯ, ವಿದ್ವಾನ್ ಷಣ್ಮುಖ ಹೆಬ್ಬಾರ್, ಡಾ. ಸುನೀಲ ಆಚಾರ್ಯ, ವಿದ್ವಾನ್ ಸುಧೀಂದ್ರ ಆಚಾರ್ಯ ಮುಂತಾದವರು ಹಬ್ಬಗಳ ಆಚರಣೆಗಳ ವಿಧಿ-ವಿಧಾನಗಳ ಬಗ್ಗೆ ತಿಳಿಹೇಳಿದರು.

ಪ್ರತಿದಿನ ಸಂಜೆ ಗಂಟೆ 5ರಿಂದ ನಡೆಯುತ್ತಿದ್ದ ಸಾಧಕ ಸಂವಾದದಲ್ಲಿ, ಹಿಂದೂ ಆಹಾರ ಪದ್ಧತಿ ಹಾಗೂ ಆರೋಗ್ಯ ಬಗ್ಗೆ ಡಾ. ಶ್ರುತಿ ಬಲ್ಲಾಳ್, ಸಾಂಸ್ಕೃತಿಕ ಶಿಕ್ಷಣದ ಮಹತ್ವ ಬಗ್ಗೆ ಡಾ. ಎಮ್. ಎಲ್. ಸಾಮಗ, ಹಿಂದೂ ಸಂಸ್ಕಾರ - ರಾಷ್ಟ್ರಭಕ್ತಿಯ ಪ್ರೇರಣೆ ಬಗ್ಗೆ ವಾದಿರಾಜ ಗೋಪಾಡಿ, ಹಿಂದುತ್ವ - ಸಂಸ್ಕಾರ - ಸಂಸ್ಕೃತಿ ಬಗ್ಗೆ ಡಾ. ವಿಜಯೇಂದ್ರ ವಸಂತ್, ಉದ್ಯಮಶೀಲತೆ - ಹಿಂದುತ್ವ ಬಗ್ಗೆ ಡಾ. ರಾಮಕೃಷ್ಣ ಆಚಾರ್, ಮೊಬೈಲ್ ಬಳಕೆಯ ಸಾಧಕ-ಬಾಧಕ ಬಗ್ಗೆ ಡಾ. ಸುಧೀರ್ ರಾಜ್, ಗೃಹ ಕೈಗಾರಿಕೆ ಬಗ್ಗೆ ರತ್ನಾಕರ ಇಂದ್ರಾಳಿ, ಧರ್ಮ ಜಾಗೃತಿಯಲ್ಲಿ ಯಕ್ಷಗಾನ ಬಗ್ಗೆ ಮುರಳಿ ಕಡೆಕಾರ್ ಮತ್ತು ಸನಾತನ ಧರ್ಮ ಜಾಗೃತಿ ಬಗ್ಗೆ ಹಾಗೂ ಪರ್ವ ಸಮೀಕ್ಷೆ ಕುರಿತಾದ ಪ್ರಶ್ನೋತ್ತರವನ್ನು ವಿದ್ವಾನ್ ಶತಾವಧಾನಿ ಡಾ. ಉಡುಪಿ ರಾಮನಾಥ ಆಚಾರ್ಯ ನಡೆಸಿಕೊಟ್ಟರು.

ಉಡುಪಿ ಶ್ರೀಪುತ್ತಿಗೆ ಮಠದ ವತಿಯಿಂದ ಭಾರತೀಯ ಸಂತ ಮಹಾಪರಿಷತ್, ವಿಶ್ವಹಿಂದೂ ಪರಿಷತ್, ಸಂಸ್ಕಾರ ಭಾರತಿ, ಕುಟುಂಬ ಪ್ರಬೋಧನ ಸಮಿತಿ ಮತ್ತು ಪತಂಜಲಿ ಯೋಗ ಸಮಿತಿಗಳ ಉಡುಪಿ ಘಟಕಗಳ ಸಹಯೋಗದಲ್ಲಿ ಪುತ್ತಿಗೆ ಶ್ರೀಪಾದದ್ವಯರ ಮಾರ್ಗದರ್ಶನದಲ್ಲಿ ಶಿಬಿರವನ್ನು ಆಯೋಜಿಸಲಾಗಿತ್ತು. ಶ್ರೀಮಠದ ದಿವಾನರಾದ ನಾಗರಾಜ ಆಚಾರ್ಯರನ್ನೊಳಗೊಂಡ ಆಡಳಿತ ಮಂಡಳಿ ಮತ್ತು ಶಿಬಿರ ಸಂಚಾಲಕರಾದ ರಮೇಶ್ ಭಟ್, ಕೆ. ವಿ. ರಮಣಾಚಾರ್ಯ, ಕಿರಣ್ ಭಟ್, ವಿಕ್ರಮ್ ಕುಂಟಾರ್ ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿದರು.

ಶಿಬಿರ ಸಮಿತಿಯ ಪ್ರೊ. ರಾಘವೇಂದ್ರ ಭಟ್, ಭಾರತಿ ಕೃಷ್ಣಮೂರ್ತಿ, ರಮಾ ದೇಸಾಯಿ, ಉಮೇಶ್ ಭಟ್ ಮತ್ತಿತರ ಸದಸ್ಯರು ಸಹಕರಿಸಿದರು.

ಶಿಬಿರದಲ್ಲೇನಿತ್ತು?

ಏ. 19ರಿಂದ ಏ.30 ರವರೆಗೆ ಗೀತಾಮಂದಿರದಲ್ಲಿ ನಡೆದ ಈ ಶಿಬಿರದಲ್ಲಿ ನೂರಾರು ಮಹಿಳೆಯರು ಹಾಗೂ ಪುರುಷರು, ಭಾಗವಹಿಸಿದ್ದರು. ಸರಳ ನಿತ್ಯವಿಧಿ-ಸ್ತೋತ್ರಗಳು, ಯೋಗ, ಹಿಂದೂ ಆಚಾರ-ವಿಚಾರ, ಹಿಂದೂ ಕುಟುಂಬ ಜೀವನ, ಭಗವದ್ಗೀತೆ ಪಾರಾಯಣ, ಹಾಡು, ಭಜನೆ, ಕುಣಿತ ಭಜನೆ, ಕೋಲಾಟ, ಕಲೆ, ಹಲವು ಕರ-ಕುಶಲ ವಸ್ತುಗಳ ತಯಾರಿ, ವಿವಿಧ ದೇಸೀ ಆಟಗಳು, ಹಬ್ಬ-ಹರಿದಿನಗಳ ಮಹತ್ವ ಮತ್ತು ಸರಿಯಾದ ಆಚರಣೆ, ವಿದ್ವತ್ಪೂರ್ಣ ಉಪನ್ಯಾಸಗಳು, ವಿವಿಧ ಕ್ಷೇತ್ರದ ಸಾಧಕರ ಜೊತೆ ಸಂವಾದ ಮೊದಲಾದ ವಿಭಾಗಗಳಡಿಯಲ್ಲಿ ಹತ್ತು ಹಲವು ವಿಚಾರಗಳನ್ನು ಕಲಿತುಕೊಂಡರು.

ಅಳಪೆ ದಕ್ಷಿಣದ ಅಲ್ಲಲ್ಲಿ ನೀರಿನ ಸಮಸ್ಯೆ | ಕೆಲವೆಡೆ ದಿನಕ್ಕೆ ಒಂದು ಗಂಟೆ ಮಾತ್ರ ನೀರು

ಜಿಲ್ಲಾಧಿಕಾರಿ ಕಚೇರಿ ಸುತ್ತಮುತ್ತ ನೀರಿನ ಕೊರತೆ

▸ ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ದಕ್ಷಿಣಕನ್ನಡ ಜಿಲ್ಲಾಧಿಕಾರಿ ಕಚೇರಿ ಹಿಂಭಾಗದಲ್ಲಿ ಗ್ರಾಮೀಣ ಪರಿಸರದ ಲಕ್ಷಣಗಳನ್ನು ಒಳಗೊಂಡಿರುವ, ಅಳಪೆ ದಕ್ಷಿಣ ವಾರ್ಡ್‌ನ ನಾಲ್ಕೈದು ಕಡೆ ನೀರಿನ ಸಮಸ್ಯೆಯಿದೆ.

ಅಳಪೆ ಡಿಸಿ ಕಚೇರಿ, ಮಂಜಳಿಕೆ, ಮಹಾದೇವಿನಗರ, ವಿಜಯನಗರ, ಕರ್ಮಾರ್, ಆದರ್ಶನಗರದ ಒಂದುಭಾಗ, ಕೃಷ್ಣನಗರ, ತುಂಗಾ ನಗರ, ಹೇಮಾವತಿ ನಗರ, ದರ್ಬಾರ್ ಗುಡ್ಡೆ, ಪರಂಜ್ಯೋತಿ ನಗರ, ಅಳಪೆ ಮಠ, ಕುಡ್ತಡ್ಕ ಒಂದು ಭಾಗ, ಪಡೀಲ, ಬೊಲ್ಲಗುಡ್ಡೆ ಮುಂತಾದ ಪ್ರದೇಶದಲ್ಲಿ ವ್ಯಾಪಿಸಿರುವ ಅಳಪೆ ದಕ್ಷಿಣ ವಾರ್ಡ್ ಎತ್ತರ ತಗ್ಗು ಸ್ಥಳಗಳನ್ನು ಒಳಗೊಂಡಿದೆ.

ಈ ವಾರ್ಡ್‌ನ ಕುಡ್ತಡ್ಕ, ಬೊಲ್ಲಗುಡ್ಡೆ, ವಿಜಯನಗರ, ದೂಮಲಚ್ಚಿಲ್, ಗುತ್ತುಗುಡ್ಡೆ ಮುಂತಾದ ಪ್ರದೇಶಗಳಲ್ಲಿ ನೀರಿನ ಸಮಸ್ಯೆಯಿದೆ. ಈ ವಾರ್ಡ್‌ಗೆ ಪಡೀಲು ಟ್ಯಾಂಕ್ ಹಾಗೂ ತುಂಬೆಯಿಂದ ಆಗಮಿಸುವ ಮುಖ್ಯ ಕೊಳವೆಯಿಂದ ನೀರು ಒದಗಿಸಲಾಗುತ್ತಿದೆ. ಮುಖ್ಯ ಪೈಪ್‌ಲೈನ್‌ನಿಂದ ಕರ್ಮಾರ್, ಮಹಾದೇವಿನಗರಕ್ಕೆ ನೀರು ಸರಬರಾಜು ಆಗುತ್ತಿದೆ. ವಾರ್ಡ್‌ನ ಉಳಿದ ಎಲ್ಲ ಪ್ರದೇಶಗಳಿಗೆ ಪಡೀಲ್ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಇಲ್ಲಿ ಮಧ್ಯಾಹ್ನ 3ರಿಂದ ರಾತ್ರಿ 12 ಗಂಟೆವರೆಗೆ ನೀರು ಪೂರೈಕೆ ಆಗುತ್ತಿದೆ. ಆದರೆ, ಕೆಲವು ಕಡೆಗಳಲ್ಲಿ ನೀರು ಬರುವಾಗ ರಾತ್ರಿ 10 ಗಂಟೆ ಆಗುತ್ತಿದೆ. ರಾತ್ರಿ 11ಗಂಟೆಗೆ ನೀರು ಬಂದು 12ಕ್ಕೆ ಬಂದ್ ಆದ ಉದಾಹರಣೆಗಳೂ ಇವೆ. ಬೊಲ್ಲಗುಡ್ಡೆ, ಕುಡ್ತಡ್ಕ ಪ್ರದೇಶಗಳಿಗೆ ಕೆಲವೊಮ್ಮೆ ಒಂದು ಗಂಟೆ ಮಾತ್ರ ನೀರು ಸಿಗುತ್ತಿದೆ ಎಂದು ಎಂದು ಸ್ಥಳೀಯರು ಆರೋಪಿಸುತ್ತಾರೆ.

ಮಂಗಳೂರು ಮಹಾನಗರಪಾಲಿಕೆ ವತಿಯಿಂದ ನೀರು ಪೂರೈಸುವ ಪೈಪ್‌ಲೈನ್‌ನಲ್ಲಿ ಪ್ರೆಶರ್ ಕೊರತೆಯಿಂದ ಈ ವಾರ್ಡ್‌ನ ಕೆಲ ಪ್ರದೇಶಗಳಿಗೆ ನೀರು ತಲುಪುತ್ತಿಲ್ಲ. ಎತ್ತರದ ಪ್ರದೇಶಗಳಲ್ಲಿ ನೀರು ಬರುತ್ತಿಲ್ಲ ಎಂಬ ದೂರುಗಳಿವೆ. ಈ ವಾರ್ಡ್‌ನಲ್ಲಿ ಹಿಂದೆ ನೀರಿನ ಸಮಸ್ಯೆ ಇರಲಿಲ್ಲ. ಕಳೆದ ನಾಲ್ಕೈದು ತಿಂಗಳಿನಿಂದ ನೀರಿನ ಕೊರತೆ ಕಾಣಿಸಿಕೊಂಡಿದೆ. ಕುಡ್ತಡ್ಕ ಭಾಗದಲ್ಲಿ ನೀರಿನ ಸಮಸ್ಯೆ ಹೆಚ್ಚಾಗಿದೆ ಎನ್ನುತ್ತಾರೆ ಇಲ್ಲಿನ ನಿವಾಸಿಗಳು.

ನೀರಿಲ್ಲದ ಪ್ರದೇಶಗಳಿಗೆ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ನೀರು ನೀಡಲಾಗುತ್ತಿದೆ. ಆದರೆ, ಇಂದು ಟ್ಯಾಂಕರ್ ನೀರಿಗೆ ಬೇಡಿಕೆ ಇರಿಸಿದರೆ ನಾಳೆ ಟ್ಯಾಂಕರ್ ನೀರು ಬರುತ್ತಿದೆ. ನೀರಿನ ಸಮಸ್ಯೆ ಎತ್ತರದ ಪ್ರದೇಶಗಳಲ್ಲಿ ಹೆಚ್ಚಾಗಿದ್ದು, ಇಲ್ಲಿನ ಅಗಲ ಕಿರಿದಾದ ರಸ್ತೆಗಳಿರುವ ಪ್ರದೇಶಗಳಿಗೆ ನೀರಿನ ಟ್ಯಾಂಕರ್ ತೆರಳಲು ಸಾಧ್ಯವಾಗುತ್ತಿಲ್ಲ. ದರ್ಬಾರು ಗುಡ್ಡೆ, ಬಜಾಲ್ ಶಾಲೆ ಬಳಿ ಸಾರ್ವಜನಿಕ ಬಾವಿ ಇದ್ದರೂ, ನೀರು ಉಪಯೋಗಿಸುತ್ತಿಲ್ಲ. ಈ ವಾರ್ಡ್‌ನಲ್ಲಿ ಸಾರ್ವಜನಿಕ ಕೊಳವೆ ಬಾವಿ ಇಲ್ಲ.


ಜಲಸಿರಿ ಯೋಜನೆ ಕಾಮಗಾರಿ ಈ ವಾರ್ಡ್‌ನಲ್ಲಿ ಬಹುತೇಕ ಪೂರ್ಣಗೊಂಡಿದೆ. ನೀರಿನ ಸಂಪರ್ಕ ನೀಡಿಲ್ಲ. ಜೆಎಂ ರೋಡ್‌ನಲ್ಲಿ ಜಲಸಿರಿ ಯೋಜನೆ ಟ್ಯಾಂಕ್ ನಿರ್ಮಾಣಗೊಂಡಿದೆ.



ಪಕ್ಕಲಡ್ಕದಲ್ಲಿ ಒಳಚರಂಡಿ ಕಾಮಗಾರಿ ನಡೆಸಲಾಗಿದೆ.

ನಮ್ಮಲ್ಲಿ ಕಳೆದ ಮೂರ್ನಾಲ್ಕು ದಿನಗಳಿಂದ ನೀರಿನ ಸಮಸ್ಯೆ ಅಧಿಕವಾಗಿದೆ. ಮನಪಾ ಪೈಪ್ ಲೈನ್‌ನಲ್ಲಿ ಸಪೂರವಾಗಿ ನೀರು ಬರುತ್ತಿದ್ದು, ನಿತ್ಯ ಬಳಕೆಗೆ ಸಾಲುತ್ತಿಲ್ಲ. ಮನೆಯ ನೀರಿನ ತೊಟ್ಟಿ ತುಂಬುತ್ತಿಲ್ಲ. ನಮ್ಮಲ್ಲಿ ಬಾವಿಯೂ ಇಲ್ಲ. ಹಾಗಾಗಿ ನೀರಿನ ಕೊರತೆಯಿಂದ ಭಾರಿ ತೊಂದರೆ ಅನುಭವಿಸುತ್ತಿದ್ದೇವೆ. ನಮ್ಮ ಮನೆ ಸುತ್ತಲಿನ 8 ಮನೆಗಳು ನೀರಿನ ಸಮಸ್ಯೆ ಎದುರಿಸುತ್ತಿವೆ. ಮನಪಾ ಅಧಿಕಾರಿಗಳು, ಇಂಜಿನಿಯರ್‌ಗಳು ಸಮರ್ಪಕವಾಗಿ ನೀರು ಪೂರೈಕೆಗೆ ಕ್ರಮ ಕೈಗೊಳ್ಳಬೇಕು.

■ ಲತಾ ನಾಗರಾಜ್, ಕುಡ್ತಡ್ಕ ನಿವಾಸಿ



ಅಳಪೆ ದಕ್ಷಿಣ ವಾರ್ಡ್‌ನಲ್ಲಿ ಈ ಹಿಂದೆ ನೀರಿನ ಸಮಸ್ಯೆ ಇರಲಿಲ್ಲ. ಈಗ ನಾಲ್ಕೈದು ತಿಂಗಳಿನಿಂದ ನೀರು ಪೂರೈಕೆಯಲ್ಲಿ ವ್ಯತ್ಯಯ ಆಗುತ್ತಿದೆ. ಕುಡ್ತಡ್ಕ ಸಹಿತ ಕೆಲವು ಪ್ರದೇಶಗಳಿಗೆ ದಿನಕ್ಕೆ ಒಂದು ಗಂಟೆ ಮಾತ್ರ ನೀರು ಪೂರೈಕೆ ಆಗುತ್ತಿದೆ. ವಾರ್ಡ್‌ನಲ್ಲಿ ಪ್ರಸ್ತುತ ರಾಜಕಾಲುವೆಗಳ ಹೂಳು ತೆಗೆಯಲಾಗುತ್ತಿದೆ. ಪಡೀಲ್‌ನಿಂದ ಅಳಪೆ ಮಠ, ಭಟ್ರಬೆಟ್ಟು, ದೆಂಜ ಮುಂತಾದ ಕಡೆಗಳಲ್ಲಿ ರಾಜ ಕಾಲುವೆಗೆ ತಡೆಗೋಡೆ ನಿರ್ಮಿಸಲಾಗಿದೆ. ಕರ್ಮಾರ್- ಜಲ್ಲಿಗುಡ್ಡೆ ರಸ್ತೆ ಅಗಲೀಕರಣ ಮಾಡಲಾಗಿದೆ. ಜಲ್ಲಿಗುಡ್ಡೆ ಕ್ರಾಸ್- ಬಜಾಲ್ ಚರ್ಚ್, ಬಜಾಲ್ ಚರ್ಚ್-ಪಡೀಲ ರಸ್ತೆ ವಿಸ್ತರಣೆಗೊಂಡು ಕಾಂಕ್ರೀಟ್ ಅಳವಡಿಸಲಾಗಿದೆ. ಭಟ್ರಬೆಟ್ಟು, ದೂಮಲಚ್ಚಿಲ್, ಪರಂಜ್ಯೋತಿ ನಗರ, ಗಾಣದಕೊಟ್ಯ, ಕುಡ್ತಡ್ಕ-ಬೊಲ್ಲಗುಡ್ಡೆ ಮುಂತಾದೆಡೆ ರಸ್ತೆ ನಿರ್ಮಿಸಲಾಗಿದೆ. ವಾರ್ಡ್‌ನ ವಿವಿಧ ಕಡೆ ಒಳಚರಂಡಿ ವ್ಯವಸ್ಥೆ ಮಾಡಲಾಗಿದೆ.

■ ಶೋಭಾ ಪೂಜಾರಿ, ಅಳಪೆ ದಕ್ಷಿಣ ವಾರ್ಡ್ ನಿಕಟಪೂರ್ವ ಕಾರ್ಪೊರೇಟರ್

ಒಳಚರಂಡಿ ಸಮಸ್ಯೆ

ಅಳಪೆ ದಕ್ಷಿಣ ವಾರ್ಡ್‌ನ ಪಕ್ಕಲಡ್ಕ, ರೈಲ್ವೆ ಅಂಡರ್‌ಪಾಸ್, ಅಳಪೆ ಮಠ ಪ್ರದೇಶದಲ್ಲಿ ಡ್ರೈನೇಜ್ ಓವರ್‌ಫ್ಲೋ ಉಂಟಾಗಿ ಸಮಸ್ಯೆಯಾಗುತ್ತಿದೆ. ಮಳೆಗಾಲದಲ್ಲಿ ಈ ಸಮಸ್ಯೆ ಇನ್ನಷ್ಟು ಹೆಚ್ಚುತ್ತದೆ. ಪಡೀಲ, ಕುಡ್ತಡ್ಕ, ಬೊಲ್ಲಗುಡ್ಡೆ ಪ್ರದೇಶಗಳಲ್ಲಿ ಒಳಚರಂಡಿ ಸಂಪರ್ಕ ಇನ್ನೂ ಆಗಿಲ್ಲ. ವಾರ್ಡ್‌ನ ರಾಜಕಾಲುವೆಗಳಲ್ಲಿ ಹೂಳೆತ್ತುವ ಕಾಮಗಾರಿ ನಡೆಯುತ್ತಿದೆ.

ಮಂಗಳೂರು

ಸೋಮವಾರ, 4 ಮೇ 2026

ಸಂಪುಟ 48, ಸಂಚಿಕೆ 46 ಪುಟಗಳು 12+6

■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ

₹5

REG.No.MNG /121/2024-26 Posted at kodialbail P.O / RNI:29813/78/ Daily

hosadigantha.com

epaper.hosadigantha.com

Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಹಾರ್ಮುಜ್ ದಾಟಿದ ಭಾರತದ ನೌಕೆ |೦೭

ಖಲಿಸ್ತಾನಿ ಉಗ್ರರಿಗೆ ಭದ್ರತಾ ಅಪಾಯ ಮುದ್ರೆ |೦೭

ರಾಜ್ಯದ ಬಾಲಸುಬ್ರಹ್ಮಣ್ಯಂಗೆ ಉನ್ನತ ಹುದ್ದೆ |೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಅನುರಾಧೆ

ದಿನದ ಮಾತು

ಅವಕಾಶ ಸಿಗದ ಪ್ರತಿಭೆ, ಪ್ರತಿಭೆ ಇಲ್ಲದ ಅವಕಾಶ ಎರಡೂ ಪ್ರಯೋಜನಕ್ಕೆ ಬರುವುದಿಲ್ಲ.

▲ಕಣ್ಣದಾಸನ್

ಹರೆಯದವರಲ್ಲಿ ಆತ್ಮಹತ್ಯೆ

ತಾರುಣ್ಯ ತಲ್ಲಣ

• ಡಾ.ಕೆ,ಆರ್, ಶ್ರೀಧರ್

• ಪುಟ ೬

ಕಿರುಸುದ್ದಿ

ಕೆಪಿಎಸ್ಸಿ ಸುಧಾರಣೆಗೆ ಸದನ ಸಮಿತಿ ರಚನೆ

• ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದಲ್ಲಿ (ಕೆಪಿಎಸ್ಸಿ) ನಡೆಯುತ್ತಿರುವ ಅಕ್ರಮಗಳನ್ನು ತಡೆಯಲು ಮತ್ತು ಆಯೋಗದಲ್ಲಿ ಮತ್ತಷ್ಟು ಸುಧಾರಣೆಗಳನ್ನು ತರುವ ಉದ್ದೇಶದಿಂದ ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ನೇತೃತ್ವದಲ್ಲಿ ವಿಧಾನಸಭೆ ಸದಸ್ಯರನ್ನೊಳಗೊಂಡ ಸದನ ಸಮಿತಿ ರಚಿಸಲಾಗಿದೆ. ➡ಪುಟ ೪

ಎಲ್‌ಇಟಿ ಉಗ್ರ ಛೋಟಾ ಉಸ್ಮಾನ್‌ಗೆ 7 ವರ್ಷ ಜೈಲು

• ಹೊಸದಿಲ್ಲಿ: ಬೆಂಗಳೂರು ಜೈಲು ಉಗ್ರವಾದ ಪ್ರಸರಣ ಪ್ರಕರಣದಲ್ಲಿ ಲಷ್ಕರ್-ಇ-ತೊಯ್ಬಾ (ಎಲ್‌ಇಟಿ) ಉಗ್ರ ಸಂಘಟನೆಯ ಮತ್ತೊಬ್ಬ ಪ್ರಮುಖ ಉಗ್ರನಿಗೆ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ. ವಿಕ್ರಮ್ ಕುಮಾರ್ ಅಲಿಯಾಸ್ ಛೋಟಾ ಉಸ್ಮಾನ್ ಎಂಬಾತನಿಗೆ ನ್ಯಾಯಾಲಯವು 7 ವರ್ಷಗಳ ಜೈಲು ಶಿಕ್ಷೆಯ ಜತೆ 30 ಸಾವಿರ ರೂ. ದಂಡ ವಿಧಿಸಿದೆ.

• ಪುಟ ೪

ದಿಲ್ಲಿ ವಸತಿ ಕಟ್ಟಡದಲ್ಲಿ ಬೆಂಕಿ: 9 ಜನರ ಸಾವು

• ಪುಟ ೭

ಮೇ 6ಕ್ಕೆ ಅರ್ಜುನ ಸ್ಮಾರಕ ಉದ್ಘಾಟನೆ: ಈಶ್ವರ ಖಂಡ್ರೆ

• ಪುಟ ೫

ಪ.ಬಂಗಾಳ, ತ.ನಾಡಿನ ಅಧಿಕಾರದ ದಿಕ್ಕು ಬದಲಾಗುತ್ತದೆಯೇ?

ಇಂದು ಫಲಿತಾಂಶ

• ಹೊಸದಿಲ್ಲಿ/ಕೋಲ್ಕತ್ತಾ/ಚೆನ್ನೈ: ಪಶ್ಚಿಮ ಬಂಗಾಳ, ಅಸ್ಸಾಂ, ತಮಿಳುನಾಡು, ಕೇರಳ ಹಾಗೂ ಪುದುಚೇರಿಯಲ್ಲಿ ನಡೆದ ಭಾರೀ ರಾಜಕೀಯ ಪೈಪೋಟಿಯ ಚುನಾವಣಾ ಅಂತಿಮ ಫಲಿತಾಂಶ ಸೋಮವಾರ ಹೊರಬೀಳಲಿದೆ. ಬೆಳಗ್ಗೆ 8 ಗಂಟೆ ಯಿಂದ ಮತ ಎಣಿಕೆ ಆರಂಭವಾಗಲಿದ್ದು, ಅಧಿಕಾರದ ಗದ್ದುಗೆ ಯಾರ ಪಾಲಾಗಲಿದೆ ಎಂಬ ಕುತೂಹಲಕ್ಕೆ ಉತ್ತರ ಸಿಗಲಿದೆ.

ಮೊದಲಿಗೆ ಅಂಚೆ ಮತಪತ್ರಗಳ ಎಣಿಕೆ ನಡೆಯಲಿದ್ದು, ಬಳಿಕ ಇವಿಎಂ ಮತಗಳ ಎಣಿಕೆ ಪ್ರಾರಂಭವಾಗಲಿದೆ. ಮತ ಎಣಿಕೆ ಕೇಂದ್ರಗಳಲ್ಲಿ ಈ ಬಾರಿ ಚುನಾವಣಾ ಆಯೋಗ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆ ಜಾರಿಗೊಳಿಸಿದೆ. ಅನಧಿಕೃತ ಪ್ರವೇಶ ತಡೆಯಲು ಮೊದಲ ಬಾರಿಗೆ ಕ್ಯುಆರ್ ಕೋಡ್ ಆಧಾರಿತ ಗುರುತಿನ ಚೀಟಿ ವ್ಯವಸ್ಥೆ ಜಾರಿಗೆ ತರಲಾಗಿದೆ.

ದೇಶದ ಐದು ಪ್ರಮುಖ ರಾಜ್ಯಗಳ ಫಲಿತಾಂಶಗಳು ಮುಂದಿನ ರಾಷ್ಟ್ರೀಯ ರಾಜಕೀಯದ ದಿಕ್ಕು ನಿರ್ಧರಿಸುವ ಸೂಚಕವಾಗುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗಿದೆ.

- ಕೇರಳ ಸೇರಿ 4 ರಾಜ್ಯ, 1 ಕೇಂದ್ರಾಡಳಿತ ಪ್ರದೇಶದಲ್ಲಿ ಬೆಳಗ್ಗೆ 8ರಿಂದ ಮತ ಎಣಿಕೆ
- ಅನಧಿಕೃತ ಪ್ರವೇಶ ತಡೆಯಲು ಕ್ಯುಆರ್ ಕೋಡ್ ಆಧಾರಿತ ಗುರುತಿನ ಚೀಟಿ ವ್ಯವಸ್ಥೆ
- 3 ಹಂತದ ಭದ್ರತೆ, ಮತ ಎಣಿಕೆ ಕೇಂದ್ರಗಳಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆ ಕಾವಲು



ಬಂಗಾಳದಲ್ಲಿ ತುರುಸಿನ ಸ್ಪರ್ಧೆ

ಪಶ್ಚಿಮ ಬಂಗಾಳದಲ್ಲಿ 293 ವಿಧಾನಸಭಾ ಕ್ಷೇತ್ರಗಳ ಮತ ಎಣಿಕೆ 77 ಕೇಂದ್ರಗಳಲ್ಲಿ ನಡೆಯಲಿದೆ. ರಾಜ್ಯದಲ್ಲಿ ಈ ಬಾರಿ ದಾಖಲೆ ಮಟ್ಟದ ಶೇ.92.47 ಮತದಾನ ನಡೆದಿದ್ದು, ಚುನಾವಣೆಯ ನಂತರ ರಾಜಕೀಯ ಉದ್ವಿಗ್ನತೆ ತಾರಕಕ್ಕೇರಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಸತತ ನಾಲ್ಕನೇ ಬಾರಿ ಅಧಿಕಾರ ಉಳಿಸಿಕೊಳ್ಳುವ ವಿಶ್ವಾಸದಲ್ಲಿದೆ. ಮತ್ತೊಂದೆಡೆ ಬಿಜೆಪಿ ಬಲಿಷ್ಠ ಸವಾಲು ಹಾಕಿದೆ. ಸಿಪಿಐ(ಎಂ)-ಕಾಂಗ್ರೆಸ್ ಮೈತ್ರಿ ಮತ್ತೆ ರಾಜ್ಯ ರಾಜಕಾರಣದಲ್ಲಿ ನೆಲೆ ಕಂಡುಕೊಳ್ಳಲು ಯತ್ನಿಸುತ್ತಿದೆ.ದಕ್ಷಿಣ 24 ಪರಗಣ ಜಿಲ್ಲೆಯ ಫಾಲ್ಟಾ ಕ್ಷೇತ್ರದಲ್ಲಿ ಗಂಭೀರ ಚುನಾವಣಾ ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಮತದಾನ ರದ್ದುಪಡಿಸಲಾಗಿದ್ದು, ಮೇ 21ರಂದು ಮರು ಮತದಾನ ನಡೆಯಲಿದೆ. ಚುನಾವಣಾ ಆಯೋಗ ಹೆಚ್ಚುವರಿ 165 ಮತ ಎಣಿಕೆ ವೀಕ್ಷಕರು ಹಾಗೂ 77 ಪೊಲೀಸ್ ವೀಕ್ಷಕರನ್ನು ನಿಯೋಜಿಸಿದೆ. ರಿಟರ್ನಿಂಗ್ ಅಧಿಕಾರಿಗಳು ಮತ್ತು ವೀಕ್ಷಕರ ಹೊರತು ಮೊಬೈಲ್ ಬಳಕೆ ನಿಷೇಧಿಸಲಾಗಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಕನಸು

• ಪುಟ ೪

ತ.ನಾಡಲ್ಲಿ ಡಿಎಂಕೆ-ಎಐಎಡಿಎಂಕೆ ಸಮರ

ತಮಿಳುನಾಡಿನಲ್ಲಿ ಆಡಳಿತಾರೂಢ ಡಿಎಂಕೆ ಮತ್ತೊಮ್ಮೆ ಅಧಿಕಾರ ಉಳಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಆದರೆ, ಈ ಬಾರಿ ರಾಜಕೀಯ ಸಮೀಕರಣಗಳು ಬದಲಾಗಿದ್ದು, ನಟ-ರಾಜಕಾರಣಿ ವಿಜಯ್ ನೇತೃತ್ವದ ಟಿವಿಕೆ ಹಾಗೂ ಸೀಮಾನ್ ಅವರ ಎನ್‌ಟಿಕೆ ಪಕ್ಷಗಳು ಹೊಸ ಸವಾಲು ಎಸೆದಿವೆ. ➡ಪುಟ ೪

ಕದನ ಕುತೂಹಲ ಹೆಚ್ಚಿಸಿದ ದಾವಣಗೆರೆ, ಬಾಗಲಕೋಟೆ

ಬಿಗಿ ಬಂದೋಬಸ್ತ್‌ನಲ್ಲಿ ಇಂದು ಮತ ಎಣಿಕೆ

• ಬೆಂಗಳೂರು: ತೀವ್ರ ಕುತೂಹಲ ಕೆರಳಿಸಿರುವ ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಮತ ಎಣಿಕೆ ಸೋಮವಾರ(ಮೇ 4) ನಡೆಯಲಿದೆ. ಮತ ಎಣಿಕೆ ಕೇಂದ್ರದ ಸುತ್ತ 100 ಮೀಟರ್ ವ್ಯಾಪ್ತಿಯಲ್ಲಿ ಮುಕ್ತ ವಲಯ ಎಂದು ಘೋಷಿಸಲಾಗಿದೆ. ಬೆಳಗ್ಗೆ 8 ಗಂಟೆಗೆ ಅಂಚೆ ಮತ ಎಣಿಕೆ ಆರಂಭವಾಗಲಿದ್ದು, 8.30ರಿಂದ ಮತ ಯಂತ್ರಗಳ ಮತ ಎಣಿಕೆ ಆರಂಭವಾಗಲಿದೆ. ಮತ ಎಣಿಕೆ ಹಿನ್ನೆಲೆಯಲ್ಲಿ ಮತ ಎಣಿಕೆ ಕೇಂದ್ರಗಳ ಸುತ್ತ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿದ್ದು, ಮಧ್ಯಾಹ್ನದ ವೇಳೆಗೆ ಎರಡು ಕ್ಷೇತ್ರಗಳ ಫಲಿತಾಂಶ ಹೊರಬೀಳಲಿದೆ. ಈ ಎರಡು ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಮತ ಎಣಿಕೆ ಕಾರ್ಯದ ನಂತರ ವಿಜಯಮಾಲೆ ಯಾರಿಗೆ ಎಂಬುದು ಗೊತ್ತಾಗಲಿದೆ. ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸಚಿವ ಮಲ್ಲಿಕಾರ್ಜುನ ಪುತ್ರ ಸಮರ್ಥ್ ಶಾಮನೂರು ಹಾಗೂ ಬಿಜೆಪಿಯಿಂದ ಶ್ರೀನಿವಾಸ ದಾಸಕರಿಯಪ್ಪ ಸ್ಪರ್ಧಿಸಿದ್ದಾರೆ. ಟಿಕೆಟ್ ಘೋಷಣೆ ಸಂದರ್ಭದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಟಿಕೆಟ್ ನೀಡುವ ವಿಚಾರದಲ್ಲಿ ಗೊಂದಲ ಉಂಟಾಗಿತ್ತು. ಹೀಗಾಗಿ ಈ ಕ್ಷೇತ್ರದ ಫಲಿತಾಂಶ ಕುತೂಹಲಕ್ಕೆ ಎಡೆಮಾಡಿ ಚುನಾವಣೆ ಕೊಟ್ಟಿದೆ. ಈ ಕ್ಷೇತ್ರದಲ್ಲಿ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಬೇಕು ಎಂಬ ಬಗ್ಗೆ ಕಾಂಗ್ರೆಸ್‌ನಲ್ಲಿ ಪ್ರಬಲ ಒತ್ತಾಯ ಕೇಳಿಬಂದಿತ್ತು. ➡ಪುಟ ೪

ಫಲಿತಾಂಶದ ಅಧಿಕೃತ ಘೋಷಣೆ ಬಾಕಿ

ಬಿಜೆಪಿ ಶೃಂಗೇರಿ ಅಭ್ಯರ್ಥಿ ಜೀವರಾಜ್‌ಗೆ ಮುನ್ನಡೆ



ಅಂಚೆ ಮತಪತ್ರ ಮರು ಎಣಿಕೆ

• ಚಿಕ್ಕಮಗಳೂರು: ಹೈಕೋರ್ಟ್ ಆದೇಶದ ಮೇರೆಗೆ 2023ರ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಪತ್ರಗಳ ಮರು ಎಣಿಕೆ ಪ್ರಕ್ರಿಯೆ ಶನಿವಾರ ತಡರಾತ್ರಿ ಪೂರ್ಣಗೊಂಡಿದ್ದು, ಪರಾಜಿತ ಅಭ್ಯರ್ಥಿಯಾಗಿದ್ದ ಬಿಜೆಪಿಯ ಡಿ.ಎನ್. ಜೀವರಾಜ್ ಅವರು ಒಟ್ಟು 52 ಮತಗಳ ಮುನ್ನಡೆ ಸಾಧಿಸಿದ್ದಾರೆ ಎಂಬ ಅಚ್ಚರಿಯ ಫಲಿತಾಂಶ ಹೊರಬಿದ್ದಿದೆ.

ಎಣಿಕೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಜಿಲ್ಲಾ ಚುನಾವಣಾಧಿಕಾರಿ ಗೌರವ ಕುಮಾರ್ ಶೆಟ್ಟಿ ಅವರು ಮಾಧ್ಯಮ ಪ್ರತಿನಿಧಿಗಳಿಗೆ ನೀಡಿದ ಮರು ಎಣಿಕೆ ಅಂಕಿ ಅಂಶಗಳ ಪ್ರಕಾರ ಜೀವರಾಜ್ ಅವರು ಮುನ್ನಡೆ ಸಾಧಿಸಿರುವುದು ದೃಢಪಟ್ಟಿದೆ. ಎಣಿಕೆ ಪ್ರಕ್ರಿಯೆ ವರದಿಯನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸುವುದಾಗಿ ಚುನಾವಣಾಧಿಕಾರಿಗಳು ತಿಳಿಸಿದ್ದು, ಫಲಿತಾಂಶದ ಅಧಿಕೃತ ಘೋಷಣೆ ಬಾಕಿ ಇದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಟಿ.ಡಿ.ರಾಜೇಗೌಡ ಅವರು, 201 ಅಲ್ಪ ಮತಗಳ ಅಂತರದಿಂದ ಬಿಜೆಪಿಯ ಜೀವರಾಜ್ ವಿರುದ್ಧ ಗೆಲುವು ಸಾಧಿಸಿದ್ದರು. ಅಂದು ಫಲಿತಾಂಶ ಹೊರಬಿದ್ದ ತಕ್ಷಣವೇ ಅಂಚೆ ಮತಪತ್ರಗಳ ಎಣಿಕೆಯಲ್ಲಿ ವ್ಯತ್ಯಾಸವಾಗಿರುವ ಕಾರಣಕ್ಕೆ ಮರು ಎಣಿಕೆ ಮಾಡಬೇಕೆಂದು ಡಿ.ಎನ್.ಜೀವರಾಜ್ ಅವರು ಚುನಾವಣಾಧಿಕಾರಿಗಳಿಗೆ ಮನವಿ ಮಾಡಿದ್ದರು. ➡ಪುಟ ೪

ಮತ್ತೆ ಕಾನೂನು ಹೋರಾಟ

ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಮತಗಟ್ಟೆ ಏಜೆಂಟ್ ಸುಧೀರ್ ಕುಮಾರ್ ಮುರೊಳ್ಳಿ ಮಾಧ್ಯಮಗಳಿಗೆ ಮರು ಮತ ಎಣಿಕೆಯ ಫಲಿತಾಂಶದ ಬಗ್ಗೆ ಪ್ರತಿಕ್ರಿಯೆ ನೀಡಿ, ಇದರಲ್ಲಿ ಬಿಜೆಪಿಯಿಂದ ದೊಡ್ಡ ಮಟ್ಟದ ಅಕ್ರಮಗಳು ನಡೆದಿವೆ. ಇದರ ವಿರುದ್ಧ ನಾವು ನ್ಯಾಯಾಂಗ ಹೋರಾಟ ನಡೆಸುತ್ತೇವೆಂದು ತಿಳಿಸಿದರು.

ಹೈಕೋರ್ಟ್ ಆದೇಶ ಪಾಲಿಸಿ

ದೊಡ್ಡ ಪ್ರಮಾಣದ ಷಡ್ಯಂತ್ರ: ಡಿಸಿಎಂ

• ಬೆಂಗಳೂರು: ಬಿಜೆಪಿ ಮರು ಮತ ಎಣಿಕೆಯಲ್ಲಿ ಮುನ್ನಡೆ ಸಾಧಿಸಿದ ಬೆನ್ನಲ್ಲೇ, ಕಾಂಗ್ರೆಸ್ ಹಾಗೂ ಬಿಜೆಪಿ ಪರಸ್ಪರ ವಾಗ್ದಾಳಿ ನಡೆಸಿವೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಚಿಕ್ಕಮಗಳೂರಿನ ಶೃಂಗೇರಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಷಡ್ಯಂತ್ರ ಹಾಗೂ ವ್ಯವಸ್ಥಿತ ಅಪರಾಧ ನಡೆದಿದೆ. ಇದು ದೇಶ, ಪ್ರಜಾಪ್ರಭುತ್ವಕ್ಕೆ ಕಳಂಕ ಎಂದು ಕಿಡಿಕಾರಿದರು. ಭಾನುವಾರ ಸದಾಶಿವನಗರ



ನಿವಾಸದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ರೀತಿ ಮಾಡುತ್ತಾರೆ ಎಂದು ಊಹೆ ಮಾಡಿರಲಿಲ್ಲ. ಮಾಜಿ ಶಾಸಕ ಡಿ.ಎನ್. ಜೀವರಾಜ್ ಅವರು ಅಧಿಕಾರಿಗಳ ದುರ್ಬಳಕೆ ಮಾಡಿಕೊಂಡು ಅಂಚೆ ಮತಗಳಲ್ಲಿ ಅಕ್ರಮ ಮಾಡಿದ್ದಾರೆ ಎಂದು ವರದಿಯಾಗಿದೆ. ನಮ್ಮ ಸ್ಥಳೀಯ ಅಭ್ಯರ್ಥಿಗಳು, ಏಜೆಂಟರು ದೂರು ನೀಡಿದ್ದರು. ಮತ ಎಣಿಕೆ ಬಳಿಕ ನಮ್ಮ ಏಜೆಂಟರು ಅವರ ಏಜೆಂಟರು, ಅಧಿಕಾರಿಗಳು ಸಹಿ ಹಾಕಿದ್ದಾರೆ. ಇದಾದ ಬಳಿಕ ಈ ರೀತಿ ನಡೆಸಿದ್ದಾರೆ ಎಂದರು. ➡ಪುಟ ೪

ಇಂಥ ಕಾರ್ಯಕ್ರಮ ರಾಜ್ಯದಲ್ಲೇ ಮೊದಲು: ಬಿ.ವೈ. ವಿಜಯೇಂದ್ರ

ಬಿಎಸ್‌ವೈಗೆ ಅಭಿಮಾನದ ಗೌರವ



• ಚಿತ್ರದುರ್ಗ: ಅಧಿಕಾರ ಇದ್ದಾಗ ಅಭಿಮಾನೋತ್ಸವ, ಸಂಭ್ರಮೋತ್ಸವ ಆಚರಣೆ ಮಾಡುವುದು ಸಾಮಾನ್ಯ. ಆದರೆ ಯಾವುದೇ ಅಧಿಕಾರ ಇಲ್ಲದಿರುವ ವ್ಯಕ್ತಿಗೆ ಗೌರವ ಸೂಚಿಸಲು ಕಾರ್ಯಕ್ರಮ ಆಯೋಜಿಸಿರುವುದು ರಾಜ್ಯದಲ್ಲಿ ಇದೇ ಮೊದಲು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ. ವಿಜಯೇಂದ್ರ ತಿಳಿಸಿದರು.

ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರ 50 ವರ್ಷದ ರಾಜಕೀಯ ಜೀವನದ ಹಿನ್ನೆಲೆಯಲ್ಲಿ ಮೇ 9ರಂದು ನಡೆಸಲು ಉದ್ದೇಶಿಸಿರುವ ಅಭಿಮಾನೋತ್ಸವ ಅಂಗವಾಗಿ ಭಾನುವಾರ ವಾಲ್ಮೀಕಿ ಭವನದಲ್ಲಿ ಹಮ್ಮಿಕೊಂಡಿದ್ದ ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ಪೂರ್ವಭಾವಿ ಸಭೆ ಯಲ್ಲಿ ಅವರು ಮಾತನಾಡಿದರು. ಅಧಿಕಾರಕ್ಕಾಗಿ ಹೋರಾಡುವುದು ಒಂದು ಭಾಗವಾದರೆ, 50 ವರ್ಷಗಳ ಸುದೀರ್ಘ ಕಾಲ ನಾಡಿನ ರೈತರು, ಬಡವರು, ಶೋಷಿತರ ಪರವಾಗಿ ಧ್ವನಿ ಎತ್ತುವುದು, ನಿರಂತರ ಹೋರಾಟ ಮಾಡುವುದು ಮತ್ತೊಂದು ಭಾಗ. ➡ಪುಟ ೪

ವೈಭವದ ಕಾರ್ಯಕ್ರಮ

ಬಿ.ಎಸ್. ಯಡಿಯೂರಪ್ಪನವರು ಅಧಿಕಾರದಿಂದ ಇಳಿದು ಇಷ್ಟು ವರ್ಷಗಳು ಕಳೆದರೂ ಅವರ ಕೆಲಸಗಳನ್ನು ಜನರು ಮನಸ್ಸಿನಲ್ಲಿ ಇಟ್ಟುಕೊಂಡಿದ್ದಾರೆ. ಯಡಿಯೂರಪ್ಪನವರಿಗೆ ರಾಜ್ಯದ ಜನರು ತಮ್ಮ ಹೃದಯದಲ್ಲಿ ಸ್ಥಾನ ನೀಡಿದ್ದಾರೆ. ಎಲ್ಲ ಕ್ಷೇತ್ರಗಳಿಂದ ನಿರೀಕ್ಷೆಗೂ ಮೀರಿ ಜನರು ಆಗಮಿಸಲಿದ್ದಾರೆ. ರಾಜ್ಯದ ಇತಿಹಾಸದಲ್ಲೇ ಹಿಂದೆ ಆಗಿಲ್ಲ, ಮುಂದೆಯೂ ಆಗದಂತಹ ಮಹತ್ವದ ಕಾರ್ಯಕ್ರಮವಾಗಲಿದೆ. ದುಬೈನಿಂದ ಅಭಿಮಾನಿಗಳು ಬರುತ್ತಿದ್ದಾರೆ. ಹಾಗಾಗಿ ಇದು ಸುವರ್ಣಾಕ್ಷರದಲ್ಲಿ ಬರೆದಿಡುವ ಕಾರ್ಯಕ್ರಮವಾಗಲಿದೆ ಎಂದು ಬಿ.ವೈ. ವಿಜಯೇಂದ್ರ ಹೇಳಿದರು.

ಕರ್ಮಯೋಗಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ: ಡಾ.ಭಾಗ್ವತ್

ಎಸ್‌ಸಿ,ಎಸ್‌ಟಿ ಅಭಿವೃದ್ಧಿ ಅಗತ್ಯ



ಪರರ ಸೇವೆಯಿಂದ ನಮ್ಮ ಅಭಿವೃದ್ಧಿ

• ಮುಂಬೈ: ವಿದೇಶಿ ದಾಳಿಕೋರರ ಸತತ ದಾಳಿ ನಡುವೆಯೂ ದೇಶದ ಬುಡಕಟ್ಟು ಸಮುದಾಯ ಮತ್ತು ಪರಿಶಿಷ್ಟ ಜಾತಿ ಸಮುದಾಯಗಳು ರಾಷ್ಟ್ರದ ಅಸ್ಮಿತೆ ಮತ್ತು ಆತ್ಮವನ್ನು ಸಂರಕ್ಷಿಸಿದವು. ಈ ಹಿನ್ನೆಲೆಯಲ್ಲಿ ಈ ಸಮುದಾಯಗಳನ್ನು ಅಭಿವೃದ್ಧಿ ಪ್ರಕ್ರಿಯೆಯ ಪ್ರಧಾನ ಹೆದ್ದೆರೆಯಲ್ಲಿ ಸಮಗ್ರಗೊಳಿಸುವುದು ಅಗತ್ಯವೆಂದು ಆರ್‌ಎಸ್‌ಎಸ್ ಸರಸಂಘಚಾಲಕ ಡಾ.ಮೋಹನ್ ಭಾಗ್ವತ್ ಕರೆನೀಡಿದ್ದಾರೆ.

ನಾವೆಲ್ಲರೂ ಒಂದು ಮಹಾನ್ ಕುಟುಂಬದ ಭಾಗಗಳಾಗಿದ್ದು, ಸಮಾಜದಿಂದ ಪಡೆದದ್ದನ್ನು ಮರಳಿ ಜಗತ್ತಿಗೆ ವಾಪಸ್ ನೀಡುವುದೇ ಮಾನವ ಬದುಕೆಂದು ವಿಶ್ಲೇಷಿಸಲಾಗುತ್ತದೆ. ವ್ಯಕ್ತಿಯೊಬ್ಬ ಸಮಾಜಕ್ಕಾಗಿ ದುಡಿಯುತ್ತಾನೆ, ಸಮಾಜದ ಏಳಿಗೆಗಾಗಿ ಸಮಯ, ಹಣ ವ್ಯಯಿಸುತ್ತಾನೆಂದರೆ ಯಾರ ಪರವಾಗಿ ಅಥವಾ ಓಲೈಕೆಗಾಗಿ ಅಲ್ಲ, ಸಮಾಜದ ಕಲ್ಯಾಣಕ್ಕಾಗಿ ದುಡಿಯುವುದು ನಮ್ಮ ಕರ್ತವ್ಯ. ಪರರ ಸೇವೆ ಮಾಡುವುದೆಂದರೆ ನಾವು ಸ್ವಯಂ ಅಭಿವೃದ್ಧಿಯನ್ನು ಉತ್ತೇಜಿಸಿದಂತೆ. ಇತರರಿಗೆ ನೆರವಾಗುವ ಮೂಲಕ ನಾವು ನಮಗರಿಯದಂತೆ ಎತ್ತರಕ್ಕೇರುತ್ತೇವೆ ಮತ್ತು ನೈಜ ಮಾನವರಾಗಿ ಬೆಳೆಯುತ್ತೇವೆ. ಭರತಖಂಡದ ಅಥವಾ ಹಿಂದು ಸಮಾಜದ ಪ್ರಧಾನ ಸಿದ್ಧಾಂತ ಇದೇ ಆಗಿದೆ ಎಂದು ಮುಂಬೈನ ಕರ್ಮಯೋಗಿ ಪ್ರಶಸ್ತಿ ವಿತರಣಾ ಸಮಾರಂಭದಲ್ಲಿ ಭಾಗ್ವತ್ ಹೇಳಿದರು. ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಉಪಸ್ಥಿತರಿದ್ದರು.

ತೆರಬೇಕಾಯ್ತು ಭಾರೀ ಬೆಲೆ: ಹಿಂದು ಸಮಾಜದ ಪ್ರಧಾನ ಸಿದ್ಧಾಂತ ಅಥವಾ ಸಮಾಜದ ಶಾಶ್ವತ ಗುಣಧರ್ಮಗಳನ್ನು ಸಾವಿರಾರು ವರ್ಷಗಳಿಂದ ಜತನದಿಂದ ಸಂರಕ್ಷಿಸಿಕೊಂಡು ಬರಲಾಗಿದೆ. ಆದರೂ ಭಾಗಶಃ ನಮ್ಮ ವಿಮುಖತೆ ಮತ್ತು ಭಾಗಶಃ ವಿದೇಶಿ ಆಕ್ರಮಣಗಳಿಂದಾಗಿ ಇವನ್ನು ಸಂರಕ್ಷಿಸಿದವರು ಭಾರೀ ಬೆಲೆ ತೆರಬೇಕಾಗಿ ಬಂತು. ➡ಪುಟ ೪

ಭೂಕಕ್ಷೆಗೆ ಮಿಷನ್ ದೃಷ್ಟಿ

• ಹೊಸದಿಲ್ಲಿ: ಬೆಂಗಳೂರಿನ ಬಾಹ್ಯಾಕಾಶ ನವೋದ್ಯಮ ಗ್ಯಾಲಕ್ಸ್‌ಐ, ತನ್ನ ಮಿಷನ್ ದೃಷ್ಟಿ ಉಪಗ್ರಹವನ್ನು ಭಾನುವಾರ



ಕ್ಯಾಲಿಫೋರ್ನಿಯಾದಿಂದ ಸ್ಪೇಸ್‌ಎಕ್ಸ್ ಫಾಲ್ಕನ್ 9 ರಾಕೆಟ್ ಮೂಲಕ ಉಡಾವಣೆ ಮಾಡಿದೆ. ವಿಶ್ವದ ಮೊದಲ ಒಪ್ಟೊಸಾರ್ ಉಪಗ್ರಹ ಇದಾಗಿದ್ದು, ಎಲೆಕ್ಟ್ರೋ-ಆಪ್ಟಿಕಲ್(ಇಒ) ಮತ್ತು ಸಿಂಥೆಟಿಕ್ ಅಪರ್ಚರ್ ರಡಾರ್(ಸಾರ್) ಸಂವೇದಕಗಳನ್ನು ಒಂದೇ ವೇದಿಕೆಯಲ್ಲಿ ಸಂಯೋಜಿಸಿದೆ ಎಂದು ಗ್ಯಾಲಕ್ಸ್‌ಐ ಕಂಪನಿ ತಿಳಿಸಿದೆ. ಇಒ ಸಂವೇದಕಗಳು ಸೂರ್ಯಪ್ರಕಾಶ ಮತ್ತು ಸ್ಪಷ್ಟವಾದ ಹವಾಮಾನದಲ್ಲಿ ಹೆಚ್ಚಿನ ರೆಸಲ್ಯೂಷನ್ ಚಿತ್ರಗಳನ್ನು ಸೆರೆಹಿಡಿಯುತ್ತವೆ. ➡ಪುಟ ೪

20 ಇಎಸ್‌ಐಸಿ ವೈದ್ಯ ಕಾಲೇಜು ಸ್ಥಾಪನೆ

ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವಿಯ ಹೇಳಿಕೆ

• ದೊಡ್ಡಬಳ್ಳಾಪುರ: ದೇಶಾದ್ಯಂತ 20 ಇಎಸ್‌ಐಸಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಚಿಕಿತ್ಸೆಯ ಭರವಸೆ ನೀಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದರು.

• ವಿವರ ಪುಟ ೫

ಭೋಟಾ ಉಸ್ಮಾನ್‌ಗೆ 7 ವರ್ಷ ಜೈಲು

» ಲಷ್ಕರ್ ಎ ತೊಯ್ಬಾ ಉಗ್ರನಿಗೆ ಕಠಿಣ ಶಿಕ್ಷೆ
» ಎನ್‌ಐಎ ಕೋರ್ಟ್‌ನಿಂದ ತೀರ್ಪು ಪ್ರಕಟ

• **ಹೊಸದಿಲ್ಲಿ:** ಬೆಂಗಳೂರು ಜೈಲು ಉಗ್ರವಾದ ಪ್ರಸರಣ ಪ್ರಕರಣದಲ್ಲಿ ಲಷ್ಕರ್-ಇ-ತೊಯ್ಬಾ (ಎಲ್‌ಇಟಿ) ಉಗ್ರ ಸಂಘಟನೆಯ ಮತ್ತೊಬ್ಬ ಪ್ರಮುಖ ಉಗ್ರನಿಗೆ ಎನ್‌ಐಎ ವಿಶೇಷ ನ್ಯಾಯಾಲಯವು ಏಳು ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ವಿಧಿಸಿದೆ.

ವಿಕ್ರಮ್ ಕುಮಾರ್ ಅಲಿಯಾಸ್ ಭೋಟಾ ಉಸ್ಮಾನ್ ಎಂಬಾತನಿಗೆ ನ್ಯಾಯಾಲಯವು 7 ವರ್ಷಗಳ ಜೈಲು ಶಿಕ್ಷೆಯ ಜೊತೆಗೆ 30,000 ರೂ. ದಂಡ ವಿಧಿಸಿದೆ. ಭಾರತೀಯ ದಂಡ ಸಂಹಿತೆ(ಬಿಎನ್‌ಎಸ್), ಅಕ್ರಮ ಚಟುವಟಿಕೆಗಳ ತಡೆ ಕಾಯ್ದೆ ಹಾಗೂ ಸ್ಫೋಟಕ ವಸ್ತುಗಳ ಕಾಯ್ದೆಗಳಡಿ ಶಿಕ್ಷೆ ನೀಡಲಾಗಿದೆ.

ಈ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾದವರಲ್ಲಿ ಭೋಟಾ ಉಸ್ಮಾನ್ ಎಂಟನೇ ಆರೋಪಿ. ಕಳೆದ ತಿಂಗಳು ಇದೇ ಪ್ರಕರಣದಲ್ಲಿ ಏಳು ಮಂದಿಗೆ ಶಿಕ್ಷೆ ವಿಧಿಸಲಾಗಿತ್ತು. ಆ ವೇಳೆ ಪ್ರಮುಖ ಸಂಚುಕೋರನಾಗಿದ್ದ ಲಷ್ಕರ್ ಸದಸ್ಯ ಟಿ ನಸೀರ್ ಕೂಡ ಶಿಕ್ಷೆಗೆ ಗುರಿಯಾಗಿದ್ದ. 2008ರ ಬೆಂಗಳೂರು ಸರಣಿ ಸ್ಫೋಟ ಪ್ರಕರಣದಲ್ಲಿ ಬಂಧನದಲ್ಲಿದ್ದಾಗಲೇ ಈ ಉಗ್ರವಾದ ಪ್ರಸರಣ ಸಂಚು ರೂಪಿತವಾಗಿತ್ತು ಎಂಬುದು ತನಿಖೆಯಲ್ಲಿ ಬಹಿರಂಗವಾಗಿದೆ. ಎನ್‌ಐಎ ತನಿಖೆಯ ಪ್ರಕಾರ, ಉಗ್ರ ಉಸ್ಮಾನ್ ಜೈಲಿನಲ್ಲಿದ್ದಾಗಲೇ ನಸೀರ್ ಮತ್ತು ಇನ್ನೊಬ್ಬ ಆರೋಪಿ ಜುನೈದ್ ಅಹ್ಮದ್‌ನಿಂದ ಪ್ರಭಾವಿತನಾಗಿ ಉಗ್ರ ಚಟುವಟಿಕೆಗಳಿಗೆ ಸೆಳೆಯಲ್ಪಟ್ಟಿದ್ದನು. ಜೈಲಿನಿಂದ ಬಿಡುಗಡೆಯಾದ ಬಳಿಕವೂ ಇವರೊಂದಿಗೆ ಸಂಪರ್ಕದಲ್ಲಿದ್ದ ಆತ, 2023ರ ಮೇ ತಿಂಗಳಲ್ಲಿ ಹರಿಯಾಣದ ಅಂಬಾಲಾದಿಂದ ಹ್ಯಾಂಡ್ ಗ್ರನೇಡ್‌ಗಳು ಮತ್ತು ವಾಕಿ-ಟಾಕಿಗಳನ್ನು ಪಡೆದು ಬೆಂಗಳೂರಿನ ಸಹ ಆರೋಪಿಗಳಿಗೆ ಒಪ್ಪಿಸಿದ್ದಾನೆ.

ಇದಲ್ಲದೆ, ಜುನೈದ್‌ನ ಆರ್ಥಿಕ ನೆರವಿನಿಂದ, ನಸೀರ್‌ನ್ನು ನ್ಯಾಯಾಲಯಕ್ಕೆ ಕರೆದೊಯ್ಯುವ ಸಂದರ್ಭದಲ್ಲೇ ತಪ್ಪಿಸಿಕೊಳ್ಳಲು ನೆರವಾಗುವ ಸಂಚಿನಲ್ಲಿ ಭಾಗಿಯಾಗಿದ್ದನು. ದೇಶದ ಭದ್ರತೆ ಹಾಗೂ ಸುರಕ್ಷತೆಗೆ ಧಕ್ಕೆಯುಂಟುಮಾಡುವ ಉದ್ದೇಶದಿಂದ ಈ ಕಾರ್ಯಚಟುವಟಿಕೆಗಳು ನಡೆದಿದ್ದವು ಎಂದು ಎನ್‌ಐಎ ಹೇಳಿದೆ. ಈ ಪ್ರಕರಣವನ್ನು ಮೂಲತಃ 2023ರ ಜುಲೈನಲ್ಲಿ ಬೆಂಗಳೂರು ಸೆಂಟ್ರಲ್ ಕ್ರೈಂ ಬ್ರಾಂಚ್ (ಸಿಸಿಬಿ) ದಾಖಲಿಸಿತ್ತು. ಕೆಲವು ಶಂಕಿತರಿಂದ ಶಸ್ತ್ರಾಸ್ತ್ರಗಳು, ಸ್ಫೋಟಕ ವಸ್ತುಗಳು ಮತ್ತು ಡಿಜಿಟಲ್ ಸಾಧನಗಳನ್ನು ವಶಪಡಿಸಿಕೊಂಡ ಬಳಿಕ ಪ್ರಕರಣ ಬೆಳಕಿಗೆ ಬಂದಿತ್ತು. ಬಳಿಕ ಎನ್‌ಐಎ ತನಿಖೆ ಕೈಗೆತ್ತಿಕೊಂಡು ಹೆಚ್ಚಿನ ಸಂಚುಗಳನ್ನು ಪತ್ತೆಹಚ್ಚಿತು. ಈ ಪ್ರಕರಣದಲ್ಲಿ ಒಟ್ಟು 12 ಮಂದಿಗೆ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದ್ದು, ಜುನೈದ್ ಇನ್ನೂ ಪರಾರಿಯಾಗಿದ್ದಾನೆ. ಅವನಿಗಾಗಿ ಶೋಧ ಮುಂದುವರಿದಿದೆ.

ಇಂದು ಫಲಿತಾಂಶ

ತ.ನಾಡಲ್ಲಿ ಡಿಎಂಕೆ-ಎಐಎಡಿಎಂಕೆ ಸಮರ

ಪುಟ 1 ➡ ರಾಜ್ಯದ 62 ಮತ ಎಣಿಕೆ ಕೇಂದ್ರಗಳಲ್ಲಿ ಮೂರು ಹಂತದ ಭದ್ರತಾ ವ್ಯವಸ್ಥೆ ಜಾರಿಯಲ್ಲಿದೆ. ಸುಮಾರು 1.25 ಲಕ್ಷ ಸಿಬ್ಬಂದಿಯನ್ನು ಮತ ಎಣಿಕೆ ಕರ್ತವ್ಯಕ್ಕೆ ನಿಯೋಜಿಸಲಾಗಿದೆ. 234 ವಿಧಾನಸಭಾ ಕ್ಷೇತ್ರಗಳಿಗೆ ಪ್ರತ್ಯೇಕ ವೀಕ್ಷಕರನ್ನು ಚುನಾವಣಾ ಆಯೋಗ ನೇಮಿಸಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಕನಸು

ಅಸ್ಸಾಂನಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೂರನೇ ಅವಧಿಗೆ ಅಧಿಕಾರಕ್ಕೇರುವ ವಿಶ್ವಾಸದಲ್ಲಿದೆ. 126 ಕ್ಷೇತ್ರಗಳ 722 ಅಭ್ಯರ್ಥಿಗಳ ರಾಜಕೀಯ ಭವಿಷ್ಯ ನಿರ್ಧಾರವಾಗಲಿದೆ. ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ, ಕಾಂಗ್ರೆಸ್ ನಾಯಕ ಗೌರವ್ ಗೊಗೊಯ್ ಹಾಗೂ ರೈಜೋರ್ ದಳದ ನಾಯಕ ಅಖಿಲ್ ಗೊಗೊಯ್ ಪ್ರಮುಖ ಅಭ್ಯರ್ಥಿಗಳಾಗಿದ್ದಾರೆ. ರಾಜ್ಯದ 40 ಮತ ಎಣಿಕೆ ಕೇಂದ್ರಗಳಿಗೆ ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳ ಭದ್ರತೆ ಒದಗಿಸಲಾಗಿದೆ. ಏಪ್ರಿಲ್ 9ರಂದು ನಡೆದ ಮತದಾನದಲ್ಲಿ 85.96 ಶೇಕಡಾ ಮತದಾನ ದಾಖಲಾಗಿತ್ತು.

ಕೇರಳದಲ್ಲಿ ಎಲ್‌ಡಿಎಫ್‌ಗೆ ಅಸ್ತಿತ್ವದ ಹೋರಾಟ

ಕೇರಳದಲ್ಲಿ ಕಾಂಗ್ರೆಸ್ ನೇತೃತ್ವದ ಯುಡಿಎಫ್, ಎರಡು ಅವಧಿಗಳಿಂದ ಆಡಳಿತದಲ್ಲಿರುವ ಎಲ್‌ಡಿಎಫ್ ಸರ್ಕಾರವನ್ನು ಪತನಗೊಳಿಸುವ ವಿಶ್ವಾಸದಲ್ಲಿದೆ. ಎಲ್‌ಡಿಎಫ್ ಸೋತರೆ 1960ರ ದಶಕದ ನಂತರ ದೇಶದ ಯಾವುದೇ ರಾಜ್ಯದಲ್ಲಿ ಎಡಪಕ್ಷಗಳ ಸರ್ಕಾರ ಇರುವುದಿಲ್ಲ ಎಂಬ ವಿಶೇಷ ಸ್ಥಿತಿ ಉಂಟಾಗಲಿದೆ. 140 ಕ್ಷೇತ್ರಗಳಿಗೆ ಒಟ್ಟು 883 ಅಭ್ಯರ್ಥಿಗಳು ಕಣಕ್ಕಿಳಿದಿದ್ದಾರೆ. ರಾಜ್ಯಾದ್ಯಂತ 140 ಕೇಂದ್ರಗಳಲ್ಲಿ ಬಿಗಿ ಭದ್ರತೆಯಲ್ಲಿ ಮತ ಎಣಿಕೆ ನಡೆಯಲಿದೆ.

ಪುದುಚೇರಿಯಲ್ಲಿ ಎನ್‌ಡಿಎ-ಇಂಡಿ ಪೈಪೋಟಿ

ಪುದುಚೇರಿಯಲ್ಲಿ ಎನ್‌ಡಿಎ ಮೈತ್ರಿ ಹಾಗೂ ಇಂಡಿ ಮೈತ್ರಿ ನಡುವೆ ನೇರ ಪೈಪೋಟಿ ಇದೆ. ಅಲ್ಲದೆ ಗೋವಾ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್, ನಾಗಾಲ್ಯಾಂಡ್ ಹಾಗೂ ತ್ರಿಪುರಾದ ಎಂಟು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಮತ ಎಣಿಕೆಯೂ ಸೋಮವಾರ (ಮೇ 4) ನಡೆಯಲಿದೆ.

ಕದನ ಕುತೂಹಲ ಹೆಚ್ಚಿಸಿದ ದಾವಣಗೆರೆ, ಬಾಗಲಕೋಟೆ

ಪುಟ 1 ➡ ಕಡೆಗಳಿಗೆಯವರೆಗೂ ಬಂಡಾಯದ ಬಿಸಿ ತಟ್ಟಿತ್ತು. ಆದರೆ ವರಿಷ್ಠರ ಸಂಧಾನ ಯಶಸ್ವಿಯಾದ ಹಿನ್ನೆಲೆಯಲ್ಲಿ ಬಂಡಾಯ ಅಭ್ಯರ್ಥಿ ಸಾಧಿಕ್ ಪೈಲ್ವಾನ್ ಕಣದಿಂದ ಹಿಂದೆ ಸರಿದಿದ್ದರು. ಹೀಗಾಗಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಮೇಟಿ ವರ್ಸಸ್ ಚರಂತಿಮಠ

ಮತ್ತೊಂದೆಡೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರದಲ್ಲೂ ತೀವ್ರ ಪೈಪೋಟಿ ಏರ್ಪಟ್ಟಿದ್ದು, ಚುನಾವಣಾ ಅಖಾಡ ಜಿದ್ದಾಜಿದ್ದಿನಿಂದ ಕೂಡಿದೆ. ಕಾಂಗ್ರೆಸ್ ಶಾಸಕ ಎಚ್.ವೈ. ಮೇಟಿ ನಿಧನದಿಂದ ಈ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿದ್ದು, ಕಾಂಗ್ರೆಸ್‌ನಿಂದ ದಿ.ಎಚ್.ವೈ. ಮೇಟಿ ಪುತ್ರ ಉಮೇಶ್ ಮೇಟಿ ಹಾಗೂ ಬಿಜೆಪಿಯಿಂದ ವೀರಣ್ಣ ಚರಂತಿಮಠ ಸ್ಪರ್ಧಿಸಿದ್ದು, ಗೆಲುವಿನ ಮಾಲೆ ಯಾರಿಗೆ ಎಂಬುದು ಸಹ ಕೌತುಕಕ್ಕೆ ಕಾರಣವಾಗಿದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸುವ ಉತ್ಸಾಹದಲ್ಲಿದೆ. ಶತಾಯ-ಗತಾಯ ಗೆಲ್ಲಲೇಬೇಕೆಂಬ ಹುಮ್ಮಸ್ಸಿನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ರಾಜ್ಯ ಕಾಂಗ್ರೆಸ್ ನಾಯಕರ ದಂಡು ಬಿರುಸಿನ ಪ್ರಚಾರ ನಡೆಸಿ ಮತ ಯಾಚಿಸಿತ್ತು. ಈ ಎರಡು ಕ್ಷೇತ್ರಗಳ ಲೆಕ್ಕಾಚಾರಗಳು ಏನೇ ಇರಲಿ, ಮತ ಎಣಿಕೆ ನಂತರ ಜಯದ ಮಾಲೆ ಯಾರ ಕೊರಳಿಗೆ ಎಂಬ ಕುತೂಹಲಕ್ಕೆ ತೆರೆ ಬೀಳಲಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

ಉಕ್ರೇನ್ ರಷ್ಯಾ ಮತ್ತು ಇಸ್ರೇಲ್ ಇರಾನ್ ಅಮೇರಿಕಾ ನಡುವಿನ ಸಂಘರ್ಷಗಳಂತಹ ಬಿಕ್ಕಟ್ಟುಗಳಿಗೆ ನಾನು ನನ್ನದು ಎಂಬ ಸ್ವಾರ್ಥಪರ ಭಾವನೆಯೇ ಕಾರಣ
– ಮೋಹನ್ ಭಾಗ್ವತ್

– ನಾನು ನನ್ನದು ಎಂಬ ಮನೋಭಾವ ಹೆಚ್ಚಾದಾಗ ನಮ್ಮ ನಮ್ಮೊಳಗೆ ಜಗಳ ಹೆಚ್ಚಾಗುತ್ತೆ, ಆದರಿಂದಾಗಿ ನನಗೂ ಸುಖವಿಲ್ಲ ನಮಗೂ ನೆಮ್ಮದಿ ಇಲ್ಲ

ದಿನ ಭವಿಷ್ಯ

ಮೇಷ ವೃತ್ತಿ ಒತ್ತಡ ಅಧಿಕ. ಆದರೆ ಅಪರಾಹ್ನದ ವೇಳೆ ಒತ್ತಡ ನಿವಾರಣೆ. ಕೌಟುಂಬಿಕ ವಿಚಾರದಲ್ಲಿ ಪೂರಕ ಪರಿಸ್ಥಿತಿ. ಖರ್ಚು ನಿಯಂತ್ರಿಸಲು ಯತ್ನಿಸಿ.

ವೃಷಭ ದಿನದಂತ್ಯಕ್ಕೆ ಅನಿರೀಕ್ಷಿತ ಬೆಳವಣಿಗೆ ನಿರೀಕ್ಷಿಸುವಿರಿ. ಹಣದ ಬೆಂಬತ್ತಬೇಡಿ. ಮಾನಸಿಕ ಒತ್ತಡ ಕಡಿಮೆ ಮಾಡಲು ಗಮನ ಕೊಡಿ.

ಮಿಥುನ ಬದುಕು ನೀವು ಇಚ್ಛಿಸದ ಕಡೆ ಸಾಗುತ್ತಿದೆ. ಅದರ ಮೇಲೆ ನಿಯಂತ್ರಣ ಸಾಧಿಸಿ. ಇತರರ ಏಳಿಗೆಗೆ ಶ್ರಮಿಸುವ ಮುನ್ನ ನಿಮ್ಮ ಬೇಡಿಕೆಗೆ ಗಮನ ಕೊಡಿ.

ಕಟಕ ನಿಮ್ಮ ಕರ್ತವ್ಯ ಪಾಲನೆಗೆ ಗಮನ ಕೊಡಿ. ಇತರ ವಿಷಯ ದೂರುತ್ತಾ ಕೂರಬೇಡಿ. ಸಮಸ್ಯೆ ತರುವ ವ್ಯಕ್ತಿಗಳನ್ನು ದೂರ ಇಡಿ. ಆರ್ಥಿಕ ಉನ್ನತಿ

ಸಿಂಹ ಇಂದು ಕೆಲವಾರು ಬೆಳವಣಿಗೆ ಉಂಟಾದೀತು. ಹಳೆಯ ವಿಷಯ ಕೆದಕಬೇಡಿ. ಸಮಸ್ಯೆ ಹೆಚ್ಚಬಹುದು. ಕಿರಿಕಿರಿ ವ್ಯಕ್ತಿಗಳಿಂದ ದೂರವಿರಿ.

ಕನ್ಯಾ ಕಹಿಸಿಹಿ ಬೆಳವಣಿಗೆ ಎರಡೂ ಸಂಭವ. ಕಚೇರಿ ರಾಜಕೀಯ ನೆಮ್ಮದಿ ಕೆಡಿಸುವುದು. ವೆಚ್ಚ ತುಂಬಾ ಹೆಚ್ಚಲಿದೆ. ಹಳೆ ಸ್ನೇಹಿತರ ಸಂಪರ್ಕ.

ತುಲಾ ಹೊಸ ಪ್ರಯೋಗ ಮಾಡಲು ಹೋಗಬೇಡಿ. ಇರುವ ಸ್ಥಿತಿಯನ್ನೆ ಮುಂದುವರಿಸಿ. ದೇಹಾರೋಗ್ಯ ಕಾಯಲು ಆದ್ಯತೆ ಕೊಡಿ.

ವೃಶ್ಚಿಕ ಪಾಲುದಾರರ ಜತೆ ಸಂಘರ್ಷ ಉಂಟಾದೀತು. ಅರಿತು ವ್ಯವಹರಿಸಿ. ಅನೂಹ್ಯ ಪ್ರಸಂಗ ಎದುರಿಸಬೇಕಾದೀತು. ಆರೋಗ್ಯ ಸಮಸ್ಯೆ.

ಧನು ಶುಭ ಬೆಳವಣಿಗೆ. ಉದ್ಯೋಗವಕಾಶ ಹೆಚ್ಚಳ. ಸ್ವಂತ ಉದ್ದಿಮೆದಾರರಿಗೆ ಯಶಸ್ಸು. ಬಂಧು ಭೇಟಿ. ದೈಹಿಕ ಅಸೌಖ್ಯ ತುಸು ಕಾಡಬಹುದು.

ಮಕರ ಹಣದ ವಿಚಾರ ಚಿಂತೆ ಕಾರಣವಾಗಲಿದೆ. ವೃತ್ತಿಯಲ್ಲಿ ಕಿರಿಕಿರಿ. ಹಿರಿಯರ ಬೇಡಿಕೆ ಅರಿತು ವ್ಯವಹರಿಸಿ. ಆರೋಗ್ಯ ಸುಸ್ಥಿರ, ಚಿಂತೆ ನಿವಾರಣೆ.

ಕುಂಭ ಮಹತ್ವದ ಹೊಣೆ ನಿಮ್ಮ ಮೇಲೆ ಬೀಳಲಿದೆ. ತಪ್ಪಾಗದಂತೆ ಎಚ್ಚರ ವಹಿಸಿ. ಶಾಪಿಂಗ್‌ನಲ್ಲಿ ಹೆಚ್ಚು ಕಾಲ ಕಳೆಯದಿರಿ. ಅನವಶ್ಯ ವೆಚ್ಚ ಹೆಚ್ಚಳ.

ಮೀನ ವಿಶ್ವಾಸ ವೃದ್ಧಿ. ಬಾಕಿ ಇರುವ ಕೆಲಸ ಪೂರ್ಣ. ಹಣದ ವಿಚಾರದಲ್ಲಿ ನೀಡುವ ಹಿತವಚನಕ್ಕೆ ಕಿವಿಗೊಡಿ. ಸಾಂಸಾರಿಕ ಸಾಮರಸ್ಯ ಹೆಚ್ಚಳ.

ರಾಹುಕಾಲ: 7.30-9.00
ಗುಳಿಕಕಾಲ: 1.30-3.00

ಅದೃಷ್ಟ ಸಂಖ್ಯೆ: 5,2,7,1

ತುಂಗಭದ್ರಾ ಅಣೆಕಟ್ಟೆ 33 ಗೇಟ್‌ಗಳ ದುರಸ್ತಿ ಯಶಸ್ವಿ: ಡಿಸಿಎಂ

ಮೇ 15ಕ್ಕೆ ಲೋಕಾರ್ಪಣೆ?

• **ವಿಜಯನಗರ:** ತುಂಗಭದ್ರಾ ಅಣೆಕಟ್ಟೆ 33 ಕ್ರಸ್ಟ್ ಗೇಟ್‌ಗಳನ್ನು ಸಂಪೂರ್ಣವಾಗಿ ದುರಸ್ತಿಗೊಳಿಸಲಾಗಿದೆ. ತಿಂಗಳ ಅಂತ್ಯದೊಳಗೆ ಕ್ರಸ್ಟ್ ಗೇಟ್‌ಗಳ ಚೈನ್‌ಗಳೂ ಅಳವಡಿಕೆಯಾಗಲಿವೆ. ಮೇ 15ರಂದು ಈ ಭಾಗದ ನಾಲ್ಕು ಜಿಲ್ಲೆಗಳ ರೈತರನ್ನು ಸೇರಿಸಿ ದೊಡ್ಡಮಟ್ಟದ ಕಾರ್ಯಕ್ರಮ ಆಯೋಜಿಸಿ ಲೋಕಾರ್ಪಣೆ ಮಾಡಲು ಚಿಂತನೆ ನಡೆಸಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ತುಂಗಭದ್ರಾ ಜಲಾಶಯ ಕ್ರಸ್ಟ್ ಗೇಟ್ ಕಾರ್ಯ ಪರಿಶೀಲನೆಯ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಡ್ಯಾಂನ 33 ಗೇಟ್‌ಗಳ ಪೈಕಿ 22 ಗೇಟ್‌ಗಳಿಗೆ ಸ್ಕಿನ್ ಪ್ಲೇಟ್‌ಗಳನ್ನು ಅಳವಡಿಸುವ ಕಾರ್ಯ ಪೂರ್ಣಗೊಂಡಿದೆ.

ತಜ್ಞರ ವರದಿಯಂತೆ ಹಳೆಯ ಚೈನ್‌ಗಳು ಸದೃಢವಾಗಿದ್ದರೂ, ಮುನ್ನೆಚ್ಚರಿಕಾ ಕ್ರಮವಾಗಿ ಹೊಸ ಚೈನ್‌ಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ಮೊದಲ ಸೆಟ್ ಹೊಸ ಚೈನ್‌ಗಳು ಮೇ 7ರಂದು ಆಗಮಿಸಲಿದ್ದು, ಮೇ ಅಂತ್ಯದೊಳಗೆ ಚೈನ್ ಅಳವಡಿಕೆ ಕಾರ್ಯ ಸಂಪೂರ್ಣ ಪ್ರಕ್ರಿಯೆ ಮುಗಿಯಲಿದೆ. ಮುಂಬರುವ ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು ಮೇ 15ರಂದು ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

2024ರ ಆಗಸ್ಟ್ 10ರಂದು ರಾತ್ರಿ ತುಂಗಭದ್ರಾ ಜಲಾಶಯದ 19ನೇ ಕ್ರಸ್ಟ್ ಗೇಟ್ ಕಿತ್ತು ಹೋಗಿದ್ದರಿಂದ ಮೂರೂ ರಾಜ್ಯಗಳಿಗೆ ಬಹುದೊಡ್ಡ ಸಮಸ್ಯೆ ಎದುರಾಗಿತ್ತು. ಅಂದು ಬೆಳಗಾಗುತ್ತಿದ್ದಂತೆ ನಾನು ಡ್ಯಾಂಗೆ ಭೇಟಿ ನೀಡಿ ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೆ. ರಾಜ್ಯ ಸರ್ಕಾರ ಅಂದು ತಕ್ಷಣ ಸ್ಪಂದಿಸಿತ್ತು. ಗೇಟ್‌ಗಳ ದುರಸ್ತಿಗೆ ಸುಮಾರು 54 ಕೋಟಿ ರೂ.ವೆಚ್ಚ ಮಾಡಲಾಗಿದೆ. ಕಾಲುವೆಗಳ ದುರಸ್ತಿ ಮತ್ತು ಇತರೆ ಕೆಳಹಂತದ ಕಾಮಗಾರಿಗಳಿಗೆ ಒಟ್ಟು 315 ಕೋಟಿ ರೂ.ವ್ಯಯಿಸಲಾಗಿದೆ. ತಜ್ಞರ ವರದಿಯಂತೆ ಈ ದುರಸ್ತಿ ಕಾರ್ಯದಿಂದಾಗಿ ಅಣೆಕಟ್ಟಿನ ಆಯಸ್ಸು ಮುಂದಿನ 50 ವರ್ಷಗಳವರೆಗೆ ವೃದ್ಧಿಸಲಿದೆ ಎಂದು ತಿಳಿಸಿದರು. ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳು 64:34 ಅನುಪಾತದಲ್ಲಿ ಬಂಡವಾಳ ಹೂಡುತ್ತಿದ್ದು, ಡ್ಯಾಂ ಮಂಡಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಈ ಇಡೀ ಕಾರ್ಯಾಚರಣೆಯು ದೇಶಕ್ಕೆ ಒಂದು ದೊಡ್ಡ ಸವಾಲು ಮತ್ತು ತಾಂತ್ರಿಕ ಮಾದರಿಯಾಗಿದೆ ಎಂದು ಡಿಸಿಎಂ ಹರ್ಷ ವ್ಯಕ್ತಪಡಿಸಿದರು.

ಈ ವೇಳೆ ಸಂಸದ ಈ.ತುಕಾರಾಂ, ಸಚಿವರಾದ ಕೆ.ಎಚ್. ಮುನಿಯಪ್ಪ, ಈಶ್ವರ್ ಖಂಡ್ರೆ, ಶಿವರಾಜ್ ತಂಗಡಗಿ, ಶಾಸಕರಾದ ಎಚ್.ಆರ್.ಗವಿಯಪ್ಪ, ಡಾ.ಎನ್.ಟಿ ಶ್ರೀನಿವಾಸ, ಅನ್ನಪೂರ್ಣ ತುಕಾರಾಂ, ಸಂಸದರಾದ ಈ.ತುಕಾರಾಂ, ರಾಜಶೇಖರ್ ಹಿಟ್ನಾಳ್, ಡಿಸಿ ಕವಿತಾ ಎಸ್ ಮನ್ನಿಕೇರಿ, ಎಸ್‌ಪಿ ಜಾಹ್ನವಿ ಇದ್ದರು.



ಜಲಾಶಯದ ಸುರಕ್ಷತೆಗೆ ಬದ್ಧ

ರಾಜಕೀಯ ಟೀಕೆಗಳಿಗೆ ಕಿವಿಗೊಡದೆ ರೈತರ ಹಿತರಕ್ಷಣೆ ಮತ್ತು ಜಲಾಶಯದ ಸುರಕ್ಷತೆಗೆ ಸರ್ಕಾರ ಬದ್ಧವಾಗಿದೆ. ಜಲಾಶಯ ಕ್ರಸ್ಟ್ ಗೇಟ್ ಕಳೆಚಿದ್ದರಿಂದಾಗಿ ಮೂರು ಜಿಲ್ಲೆಯ ರೈತರು ಒಂದು ಬೆಳೆಯನ್ನು ತ್ಯಾಗ ಮಾಡಿ ಗೇಟ್ ಅಳವಡಿಕೆ ಕಾರ್ಯಕ್ಕೆ ಸಹಕರಿಸಿದ್ದಾರೆ. ಆದ್ದರಿಂದ ಕಾಮಗಾರಿ ಪೂರ್ಣಗೊಂಡ ನಂತರ ರಾಯಚೂರು, ಬಳ್ಳಾರಿ, ವಿಜಯನಗರ ಮತ್ತು ಕೊಪ್ಪಳ ಸೇರಿದಂತೆ ನಾಲ್ಕು ಜಿಲ್ಲೆಗಳ ರೈತರನ್ನು ಆಹ್ವಾನಿಸಿ ಬೃಹತ್ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಮತ್ತು ಅಣೆಕಟ್ಟೆಗೆ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಡಿ.ಕೆ. ಶಿವಕುಮಾರ ತಿಳಿಸಿದರು.

ಮತಪತ್ರಗಳ ತಿದ್ದುಪಡಿ: ದೇಶಕ್ಕೆ ಮಾಡಿದ ಅಪರಾಧ

• **ವಿಜಯನಗರ:** ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 2023ರಲ್ಲಿ ನಡೆದ ಚುನಾವಣೆಯಲ್ಲಿ ಸುಮಾರು 200ಕ್ಕೂ ಹೆಚ್ಚು ಅಂಚೆ ಮತಗಳನ್ನು ತಿದ್ದಿರುವುದು ದೇಶಕ್ಕೆ ಮಾಡಿದ ಮಹಾಪರಾಧ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು. ಶೃಂಗೇರಿ ಕ್ಷೇತ್ರದಲ್ಲಿ ಅಧಿಕಾರಿಗಳನ್ನು ಬಳಸಿಕೊಂಡು ಮತಪತ್ರಗಳಲ್ಲಿ ಹಸ್ತಕ್ಷೇಪ ನಡೆದಿದೆ. ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಎಣಿಕೆ ವಿಚಾರದಲ್ಲಿ ಬಹಳ ದೊಡ್ಡ ಅಪರಾಧ ನಡೆದಿದೆ. ಇದನ್ನು ನಾವು ನ್ಯಾಯಾಲಯದಲ್ಲಿ ಪ್ರಶ್ನಿಸುತ್ತೇವೆ ಎಂದು ತಿಳಿಸಿದರು. ಶಾಸಕ ಟಿ.ಡಿ.ರಾಜೇಗೌಡ ಮತ್ತು ಡಿ.ಎನ್.ಜೀವರಾಜ್ ಇಬ್ಬರ ಕಡೆಯವರೂ ಸರಿಯಾಗಿ ಸಹಿ ಹಾಕಿಲ್ಲ ಎಂದು ಗೃಹ ಸಚಿವರೇ ಹೇಳಿದ್ದಾರಲ್ಲ ಎಂದು ಕೇಳಿದಾಗ, ಸಹಿ ಸರಿಯಾಗಿಯೇ ಮಾಡಿದ್ದಕ್ಕೆ ದಾಖಲೆ ಇದೆ. ನಾನೂ ವರದಿ ತರಿಸಿಕೊಂಡಿದ್ದೇನೆ ಎಂದು ಪ್ರತಿಕ್ರಿಯಿಸಿದರು.

ಬಿಎಸ್‌ವೈಗೆ ಅಭಿಮಾನದ ಗೌರವ



ಪುಟ 1 ➡ ಯಡಿಯೂರಪ್ಪನವರು ಜೀವನದುದ್ದಕ್ಕೂ ಹೋರಾಟ ಮಾಡುವ ಮೂಲಕ ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. ಅವರ ಹೋರಾಟಕ್ಕೆ ಗೌರವ ಸಲ್ಲಿಸುವ ಕಾರ್ಯ ನಡೆಸಲಾಗುವುದು ಎಂದರು.

ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ, ಮಾಜಿ ಶಾಸಕ ಜಿ.ಎಚ್.ತಿಪ್ಪಾರೆಡ್ಡಿ, ವಿಧಾನಪರಿಷತ್ ಮಾಜಿ ಸದಸ್ಯ ವೈ.ಎ.ನಾರಾಯಣಸ್ವಾಮಿ ಮಾತನಾಡಿದರು. ಬಿಜೆಪಿ ರಾಜ್ಯ ಕಾರ್ಯದರ್ಶಿ ಅಂಬಿಕಾ ಹುಲಿನಾಯ್ಕರ್, ಜಿಲಾಧ್ಯಕ್ಷ ಕೆ.ಟಿ.ಕುಮಾರಸ್ವಾಮಿ, ಉಪಾಧ್ಯಕ್ಷ ಡಾ.ಸಿದ್ದಾರ್ಥ, ವಿಭಾಗ ಸಹ ಪ್ರಭಾರಿ ಎ. ಮುರಳಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಾಧುರಿ ಗಿರೀಶ್, ವೆಂಕಟೇಶ್ ಯಾದವ್, ಮೋಹನ್ ಕುಮಾರ್, ಎಸ್.ಲಿಂಗಮೂರ್ತಿ, ಹನುಮಂತೇಗೌಡ, ಪಟೇಲ್ ಶಿವಕುಮಾರ್, ಸಂಪತ್‌ಕುಮಾರ್, ಜಿಲ್ಲಾ ವಕ್ತಾರ ನಾಗರಾಜ್ ಬೇದ್ರೆ, ಎಸ್‌ಸಿ ಮೋರ್ಚಾದ ಅಧ್ಯಕ್ಷ ಪರಶುರಾಮ್ ಮತ್ತಿತರರಿದ್ದರು.

ತೀವ್ರ ಬಿಸಿಲ ತಾಪಕ್ಕೆ ವ್ಯಕ್ತಿ ಸಾವು

• **ದಾವಣಗೆರೆ:** ತೀವ್ರ ಬಿಸಿಲಿನ ಪರಿಣಾಮ ಜಿಲ್ಲೆಯ ಜಗಳೂರು ಮೂಲದ ವ್ಯಕ್ತಿಯೊಬ್ಬರು ಆಂಧ್ರಪ್ರದೇಶದಲ್ಲಿ ಮೃತಪಟ್ಟಿರುವ ಘಟನೆ ವರದಿಯಾಗಿದೆ.

ಜಗಳೂರು ಪಟ್ಟಣದ ನಿವೃತ್ತ ಶಿಕ್ಷಕ ಇಬ್ರಾಹಿಂ ಸಾಬ್ ಪುತ್ರ ಫಯಾಜ್ ಅಹಮ್ಮದ್(45 ವರ್ಷ) ಮೃತ ವ್ಯಕ್ತಿ. ಇವರು ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಆದೋನಿಯ ಗುಡಿಕಲ್ ದರ್ಗಾದ ಉರುಸ್‌ಗೆ ಕುಟುಂಬ ಸಮೇತ ತೆರಳಿದ್ದರು.

ಉರುಸ್ ಮುಗಿಸಿಕೊಂಡು ಆದೋನಿಯಿಂದ ಬಸ್ ಹತ್ತುವಾಗ ತೀವ್ರ ಬಿಸಿಲಿನಿಂದಾಗಿ ಫಯಾಜ್ ಅಹಮದ್ ಕುಸಿದು ಬಿದ್ದು ಅಸ್ವಸ್ಥರಾಗಿದ್ದರು. ತಕ್ಷಣವೇ ಅವರನ್ನು ಸಮೀಪದ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಭೂಕಕ್ಷೆಗೆ ಮಿಷನ್ ದೃಷ್ಟಿ ಉಪಗ್ರಹ

ಪುಟ 1 ➡ ಆದರೆ ಎಸ್‌ಎಆರ್ ಸಂವೇದಕಗಳು ರಡಾರ್ ಅಲೆಗಳನ್ನು ಬಳಸಿಕೊಂಡು ಯಾವುದೇ ಹವಾಮಾನದಲ್ಲಿ, ಹಗಲು-ರಾತ್ರಿ ಎಲ್ಲಾ ಸಮಯದಲ್ಲಿ ಚಿತ್ರಗಳನ್ನು ಪಡೆಯಲು ಸಹಕಾರಿಯಾಗುತ್ತವೆ. ಉಪಗ್ರಹ ಈಗ ಯಶಸ್ವಿಯಾಗಿ ಭೂಕಕ್ಷೆಗೆ ಪ್ರವೇಶಿಸಿದ್ದು, ಅದರ ಕಾರ್ಯಾಚರಣಾ ಪ್ರಕ್ರಿಯೆ ಯನ್ನು ಪೂರ್ಣಗೊಳಿಸುವ ಕೆಲಸ ಮುಂದುವರಿಯುತ್ತಿದೆ. ಒಪ್ಟೋಸಾರ್ ತಂತ್ರಜ್ಞಾನದಿಂದ ಸಿಗುವ ವಿಶೇಷ ಡೇಟಾಗೆ ಜಾಗತಿಕ ಮಟ್ಟದಲ್ಲಿ ಹೆಚ್ಚಿನ ಆಸಕ್ತಿ ವ್ಯಕ್ತವಾಗುತ್ತಿದೆ ಎಂದು ಗ್ಯಾಲಕ್ಸ್‌ಐ ಸ್ಥಾಪಕ ಮತ್ತು ಸಿಇಒ ಸುಯಶ್ ಸಿಂಗ್ ಹೇಳಿದ್ದಾರೆ.

2030ಕ್ಕೆ 10 ಉಪಗ್ರಹಗಳ ಸಮೂಹ ರಚನೆ?

ಗ್ಯಾಲಕ್ಸ್‌ಐ ಕಂಪನಿ 2030ರೊಳಗೆ 10 ಉಪಗ್ರಹಗಳ ಸಮೂಹವನ್ನು ರಚಿಸುವ ಯೋಜನೆ ಹೊಂದಿದ್ದು, ಭಾರತಕ್ಕೆ ಬಲಿಷ್ಠ ಮತ್ತು ಸ್ವಾಯತ್ತ ಭೂ ಆವಲೋಕನ ವ್ಯವಸ್ಥೆ ಅಭಿವೃದ್ಧಿಪಡಿಸಲು ಉದ್ದೇಶಿಸಿದೆ.

ಒಂದೇ ಉಪಗ್ರಹದಲ್ಲಿ ಆಪ್ಟಿಕಲ್ ಮತ್ತು ಸಾರ್ ಸಾಮರ್ಥ್ಯಗಳನ್ನು ಸಂಯೋಜನೆ ಮಾಡುವುದು ಬಹುದೊಡ್ಡ ಸಾಧನೆ
■ **ನಿವೃತ್ತ ಲೆ.ಜನರಲ್ ಎ.ಕೆ.ಭಟ್, ಭಾರತೀಯ ಬಾಹ್ಯಾಕಾಶ ಸಂಘದ ನಿರ್ದೇಶಕ**

ಈ ಸಾಧನೆ ಭಾರತದ ಬಾಹ್ಯಾಕಾಶ ಕ್ಷೇತ್ರದಲ್ಲಿ ಒಂದು ಮಹತ್ವದ ಮೈಲಿಗಲ್ಲು.
■ **ಜಿತೇಂದ್ರ ಸಿಂಗ್, ಕೇಂದ್ರ ಸಚಿವ**

ಪ್ರಧಾನಿ ಅಭಿನಂದನೆ



ನಮ್ಮ ಬಾಹ್ಯಾಕಾಶ ಪಯಣದಲ್ಲಿ ಗ್ಯಾಲಕ್ಸ್‌ಐನ ಮಿಷನ್ ದೃಷ್ಟಿ ಪ್ರಮುಖ ಸಾಧನೆ ಮಾಡಿದೆ. ಭಾರತದಲ್ಲಿ ಖಾಸಗಿಯಾಗಿ ನಿರ್ಮಿಸಲ್ಪಟ್ಟ ಅತಿ ದೊಡ್ಡ ಮತ್ತು ವಿಶ್ವದ ಮೊದಲ ಒಪ್ಟೋಸಾರ್ ಉಪಗ್ರಹದ ಉಡಾವಣೆ ಯಶಸ್ವಿಯಾಗಿದ್ದು, ಇದು ದೇಶ ನಿರ್ಮಾಣ ಮತ್ತು ನಾವೀನ್ಯತೆಯಲ್ಲಿ ಯುವ ಜನತೆಗಿರುವ ಆಸಕ್ತಿಗೆ ಹಿಡಿದ ಕನ್ನಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ.

ಭೂ ಅವಲೋಕನ ಉಪಗ್ರಹ

ಈ ಉಪಗ್ರಹವು ವಿಷಮ ಪರಿಸರ ಪರಿಸ್ಥಿತಿಗಳಲ್ಲಿಯೂ ವಿಶ್ವಾಸಾರ್ಹ ಮತ್ತು ನಿರಂತರ ಡೇಟಾ ಸಂಗ್ರಹಣೆಗೆ ನೆರವಾಗುತ್ತದೆ. ಇದು ಡ್ಯುಯಲ್-ಯೂಸ್ ಭೂ ಅವಲೋಕನ ಉಪಗ್ರಹವಾಗಿದ್ದು, ವಿವಿಧ ಕ್ಷೇತ್ರಗಳಿಗೆ ಸಹಾಯ ಮಾಡಲಿದೆ

- » ರಕ್ಷಣಾ ಕ್ಷೇತ್ರ (ಡಿಫೆನ್ಸ್)
- » ಕೃಷಿ
- » ವಿಪತ್ತು ನಿರ್ವಹಣೆ
- » ಸಾಗರೋತ್ತರ ಕಣ್ಗಾವಲು
- » ಮೂಲಸೌಕರ್ಯ ಯೋಜನೆ

ಈ ಮಿಷನ್, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ವರದಿಯಲ್ಲಿ ಉಲ್ಲೇಖಿಸಿರುವ 29 ಸಕ್ರಿಯ ಭೂ ಅವಲೋಕನ ಉಪಗ್ರಹಗಳಿಗೆ ಪೂರಕವಾಗಿರಲಿದೆ. ಐದು ವರ್ಷಗಳ ಸ್ವದೇಶಿ ಸಂಶೋಧನೆ ಮತ್ತು ಅಭಿವೃದ್ಧಿಯ ನಂತರ, ಈ ಉಪಗ್ರಹವನ್ನು ಯಶಸ್ವಿಯಾಗಿ ನಿರ್ಮಿಸಲಾಗಿದೆ ಮತ್ತು ಪರೀಕ್ಷಿಸಲಾಗಿದೆ.

ಕೆಪಿಎಸ್ಸಿ ಸುಧಾರಣೆಗೆ ಸದನ ಸಮಿತಿ ರಚನೆ

ಪುಟ 1 ➡ ಸಮಿತಿಯಲ್ಲಿ ಕಾಂಗ್ರೆಸ್‌ನ ಹಂಪನಗೌಡ ಬಾದರ್ಲಿ, ಎಚ್.ಸಿ. ಬಾಲಕೃಷ್ಣ ಎ.ಎಸ್. ಪೊನ್ನಣ್ಣ ಕೆ.ಎಂ. ಶಿವಲಿಂಗೇಗೌಡ, ರಾಘವೇಂದ್ರ ಹಿಟ್ನಾಳ, ಎಂ. ರೂಪಕಲಾ, ಬಿಜೆಪಿಯ ಆರಗ ಜ್ಞಾನೇಂದ್ರ, ಎಸ್. ಸುರೇಶ್ ಕುಮಾರ್, ಮಹೇಶ್ ಟೆಂಗಿನಕಾಯಿ, ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪ ಸದಸ್ಯರಾಗಿದ್ದಾರೆ. ಅಧ್ಯಯನ ನಡೆಸಿ ಶಿಫಾರಸುಗಳ ಸಹಿತ ವರದಿ ಸಲ್ಲಿಸಲು ಸಮಿತಿಗೆ ಮೂರು ತಿಂಗಳ ಕಾಲಾವಕಾಶ ನೀಡಲಾಗಿದೆ ಎಂದು ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಪಿಎಸ್ಸಿ ಅಕ್ರಮಗಳ ಕುರಿತು ಇತ್ತೀಚೆಗೆ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ಸುದೀರ್ಘ ಚರ್ಚೆ ನಡೆದಿತ್ತು. ಅಕ್ರಮಗಳನ್ನು ತಡೆಯಲೇಬೇಕು ಎಂದು ಪಕ್ಷಾತೀತವಾಗಿ ಸದಸ್ಯರು ಪ್ರಸ್ತಾಪಿಸಿದ್ದರು.

ಎಸ್‌ಸಿ,ಎಸ್‌ಟಿ ಅಭಿವೃದ್ಧಿ ಅಗತ್ಯ

ಪುಟ 1 ➡ ಹಿಂದು ಸಮಾಜದ ಈ ಸಿದ್ಧಾಂತಗಳು, ಮೌಲ್ಯ ಪದ್ಧತಿಗಳು ಸಮಾಜದ ಆತ್ಮವಿದ್ದಂತೆ. ಹಾಗಾಗಿ ಇವನ್ನು ಜೀವಂತ ಕಾಪಾಡುವುದು ಅಗತ್ಯವೆಂಬ ಸತ್ಯ ವಿದೇಶಿ ದಾಳಿಕೋರರಿಗೆ ಮನವರಿಕೆಯಾಗುತ್ತಲೇ, ಇವುಗಳ ಸಂರಕ್ಷಣೆಗೆ ಪ್ರಯತ್ನಿಸಿದವರಿಗೆ ತೀರಾ ಹಿಂಸೆ- ಸಂಕಷ್ಟಗಳ ನೀಡಿ ದಮನಿಸಿಯೇ ಬಿಡಲು ದಾಳಿಕೋರರು ತೀರ್ಮಾನಿಸಿದ್ದರು. ಆದರೆ ವಿದೇಶಿ ಆಕ್ರಮಣಕೋರರ ಸತತ ದಾಳಿ ಹೊರತೂ, ದೇಶದ ಆತ್ಮ-ಅಸ್ಮಿತೆಗಳನ್ನು ಸಂರಕ್ಷಿಸುವ ವಿಚಾರದಲ್ಲಿ ನಮ್ಮ ಬುಡಕಟ್ಟು ಸಮುದಾಯ, ಪರಿಶಿಷ್ಟ ಜಾತಿ-ವಂಗಡಗಳ ಜನರು ಹಿಂದಡಿ ಇಡಲಿಲ್ಲ, ಬದಲಾಗಿ ಭಾರೀ ಬೆಲೆತೆತ್ತು ಸಂರಕ್ಷಿಸಿದರು. ಹಾಗಾಗೇ ಪ್ರತಿಕೂಲ ಸನ್ನಿವೇಶಗಳ ಹೊರತೂ ದೇಶದ ಪ್ರಧಾನ ಅಸ್ಮಿತೆಯು ದೇಶದ ಮೂಲವಾಸಿ ಬುಡಕಟ್ಟು ಸಮುದಾಯ, ಪರಿಶಿಷ್ಟ ಜಾತಿ -ವಂಗಡಗಳ ಮಡಿಲಲ್ಲಿ ಸುರಕ್ಷಿತವಾಗಿತ್ತು ಎಂದು ಭಾಗ್ವತ್ ಅಭಿಪ್ರಾಯಪಟ್ಟರು.

ಸ್ಥಿರತೆ ಮೂಡಿಸಬಲ್ಲ ಶಕ್ತಿ ಭಾರತ ಮಾತ್ರ

ಪ್ರಸಕ್ತ ಜಗತ್ತು ಮುಗ್ಗರಿಸುತ್ತಾ ಮುಂದೆ ಸಾಗುತ್ತಿದೆ. ಸಮತೋಲನ ಕಾಯ್ದುಕೊಳ್ಳಲು ಹರಸಾಹಸಪಡುತ್ತಿದೆ. ಇಂತಹ ಸನ್ನಿವೇಶದಲ್ಲಿ ಭಾರತವು ಸ್ಥಿರತೆ ಮೂಡಿಸುವ ಶಕ್ತಿಯಾಗಿ ಹೊರಹೊಮ್ಮಬಲ್ಲುದು ಎಂದು ವಿಶ್ವಾಸ ವ್ಯಕ್ತಪಡಿಸಿದ ಅವರು, ರಾಷ್ಟ್ರವು ತನ್ನ ಹಿತಾಸಕ್ತಿಗಳ ಕಾಪಾಡೋ ಜತೆ ಜತೆಗೆ ಜಗತ್ತಿಗೆ ಬೆಂಬಲವನ್ನೂ ನೀಡಬೇಕು. ಏಕಕಾಲಕ್ಕೆ, ಭಾರತವು ತನ್ನ ಸಂಕಷ್ಟ-ಸಮಸ್ಯೆಗಳಿಗೆ ಸ್ಪಂದಿಸುವ ಜತೆಗೆ ಇಂತಹ ಸಮಸ್ಯೆ ಬಗೆಹರಿಸುವಲ್ಲಿ ಜಗತ್ತಿಗೂ ನೆರವಾಗುತ್ತಿದೆ ಎಂಬ ವಾಸ್ತವವನ್ನು ಜಗತ್ತು ಕೂಡ ಮನಗಾಣಬೇಕೆಂದು ಹೇಳಿದರು.

ಬಿಜೆಪಿ ಶೃಂಗೇರಿ ಅಭ್ಯರ್ಥಿ ಜೀವರಾಜ್‌ಗೆ ಮುನ್ನಡೆ

ಪುಟ 1 ➡ ಆದರೆ ಅದಕ್ಕೆ ಪುರಸ್ಕಾರ ಸಿಗದ ಹಿನ್ನೆಲೆಯಲ್ಲಿ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಇದರ ವಿರುದ್ಧ ಶಾಸಕ ಟಿ.ಡಿ.ರಾಜೇಗೌಡ ಅವರು ಎರಡು ಬಾರಿ ಹೈಕೋರ್ಟ್‌ನಲ್ಲೂ, ಒಂದು ಬಾರಿ ಸುಪ್ರೀಂ ಕೋರ್ಟ್‌ನಲ್ಲೂ ಜೀವರಾಜ್ ಅವರ ಅರ್ಜಿಗೆ ತಡೆ ನೀಡಬೇಕೆಂದು ಮನವಿ ಮಾಡಿದ್ದರು. ಅಂತಿಮವಾಗಿ ನ್ಯಾಯಾಲಯ ಜೀವರಾಜ್ ಅವರ ಕೋರಿಕೆಯನ್ನು ಪರಿಗಣಿಸಿ ಅಂಚೆ ಮತ ಪತ್ರಗಳ ಮರು ಎಣಿಕೆಗೆ ಆದೇಶಿಸಿತ್ತು.

ಜಿಲ್ಲಾಡಳಿತವು ಶನಿವಾರ ಜಿಲ್ಲಾ ಚುನಾವಣಾಧಿಕಾರಿ ಗೌರವಕುಮಾರ್ ಶೆಟ್ಟಿ ನೇತೃತ್ವದಲ್ಲಿ ಅಂಚೆ ಮತಪತ್ರಗಳ ಮರು ಎಣಿಕೆ ನಡೆಸಿತ್ತು. ಪ್ರಾರಂಭದಲ್ಲಿ ತಿರಸ್ಕೃತಗೊಂಡಿದ್ದ 279 ಮತಪತ್ರಗಳ ಎಣಿಕೆ ಕೈಗೊಳ್ಳಲಾಯಿತು. ಅದರಲ್ಲಿ ಟಿ.ಡಿ.ರಾಜೇಗೌಡ ಅವರಿಗೆ ಹೆಚ್ಚುವರಿಯಾಗಿ 2 ಮತಗಳು ಲಭಿಸಿದ್ದವು. ಇದನ್ನೇ ಆಧಾರವಾಗಿಟ್ಟುಕೊಂಡು ನಮ್ಮದೇ ಗೆಲುವಾಯಿತೆಂದು ಟಿ.ಡಿ.ರಾಜೇಗೌಡ ಅವರನ್ನು ಹೆಗಲ ಮೇಲೆ ಹೊತ್ತು ಕಾಂಗ್ರೆಸ್ ಕಾರ್ಯಕರ್ತರು ವಿಜಯೋತ್ಸವವನ್ನೂ ಆಚರಿಸಿದ್ದರು.

ಅತ್ತ ಬಿಜೆಪಿಯ ಡಿ.ಎನ್.ಜೀವರಾಜ್ ಅವರು ಮತ ಎಣಿಕೆಯಲ್ಲಿ ಪುರಸ್ಕೃತಗೊಂಡಿದ್ದ ಎಲ್ಲ 1822 ಅಂಚೆ ಮತಪತ್ರಗಳನ್ನು ಮರು ಎಣಿಕೆ ಮತ್ತು ಪರಿಶೀಲನೆ ಮಾಡಬೇಕೆಂದು ಪಟ್ಟುಹಿಡಿದಿದ್ದರು. ಅಂತಿಮವಾಗಿ ಅಧಿಕಾರಿಗಳು ಪುರಸ್ಕೃತ ಮತಪತ್ರಗಳ ಮರುಎಣಿಕೆ ನಡೆಸಿದಾಗ, ಟಿ.ಡಿ. ರಾಜೇಗೌಡ ಅವರಿಗೆ ಚಲಾವಣೆಯಾಗಿದ್ದ ಒಟ್ಟು 569 ಅಂಚೆ ಮತಪತ್ರಗಳ ಪೈಕಿ 255 ಮತಗಳು ಕಡಿಮೆಯಾದವು. ಜೀವರಾಜ್ ಅವರಿಗೆ ಚಲಾವಣೆಯಾಗಿದ್ದ 692 ಮತಗಳ ಪೈಕಿ 2 ಮತಗಳು ಕಡಿಮೆಯಾದವು. ಇದರ ಆಧಾರದ ಮೇಲೆ ಡಿ.ಎನ್.ಜೀವರಾಜ್ ಅವರ ಒಟ್ಟಾರೆ ಮತಗಳ ಗಳಿಕೆ ಟಿ.ಡಿ.ರಾಜೇಗೌಡರಿಗಿಂತ 52 ಮತಗಳು ಹೆಚ್ಚಾದವು. ಈ ಮಾಹಿತಿ ಹೊರಬೀಳುತ್ತಿದ್ದಂತೆ ರಾತ್ರಿ 2 ಗಂಟೆಗೆ ಬಿಜೆಪಿ ಕಾರ್ಯಕರ್ತರು ಎಣಿಕೆ ಕೇಂದ್ರದ ಬಳಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು. ಮಧ್ಯಾಹ್ನ ನಾವೇ ಗೆದ್ದೆವೆಂದು ವಿಜಯೋತ್ಸವ ಆಚರಿಸಿಕೊಂಡಿದ್ದ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿಯಿಂದ ಭಾರೀ ಅಕ್ರಮ ನಡೆದಿದೆ. ಓಟು ಟ್ಯಾಂಪರಿಂಗ್ ನಡೆಸಿದ್ದಾರೆ ಎಂದೆಲ್ಲಾ ಆರೋಪಿಸಿ ಪ್ರತಿಭಟನೆ ನಡೆಸಿದರು.

ಕಾನೂನು ಹೋರಾಟ: ಡಿಸಿಎಂ

ಪುಟ 1 ➡ **ದೊಡ್ಡ ತನಿಖೆಯಾಗಲಿ:** ಎಲ್ಲಾ ರಾಜಕೀಯ ಪಕ್ಷಗಳು ಈ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು. ನಮ್ಮ ಅಭ್ಯರ್ಥಿಗೆ ಬಂದ ಅಂಚೆ ಮತಗಳನ್ನು ತಿದ್ದಿ ಅವುಗಳನ್ನು ಅಸಿಂಧುಗೊಳಿಸಲು ಷಡ್ಯಂತ್ರ ಮಾಡಲಾಗಿತ್ತು. ಈ ವಿಚಾರವಾಗಿ ದೊಡ್ಡ ತನಿಖೆ ಆಗಬೇಕು. ಕಾನೂನು ಹಾಗೂ ನ್ಯಾಯಾಲಯದಲ್ಲಿ ಇರುವ ಅವಕಾಶದಲ್ಲಿ ಹೋರಾಟ ಮಾಡಲಾಗುವುದು. ಜಯನಗರ ಕ್ಷೇತ್ರದಲ್ಲೂ ಇದೇ ರೀತಿ ಅನ್ಯಾಯ ಮಾಡಲಾಗಿದೆ. ನಾವು ಕಾನೂನು ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು.

ಹೈಕೋರ್ಟ್ ಆದೇಶ ಪಾಲಿಸಿ: ಅಶೋಕ

• **ಬೆಂಗಳೂರು:** ಶೃಂಗೇರಿ ವಿಧಾನಸಭಾ ಕ್ಷೇತ್ರದ ಚುನಾವಣಾ ಫಲಿತಾಂಶವನ್ನು ಚುನಾವಣಾಧಿಕಾರಿ ಪ್ರಕಟಿಸದಂತೆ ಕಾಂಗ್ರೆಸ್ ಸರ್ಕಾರ ಒತ್ತಡ ಹೇರಿದೆ. ಚುನಾವಣಾಧಿಕಾರಿಗಳು ಕೂಡಲೇ ಫಲಿತಾಂಶ ಪ್ರಕಟಿಸಿ ಹೈಕೋರ್ಟ್ ಆದೇಶ ಪಾಲಿಸಬೇಕು ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದ್ದಾರೆ. ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ 52 ಅಂಚೆ ಮತಗಳು ಬಿಜೆಪಿ ಅಭ್ಯರ್ಥಿ ಡಿ.ಎನ್.ಜೀವರಾಜ್ ಅವರಿಗೆ ದೊರೆತಿವೆ. ಮತ ಎಣಿಕೆಯಲ್ಲಿ ಯಾರಿಗೆ ಹೆಚ್ಚು ಮತ ಬರುತ್ತದೋ ಅದನ್ನು ಘೋಷಿಸಬೇಕೆಂದು ಕೋರ್ಟ್ ಆದೇಶದಲ್ಲಿ ಹೇಳಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗಕ್ಕೆ ಕೇಳಿದಾಗ, ಹೈಕೋರ್ಟ್‌ಗೆ ಮಾಹಿತಿ ನೀಡುತ್ತೇವೆ ಎಂದು ಸಬೂಬು ಹೇಳಿದ್ದಾರೆ. ಕಾಂಗ್ರೆಸ್ ಸರ್ಕಾರ ಚುನಾವಣಾಧಿಕಾರಿಯ ಮೇಲೆ ಒತ್ತಡ ಹೇರಿ ಫಲಿತಾಂಶವನ್ನು ತಡೆಹಿಡಿದಿದೆ. ಈ ಮೂಲಕ ಕೋರ್ಟ್ ಆದೇಶ ಉಲ್ಲಂಘಿಸಲಾಗಿದೆ. ಇದು ರಾಜ್ಯದ ಜನತೆಗೆ ಬಗೆದ ದ್ರೋಹ ಎಂದು ಆರ್.ಅಶೋಕ್ ಆರೋಪಿಸಿದರು.

ಬೆತ್ತಲೆ ಪೂಜೆಗೆ ಜ್ಯೋತಿಷಿ ಒತ್ತಡ: ದೂರು

• **ರಾಮನಗರ:** ವಿಶೇಷ ಪೂಜೆಗೆ ನಿನ್ನ ಬೆತ್ತಲೆ ಫೋಟೋ ಕಳುಹಿಸು, 30 ಲಕ್ಷ ರೂ. ನೀಡುವುದಾಗಿ ಮಹಿಳೆಯೊಬ್ಬರಿಗೆ ಜ್ಯೋತಿಷಿ ಕಿರುಕುಳ ನೀಡಿದ ಆರೋಪ ತಾಲೂಕಿನ ದೊಡ್ಡಮಣ್ಣುಗುಡ್ಡೆ ಗ್ರಾಮದಲ್ಲಿ ಕೇಳಿ =ಬಂದಿದೆ. ಗ್ರಾಮದ ಕಿರಣ್ ಎಂಬಾತ ಮಹಿಳೆಯೊಬ್ಬರಿಗೆ ಮನಿ ಡಬ್ಲಿಂಗ್ ಮಾಡುವ ಪೂಜೆಗೆ ನಿನ್ನನ್ನು ಸೆಲೆಕ್ಟ್ ಮಾಡಬೇಕಾದರೆ ನೀನು ಬೆತ್ತಲೆ ಫೋಟೋ ಕಳುಹಿಸು ಎಂದು ರಾತ್ರಿ ವೇಳೆ ಮೆಸೇಜ್ ಮಾಡುತ್ತಿದ್ದನು. ಮೆಸೇಜ್‌ನಲ್ಲಿ ನಾನು ಬೆಂಗಳೂರಿನಲ್ಲಿ ವಿಶೇಷ ಪೂಜೆ ಮಾಡಿಸ್ತಿದ್ದೀನಿ, ಇದಕ್ಕೆ ಮೈ ಮೇಲೆ ಮಚ್ಚೆ ಇಲ್ಲದ ಮಹಿಳೆ ನಗ್ನವಾಗಿ ಕೂರಬೇಕು. ಆ ಪೂಜೆಗೆ ನಿನ್ನನ್ನು ಆಯ್ಕೆ ಮಾಡಲು ನಿನ್ನ ಬೆತ್ತಲೆ ಫೋಟೊ ಕಳುಹಿಸು. ಪೂಜೆ ಮುಗಿದ ಬಳಿಕ 30 ಲಕ್ಷ ರೂ. ಹಣ ನೀಡುವುದಾಗಿ ಕಿರುಕುಳ ನೀಡುತ್ತಿದ್ದನೆಂದು ದೂರಲಾಗಿದೆ. ಕಳೆದ ಒಂದು ವಾರದಿಂದ ಜ್ಯೋತಿಷಿ ಕಿರುಕುಳ ನೀಡುತ್ತಿದ್ದಾನೆ. ಎರಡು ದಿನಗಳ ಹಿಂದೆ ಮಹಿಳಾ ಠಾಣೆಗೆ ದೂರು ನೀಡಿದ್ದ ಆರೋಪಿಯನ್ನು ಬಂಧಿಸಿಲ್ಲ. ಆರೋಪಿ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮಹಿಳೆ ಮನವಿ ಮಾಡಿದ್ದಾರೆ.

ಕಾರು-ಲಾರಿ ಮುಖಾಮುಖಿ: ಮೂವರ ಸಾವು

• **ಗುಂಡ್ಲುಪೇಟೆ:** ಮಣ್ಣು ಸಾಗಿಸುತ್ತಿದ್ದ ಲಾರಿಯು ಕಾರಿಗೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಮೃತಪಟ್ಟ ಘಟನೆ ಗುಂಡ್ಲುಪೇಟೆ ತಾಲೂಕಿನ ಕೇರಳ ರಸ್ತೆಯ ಮದ್ದಯ್ಯನಹುಂಡಿ ಬಳಿ ಭಾನುವಾರ ನಡೆದಿದೆ.

ಕೇರಳ ಮೂಲದ ಕಾರು ಚಾಲಕ ಮುನೀರ್(30), ಮುನಿರಾ(45) ಹಾಗೂ ಮೋಹಿಜ್ (3) ಎಂಬ ಬಾಲಕ ಮೃತಪಟ್ಟವರು. ಅಪಘಾತದಲ್ಲಿ ಸಾನಿಯಾ ಮಿರ್ಜಾ(22), ಸಾಹಲ್ ಪರ್ವಿನ್ (28) ಹಾಗೂ ಬಿಲಾಲ್‌ಎಂಬುವರು ತೀವ್ರವಾಗಿ ಗಾಯಗೊಂಡಿದ್ದು, ಇವರಿಗೆ ಸಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಲಾರಿ ಡಿಕ್ಕಿಯಾದ ರಭಸಕ್ಕೆ ಕಾರು ಹಳ್ಳಕ್ಕೆ ಬಿದ್ದಿದ್ದು, ನಜ್ಜುಗುಜ್ಜಾಗಿದೆ. ಗುಂಡ್ಲುಪೇಟೆ ಠಾಣಾ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ. ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ರೈತಸಂಘದ ಕಾರ್ಯಕರ್ತರು ದೌಡಾಯಿಸಿ ಆಕ್ರೋಶ ಹೊರಹಾಕಿದ್ದಾರೆ.

ಕೇರಳ ರಸ್ತೆಯಲ್ಲಿ ನಿರಂತರ ಅಪಘಾತಗಳಾಗುತ್ತಿದ್ದು, ಕೆಲವು ದಿನಗಳ ಹಿಂದೆಯಷ್ಟೇ ಟಿಪ್ಪರ್ ಡಿಕ್ಕಿಯಾಗಿ ಒಂದೇ ಕುಟುಂಬದ ನಾಲ್ವರು ಮೃತಪಟ್ಟಿದ್ದರು.

ಈಗ ಮೂವರು ಅಸುನೀಗಿದ್ದಾರೆ. ಗುಂಡ್ಲುಪೇಟೆ ಪೊಲೀಸರು ಕೇಸ್ ದಾಖಲಿಸಿಕೊಂಡು ಎರಡು ವಾಹನಗಳನ್ನು ವಶಕ್ಕೆ ಪಡೆದು ತನಿಖೆ ಮುಂದುವರೆಸಿದ್ದಾರೆ.

ಮೇ 6ಕ್ಕೆ ಅರ್ಜುನ ಸ್ಮಾರಕ ಉದ್ಘಾಟನೆ: ಈಶ್ವರ ಖಂಡ್ರೆ

• ಬೆಂಗಳೂರು: ಹಾಸನ ಜಿಲ್ಲೆ ಯಸಳೂರು ವಲಯದಲ್ಲಿ ಕಳೆದ 2023 ಡಿಸೆಂಬರ್ 4ರಂದು ಆನೆ ಸೆರೆ ಕಾರ್ಯಾಚರಣೆ ವೇಳೆ ವೀರಾವೇಶದಿಂದ ಹೋರಾಡಿ, ಪಶುವೈದ್ಯರು, ಸಿಬ್ಬಂದಿ ಜೀವ ಉಳಿಸಿ ಹುತಾತ್ಮನಾದ ಅರ್ಜುನ ಆನೆಯ ಸಮಾಧಿ ಸ್ಥಳದಲ್ಲಿ ನಿರ್ಮಿಸಿರುವ ಸ್ಮಾರಕವನ್ನು ಮೇ



6ರ ಬುಧವಾರ ಉದ್ಘಾಟಿಸಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ದಸರಾ ಮಹೋತ್ಸವದಲ್ಲಿ 8 ಬಾರಿ ಚಿನ್ನದ ಅಂಬಾರಿ ಹೊತ್ತು ಗಜಗಾಂಭೀರ್ಯದಿಂದ ಹೆಜ್ಜೆಹಾಕಿ, ಜನರ ಪ್ರೀತಿಗೆ ಪಾತ್ರನಾಗಿದ್ದ ಅರ್ಜುನ ಆನೆಯ ಸಾವು ಇಲಾಖೆಗೆ ದೊಡ್ಡ ನಷ್ಟವಾಗಿದ್ದು, ಸಮಾಧಿ ಸ್ಥಳದಲ್ಲಿ ಮತ್ತು ನಾಗರಹೊಳೆಯ ಬಳ್ಳೆಯಲ್ಲಿ ಸ್ಮಾರಕ ನಿರ್ಮಿಸುವುದಾಗಿ ಸರ್ಕಾರ ತಿಳಿಸಿತ್ತು. ಅದರಂತೆ ಈಗಾಗಲೇ ಬಳ್ಳೆ ಶಿಬಿರದಲ್ಲಿ ಅರ್ಜುನನ ಹಿರಿಮೆ, ಸಾಹಸಗಾಥೆಗಳನ್ನು ಇಂದಿನ ಮತ್ತು ಮುಂದಿನ ಪೀಳಿಗೆಗೂ ತಿಳಿಸುವ ರೀತಿಯಲ್ಲಿ ಸ್ಮಾರಕ ಅನಾವರಣ ಮಾಡಲಾಗಿದೆ. ಮೇ 6ರಂದು ಯಸಳೂರಿನ ಸಮಾಧಿ ಸ್ಥಳದ ಸ್ಮಾರಕ ಉದ್ಘಾಟಿಸಲಾಗುವುದು ಎಂದು ವಿವರಿಸಿದರು. ಈ ಎರಡೂ ಸ್ಥಳದಲ್ಲಿ ಅರ್ಜುನ ಆನೆಯ ಪ್ರತಿರೂಪದಂತಿರುವ ಪ್ರತಿಮೆಗಳನ್ನು ನಿರ್ಮಿಸಲಾಗಿದ್ದು, ಅರ್ಜುನ ವಿವಿಧ ಆನೆ ಕಾರ್ಯಾಚರಣೆ, ಹುಲಿ ಮತ್ತು ಚಿರತೆ ಕಾರ್ಯಾಚರಣೆಯಲ್ಲಿ ಮತ್ತು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡ ಚಿತ್ರಗಳನ್ನು ಹಾಕುವಂತೆ ಸೂಚಿಸಲಾಗಿದೆ ಎಂದರು.

ಯಸಳೂರಿನಲ್ಲಿ ಸ್ಮಾರಕ ಸಿದ್ಧವಾಗಿ ಹಲವು ತಿಂಗಳುಗಳೇ ಕಳೆದಿದೆ. ಆದರೆ ಕಾರಣಾಂತರದಿಂದ ಸ್ಮಾರಕ ಉದ್ಘಾಟನೆ ವಿಳಂಬವಾಗಿದ್ದು, ಈಗ ಉದ್ಘಾಟನಾ ಕಾರ್ಯಕ್ರಮಕ್ಕೆ ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸ್ಥಳೀಯ ಶಾಸಕರು, ಜನಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ಸಚಿವ ಖಂಡ್ರೆ ತಿಳಿಸಿದರು.

ಸಾಮೂಹಿಕ ವಿವಾಹ



ವಿಧಾನ ಪರಿಷತ್ ಸದಸ್ಯ ಬಸನಗೌಡ ಬಾದರ್ಲಿ ಅವರ ಬಸನಗೌಡ ಫೌಂಡೇಷನ್ ವತಿಯಿಂದ ಸಿಂಧನೂರು ತಾಲೂಕು ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ಉಚಿತ ವಿವಾಹ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪಾಲ್ಗೊಂಡು ನವ ಜೋಡಿಗಳಿಗೆ ಶುಭ ಹಾರೈಸಿದರು. ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್, ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಕೆ.ಎಚ್. ಮುನಿಯಪ್ಪ, ಎನ್.ಎಸ್ .ಬೋಸರಾಜು, ಈಶ್ವರ್ ಖಂಡ್ರೆ, ಆರ್.ಬಿ.ತಿಮ್ಮಾಪುರ್, ನಟ ಸುದೀಪ್ ಇದ್ದರು.

ಮುಂದಿನ ಸಿಎಂ ಯಾರು: ಅಶೋಕ

• ಬೆಂಗಳೂರು: ಮೇ 15 ಕ್ಕೆ ಸಿದ್ದರಾಮಯ್ಯ ಅವರ ಕಥೆ ಮುಗಿಯಿತು ಎಂದು ಡಿ.ಕೆ. ಶಿವಕುಮಾರ್ ತಂಡ ಹೇಳುತ್ತಿದೆ. ಆದರೆ, ಮೂರು ವರ್ಷಗಳ ಸಂಭ್ರಮಾಚರಣೆ ಎಂದು ಗೃಹಸಚಿವ ಡಾ.ಜಿ.ಪರಮೇಶ್ವರ್ ಹೇಳುತ್ತಿದ್ದಾರೆ. ಇದು ಮುಕ್ತಾಯದ ಸಮಾರಂಭವೂ ಆಗಿರಬಹುದು. ಇನ್ನೂ ಯಾರು ಮುಖ್ಯಮಂತ್ರಿ ಎಂದು ಯಾರಿಗೂ ಗೊತ್ತಿಲ್ಲ ಎಂದು ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ ವ್ಯಂಗ್ಯವಾಡಿದ್ದಾರೆ.

ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಒಡೆದು ಮನೆಯೊಂದು ಮೂರು ಬಾಗಿಲು ಎಂಬಂತಾಗಿದೆ. ಮಲ್ಲಿಕಾರ್ಜುನ ಖರ್ಗೆ ಹೊಸ ಬಾಗಿಲು ತೆರೆದಿದ್ದಾರೆ. ಸಮಾವೇಶ ಮಾಡುವ ಮುನ್ನ ಯಾರ ನೇತೃತ್ವದಲ್ಲಿ ಮಾಡುತ್ತೇವೆಂದು ತಿಳಿಸಬೇಕಾಗುತ್ತದೆ ಎಂದರು. ನೌಕರರಿಗೆ ಸಂಬಳವಿಲ್ಲದೆ ಮುಷ್ಕರ ನಡೆಯುತ್ತಿದೆ. ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿಲ್ಲ.

ಗೃಹಲಕ್ಷ್ಮಿಯ 5,000 ಕೋಟಿ ರೂ. ಇನ್ನೂ ಕೊಟ್ಟಿಲ್ಲ. ಅನ್ನಭಾಗ್ಯದ 750 ಕೋಟಿ ರೂ. ಬಾಕಿ ಇದೆ. ಎಲ್ಲ ಕಡೆ ಬರಗಾಲವಿದ್ದು, ನೀರಿನ ಹಾಹಾಕಾರ ಕೇಳಿಬಂದಿದೆ. ಬೆಂಗಳೂರಿನಲ್ಲಿ ರಸ್ತೆಯ ಒಂದು ಗುಂಡಿ ಮುಚ್ಚಲು ಒಂದು ಲಕ್ಷ ರೂ. ಖರ್ಚು ಮಾಡಿದ್ದಾರೆ. ಬಿದ್ದಿರುವ ಮರ ಕೊಂಬೆಗಳನ್ನು ಇನ್ನೂ ತೆರವು ಮಾಡಿಲ್ಲ. ಬೌರಿಂಗ್ ಆಸ್ಪತ್ರೆಯ ಗೋಡೆ ಬಿದ್ದು ಏಳು ಮಂದಿಯ ಸಾವಾಗಿದೆ. ಅಂದಮೇಲೆ ಮೂರು ವರ್ಷದ ಸಾಧನೆ ಏನು? ಪಕ್ಷ ಮೂರು ಬಾಗಿಲು ಆಗಿರುವುದೇ ಮೂರು ವರ್ಷದ ಸಾಧನೆಯಾಗಿದೆ ಎಂದು ಅಭಿಪ್ರಾಯಪಟ್ಟರು.



ಎಲ್ಲ ರಾಜ್ಯಗಳಲ್ಲಿ ಬಿಜೆಪಿಗೆ ಉತ್ತಮ ಫಲಿತಾಂಶ ಬರಲಿದೆ. ಕೇರಳದಲ್ಲಿ ಬಿಜೆಪಿ ಖಾತೆ ತೆರೆಯಲಿದೆ. ತಮಿಳುನಾಡಲ್ಲೂ ಹೆಜ್ಜೆ ಗುರುತು ಮೂಡಲಿದೆ. ಚುನಾವಣಾ ಸಮೀಕ್ಷೆಗಳಲ್ಲಿ ಬಿಜೆಪಿ ಪರ ಫಲಿತಾಂಶ ಬಂದಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲ್ಲುವ ವಿಶ್ವಾಸವಿದೆ.

■ **ಆರ್.ಅಶೋಕ, ವಿಧಾನಸಭೆ ಪ್ರತಿಪಕ್ಷ ನಾಯಕ**

ಕಿರುಸುದ್ದಿ

ಕಾಂಗ್ರೆಸ್‌ನಿಂದ ಚುನಾವಣೆ ಅಕ್ರಮ: ಬಿವೈವಿ ಆರೋಪ

• ಚಿತ್ರದುರ್ಗ: ವೋಟ್ ಚೋರಿ, ವೋಟ್ ಚೋರಿ ಎಂದು ಕಾಂಗ್ರೆಸ್‌ನವರು ಜನರ ಕಿವಿಗೆ ಹೂವು ಮುಡಿಸುವ ಮೂಲಕ ಕಾಂಗ್ರೆಸ್‌ನವರು ಚುನಾವಣೆ ಅಕ್ರಮ ನಡೆಸಿದ್ದಾರೆ ಎಂಬುದು ಶೃಂಗೇರಿ ಫಲಿತಾಂಶ ನೋಡಿದರೆ ತಿಳಿಯುತ್ತದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಿಡಿಕಾರಿದರು. ಚಿತ್ರದುರ್ಗದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಕಳೆದ ಮೂರು ವರ್ಷಗಳ ಹಿಂದೆ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದ್ದನ್ನು ತಿಳಿದು ಇಂತಹ ಅಕ್ರಮಗಳನ್ನು ನಡೆಸಿದ್ದಾರೆ. ನ್ಯಾಯಯುತವಾಗಿ ಗೆದ್ದಿದ್ದ ಡಿ.ಎನ್. ಜೀವರಾಜ್ ಅವರನ್ನು ಕಳೆದ ಮೂರು ವರ್ಷಗಳಿಂದ ಮಾಜಿ ಶಾಸಕರನ್ನಾಗಿ ಮಾಡಿದ್ದಾರೆ. ಈಗ ದೇಶ ಹಾಗೂ ರಾಜ್ಯದ ಜನರ ಮುಂದೆ ಇವರ ಬಣ್ಣ ಬಯಲಾಗಿದೆ. ಹಾಗಾಗಿ ಕಾಂಗ್ರೆಸ್‌ನವರು ರಾಜ್ಯ ಹಾಗೂ ಶೃಂಗೇರಿ ಕ್ಷೇತ್ರದ ಜನರ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದರು. ಡಿ.ಎನ್.ಜೀವರಾಜ ಗೆದ್ದಿರುವ ಬಗ್ಗೆ ಅಧಿಕಾರಿಗಳು ತಿಳಿಸಿದ್ದಾರೆ. ಈ ಕುರಿತು ಡಿಸಿಎಂ ಡಿ.ಕೆ.ಶಿವಕುಮಾರ್ ಏನು ಮಾತನಾಡುತ್ತಾರೆ. ಪ್ರಜಾಪ್ರಭುತ್ವದ ಬಗ್ಗೆ ಗೌರವ ಇದ್ದಲ್ಲಿ ಈ ರೀತಿ ನಡೆದುಕೊಳ್ಳುತ್ತಿರಲಿಲ್ಲ. ವೋಟ್ ಚೋರಿ ಎಂದು ಹೇಳಿಕೊಂಡು ಅಕ್ರಮ ನಡೆಸುವ ಅಪಕೀರ್ತಿ ಕಾಂಗ್ರೆಸ್‌ಗೆ ಸಲ್ಲುತ್ತದೆ. ಮಾತೆತ್ತಿದರೆ ಅಂಬೇಡ್ಕರ್ ಬಗ್ಗೆ ಭಾಷಣ ಬಿಗಿಯುತ್ತಾರೆ. ಸಂವಿಧಾನದ ಬಗ್ಗೆ ಗೌರವ ಇದ್ದಲ್ಲಿ ಜನರು ಕೊಟ್ಟಿರುವ ತೀರ್ಪನ್ನು ಗೌರವಿಸುವ ಕೆಲಸ ಮಾಡಬೇಕು ಎಂದು ಹೇಳಿದರು.

ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿಕೆ

20 ಇಎಸ್‌ಐಸಿ ಕಾಲೇಜು

• ದೊಡ್ಡಬಳ್ಳಾಪುರ: ದೇಶಾದ್ಯಂತ 20 ಇಎಸ್‌ಐಸಿ ವೈದ್ಯಕೀಯ ಕಾಲೇಜು ಸ್ಥಾಪಿಸುವ ಮೂಲಕ ಕಾರ್ಮಿಕರ ಕುಟುಂಬಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಚಿಕಿತ್ಸೆಯ ಭರವಸೆ ನೀಡಲಾಗಿದೆ ಎಂದು ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಯುವಜನ ವ್ಯವಹಾರಗಳು ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಾಂಡವೀಯ ಹೇಳಿದರು.

ತಾಲೂಕಿನ ಬಾಶೆಟ್ಟಿಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ 100 ಹಾಸಿಗೆ ಸಾಮರ್ಥ್ಯದ ಇಎಸ್‌ಐಸಿ ಆಸ್ಪತ್ರೆ ಉದ್ಘಾಟಿಸಿ ಮಾತನಾಡಿ, ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಮಿಕರ ಮಕ್ಕಳಿಗಾಗಿ ಮೀಸಲಾತಿಯನ್ನು ಕಲ್ಪಿಸಲಾಗಿದೆ ಎಂದರು. ಜಾರಿಗೆ ತರಲಾಗಿರುವ ನಾಲ್ಕು ಹೊಸ ಕಾರ್ಮಿಕ ಸಂಹಿತೆಗಳು ಖಾಸಗಿ ವಲಯದ ಉದ್ಯೋಗಿಗಳಿಗೆ ಸಾಮಾಜಿಕ ಭದ್ರತೆ ಮತ್ತು ನೇಮಕಾತಿ ಪತ್ರದ ಖಾತರಿ ಒದಗಿಸುತ್ತವೆ. ಕಾರ್ಮಿಕರ ಆರೋಗ್ಯದ ದೃಷ್ಟಿಯಿಂದ 40 ವರ್ಷ ದಾಟಿದ ಪ್ರತಿಯೊಬ್ಬ ಕಾರ್ಮಿಕನಿಗೂ ವಾರ್ಷಿಕ ಉಚಿತ ಆರೋಗ್ಯ ತಪಾಸಣೆ ಕಡ್ಡಾಯಗೊಳಿಸಲಾಗಿದೆ. ಇದರ ಉದ್ದೇಶ ರೋಗಗಳನ್ನು ಪ್ರಾಥಮಿಕ ಹಂತದಲ್ಲೇ ಪತ್ತೆ ಹಚ್ಚಿ ಕಾರ್ಮಿಕರ ಜೀವ ರಕ್ಷಣೆಗೆ ಒತ್ತು ನೀಡಲಾಗಿದೆ ಎಂದು ಹೇಳಿದರು.

ಕೇಂದ್ರ ಕಾರ್ಮಿಕ ಮತ್ತು ಉದ್ಯೋಗ ಹಾಗೂ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಮಾತನಾಡಿ, ರಾಜ್ಯ ಕಾಂಗ್ರೆಸ್ ಸರ್ಕಾರದ ಇಚ್ಛಾಶಕ್ತಿ ಕೊರತೆಯಿಂದಾಗಿ ಕಳೆದ ಎರಡು ವರ್ಷದ ಹಿಂದೆ ಇಎಸ್‌ಐ ಆಸ್ಪತ್ರೆ ಕಟ್ಟಡ ಕಾಮಗಾರಿ ಪೂರ್ಣಗೊಂಡಿದ್ದರೂ ಉದ್ಘಾಟನೆ ಮಾಡಲು ಸಾಧ್ಯವಾಗಿರಲಿಲ್ಲ. ಈಗ ಕೇಂದ್ರ ಸರ್ಕಾರದ ಸುಪರ್ದಿಯಲ್ಲಿ ಉದ್ಘಾಟನೆಯಾಗಿದೆ ಎಂದು ಹೇಳಿದರು.

ಇಂದು ಸುಮಾರು 101 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಇಎಸ್‌ಐಸಿ ಆಸ್ಪತ್ರೆ ನಿರ್ಮಿಸಲಾಗಿದ್ದು, ದೊಡ್ಡಬಳ್ಳಾಪುರ ಭಾಗದಲ್ಲಿ ಕಾರ್ಮಿಕರ ಸಂಖ್ಯೆ ಹೆಚ್ಚಿದ್ದು, ಈ ಹಿಂದೆ ಉತ್ತಮ ಚಿಕಿತ್ಸೆಗಾಗಿ ಬೆಂಗಳೂರಿಗೆ ಅಲೆದಾಡುವ ಪರಿಸ್ಥಿತಿ ಇತ್ತು. ಈಗ ಕಾರ್ಮಿಕರಿಗೆ ಇಲ್ಲಿಯೇ ಗುಣಮಟ್ಟದ ವೈದ್ಯಕೀಯ ಚಿಕಿತ್ಸೆ ದೊರೆಯಲಿದೆ. ಪ್ರಸ್ತುತ ಈ ಆಸ್ಪತ್ರೆಗೆ 9 ಜನ ತಜ್ಞ ವೈದ್ಯರು, ನರ್ಸಿಂಗ್ ಸಿಬ್ಬಂದಿ ಹಾಗೂ ತಾಂತ್ರಿಕ ಸಿಬ್ಬಂದಿಯನ್ನು ನೇಮಕ ಮಾಡಲಾಗಿದೆ ಎಂದರು.



ಇಎಸ್‌ಐಸಿ ಆಸ್ಪತ್ರೆಯು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ. ಸಂಘಟಿತ ಹಾಗೂ ಅಸಂಘಟಿತ ಕಾರ್ಮಿಕರಿಗೆ ಉಚಿತ ಆರೋಗ್ಯ ಸೇವೆ ಒದಗಿಸುತ್ತಿದೆ.

■ **ಡಾ.ಕೆ.ಸುಧಾಕರ, ಸಂಸದ**

ಕಾರ್ಮಿಕರ ಆರೋಗ್ಯ ರಕ್ಷಣೆಗೆ ಕೇಂದ್ರ ಸರ್ಕಾರ ಬದ್ಧ

ದೇಶಾದ್ಯಂತ ಇರುವ 15 ಕೋಟಿ ಕಾರ್ಮಿಕರು ಮತ್ತು ಅವರ ಕುಟುಂಬದವರಿಗೆ ಗುಣಮಟ್ಟದ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ದೇಶದ ಇಎಸ್‌ಐಸಿ ವೈದ್ಯಕೀಯ ಕಾಲೇಜುಗಳಲ್ಲಿ ಪ್ರಸ್ತುತ 1,550 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ ವಿಶೇಷವಾಗಿ ಕಾರ್ಮಿಕರ ಮಕ್ಕಳಿಗಾಗಿ 702 ಸೀಟುಗಳನ್ನು ಮೀಸಲಿಡಲಾಗಿದೆ. ಮುಂಬರುವ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ನಿರ್ವಹಿಸಲ್ಪಡುವ ಇಂತಹ ಆಸ್ಪತ್ರೆಗಳ ಸಂಖ್ಯೆ ಹೆಚ್ಚಾಗಲಿದೆ ಎಂದು ಸಚಿವೆ ಶೋಭಾ ಕರಂದ್ಲಾಜೆ ತಿಳಿಸಿದರು.

ಡಿಸಿಎಂ ಹೇಳಿಕೆ ಸಂವಿಧಾನಕ್ಕೆ ಅಪಮಾನ: ಛಲವಾದಿ ಟೀಕೆ

• ಬೆಂಗಳೂರು: ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತಎಣಿಕೆಯ ಮುಖ್ಯಾಂಶವಾದ ಬೆನ್ನಲ್ಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಹೇಳಿಕೆಗಳು ಕೇವಲ ರಾಜಕೀಯ ಪ್ರೇರಿತವಲ್ಲ, ಅವು ಈ ದೇಶದ ಸಂವಿಧಾನ ಮತ್ತು ನ್ಯಾಯಾಂಗ ವ್ಯವಸ್ಥೆಗೆ ಮಾಡಿದ ಘೋರ ಅಪಮಾನದಂತಿವೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದ್ದಾರೆ.



ಸೋಲಿನ ಭೀತಿಯಿಂದ ಕಂಗೆಟ್ಟಿರುವ ಕಾಂಗ್ರೆಸ್, ಸತ್ಯವನ್ನು ಒಪ್ಪಿಕೊಳ್ಳಲಾಗದೆ ಸುಳ್ಳಿನ ಕಂತೆಗಳನ್ನು ಹೆಣೆಯುತ್ತಿದೆ. ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ನ್ಯಾಯಾಂಗ ನಿಂದನೆ ಮತ್ತು ಹತಾಶೆಯ ಪರಮಾವಧಿ ಎಂದಿದ್ದಾರೆ.

ಕೋರ್ಟ್ ಆದೇಶವು ಕ್ರಿಮಿನಲ್ ಆಕ್ಟಿವಿಟಿಯೇ?: ಮರು ಮತಎಣಿಕೆ ಎನ್ನುವುದು ನ್ಯಾಯಾಲಯದ ನಿರ್ದೇಶನದಂತೆ ನಡೆದ ಪ್ರಕ್ರಿಯೆ. ಅದನ್ನು ಕ್ರಿಮಿನಲ್ ಆಕ್ಟಿವಿಟಿ ಎಂದು ಕರೆಯುವ ಮೂಲಕ ಡಿ.ಕೆ.ಶಿವಕುಮಾರ್ ಅವರು ಪರೋಕ್ಷವಾಗಿ ನ್ಯಾಯಾಂಗದ ವಿವೇಚನೆಯನ್ನೇ ಪ್ರಶ್ನಿಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷ ಮತಯಂತ್ರಗಳ ಮೇಲೆ ನಂಬಿಕೆಯಿಲ್ಲ, ನ್ಯಾಯಾಲಯದ ಮೇಲೆ ಗೌರವವಿಲ್ಲ. ಅಧಿಕಾರ ದುರುಪಯೋಗದ ಬಗ್ಗೆ ಮಾತನಾಡುವ ಇವರು, ದಶಕಗಳಿಂದ ಚುನಾವಣಾ ವ್ಯವಸ್ಥೆಯಲ್ಲಿ ತಮಗಾದ ಫಲಿತಾಂಶ ಬಂದಾಗಲೆಲ್ಲಾ ಸಾಂವಿಧಾನಿಕ ಸಂಸ್ಥೆಗಳ ಮೇಲೆ ಗೂಬೆ ಕೂರಿಸುವುದು ಇವರ ಹಳೆಯ ಚಾಳಿ ಎಂದು ಟೀಕಿಸಿದ್ದಾರೆ.

ಕಾನೂನು ಸಮರ ಎಂಬ ಬೆದರಿಕೆ

ಸೋತ ಮೇಲೆ ಕಾನೂನು ಸಮರ ಎನ್ನುವುದು ಸೋಲನ್ನು ಮರೆಮಾಚುವ ತಂತ್ರವಷ್ಟೇ. ಜನಾದೇಶವನ್ನು ಗೌರವಿಸುವುದನ್ನು ಕಲಿಯದವರು ಜನಪ್ರತಿನಿಧಿಗಳಾಗಲು ಅನರ್ಹರು. ಅಂಚೆ ಮತ ಎಣಿಕೆಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಲಾಗಿದೆ. ಅದನ್ನು ಪ್ರಶ್ನಿಸುವುದು ಎಂದರೆ ಚುನಾವಣಾ ಆಯೋಗದ ನಿಷ್ಪಕ್ಷಪಾತತೆಯನ್ನು ಅನುಮಾನಿಸಿದಂತೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಅವರೇ, ನಿಮ್ಮ ಹತಾಶೆ ನಮಗೆ ಅರ್ಥವಾಗುತ್ತದೆ. ಆದರೆ, ಆ ಹತಾಶೆಯಲ್ಲಿ ನ್ಯಾಯಾಲಯದ ಘನತೆಯನ್ನು ಹರಾಜಿಗಿಡಬೇಡಿ ಎಂದು ಛಲವಾದಿ ನಾರಾಯಣಸ್ವಾಮಿ ತಿಳಿಸಿದ್ದಾರೆ.

ವೈಚಾರಿಕ, ಸೈದ್ಧಾಂತಿಕ ವಿರೋಧಿಗಳೂ ಮೆಚ್ಚಿದ ಯಡಿಯೂರಪ್ಪ

» **ಎನ್. ರವಿಕುಮಾರ್, ವಿಧಾನ ಪರಿಷತ್ ಸದಸ್ಯ**



ಜನರಿಂದ ಜನರಿಗಾಗಿ ಹೋರಾಡಿದ ರೈತನಾಯಕ ಬಿ.ಎಸ್.ವೈ.ಹೋರಾಟವೆಂದರೆ ಯಡಿಯೂರಪ್ಪ ಯಡಿಯೂರಪ್ಪ ಎಂದರೆ ಹೋರಾಟ. ಆದಕ್ಕೆ ಕಾರಣ ಅವರೊಳಗಿದ್ದ ರೈತರ ಬಗೆಗಿನ, ಕೃಷಿ ಕೂಲಿಕಾರರ ಬಗೆಗಿನ, ಮಹಿಳೆಯರ ಬಗೆಗಿನ, ದೀನದಲಿತರ, ಹಿಂದುಳಿದ ಜನಸಾಮಾನ್ಯರ ಬಗೆಗಿನ ಪ್ರಾಮಾಣಿಕ, ನಿಷ್ಠುರ ಕಾಳಜಿಯೇ ಕಾರಣ. ವೈಚಾರಿಕ, ಸೈದ್ಧಾಂತಿಕ ವಿರೋಧಿಗಳೂ ಮೆಚ್ಚುವಂತೆ, ಆನುಸರಿಸುವಂತೆ ಬದುಕಿದ, ಆಡಳಿತ ಮಾಡಿದ ಧೀಮಂತ ರೈತನಾಯಕರು, ಜನನಾಯಕರು, ರಾಷ್ಟ್ರನಾಯಕರು ಬಿ.ಎಸ್.ಯಡಿಯೂರಪ್ಪ.

ಬಿ.ಎಸ್.ಯಡಿಯೂರಪ್ಪನವರ ಬಗ್ಗೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಮಾಜಿ ಅಧ್ಯಕ್ಷರಾದ ಡಾ. ಸಿ.ಎಸ್.ದ್ವಾರಕಾನಾಥ್ ಅವರು ಬರೆಯುತ್ತಾ-ನನ್ನಂತವರು ಯಡಿಯೂರಪ್ಪನವರವರಲ್ಲಿರುವ ರಾಜಕೀಯ ಸಿದ್ಧಾಂತಕ್ಕೆ ಸೈದ್ಧಾಂತಿಕ ವಿರೋಧಿಗಳಾಗಿದ್ದರಿಂದ ಸದರಿ ಪಕ್ಷದ ನಾಯಕರಾದ ಯಡಿಯೂರಪ್ಪನವರನ್ನು ಅನಿವಾರ್ಯವಾಗಿ ವಿರೋಧಿಸಬೇಕಾದ ಬಂದಿತ್ತು. ನಾವು ಅವರನ್ನು ಹತ್ತಿರದಿಂದ ನೋಡುವವರೆಗೂ ನಮ್ಮ ಪೂರ್ವಾಗ್ರಹಗಳು ಕರಗಿರಲೇ ಇಲ್ಲ!... ಆಶ್ಚರ್ಯವೆಂದರೆ ನಾನು ಆಯೋಗದ ವರದಿಯನ್ನು ಕೊಟ್ಟು ಹೋದ ನಂತರ ನಾಲ್ಕಾರು ಸರ್ಕಾರಗಳು ಬಂದವು ಹೋದವು ಇದರಲ್ಲಿ 'ಅಹಿಂದ' ಸರ್ಕಾರವೂ ಇತ್ತು. ಆದರೆ ನಮ್ಮ ವರದಿಯಲ್ಲಿನ ಶಿಫಾರಸ್ಸುಗಳಲ್ಲಿ ಕೆಲವನ್ನಾದರೂ ಜಾರಿಗೆ ತಂದಿದ್ದು ಯಡಿಯೂರಪ್ಪನವರ ಸರ್ಕಾರ ಮಾತ್ರ ಎಂದಿದ್ದಾರೆ. ಮುಂದುವರೆದು ಮುಸ್ಲಿಂ ಸಮುದಾಯದ ಡಾ. ಮಮ್ತಾಜ್ ಅಲಿಖಾನ್ ಅವರನ್ನು ಎಂ.ಎಲ್.ಸಿ ಮಾಡಿ ತಮ್ಮ ಸಂಪುಟದಲ್ಲಿ ಸಚಿವರನ್ನಾಗಿ ಮಾಡಿದರು. ಎಲ್ಲೋ ಇದ್ದ ಗಾಣಿಗ ಸಮುದಾಯದ ಪುಟ್ಟಸ್ವಾಮಿಯವರನ್ನು ಎಂ.ಎಲ್.ಸಿ. ಮಾಡಿ ತಮ್ಮ ಸಂಪುಟದಲ್ಲಿ ಮಂತ್ರಿ ಮಾಡಿದರು. ದೇವಾಂಗ ಸಮುದಾಯದ ಎಂ.ಡಿ.ಲಕ್ಷ್ಮೀನಾರಾಯಣ್ ಅವರನ್ನು ಹೆಸರೇ ತಿಳಿಯದ ಕಟುಕ ಜನಾಂಗದ ಸಿದ್ದರಾಮಪ್ಪನನ್ನು, ಬಲಿಜ ಸಮುದಾಯದ ತಾರಾ ಅವರನ್ನು, ಮಡಿವಾಳ ಸಮುದಾಯದ ಶಂಕರಪ್ಪನವರನ್ನು ಎಂ.ಎಲ್.ಸಿ. ಮಾಡಿದರು. ಶಂಕರಪ್ಪನವರನ್ನು ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರನ್ನಾಗಿಯೂ ಮಾಡಿದರು. ಮಾದಿಗ ಸಮುದಾಯಕ್ಕೆ ಸೇರಿದ ಗೋನಾಳ ಭೀಮಪ್ಪನವರನ್ನು ಕರ್ನಾಟಕ ಲೋಕಸೇವಾ ಆಯೋಗದ (ಕೆ.ಪಿ.ಎಸ್.ಸಿ) ಅಧ್ಯಕ್ಷರನ್ನಾಗಿ ಮಾಡಿದರು.

ವಿಶ್ವಕರ್ಮ ಸಮುದಾಯದ ಕೆ.ಪಿ.ನಂಜುಂಡಿಯವರನ್ನು ಎಂ.ಎಲ್.ಸಿ. ಮಾಡಿದರು, ಇದೇ ರೀತಿ ಅನೇಕ ತಳ ಸಮುದಾಯಗಳಿಗೆ ಪ್ರಾತಿನಿಧ್ಯ ನೀಡಿದರು. ಈ ಬಗ್ಗೆ ವಿವರಗಳನ್ನು ಕೆದಕುತ್ತಾ ಹೋದರೆ ನಿರ್ಲಕ್ಷಿತ ಸಮುದಾಯಗಳಿಗೆ ಅವರು ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆಯೇ ಬರೆಯಬಹುದು ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಈ ನಿರ್ಲಕ್ಷಿತರ ಬಗೆಗಿನ ಕಾಳಜಿಯೇ ಬಿ.ಎಸ್.ವೈ ಅವರ ಹೆಗ್ಗುರುತು. ಕಡುಬಡ ರೈತ ಕೂಲಿ ಕಾರ್ಮಿಕರ ಮನೆಯಲ್ಲಿ ಹುಟ್ಟಿ ಜನರಿಂದ, ಜನರಿಗಾಗಿ ಹೋರಾಡಿದ ಜನನಾಯಕ, ರೈತನಾಯಕ ಬಿ.ಎಸ್.ಯಡಿಯೂರಪ್ಪ ಅವರ ಪ್ರಾಥಮಿಕ ಶಾಲೆಯ ಸಹಪಾಠಿ ಎಲ್.ಶಂಕರರಾವ್ ಅವರು 1954-55ರ ಘಟನೆಯನ್ನು ಸ್ಮರಿಸುತ್ತಾ ನಾನು 5 ಅಥವಾ 6ನೇ ತರಗತಿಯಲ್ಲಿ ಮಂಡ್ಯದ ಸರ್ಕಾರಿ ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದೆ, ಆಗ ಯಡಿಯೂರಪ್ಪ ಶಾಲೆಗೆ ಬಂದು ಸೇರಿದರು. ನನಗೆ ಚೆನ್ನಾಗಿ ನೆನಪಿದೆ, ನಮಗೆ ಶ್ರೀ ಬಸವರಾಜಪ್ಪ ಎಂಬ ಒಬ್ಬ ಉಪಾಧ್ಯಾಯರಿದ್ದರು. ಅವರು ನಮ್ಮ ತರಗತಿಗೆ ಬಂದು ಎಲ್ಲ ವಿದ್ಯಾರ್ಥಿಗಳ ಜೊತೆ ಪರಿಚಯಿಸಿಕೊಂಡು, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಅವರ ತಂದೆ ತಾಯಿ ಅಥವಾ ಪೋಷಕರು ಸರ್ಕಾರಿ ನೌಕರಿಯಲ್ಲಿದ್ದರೆ ಕೈ ಎತ್ತುವಂತೆ ಸೂಚಿಸಿದರು. ಆಗ ಕೆಲವರು ಕೈ ಎತ್ತಿದರು. ಅವರನ್ನೆಲ್ಲ ಮುಂದಿನ ಸಾಲಿಗೆ ಬಂದು ಕೂರುವಂತೆ ಉಪಾಧ್ಯಾಯರು ಹೇಳಿ, ಮುಂದೆ ಇದ್ದ ವಿದ್ಯಾರ್ಥಿಗಳನ್ನು ಹಿಂದಿನ ಸಾಲಿಗೆ ಕಳುಹಿಸಿದರು. ಆಗ ಯಡಿಯೂರಪ್ಪನವರು ನನ್ನ ಪಕ್ಕ ಬಂದು ಕುಳಿತರು ಎಂದಿದ್ದಾರೆ. ಶಾಲೆಯಲ್ಲಿ ಮುಂದಿನಿಂದ ಹಿಂದಕ್ಕೆ ಕಳುಹಿಸಿದರು ಆದರೆ ಯಡಿಯೂರಪ್ಪನವರು ಹಿಂದುಳಿದ ವರ್ಗ, ಕೂಲಿಕಾರರ, ದೀನದಲಿತರ, ಮಹಿಳೆಯರ ಪರವಾಗಿ ಹೋರಾಡುತ್ತಾ ಸರ್ಕಾರಿ ನೌಕರ ಆಗುವ ಬದಲು ಸರ್ಕಾರ ನಡೆಸುವ ಮುಖ್ಯಮಂತ್ರಿಯೇ ಆದರು. ಎದೆಯಲ್ಲಿ



ಧೈರ್ಯವಾದ ಕಿಚ್ಚು, ಶ್ರಮ, ನಿರಂತರ, ಹೋರಾಟವಿದ್ದಲ್ಲಿ ಯಾರೂ ಯಾರನ್ನು ಶಾಶ್ವತವಾಗಿ ಹಿಂದಿನ ಬೆಂಚಿಗೆ ದೂಡಲು ಸಾಧ್ಯವಿಲ್ಲ ಎಂಬುದಕ್ಕೆ ಬಿ.ಎಸ್.ವೈ ಅವರ ಜೀವನವೇ ಸಾಕ್ಷಿ. ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡು ತಾಯಿಯ ತಂದೆಯವರಾದ ಅಜ್ಜ ಸಂಗಪ್ಪನವರ ಆರೈಕೆಯಲ್ಲಿ ಬೆಳೆದ ಯಡಿಯೂರಪ್ಪನವರಿಗೆ ರಾಷ್ಟ್ರೀಯ ಸ್ವಯಂ ಸೇವಕ ಸಂಘವು ಭಾರತಮಾತೆಯನ್ನು ಚಿರಂತನವಾದ ತಾಯಿಯನ್ನಾಗಿ ನೀಡಿದ್ದು ಅವರ ಬದುಕಿನ ದಿಕ್ಕನ್ನೇ ಬದಲಾಯಿಸಿ ಬಿಟ್ಟಿದೆ.

ಬಿ.ಎಸ್.ಯಡಿಯೂರಪ್ಪನವರನ್ನು ಕುರಿತು ಪ್ರೊ. ಪಿ.ವಿ.ಕೃಷ್ಣಭಟ್ಟರು, ಯಡಿಯೂರಪ್ಪನವರದ್ದು ಕ್ರಿಯಾಶೀಲ ಸ್ವಭಾವ. ಸುತ್ತಮುತ್ತಲಿನ ಜನಸಾಮಾಡಿನ್ನರ ಸಮಸ್ಯೆಗಳಿಗೆ ಸ್ಪಂದಿಸದೇ ಇರಲು ಅವರಿಗೆ ಸಾಧ್ಯವೇ ಆಗುತ್ತಿರಲಿಲ್ಲ.... ದೀನ-ದುರ್ಬಲರ ವಿಷಯದಲ್ಲಿ ಅವರಿಗಿದ್ದ ತೀವ್ರ ಸಂವೇದನೆ ಪ್ರಕಟಗೊಂಡಿದ್ದು ಇಂತಹ ಸನ್ನಿವೇಶದಲ್ಲಿ..... ಅವರು ಮೊದಲಿಗೆ ಕೈಗೆತ್ತಿಕೊಂಡ ಹೋರಾಟಗಳು ಕೂಲಿ ಕಾರ್ಮಿಕರು ಮತ್ತು ಜೀತದಾಳುಗಳಿಗೆ ಸಂಬಂಧಿಸಿದ್ದು. ಅಸಹಾಯಕರಾಗಿದ್ದ ಧ್ವನಿ ಇಲ್ಲದ ಈ ಜನರಿಗೆ ಅವರು ಧ್ವನಿಯಾದರು. ಅವರನ್ನು ಸಂಘಟಿಸಿ ಅವರಲ್ಲಿ ಹೋರಾಟದ ಕಿಚ್ಚನ್ನು ತುಂಬಿದರು ಎಂದಿದ್ದಾರೆ. ಈ ಸಾಮಾಜಿಕ ನ್ಯಾಯದ, ರಾಷ್ಟ್ರೀಯ ಏಕತೆಯ ಅಂತ್ಯೋದಯದಿಂದ ಸರ್ವೋದಯವೆಂಬ ಜನಸಂಘದ ಧ್ವನಿ ಬಿ.ಎಸ್.ಯಡಿಯೂರಪ್ಪನವರ ಧ್ವನಿಯಾಗಿ ಯಡಿಯೂರಪ್ಪ ಗುಡುಗಿದರೆ ವಿಧಾನಸೌಧ ನಡುಗುವುದು ಎಂಬ ಜನಮಾತಾಯಿತು. ಯಡಿಯೂರಪ್ಪ ಜನನಾಯಕರಾದರು.

1983ರಲ್ಲಿ ಶಿಕಾರಿಪುರ ವಿಧಾನಸಭೆಯಲ್ಲಿ ಗೆದ್ದು ಶಾಸಕರಾದರು. ಜೀತವಿಮುಕ್ತಿ ಹೋರಾಟ ಶಿಕಾರಿಪುರದಿಂದ ಶಿವಮೊಗ್ಗಕ್ಕೆ ನಡೆಸಿದ ಪಾದಯಾತ್ರೆ ಅದಕ್ಕೆ ದೊರೆತ ಹಾರ್ದಿಕ ಬೆಂಬಲ, ಯಡಿಯೂರಪ್ಪನವರನ್ನು ಹುಲಿ ಹೋರಾಟಗಾರ ಎಂಬ ಪಟ್ಟಕ್ಕೆ ಏರಿಸಿತು. ಅವರ ಹೋರಾಟವನ್ನು ಕುರಿತು ಅವರ ಆಪ್ತರಾದ ರಾಮಚಂದ್ರ ಗೌಡರು "Yediyurappa started fighting for the justice of the poor and oppressed, farmers, and weaker sections of society. Being the son of poor agricultural laborers, this leader of the masses had experienced what poverty is, what hunger is, what unemployment is, what exploitation is and what humiliation is" ಎಂದಿದ್ದಾರೆ.

1989 ರಲ್ಲಿ ಏಕಾಂಗಿಯಾಗಿ ವಿಧಾನಸಭೆಯಲ್ಲಿ ಯಡಿಯೂರಪ್ಪ ಈಗಿನ ಕರೆಗೆ ಅರಣ್ಯ ಸಚಿವ ರಾಚಯ್ಯನವರು ಕಣ್ಣು ತೆರೆಯುತ್ತಾರೆ. ತಾವು ಮಂಡಿಸಲು ಮುಂದಾಗಿದ್ದ ರೈತ ವಿರೋಧಿ ಕಾಯ್ದೆಯನ್ನು ಹಿಂಪಡೆಯುತ್ತಾರೆ. ಇದು ಬಿ.ಎಸ್.ವೈ ಅವರನ್ನು ರೈತ ನಾಯಕರನ್ನಾಗಿ ಮಾಡುತ್ತದೆ. ರೈತ ಬಾಂಧವ್ಯ, ಸಮಾಜಕ್ಕಾಗಿ ಸಾಧಿಸಲಾಗದ್ದನ್ನು ಬಿ.ಎಸ್.ವೈ ಸಾಧಿಸಿದರು.

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸಂಪಾದಕರಾದ ಅರುಣ್ ಶೌರಿ ಅವರು ಯಡಿಯೂರಪ್ಪನವರ ಬಗ್ಗೆ ಬರೆಯುತ್ತಾ, ಆಗಿನ ಭಾರತೀಯ ಜನ ಸಂಘವು ಒಂದು ನಗೆಪಾಟಲಿನ ಗುಂಪು. ಸಮಾಜವಾದಿಗಳು ಅದನ್ನು 'ಭೋ ಜನ ಸಂಘ' ಎಂದೇ ಗೇಲಿ ಮಾಡುತ್ತಿದ್ದರು ಎನ್ನುತ್ತಾ ಶಿಕಾರಿಪುರದಲ್ಲಿ ಜೀತದ ವಿರುದ್ಧ ಚಳವಳಿ ಆರಂಭವಾದದ್ದು, ಆತ ಜೈಲಿನಿಂದ ಪುನರ್ವಸತಿಗೆ ಒತ್ತಾಯಿಸಿ ಶಿಕಾರಿಪುರದಿಂದ ಶಿವಮೊಗ್ಗದವರೆಗೆ ಪಾದಯಾತ್ರೆ ಮಾಡಿದ್ದು. ಈ ಹಿನ್ನೆಲೆಯಲ್ಲಿ ಬಗರ್ ಹುಕುಂ ಯೋಜನೆಯ ಅಡಿಯಲ್ಲಿ ಭ್ರಷ್ಟಾಚಾರ ವಿರೋಧಿ ಹೋರಾಟ ನಡೆಸಿದ್ದು, ಆಗಿನ ಮಂತ್ರಿಯೊಬ್ಬರು ಹಾಯಾಗಿ ಎಸಿ ರೂಮಿನಲ್ಲಿ ಕುಳಿತು ಕೋಪತಪ್ತ ಜನರಿಂದ ತಪ್ಪಿಸಿಕೊಳ್ಳುವಾಗ? ಇಂಥವರಲ್ಲಿ ಗೋಕರ್ಣ ಕ್ಷಣಕ್ಕೊಮ್ಮೆ ಅವರ ಬಾಯಲ್ಲಿ ನಡಗಾಡ ತೊಡಗಿದವು..... ಇದಕ್ಕೆಲ್ಲ ಮುಖ್ಯ ಕಾರಣವಾದದ್ದು ಯಡಿಯೂರಪ್ಪನವರ ಆವೇಶಭರಿತ ನಡವಳಿಕೆ, ಶಿಸ್ತು, ರೈತರ ಬಗ್ಗೆ ಅವರಿಗಿದ್ದ ಕಾಳಜಿ, ರೈತರಿಗಾಗಿ ಏನೂ ಮಾಡಲು ಸಿದ್ಧರಾಗಿರುತ್ತಿದ್ದ ಅವರು ಯಾವ ಕ್ಷಣದಲ್ಲಿ ಚಳವಳಿ ಆರಂಭಿಸುತ್ತಾರೆ ಎಂದೇ ಯಾರಿಗೂ ತಿಳಿಯುತ್ತಿರಲಿಲ್ಲ. ಅದು ನಿಲ್ಲುವುದು ಮಾತ್ರ ಬೇಡಿಕೆ ಈಡೇರಿದ ಮೇಲೆಯೇ ಎಂದಿದ್ದಾರೆ.

ಜೀತದ ವಿರುದ್ಧದ ಹೋರಾಟ, ಬಗರ್ ಹುಕುಂ ಹೋರಾಟ, ರೈತರ ಸಾಲಮನ್ನಾ ಹೋರಾಟ, ಶಿಕಾರಿಪುರದಿಂದ ಶಿವಮೊಗ್ಗ, ಶಿವಮೊಗ್ಗದಿಂದ ಬೆಂಗಳೂರು, ಬೆಂಗಳೂರಿನಿಂದ ರಾಜ್ಯದ ಮೂಲೆ ಮೂಲೆಗೆ ರೈತರಿಗಾಗಿ, ಅವರಿಗಾಗಿ ಪಾದಯಾತ್ರೆ, ಸೋಮಾರಿ ಗಾಂಧಿ, ಹಗಲಿರುಳು ಕೆಲಸ ಒಂದೇ ಎರಡೇ 1975ರ ಕಾಲದಲ್ಲಿ ತುರ್ತುಪರಿಸ್ಥಿತಿಯ ವಿರುದ್ಧದ ಹೋರಾಟ ಅಟ್ಟಹಾಸದಿಂದ ಆರಂಭಿಸಿ 1980ರ ದಶಕದಲ್ಲಿ ಅದಕ್ಕೆ ಒಂದು ವೇಗ ನೀಡಿ 1990ರ ನಂತರ ಕರ್ನಾಟಕವನ್ನು ಬಿಜೆಪಿಯ ರಾಜ್ಯವನ್ನಾಗಿಸಿದ ಸಂಪೂರ್ಣ ಶ್ರೇಯಸ್ಸು ಬಿ.ಎಸ್ .ಯಡಿಯೂರಪ್ಪನವರ ರೈತ ನಾಯಕತ್ವಕ್ಕೆ ಮತ್ತು ಜನ ನಾಯಕತ್ವಕ್ಕೆ ಸಲ್ಲುತ್ತದೆ. ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾದ ಬಳಿಕ ತಮ್ಮ ಹೋರಾಟದ ಜೀವಮಾನದ ಕನಸುಗಳನ್ನು ನನಸು ಮಾಡಲು ಪ್ರಯತ್ನಿಸಿದರು. ಕರ್ನಾಟಕದಲ್ಲಿ ಮೊದಲ ರೈತ ಬಜೆಟ್ ಮಂಡಿಸಿದರು. ರೈತರ ಮನೆಗಳಿಗೆ, ಹೊಲಗಳಿಗೆ ವಿದ್ಯುತ್ ನೀಡಲು ರಾಜ್ಯದ ವಿದ್ಯುತ್ ಉತ್ಪಾದನೆ ಹೆಚ್ಚಿಸಿದರು. ನಿರಂತರ ಜ್ಯೋತಿಯನ್ನು ನೀಡಿ ಗ್ರಾಮೀಣರ ಜೀವನವನ್ನು ಬೆಳಗಿಸಿದರು. ರೈತರ ಸಾಲ ಮನ್ನಾ ಮಾಡುವ ಮೂಲಕ ಆರ್ಥಿಕ ಸ್ವಾತಂತ್ರ್ಯ ನೀಡಿದರು.

ಭಾರತೀಯ ಸಂಸ್ಕೃತಿಯ ಗೋಮಾತೆ, ರೈತರ ಬದುಕಿನ ಜೀವನಾಡಿ ಹಸು. ಹೈನುಗಾರಿಕೆ ಅವರ ಉಪಕಸುಬು. ಆದ್ದರಿಂದ ಹಾಲು ಉತ್ಪಾದಕರಿಗೆ ಲೀಟರಿಗೆ ಮೂರು ರೂಪಾಯಿಗಳನ್ನು ಹೆಚ್ಚಿಸಿದರು. ರೈತರ ಬೆಳೆಗೆ ಬೆಂಬಲಬೆಲೆ ನೀಡಿದರು. ರೈತನ ಖಾತೆಗೆ ಕೇಂದ್ರದ 6000 ರೂಪಾಯಿ, ರಾಜ್ಯ ಸರ್ಕಾರದ 4000 ರೂಪಾಯಿ ಸೇರಿಸಿ ಒಟ್ಟು 10000 ರೂ. ಸಿಗುವಂತೆ ಮಾಡಿದರು. ರೈತರ ಪಂಪ್ ಸೆಟ್‌ಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಜಾರಿಗೆ ತಂದರು. ನೆರೆಹಾವಳಿ ಆದಾಗ 'ಏಕಸಚಿವ ಸಂಪುಟ'ದ ಮುಖ್ಯಮಂತ್ರಿ ಈ ಯಡಿಯೂರಪ್ಪನವರು ಪ್ರಕೃತಿ ಎಸೆದ ಸವಾಲಿಗೆ ಬೆನ್ನು ತೋರಿಸಲಿಲ್ಲ. ಬದಲಾಗಿ ಎದೆಗಾರಿಕೆ ತೋರಿಸಿದರು. ಈ ಇಳಿ ವಯಸ್ಸಿನಲ್ಲೂ ನೆರೆ ಪೀಡಿತ ಪ್ರದೇಶಗಳಲ್ಲಿ ಕಾಲುಗಳಿಗೆ ಚಕ್ರಕಟ್ಟಿಕೊಂಡು ಯಂತ್ರದಂತೆ ತಿರುಗಾಡಿದರು ಎಂದು ಸ್ವಯಂಸೇವಕ ಸಂಘದ ಹಿರಿಯ ಪ್ರಚಾರಕರಾದ ಸು. ರಾಮಣ್ಣನವರು, ಹೋರಾಟವೇ ಅವರ ರಕ್ತಗುಣ, ನಿಂತ ನೀರಲ್ಲ, ಅಲೆ ಹಾಗೂ ಪ್ರತಿಭಟಿಸುವ ಗುಣ ಅವರಲ್ಲಿ ಪ್ರಧಾನವಾದದ್ದು. ಇದು ತುಂಬಾ ಅಪರೂಪದ ಗುಣ ಎಂದಿದ್ದಾರೆ.

ಹಿರಿಯ ನಾಯಕರಾದ ಡಿ.ಎಚ್.ಶಂಕರಮೂರ್ತಿಯವರು ಕೇಂದ್ರ ಸರ್ಕಾರ ಕೂಡ ರೈತರಿಗೆ, ನೇಕಾರರಿಗೆ ಸಾಲ ಮನ್ನಾ ಮಾಡುವುದನ್ನೇ ಕಾಪಿ ಮಾಡಬೇಕಾಯಿತು. ಸತತ ನಾಲ್ಕು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅವರು ಸಾಧಿಸಿದ ಸಾಧನೆ ನಿಜಕ್ಕೂ ಅಚ್ಚರಿ ಉಂಟುಮಾಡಿದೆ ಎಂದಿದ್ದಾರೆ. ಶ್ರೀಮತಿ ಪ್ರಮೀಳಾ ನೇಸರ್ಗಿ, ರೈತರಿಗೆ ಸಾಲಮನ್ನಾ, ಕಡಿಮೆ ದರದಲ್ಲಿ ಬಡ್ಡಿ, ಮಹಿಳೆಯರ ಬಜೆಟ್ ಕೊಟ್ಟ ಭಾರತದ ಮೊಟ್ಟಮೊದಲನೇ ಉಪಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಾಗಿದ್ದಾರೆ ಎಂದಿದ್ದಾರೆ.

ರೈತನಾಯಕ, ಜನನಾಯಕರನ್ನಾಗಿಸಿದ ಹೊಸ ಹೊಸ ಯೋಜನೆಗಳು: ಭಾಗ್ಯಲಕ್ಷ್ಮಿ ಬಾಂಡ್, ಶಾಲಾ ಮಕ್ಕಳಿಗೆ ಸೈಕಲ್ ನೀಡಿದ್ದಷ್ಟೇ ಅಲ್ಲ ಸುವರ್ಣ ಕಾಯಕ ಕೌಶಲ್ಯ ಅಭಿವೃದ್ಧಿ, ಸಂಧ್ಯಾಸುರಕ್ಷಾ, ಕೃಷಿ ಯಂತ್ರಧಾರೆ, ಸಾವಯವ ಕೃಷಿ ಮಿಷನ್, ಶೂನ್ಯ ಬಡ್ಡಿ ದರದಲ್ಲಿ ಸಹಕಾರಿ ಸಾಲ, ರೈತರಿಗೆ ಇಸ್ರೇಲ್ ಮತ್ತು ಚೀನಾ ಪ್ರವಾಸ, ಸೆಮಿಕಂಡಕ್ಟರ್ ನೀತಿ, ಜಾಗತಿಕ ಬಂಡವಾಳ ಹೂಡಿಕೆ ಸಮಾವೇಶ, ಭೂ ಚೇತನ, ಕೃಷಿ ಪ್ರೋತ್ಸಾಹಕ್ಕಾಗಿ 8000 ಕೋಟಿ ರೂ. ಮೀಸಲಿಟ್ಟಿದ್ದು ಹೀಗೆ ಸಾಲು ಸಾಲು ಸಾಧನೆಗಳು ಬಿ.ಎಸ್.ಯಡಿಯೂರಪ್ಪನವರನ್ನು ರೈತನಾಯಕ, ಜನನಾಯಕರನ್ನಾಗಿಸಿವೆ. ಅಂದು-ಇಂದು-ಮುಂದೆಂದೂ ಅವರ ಜನಸಾಮಾನ್ಯರ ಹೃದಯ ಸಿಂಹಾಸನದಲ್ಲಿ ಸದಾ ವಿರಾಜಮಾನರಾಗಿರುತ್ತಾರೆ.

ಬಿ. ಎಸ್.ಯಡಿಯೂರಪ್ಪನವರು ಬಾಲ್ಯದಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡರು, ಆದರೆ ದೇಶ ಮತ್ತು ತನ್ನ ಸಮಾಜವನ್ನೇ ತಂದೆ ತಾಯಿಯೆಂದು ತಿಳಿದರು. ಶಿಕಾರಿಪುರದಲ್ಲಿ ಮಾರಣಾಂತಿಕ ಹಲ್ಲೆಗೆ ಒಳಗಾಗಿ ಚಲನಶೀಲಗೊಂಡಾಗ ನಮ್ಮ ಪತ್ನಿಯಾದ ಶ್ರೀಮತಿ ಮೈತ್ರಾದೇವಿಯವರಿಗೆ ಹುಚ್ಚರಾಯನ ಸನ್ನಿಧಿಯಲ್ಲಿ ಹೇಳಿದರು ನನ್ನ ಮುಂದಿನ ಜೀವನ ಸಮಾಜಕ್ಕಾಗಿ, ಮಕ್ಕಳನ್ನು ನೀನು ನೋಡಿಕೋ ಎಂದು. ಅಂತೆಯೇ ಬದುಕಿದರು. ಅವರ ಹಗಲಿರುಳಿನ ಮಾರ್ಗವೇ ದಲಿತೋದ್ಧಾರ ಹಾಗೂ ದೇಶೋದ್ಧಾರ. ಇವರ ಜನಪರ ಅಭಿವೃದ್ಧಿಯ ಕಾರ್ಯಕ್ರಮಗಳನ್ನು 'ಅಂತ್ಯೋದಯ' ಎಂದಿದ್ದಾರೆ.

ರಾಷ್ಟ್ರನಾಯಕರೆಂಬುದಕ್ಕೆ ಬಿಎಸ್‌ವೈ ಜೀವನ ಸಾಧನೆಯೇ ಸಾಕ್ಷಿ: ಯಡಿಯೂರಪ್ಪನವರು ವ್ಯಕ್ತಿಯಲ್ಲ ಒಂದು ಶಕ್ತಿ ಎನ್ನುವ ಡಿ.ಎಚ್. ವೀರಣ್ಣನವರು ರಾಜ್ಯದ ಇತಿಹಾಸದಲ್ಲಿ ಅಂಬೇಡ್ಕರ್ ಭಾವಚಿತ್ರವನ್ನು ಸರ್ಕಾರಿ ಕಚೇರಿಗಳಲ್ಲಿ, ಇಲಾಖೆಗಳಲ್ಲಿ, ಶಾಲೆಗಳಲ್ಲಿ ಹಾಕಲು ಕಾರಣರಾದವರು. ಆಶ್ರಯ ಮನೆಗಳಿಗೆ ಹಿಂದಿನ ಸರ್ಕಾರ ನೀಡುತ್ತಿದ್ದ ರೂ. 25000 ಗಳನ್ನು ರೂ. 1.25 ಲಕ್ಷಕ್ಕೆ ಏರಿಸಿದರು. ಅದು ಈಗ ಗ್ರಾಮಾಂತರದಲ್ಲಿ ರೂ. 3 ಲಕ್ಷ, ನಗರಗಳಲ್ಲಿ ರೂ. 5 ಲಕ್ಷಕ್ಕೆ ಹೆಚ್ಚಿದೆ. ಹರಿಜನರ ವಿದ್ಯಾರ್ಥಿನಿಲಯಗಳ ನಿರ್ಮಾಣಕ್ಕಾಗಿ ತಮ್ಮ ಮೊದಲ ಬಜೆಟ್‌ನಲ್ಲಿಯೇ ರೂ.350 ಕೋಟಿ ಹಣ ಮೀಸಲಿಟ್ಟರು. ಬಡ ವರ್ಗದವರು ಪಾವತಿಸದೆ ಬಾಕಿ ಇದ್ದ ಕುಟೀರ ಜ್ಯೋತಿ, ಭಾಗ್ಯಜ್ಯೋತಿ ಯೋಜನೆಯಡಿ ಬಾಕಿ ಇದ್ದ ವಿದ್ಯುತ್ ಹಣವನ್ನು ಸಂಪೂರ್ಣವಾಗಿ ಮನ್ನಾ ಮಾಡಿದರು. ಹರಿಜನ ಕಾಲೋನಿಗಳಿಗೆ ಕಾಂಕ್ರೀಟ್ ರಸ್ತೆ, ಚರಂಡಿ ವ್ಯವಸ್ಥೆ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸ್ಥಾಪಿಸಿದರು. ಶಿಕ್ಷಣಕ್ಕೆ ಒತ್ತು ಕೊಟ್ಟು ಹರಿಜನ ವಿದ್ಯಾರ್ಥಿಗಳಿಗೆ ಹಿಂದಿನ ಸರ್ಕಾರ ನೀಡುತ್ತಿದ್ದ ವೇತನವನ್ನು ರೂ.450 (ತಿಂಗಳಿಗೆ) ಇದ್ದದ್ದನ್ನು ಈಗ ರೂ. 750 ಮಾಡಲಾಗಿತ್ತು ಮತ್ತು ತಮ್ಮ ಅವಧಿಯ ಅಂತ್ಯದಲ್ಲಿ ಈ ಮೊತ್ತವನ್ನು ರೂ.1150ಕ್ಕೆ ಏರಿಸಿದರು. ಹರಿಜನ ಗಿರಿಜನರ ಅಭಿವೃದ್ಧಿಗಾಗಿ ಪ್ರತ್ಯೇಕ ನಿಗಮ ಸ್ಥಾಪನೆ, ಪ್ರತ್ಯೇಕ ಹಿಂದುಳಿದ ವರ್ಗ ಇಲಾಖೆ ಸ್ಥಾಪನೆ ಮತ್ತು ಹರಿಹರದಲ್ಲಿ ಹಾವನೂರು ಆಯೋಗ ಸ್ಥಾಪನೆ ಅಲ್ಲದೆ ಅನೇಕ ಭವನಗಳ ನಿರ್ಮಾಣ ಹೀಗೆ ಯಡಿಯೂರಪ್ಪನವರು ಮಾಡಿದ ಅನೇಕ ಸಾಧನೆ, ಕೊಡುಗೆಗಳನ್ನು ಸ್ಮರಿಸುತ್ತಾರೆ.

ಬಿ.ಎಸ್.ಯಡಿಯೂರಪ್ಪ ರೈತ ನಾಯಕರು, ಜನ ನಾಯಕರು, ರಾಷ್ಟ್ರ ನಾಯಕರು ಎಂಬುದು ಅವರ ಜೀವನ ಸಾಧನೆಯೇ ಸಾಕ್ಷಿಯಾಗಿದೆ.

**ವಿರೋಧ ಪಕ್ಷದ ಮುಖ್ಯ ಸಚೇತಕರು,
ಕರ್ನಾಟಕ ಸರ್ಕಾರ**

ಸಂಪಾದಕೀಯ

ಮಮತಾಗೇಕೆ ಅಷ್ಟು ಭಯ?

ಚುನಾವಣೆಗಳು ಮುಗಿದರೂ ಪಶ್ಚಿಮ ಬಂಗಾಳದಲ್ಲಿನ್ನೂ ನಾಟಕ ಮುಗಿದಿಲ್ಲ. ಮೊದಲೆಲ್ಲಾ ಕೇಂದ್ರ ಸರ್ಕಾರ ಮತ್ತು ಬಿಜೆಪಿಯನ್ನು ಟೀಕಿಸುವ ಸಂದರ್ಭದಲ್ಲಿ ಮಾತ್ರ ಮಾನಸಿಕ ಸ್ಥಿಮಿತತೆಯನ್ನು ಕಳೆದುಕೊಂಡಂತಾಡುತ್ತಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಯವರು ಈಗ ದಿನನಿತ್ಯ ತಮ್ಮ ಮಾನಸಿಕ ಹಿಡಿತವನ್ನು ಕಳೆದುಕೊಂಡಂತಾಡುತ್ತಿದ್ದಾರೆ. ಇದೀಗ ಚುನಾವಣೆಗಳು ಮುಗಿದು ಮತಗಳು ಭದ್ರವಾಗಿರುವ ಭದ್ರತಾ ಕೊಠಡಿಗಳತ್ತ ಮಮತಾ ಚಿತ್ತ ತಿರುಗಿದೆ. ಮಮತಾ ಬ್ಯಾನರ್ಜಿಯವರಿಗೆ ಕಾಡುತ್ತಿರುವ ಭಯವಾದರೂ ಯಾವುದು? ಬಿಜೆಪಿ ಮತಯಂತ್ರಗಳನ್ನು ಅಪಹರಿಸುತ್ತದೆ ಎಂಬ ಭಯವೋ ಅಥವಾ ಭದ್ರವಾಗಿರುವ ಮತಯಂತ್ರಗಳಲ್ಲಿ ತನ್ನ ಸೋಲು ಅಡಗಿದೆ ಎಂಬ ಭಯವೋ? ಅದರ ಜೊತೆಗೆ ಮತದಾನ ಪ್ರಕ್ರಿಯೆಗಳ ಬಗೆಗೆ ಕೂಡ ಮಮತಾ ಬ್ಯಾನರ್ಜಿಯವರಿಗೆ ತಕರಾರಿದೆ. ಪಶ್ಚಿಮ ಬಂಗಾಳದಲ್ಲಿ ಎಲ್ಲವೂ ತನ್ನ ಆಣತಿಯಂತೆಯೇ ನಡೆಯಬೇಕೆಂಬ ಸರ್ವಾಧಿಕಾರಿ ಧೋರಣೆಗೆ ಸೊಪ್ಪು ಹಾಕದ ಚುನಾವಣಾ ಆಯೋಗ ಈ ಬಾರಿ ದಿಟ್ಟ ಕ್ರಮಗಳನ್ನು ಅನುಸರಿಸಿತ್ತು. ಕೇಂದ್ರೀಯ ಮೀಸಲು ಪಡೆಗಳನ್ನು ಕರೆಸಿ ಕಟ್ಟುನಿಟ್ಟಿನ ಭದ್ರತೆಗಳನ್ನು ಮಾಡಿತ್ತು.



ಆದರೆ ಮಮತಾ ನಿರಂತರವಾಗಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆಯನ್ನು ಮತದಾರರನ್ನು ಹೊರಗಿಡುವ ಕ್ರಮ ಎಂದು ಟೀಕಿಸಿದರು. ಆದರೆ ಅಕ್ರಮ ಬಾಂಗ್ಲಾದೇಶಿ ಮತದಾರರ ಸುದ್ದಿಯ ಬಗ್ಗೆ ಅವರೆಂದೂ ಪ್ರತಿಕ್ರಿಯೆಯನ್ನು ನೀಡಲಿಲ್ಲ! ಇದೀಗ ಎಕ್ಸಿಟ್‌ಪೋಲ್‌ಗಳು ಬಿಜೆಪಿ ಪರ ವಾಲಿವೆ ಎಂಬ ಸುದ್ದಿ ಪ್ರಕಟವಾದ ಬೆನ್ನಲ್ಲೇ ಅವರ ಮನಸು ಮತ್ತಷ್ಟು ಉದ್ವಿಗ್ನವಾಗಿದೆ.


ಮತ ಎಣಿಕೆ ವೇಳೆ ಇವಿಎಂಗಳನ್ನು ತಿದ್ದುವ ಅಥವಾ ಪ್ರಕ್ರಿಯೆಯನ್ನು ಹಾಳುಮಾಡುವ ಪ್ರಯತ್ನಗಳ ಬಗ್ಗೆ ಅವರು ತೀವ್ರ ಅನುಮಾನ ವ್ಯಕ್ತಪಡಿಸಿದ್ದಾರೆ. ಅದು ಹೇಗೆ ಸಾಧ್ಯ? ಈ ಎಲ್ಲಾ ಆತಂಕಗಳು ಅವರಿಗೆ ಕಾಡುತ್ತಿರುವುದಕ್ಕೆ ಸೋಲಿನ ಭಯ ಕಾರಣವೇ ಹೊರತು ಬೇರೇನಲ್ಲ. ಮಮತಾ ಬ್ಯಾನರ್ಜಿ ಅವರ ಮುಖ್ಯ ತಕರಾರು ಏನೆಂದರೆ, ಚುನಾವಣಾ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರದ ಸಿಬ್ಬಂದಿ ಅಥವಾ ಕೇಂದ್ರ ನಿಯಂತ್ರಣದ ಅಧಿಕಾರಿಗಳನ್ನು ಮಾತ್ರ ಬಳಸುವ ಮೂಲಕ ಆಯೋಗ ಪಕ್ಷಪಾತ ತೋರಿಸುತ್ತಿದೆ ಎಂಬುದು. ಆದರೆ ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಬಂದ ನಂತರ ನಡೆದ ಹಲವಾರು ಚುನಾವಣೆಗಳಲ್ಲಿ ಬಿಜೆಪಿ ಜಯಗಳಿಸಿಲ್ಲ. ಪ.ಬಂಗಾಳದ ಹಿಂದಿನ ಚುನಾವಣೆಯಲ್ಲಿ ಕೂಡ ಮಮತಾ ಪಕ್ಷವೇ ಜಯಗಳಿಸಿತ್ತು. ಚುನಾವಣಾ ಆಯೋಗವು ಮತ ಎಣಿಕೆ ಮೇಲ್ವಿಚಾರಕರಾಗಿ ಕೇಂದ್ರ ಸರ್ಕಾರ ಮತ್ತು ಕೇಂದ್ರ ಸಾರ್ವಜನಿಕ ವಲಯದ ಉದ್ಯಮಗಳ ನೌಕರರನ್ನು ನಿಯೋಜಿಸುವುದಾಗಿ ಹೇಳಿತ್ತು. ಟಿಎಂಸಿ ಇದರ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದು ಭಯ ತಾರಕಕ್ಕೇರಿದೆ ಎಂಬುದಕ್ಕೆ ಒಂದು ಉದಾಹರಣೆ. ಆದರೆ ಚುನಾವಣಾ ಆಯೋಗವು ತನ್ನ ಕರ್ತವ್ಯಗಳನ್ನು ಮಾಡಲು ಸ್ವತಂತ್ರವಿದೆ. ಅಲ್ಲಿ ಎಲ್ಲವೂ ಬಹಿರಂಗವಾಗಿ ನಡೆಯುತ್ತದೆ. ಇನ್ನೇಕೆ ಮಮತಾ ಭಯಪಡಬೇಕು? ನ್ಯಾಯಾಲಯ ಕೂಡ ಅದನ್ನೇ ಸ್ಪಷ್ಟಪಡಿಸಿದೆ. ಫಲಿತಾಂಶ ಎಲ್ಲದಕ್ಕೂ ಉತ್ತರವನ್ನು ಕೊಡಲಿದೆ.

ಹರೆಯದವರಲ್ಲಿ ಆತ್ಮಹತ್ಯೆ

ನಮ್ಮ ದೇಶದಲ್ಲಿ ವರ್ಷಕ್ಕೆ ಸುಮಾರು ಹತ್ತುಸಾವಿರಕ್ಕಿಂತ ಹೆಚ್ಚು 18 ವರ್ಷ ವಯಸ್ಸಿನೊಳಗಿನ ಹರೆಯದವರು ಆತ್ಮಹತ್ಯೆಯಿಂದ ಜೀವಕಳೆದುಕೊಳ್ಳುತ್ತಾರೆ.

ತಾರುಣ್ಯ ತಲ್ಲಣ

• ಡಾ.ಕೆ.ಆರ್. ಶ್ರೀಧರ್
drkrsridhar208@gmail.com



ಆತ್ಮಹತ್ಯೆಯು ಕೇವಲ ಮಾನಸಿಕ ಆರೋಗ್ಯ ಸಮಸ್ಯೆಯಾಗಿ ಉಳಿದಿಲ್ಲ. ಅದು ಸಾರ್ವಜನಿಕ ಆರೋಗ್ಯ ಸಮಸ್ಯೆಯೂ ಹೌದು. ಹರೆಯದವರಲ್ಲಿ ನಾವು ಕಾಣುವ ಆತ್ಮಹತ್ಯಾ ಸಮಸ್ಯೆಯು ಸಂಕೀರ್ಣವಾದದ್ದು. ಅದರಲ್ಲಿಯೂ ಇತ್ತೀಚಿನ ವರ್ಷಗಳಲ್ಲಿ ಹರೆಯದವರಲ್ಲಿ ಗಣನೀಯವಾಗಿ ಹೆಚ್ಚುತ್ತಿರುವ ಆತ್ಮಹತ್ಯಾ ಪ್ರಕರಣಗಳನ್ನು ಸಮಾಜ ಮತ್ತು ಮಾನಸಿಕ ಆರೋಗ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವವರು ತಡೆಗಟ್ಟಲು ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇದೆ.

ವಿಶ್ವ ಆರೋಗ್ಯ ಸಂಸ್ಥೆಯು 2000ನೇ ಇಸವಿಯಲ್ಲಿ ಆತ್ಮಹತ್ಯೆ ಕುರಿತು ವ್ಯಾಪಕವಾಗಿ ಚರ್ಚೆ ನಡೆಸಿತು. ಹೆಚ್ಚುತ್ತಿರುವ ಆತ್ಮಹತ್ಯಾ ಪ್ರಕರಣಗಳನ್ನು ಗಮನಿಸಿ, ಸಮಾಜದಲ್ಲಿ ಇದರ ಅರಿವು ಮೂಡಿಸಲು ಮತ್ತು ಆತ್ಮಹತ್ಯಾ ಪ್ರಕರಣಗಳನ್ನು ತಡೆಗಟ್ಟಲು ಎರಡು ಸಾವಿರದ ಮೂರನೇ ಇಸವಿಯಲ್ಲಿ ಜಾಗತಿಕನಾದ್ಯಂತ "ವಿಶ್ವ ಆತ್ಮಹತ್ಯಾ ತಡೆ ದಿನ"ವನ್ನು ಆಚರಿಸಿ ಆ ಮೂಲಕ ಸಮುದಾಯಗಮನಸೆಳೆಯಬೇಕೆಂದು ಕರೆನೀಡಿತು. ಅದರಪ್ರಯುಕ್ತಪ್ರತಿವರ್ಷ ಸೆಪ್ಟಂಬರ್ ಹತ್ತನೇ ದಿನಾಂಕದಂದು ಬೇರೆ ಬೇರೆ ಘೋಷಣೆಗಳೊಂದಿಗೆ ಜಾಗತಿಕನಾದ್ಯಂತ ಆತ್ಮಹತ್ಯೆ ತಡೆ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಕಳೆದ ವರ್ಷದ ಘೋಷಣೆಯು "ಆತ್ಮಹತ್ಯೆಯನ್ನು ತಡೆಗಟ್ಟುವುದು ಕೇವಲ ಒಬ್ಬರ ಕರ್ತವ್ಯವಲ್ಲ, ಅದು ಕುಟುಂಬದವರದಿರಬಹುದು, ಸಂಬಂಧಿಗಳಾಗಿರಬಹುದು ಅಥವಾ ಪಕ್ಕದ ಮನೆಯವರಾಗಿರಬಹುದು ಎಲ್ಲರದೂ ಆದ್ಯ ಕರ್ತವ್ಯ" ಎಂಬುದಾಗಿ ಘೋಷಿಸಿತು. ಕಳೆದ ಇಪ್ಪತ್ತಮೂರು ವರ್ಷಗಳಿಂದ ಪ್ರತಿವರ್ಷ ಆತ್ಮಹತ್ಯೆ ತಡೆ ದಿನಾಚರಣೆಯನ್ನು ಆಚರಿಸಿ, ಆ ನಿಟ್ಟಿನಲ್ಲಿ ಕ್ರಮ ತೆಗೆದುಕೊಂಡರೂ ವರ್ಷದಿಂದ ವರ್ಷಕ್ಕೆ ಆತ್ಮಹತ್ಯಾ ಪ್ರಕರಣಗಳು, ಅದರಲ್ಲಿಯೂ ಹರೆಯದವರಲ್ಲಿ ಆತ್ಮಹತ್ಯಾ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿವೆ ಎಂಬುದು ವೇದನೆಯ ಸಂಗತಿ.

ಆತ್ಮಹತ್ಯೆಯು ಒಂದು ಸಂಕೀರ್ಣವಾದ ಪ್ರಕ್ರಿಯೆ. ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ವರ್ಷಕ್ಕೆ ಸುಮಾರು ಹತ್ತು ಸಾವಿರಕ್ಕಿಂತ ಹೆಚ್ಚು 18 ವಯಸ್ಸಿನೊಳಗಿನ ಹರೆಯದವರು ಆತ್ಮಹತ್ಯೆಯಿಂದ ಜೀವಕಳೆದುಕೊಳ್ಳುತ್ತಾರೆ. ಸರಾಸರಿ ಒಂದು ಗಂಟೆಗೆ ಒಬ್ಬರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ಸುಮಾರು ಶೇಕಡಾ ಹನ್ನೊಂದು ಮಂದಿ ಹರೆಯದವರು ಆತ್ಮಹತ್ಯಾ ಆಲೋಚನೆ ಮಾಡಿದರೆ, ಶೇಕಡಾ ಮೂರು ಮಂದಿ ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಆತ್ಮಹತ್ಯಾ ಪ್ರಕರಣಗಳು 2022ರಿಂದ 2023 ರವರೆಗೆ ಸುಮಾರು ಶೇಕಡಾ ಅರೂವರೆಯಷ್ಟು ಹೆಚ್ಚಾಗಿದೆ ಎಂಬುದು ವರದಿಗಳ ಅಂಬೋಣ. ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳೇ ಹೆಚ್ಚು ಪಾಲು. ಒಬ್ಬರು ಆತ್ಮಹತ್ಯೆಗೊಳಗಾದರೆ, ನೂರು ಜನರು ದುಃಖಿಸುತ್ತಾರೆ. ಅವರ ಮೇಲೆ ಅವಮಾನಗಳು ಬರಬಹುದು. ಇದು ಸಮಾಜದ ಶಾಂತಿಯ ಮೇಲೆ ಮತ್ತು ಆರ್ಥಿಕತೆಯ ಮೇಲೆ ದುಷ್ಪರಿಣಾಮ ಬೀರುತ್ತದೆ.

ಹರೆಯದವರ ಸಂಖ್ಯೆ ಹೆಚ್ಚಿರುವ ನಮ್ಮ ದೇಶದಲ್ಲಿ ಮಾನಸಿಕ ಸಮಸ್ಯೆಗೆ ಒಳಗಾಗುವವರು ಹೆಚ್ಚು ಮಂದಿ. ಹರೆಯವು ಒಬ್ಬರ ಜೀವಿತಾವಧಿಯಲ್ಲಿ ಮುಖ್ಯವಾದ ಹಂತ. ಈ ಅವಧಿಯಲ್ಲಿ ಹರೆಯದವರ ಮಾನಸಿಕ ಸಮಸ್ಯೆಗಳನ್ನು ಗುರುತಿಸದೇ ಇದ್ದಲ್ಲಿ, ಅವರು ಭವಿಷ್ಯದಲ್ಲಿ ಹಲವಾರು ಮನೋರೋಗಗಳಿಗೆ ತುತ್ತಾಗಬಹುದು. ಸುಮಾರು ಎಂಬತ್ತಕ್ಕೂ ಹೆಚ್ಚು ಆತ್ಮಹತ್ಯಾ ಪ್ರಕರಣಗಳಿಗೆ ಹರೆಯದವರಲ್ಲಿ ಉಂಟಾಗುವ ಖಿನ್ನತೆಯೇ ಕಾರಣ ಎಂಬುದು ಅಂಕಿಅಂಶಗಳಿಂದ ತಿಳಿಯುತ್ತದೆ. ಅಜ್ಞಾನ ಮತ್ತು ಕಳಂಕ ಭಾವನೆಯಿಂದ, ಇದನ್ನು ಗುರುತಿಸದೇ ಅಲಕ್ಷ್ಯ ವಹಿಸಿದರೆ, ಅದು ಆತ್ಯಂತ ಅಪಾಯಕರ ಎಂಬುದನ್ನು ಪೋಷಕರು ಮತ್ತು ಸಮಾಜ ಗಮನಿಸಬೇಕು.

ಹೆಚ್ಚುತ್ತಿರುವ ಆತ್ಮಹತ್ಯೆಗೆ ಕಾರಣಗಳಾದರೂ ಏನು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಯೋಣ. ಅಂಕಿ ಅಂಶಗಳ ಪ್ರಕಾರ ವರ್ಷದಲ್ಲಿ ಒಂದು ಲಕ್ಷಕ್ಕೆ ಎಂಭತ್ತು ಜನ ಹರೆಯದವರು ಆತ್ಮಹತ್ಯೆಯಿಂದ ಆಸುನೀಗುತ್ತಾರೆ. ಸುಮಾರು ಶೇಕಡಾ ಆರರಿಂದ ಇಪ್ಪತ್ತೆರಡನೇ ವಯಸ್ಸಿನ ಹರೆಯದವರು



ಆತ್ಮಹತ್ಯೆ ಕುರಿತು ಯೋಚಿಸಿದರೆ, ಶೇಕಡಾ ಆರರಿಂದ ಇಪ್ಪತ್ತೆರಡನೇ ವಯಸ್ಸಿನ ಹರೆಯದವರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ. ಹರೆಯದವರ ಆತ್ಮಹತ್ಯೆಗೆ ಶೈಕ್ಷಣಿಕ ಕ್ಷೇತ್ರವು ಮುಖ್ಯವಾದ ಕಾರಣ. ಪರೀಕ್ಷೆಯಲ್ಲಿ ಸ್ಪರ್ಧೆ, ವಿಶೇಷವಾಗಿ ಹರೆಯದ ವಿದ್ಯಾರ್ಥಿಗಳು ಎದುರಿಸಬೇಕಾದ ನೀಟ್, ಸಿ.ಇ.ಟಿ., ಐ.ಟಿ.ಐ, ಪರೀಕ್ಷೆಗಳಲ್ಲಿ ಕಾಣುವ ಸ್ಪರ್ಧೆಯು ಅವರನ್ನು ತೀವ್ರ ಒತ್ತಡಕ್ಕೀಡುಮಾಡುತ್ತದೆ. ತಾನು ಪಾಸಾಗುತ್ತೇನೋ ಇಲ್ಲವೋ ಎಂಬ ಸಂದೇಹ ಉಂಟಾಗಬಹುದು. ಒಮ್ಮೆ ಫೇಲಾದರೆ ವಿಫಲತೆಯೊಂದಿಗೆ, ಉಪಾಧ್ಯಾಯರು, ಗೆಳೆಯರು ಮತ್ತು ಪೋಷಕರಿಂದ ಎದುರಿಸಬೇಕಾದ ಟೀಕೆ ಟಿಪ್ಪಣಿಗಳು, ಅದರಿಂದ ಆಗುವ ಅವಮಾನಗಳಿಂದ ಹರೆಯದವರು ತೀವ್ರ ಖಿನ್ನತೆಗೊಳಗಾಗಿ ಆತ್ಮಹತ್ಯೆಯೇ ಇದಕ್ಕೆ ಪರಿಹಾರ ಎಂದು ಎಣಿಸುತ್ತಾರೆ. ವಿಶೇಷವಾಗಿ ಕೋಚಿಂಗ್ ತರಗತಿಗಳು ಏರ್ಪಡಿಸುವ ಕಠಿಣವಾದ ಶಿಸ್ತು ವಿದ್ಯಾರ್ಥಿಗಳನ್ನು ಅತಿಯಾದ ಒತ್ತಡಕ್ಕೀಡು ಮಾಡಿದಾಗ ವಿದ್ಯಾರ್ಥಿಗಳು ತೀವ್ರ ಖಿನ್ನತೆಗೊಳಗಾಗುತ್ತಾರೆ. ಸ್ಪರ್ಧಾತ್ಮಕ ಪರೀಕ್ಷಾ ಸಮಯಗಳಲ್ಲಿ, ಪರೀಕ್ಷಾ ಫಲಿತಾಂಶ ಬಂದಾಗ ವಾರ್ತಾ ಪತ್ರಿಕೆಗಳ ಮುಖಪುಟಗಳಲ್ಲಿ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವಾರ್ತೆಗಳನ್ನು ಓದುಗರು ನೆನಪಿಸಿಕೊಳ್ಳಬಹುದು.

ಹರೆಯದವರಿಗೆ ಸವಾಲುಗಳು ಎದುರಾಗುವುದು ಸಹಜ. ಅದೇ ರೀತಿ ಅವರು ಹಲವಾರು ಒತ್ತಡಗಳನ್ನು ಎದುರಿಸಬೇಕಾಗುತ್ತದೆ. ಪೋಷಕರ ನಿರೀಕ್ಷೆ, ಟೀಕೆ -ಟಿಪ್ಪಣಿಗಳು, ಭಾವನಾತ್ಮಕವಾಗಿ ಚಿಕ್ಕ ಪುಟ್ಟದ್ದಕ್ಕೂ ಮನಸ್ಸನ್ನು ಕೆಡಿಸಿಕೊಳ್ಳುವುದು ಮತ್ತು ಗೆಳೆಯರ ಟೀಕೆಗಳು, ನಕಾರಾತ್ಮಕ ಗೆಳೆಯರ ಸಹವಾಸ ಇವು ಹರೆಯದ ಮನಸ್ಸನ್ನು ಒತ್ತಡಕ್ಕೀಡು ಮಾಡಿ, ತಾನು ಅಸಹಾಯಕ, ಒಂಟಿ, ಎನ್ನುವ ಭಾವನೆಯಿಂದ, ತಾನು ಇದ್ದು ಏನು ಪ್ರಯೋಜನ ಎಂಬ ನಕಾರಾತ್ಮಕ ಭಾವನೆಗಳು ಮನಸ್ಸನ್ನು ಆವರಿಸಿ ಖಿನ್ನತೆಗೊಳಗಾಗುತ್ತಾರೆ. ಇದೂ ಒಂದು ಆತ್ಮಹತ್ಯೆಗೆ ಕಾರಣ.

ಗೊಂದಲದ ಕೌಟುಂಬಿಕ ವಾತಾವರಣವು ಹರೆಯದವರಲ್ಲಿ ಖಿನ್ನತೆಯನ್ನುಂಟು ಮಾಡುತ್ತದೆ. ಪೋಷಕ-ಮಕ್ಕಳ ಸಂಬಂಧದಲ್ಲಿ ಆಗುವ ವ್ಯತ್ಯಾಸಗಳು, ಕುಟುಂಬದ ಸದಸ್ಯರಲ್ಲಿ ಪರಸ್ಪರ ದ್ವೇಷ, ಜಗಳ, ಅಸೂಯೆ, ಆತ್ಮೀಯತೆಯ ಕೊರತೆ, ಭಾವನಾತ್ಮಕ ಸಂಬಂಧದ ಕೊರತೆ, ಪೋಷಕರ ತಿರಸ್ಕಾರ ಮನೋಭಾವ, ಇಲ್ಲಸಲ್ಲದ ಬೈಗುಳಗಳು ಇವು ಹರೆಯದವರ ಮಾನಸಿಕ ಆರೋಗ್ಯವನ್ನು ಹಾಳು ಮಾಡಿ ಇದಕ್ಕೆ ಪರಿಹಾರವೆಂಬಂತೆ ಹರೆಯದವರು ಆತ್ಮಹತ್ಯೆಗೆ ಪ್ರಯತ್ನಿಸುತ್ತಾರೆ.

ಹರೆಯದಲ್ಲಿ ಆಗುವ ಲೈಂಗಿಕ ವಿಕಾಸವನ್ನು ಯಶಸ್ವಿಯಾಗಿ ಎದುರಿಸಿ, ಅದನ್ನು ಸಹಜವಾಗಿ ಸ್ವೀಕರಿಸುವುದು ಒಂದು ಸವಾಲು. ಹರೆಯದಲ್ಲಿ ಸ್ರವಿಸುವ "ಲೈಂಗಿಕ ಚೋದನಿಕೆ (Sex Hormone)"ಗಳಿಂದ ಲೈಂಗಿಕ ಅಂಗಾಂಗಗಳು ವಿಕಾಸಗೊಳ್ಳುತ್ತವೆ. ಆದರಿಂದ ಹರೆಯದವರು ಲೈಂಗಿಕ ಆಕರ್ಷಣೆಗೊಳಗಾಗುತ್ತಾರೆ. ಇದರಿಂದ ಗಂಡು-ಹೆಣ್ಣು ಪ್ರೇಮ ಪ್ರಕರಣಗಳಲ್ಲಿ ತೊಡಗಿಸಿಕೊಳ್ಳಬಹುದು. ಮನೆಯವರು ಅದಕ್ಕೆ ಒಪ್ಪದ ಕಾರಣದಿಂದಲೋ ಅಥವಾ ಹುಡುಗ ಹುಡುಗಿಯರ ವೈಯಕ್ತಿಕ ಭಿನ್ನಾಭಿಪ್ರಾಯದಿಂದಲೋ ಪ್ರೇಮ ಪ್ರಕರಣವು ವಿಫಲವಾದರೆ, ಅದರಿಂದ ಖಿನ್ನತೆ ಉಂಟಾಗಿ ಇಬ್ಬರಲ್ಲಿ ಒಬ್ಬರು ಅಥವಾ ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳಬಹುದು.

ಕೆಟ್ಟ ಗೆಳೆಯರ ಸಹವಾಸದಿಂದ, ಮದ್ಯ ಮಾದಕ ವಸ್ತುಗಳ ಚಟಕ್ಕೀಡಾಗಿ ಅದು ತಪ್ಪೆಂದು ಅರಿವಾದಾಗ ಪಾಪಪ್ರಜ್ಞೆಯಿಂದ ಆತ್ಮಹತ್ಯೆಗೆ ಪ್ರಯತ್ನಿಸಬಹುದು ಅಥವಾ ಆತ್ಮಹತ್ಯೆ ಮಾಡಿಕೊಳ್ಳಬಹುದು. ಹರೆಯದವರು ಭಾವನೆಗಳಿಂದ ಪ್ರೇರೇಪಿತರಾಗಿರುತ್ತಾರೆ. ತಾವು ಮಾಡುವ ಕೆಲಸವನ್ನು ಯಾರಾದರೂ ಹೊಗಳಿದರೆ ಅರಕ್ಕೇರುತ್ತಾರೆ, ವಿಫಲರಾದರೆ ಅಥವಾ ಬೇರೆಯವರು ನಕಾರಾತ್ಮಕವಾಗಿ ಪ್ರತಿಕ್ರಿಯಿಸಿದಾಗ ಒಮ್ಮೆಲೇ ಪಾತಾಳಕ್ಕಿಳಿದು, ಮನಸ್ಸು ಘಾಸಿಗೊಂಡು ಖಿನ್ನತೆಗೊಳಗಾಗುತ್ತಾರೆ. ಹರೆಯದವರ ಆತ್ಮಹತ್ಯೆಗೆ ಇದೂ ಒಂದು ಕಾರಣ.

ಸಾಮಾಜಿಕ ಜಾಲತಾಣಗಳಾದ ಯೂಟ್ಯೂಬ್, ಫೇಸ್‌ಬುಕ್, ಇನ್ಸ್ಟಾಗ್ರಾಂ, ವಾಟ್ಸ್‌ಆ್ಯಪ್, ಟ್ವಿಟರ್ ಮತ್ತು ಎಸ್.ಎಂ.ಎಸ್. ಇವುಗಳನ್ನು ಹರೆಯದರು ಹೆಚ್ಚು ಹೆಚ್ಚು ಉಪಯೋಗಿಸುತ್ತಾರೆ. ಕೆಲವು ಗೆಳೆಯರು ಅವರ ಎದುರಿಗೆ ಬೈಯ್ಯಲಾಗದೇ ಜಾಲತಾಣಗಳ ಮೂಲಕ ಬೈಯ್ಯುವುದು (Cyber bullying) ಟೀಕೆ ಮಾಡುವುದು, ಬೆದರಿಕೆ ಹಾಕುವುದು, ಕೆಟ್ಟ ಶಬ್ದಗಳಿಂದ ಅವಮಾನಿಸುವುದು ಹೀಗೆ ಹಲವು ವಿಧದಲ್ಲಿ ಮಾನಸಿಕವಾಗಿ ಹಿಂಸಿಸುತ್ತಾರೆ. ಇದು ಹರೆಯದವರಲ್ಲಿ ಖಿನ್ನತೆಯನ್ನುಂಟು ಮಾಡಿ ಆತ್ಮಹತ್ಯೆಗೆ ಪ್ರಯತ್ನಿಸಬಹುದು.

ಕೆಲವು ಅಂಶಗಳು ಹರೆಯದವರ ಆತ್ಮಹತ್ಯೆಯನ್ನು ತಡೆಗಟ್ಟುವಲ್ಲಿ ಸಹಾಯಕವಾಗುತ್ತವೆ. ಹರೆಯದವರ ಸಹಜ ನಡವಳಿಕೆಯಲ್ಲಿ ವ್ಯತ್ಯಾಸವೇನಾದರೂ ಕಂಡುಬಂದಲ್ಲಿ, ಪೋಷಕರು ಅದನ್ನು ಗಮನಿಸಿ ಮಕ್ಕಳನ್ನು ಆತ್ಮೀಯತೆಯಿಂದ ಕಾರಣ ಏನೆಂಬುದನ್ನು ವಿಚಾರಿಸಬೇಕು. ಅವಶ್ಯವಿದ್ದಲ್ಲಿ ಸಕಾರಾತ್ಮಕ ಮಾರ್ಗದರ್ಶನ ಮಾಡಬೇಕು. ಮಾನಸಿಕ ಸಮಸ್ಯೆ ಇದ್ದರೆ, ಅದರ ಕುರಿತು ಇರುವ ಅಜ್ಞಾನ, ಕಳಂಕ ಅಥವಾ ಅದು ಒಂದು ಅವಮಾನ ಎಂದು ಎಣಿಸದೇ ಕೂಡಲೇ ಮನೋವೈದ್ಯರಲ್ಲಿ ಸಲಹೆ ಪಡೆಯಬೇಕು. ಮಕ್ಕಳಿಗೆ ಜೀವನ ಕೌಶಲಗಳನ್ನು ರೂಢಿಗೊಳಿಸಬೇಕು. ಹೀಗೆ ಕೆಲವು ಅಂಶಗಳನ್ನು ಗಮನದಲ್ಲಿಟ್ಟು ಮಕ್ಕಳನ್ನು ಮತ್ತು ಹರೆಯದವರನ್ನು ಪೋಷಿಸಿದಾಗ, ಆತ್ಮಹತ್ಯೆ, ಆತ್ಮಹತ್ಯೆಗೆ ಪ್ರಯತ್ನ ಮತ್ತು ಆತ್ಮಹತ್ಯೆ ಆಲೋಚನೆಗಳನ್ನು ತಡೆದು, ಹರೆಯದವರ ಬಾಳು ಹಸನಾಗುವಂತೆ ಮಾಡಬಹುದು.

ಕೊಹಿನೂರ್ ಭಾರತಕ್ಕೇ ಸೇರಿದ್ದು!

▸ ಅರವಿಂದ

ಕೆಲವು ದಿನಗಳ ಹಿಂದೆ ಬ್ರಿಟನ್‌ನ ದೊರೆ ಚಾರ್ಲ್ಸ್-3 ನ್ಯೂಯಾರ್ಕ್ ನಗರಕ್ಕೆ ಭೇಟಿ ನೀಡಿದಾಗ ಅಲ್ಲಿನ ಮೇಯರ್ ಜೊಹ್ರಾಮ್ ಮಾಮ್ದಾನಿ ತಾನು ಕೊಹಿನೂರ್ ವಜ್ರವನ್ನು ಭಾರತಕ್ಕೆ ಮರಳಿಸುವಂತೆ ಚಾರ್ಲ್ಸ್ ರಲ್ಲಿ ಕೋರಿಕೊಳ್ಳುವುದಾಗಿ ನುಡಿದರು. ಅವರು ಹೇಳಿದ್ದೇನೋ ನಿಜ. ಅವರ ಮಾತಿಗೆ ಚಾರ್ಲ್ಸ್ ಅಥವಾ ಇಂಗ್ಲೆಂಡ್ ಬೆಲೆ ನೀಡುವುದೆಂದು ಹೇಳಲಾಗದು. ಆದರೆ ಅವರ ಹೇಳಿಕೆಯು ಕೊಹಿನೂರ್ ವಜ್ರದ ಮರಳಿಕೆಯ ವಿಷಯವನ್ನು ಮತ್ತೊಮ್ಮೆ ಮುನ್ನೆಲೆಗೆ ತಂದಿರುವುದು ನಿಜ.

ಇಂಗ್ಲೆಂಡ್ ಕೊಹಿನೂರ್‌ನ್ನು ತನಗೆ ಮರಳಿಸಬೇಕೆಂದು ಭಾರತವು ಕಳೆದ ಕೆಲವು ದಶಕಗಳಿಂದಲೇ ಬೇಡಿಕೆ ಸಲ್ಲಿಸುತ್ತಿದೆ. ಈಗಂತೂ ಇಂತಹ ಬೇಡಿಕೆಗೆ ಹೆಚ್ಚು ಬಲ ಬಂದಿದೆ. ವಸಾಹತುಶಾಹಿ ಆಡಳಿತಗಳು ವಿವಿಧ ದೇಶಗಳಿಂದ ಕೊಳ್ಳೆ ಹೊಡೆದ ಸಂಪತ್ತುಗಳನ್ನು ಯುರೋಪಿನ ಹಲವಾರು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟಿದ್ದು, ಅವುಗಳನ್ನು ಆಯಾ ದೇಶಗಳಿಗೆ ಮರಳಿಸಬೇಕು ಎಂಬ ಹಕ್ಕೊತ್ತಾಯ ಇತ್ತೀಚಿನ ವರ್ಷಗಳಲ್ಲಿ ಜೋರಾಗೇ ಕೇಳಿಬರುತ್ತಿದೆ.

ಆದೇರೀತಿ, ಕೊಹಿನೂರ್‌ನ್ನು ತನಗೆ ಮರಳಿಸಬೇಕೆಂಬುದು ಭಾರತದ ಹಕ್ಕೊತ್ತಾಯ. ಸಾವಿರಾರು ವರ್ಷಗಳ ಹಿಂದೆ ಭಾರತದ ಗಣಿಯಿಂದ ಹೊರತೆಗೆದ 105.6 ಕ್ಯಾರೆಟ್ ತೂಕದ ಈ ವಜ್ರವು 1800ರಿಂದ ಬ್ರಿಟಿಷ್ ಸಾಮ್ರಾಜ್ಯದ ವಶದಲ್ಲಿದೆ. ಹಾಗೆಂದು ಇದನ್ನು ಬ್ರಿಟಿಷರಿಗೆ ಕೊಡುಗೆಯಾಗಿ ನೀಡಿದ್ದೇನೋ ಅಲ್ಲ. ಬ್ರಿಟನ್ ಅದನ್ನು ಲೂಟಿ ಮಾಡಿ ಕೊಂಡೊಯ್ದದ್ದು. ಕೊಹಿನೂರ್ ಬ್ರಿಟನ್‌ನಲ್ಲಿರುವುದು ಅದರ ವಸಾಹತುಶಾಹಿಯ ಸಂಕೇತವಾಗಿದ್ದು, ಆ ಕಾಲದಲ್ಲಿ ನಡೆಸಿದ ಸಂಪತ್ತಿನ ಲೂಟಿಯನ್ನೂ ನೆನಪಿಸುತ್ತದೆ. ಆದ್ದರಿಂದ ಅದನ್ನು ನ್ಯಾಯಬದ್ಧವಾಗಿ ಭಾರತಕ್ಕೆ ನೀಡಬೇಕು ಎಂದು ಹಲವಾರು ಬಾರಿ ಮನವಿ ಸಲ್ಲಿಸಲಾಗಿದೆ.

ಇದು ಕೇವಲ ಕೊಹಿನೂರ್‌ನ ಕಥೆಯಲ್ಲ. ಯುರೋಪಿನ ಹಲವಾರು ಮ್ಯೂಸಿಯಂಗಳಲ್ಲಿ ವಿವಿಧ ರಾಷ್ಟ್ರಗಳ ರಾಷ್ಟ್ರೀಯ ಸಂಪತ್ತುಗಳನ್ನು ಪ್ರದರ್ಶನಕ್ಕಿಡಲಾಗಿದೆ.ಇವೆಲ್ಲವೂ ಆ ದೇಶಗಳಿಂದ ಲೂಟಿ ಮಾಡಿ ತಂದಂತಹ ವಸ್ತುಗಳೇ ಆಗಿವೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ಮ್ಯೂಸಿಯಂಗಳು ಅಂತಹ ಕೆಲವು ಪುರಾತನ ವಸ್ತುಗಳನ್ನು ಆಯಾ ದೇಶಗಳಿಗೆ ಮರಳಿಸುವ ಕಾರ್ಯವನ್ನು ಮಾಡಿವೆ. ಉದಾಹರಣೆಗೆ ಬೆನಿನ್ ಕಂಚಿನ ಕಲಾಕೃತಿಗಳನ್ನೇ ತೆಗೆದುಕೊಳ್ಳಿ. 13-16ನೇ ಶತಮಾನದ ಕಾಲಘಟ್ಟದಲ್ಲಿ ತಯಾರಿಸಲಾದ ಸುಮಾರು 5000ಕ್ಕೂ ಅಧಿಕ ಕಂಚಿನ ಕಲಾಕೃತಿಗಳನ್ನು 1897ರಲ್ಲಿ ಬ್ರಿಟಿಷ್ ಸೇನೆಯು ನೈಜೀರಿಯಾದ ಬೆನಿನ್ ನಗರದ ಮೇಲೆ ದಾಳಿ ಮಾಡಿದಾಗ ವಶಪಡಿಸಿಕೊಂಡಿತ್ತು. ಅದನ್ನು ತನಗೆ ಮರಳಿಸಬೇಕೆಂದು ನೈಜಿರಿಯಾ ಕಳೆದೊಂದು ಶತಮಾನದಿಂದ ಒತ್ತಾಯಿಸುತ್ತಾ ಬಂದಿತ್ತು. ಆದರೆ ನೈಜೀರಿಯಾಕ್ಕೆ ಅದನ್ನು ಸರಿಯಾಗಿ ಕಾಯ್ದಿಡಲು ಗೊತ್ತಿಲ್ಲ ಎಂಬ ನೆಪ ಹೇಳಿ ಬ್ರಿಟನ್ ಅದನ್ನು ನಿರಾಕರಿಸಿತ್ತು. ಜತೆಗೇ 'ವೈಶ್ವಿಕ ಮ್ಯೂಸಿಯಂ' ಪರಿಕಲ್ಪನೆ ಮುಂದಿಟ್ಟಿತ್ತು. ಈ ಪರಿಕಲ್ಪನೆಯ ಮೂಲಕ ಬೇರೆ ದೇಶಗಳಿಂದ ಲೂಟಿ ಹೊಡೆದ ಸಂಪತ್ತುಗಳನ್ನು ತಾವು ಹೊಂದುವುದು ನ್ಯಾಯಬದ್ಧ ಎಂಬುದಾಗಿ ಈ ಐರೋಪ್ಯ ಮ್ಯೂಸಿಯಮಂಗಳು ವಾದಿಸುತ್ತವೆ. ಈಗೀಗ ಇಂತಹ ವಾದದ ನೈತಿಕ ದಿವಾಳಿತನವು ಬಯಲಿಗೆ ಬರತೊಡಗಿದೆ. ಹಾಗಾಗಿ ನೆದರ್‌ಲೆಂಡ್, ಜರ್ಮನಿ ಮತ್ತು ಅಮೆರಿಕದ ಮೆಟ್ರೋಪಾಲಿಟನ್ ಮ್ಯೂಸಿಯಂಗಳು ಇಂತಹ ಕಲಾಕೃತಿಗಳನ್ನು ನೈಜೀರಿಯಾಕ್ಕೆ ಮರಳಿಸಿವೆ. ಅದರ ಬೆನ್ನಿಗೇ 2025ರಲ್ಲಿ ಡಚ್ ಮ್ಯೂಸಿಯಂ ಕೂಡಾ 119 ಬೆನಿನ್ ಕಂಚಿನ ಕಲಾಕೃತಿಗಳನ್ನು ನೈಜೀರಿಯಾಕ್ಕೆ ಮರಳಿಸುವುದಾಗಿ ಘೋಷಿಸಿತು.

ಗ್ರೀಸ್ ಕೂಡಾ ತನ್ನ ಪಾರ್ಥೆನನ್ ವಿಗ್ರಹಗಳನ್ನು ಪಡೆಯಲು ದಶಕಗಳ ಕಾಲದಿಂದ ಹೋರಾಟ ಮಾಡುತ್ತಾ ಬಂದಿದೆ. ಅಥೆನ್ಸ್‌ನ ಪಾರ್ಥೆನನ್‌ನ ಮೂಲ ಭಾಗವಾಗಿರುವ ಈ ವಿಗ್ರಹಗಳನ್ನು 19ನೇ ಶತಮಾನದಲ್ಲಿ ಲಾರ್ಡ್ ಎಲ್ಗಿನ್ ಅಲ್ಲಿಂದ ಕಿತ್ತು ಬ್ರಿಟನ್‌ಗೆ ಕೊಂಡೊಯ್ದಿದ್ದ. ಬಳಿಕ ಅದನ್ನು ಬ್ರಿಟಿಷ್ ಸರಕಾರಕ್ಕೆ ಮಾರಿದ್ದ. ಅಲ್ಲಿಂದ ಬಳಿಕ ಅವು ಬ್ರಿಟನ್‌ನಲ್ಲೇ ಇವೆ. 1816ರಲ್ಲಿ ಅವನ್ನು ಬ್ರಿಟಿಷ್ ಮ್ಯೂಸಿಯಂ ಖರೀದಿಸಿತ್ತು.

ಗ್ರೀಸಿನ ವಾದವೇನೆಂದರೆ "ಈ ವಿಗ್ರಹಗಳು ರೋಮ್ ಅಧಿಪತ್ಯಕ್ಕೆ ಸೇರಿದ್ದು, ಒಟ್ಟೋಮನ್ ಸಾಮ್ರಾಜ್ಯವು ಗ್ರೀಸಿನ ಮೇಲೆ ಅಧಿಪತ್ಯ ಸ್ಥಾಪಿಸಿದ್ದ ಸಂದರ್ಭದಲ್ಲಿ ಲಾರ್ಡ್ ಎಲ್ಗಿನ್ ಅವನ್ನು ಅಲ್ಲಿಂದ ಕಿತ್ತುಕೊಂಡು ಹೋಗಿದ್ದಾನೆ. ಅನ್ಯ ರಾಷ್ಟ್ರದ ಅತಿಕ್ರಮಣದ ಸಂದರ್ಭದಲ್ಲಿ ಈ ಕೃತ್ಯ ನಡೆದಿದ್ದು, ಒಟ್ಟೋಮನ್ ಸಾಮ್ರಾಜ್ಯಕ್ಕೆ ಇವನ್ನು ಮಾರಾಟ ಮಾಡುವ ಅಧಿಕಾರವಿಲ್ಲ. ಅದು ಗ್ರೀಸ್‌ಗೆ ಸೇರಿದ ಸೊತ್ತು" ಆದರೆ ತಾನು ಖರೀದಿ ಒಪ್ಪಂದ ಮಾಡಿಕೊಂಡೇ ಅವನ್ನು ಖರೀದಿ ಮಾಡಿರುವುದರಿಂದ ಅದನ್ನು ಮರಳಿಸುವಂತಿಲ್ಲ ಎಂದು ಬ್ರಿಟಿಷ್ ಮ್ಯೂಸಿಯಂ ವಾದಿಸುತ್ತಿದೆ. ವಿಪರ್ಯಾಸವೆಂದರೆ ಇದೇ ಮ್ಯೂಸಿಯಂನಿಂದ ಸಾವಿರಾರು ಅಮೂಲ್ಯ



ವಸ್ತುಗಳು ಕಾಣೆಯಾಗಿರುವ ದೊಡ್ಡ ಹಗರಣದಲ್ಲೂ ಈ ಮ್ಯೂಸಿಯಂ ಸಿಕ್ಕಿಬಿದ್ದಿದೆ. ಈವರೆಗೆ ಅವನ್ನು ಗ್ರೀಸ್‌ಗೆ ಮರಳಿಸಲು ಮ್ಯೂಸಿಯಂ ನಿರಾಕರಿಸಿದೆಯಾದರೂ ಅದರ ಮೇಲಿನ ಒತ್ತಡ ಹೆಚ್ಚುತ್ತಿದೆ. ಇಡೀ ಜಗತ್ತು ಈ ಬೆಳವಣಿಗೆಯನ್ನು ವೀಕ್ಷಿಸುತ್ತಿದೆ.

ಜಗತ್ತಿನಾದ್ಯಂತ ಈಗ ವಿವಿಧ ದೇಶಗಳು ತಮ್ಮಿಂದ ಲೂಟಿ ಹೊಡೆದ ವಸ್ತುಗಳನ್ನು ಮರಳಿಸಬೇಕೆಂದು ಮ್ಯೂಸಿಯಂಗಳನ್ನು ಒತ್ತಾಯಿಸಲಾರಂಭಿಸಿವೆ. ಕೆಲವು ಮ್ಯೂಸಿಯಂಗಳು ಇಂತಹ ಬೇಡಿಕೆಯನ್ನು ಮನ್ನಿಸಿವೆ ಕೂಡಾ. 2204ರಲ್ಲಿ ಮೆಟ್ರೋಪಾಲಿಟನ್ ಮ್ಯೂಸಿಯಂ ಕಾಂಬೋಡಿಯಾ ಮತ್ತು ಥೈಲೆಂಡಿನ ಹಲವಾರು ಪುರಾತನ ವಸ್ತುಗಳನ್ನು ಹಿಂತಿರುಗಿಸಿತು. ಅಮೆರಿಕವು ತನ್ನ ಮೂಲ ನಿವಾಸಿಗಳ ಸೊತ್ತುಗಳನ್ನು ಅವರಿಗೇ ಮರಳಿಸುವಂತಹ ಕಾಯ್ದೆಯೊಂದನ್ನು ಜಾರಿಗೊಳಿಸಿದೆ. ಬ್ರೆಜಿಲಿನ 400 ವರ್ಷ ಹಳೆಯದಾದ ಕುಪನಾಂಬಾ ಮೈಗವಚವನ್ನು ಡ್ಯಾನಿಶ್ ಮ್ಯೂಸಿಯಂ 2024ರಲ್ಲಿ ಹಿಂತಿರುಗಿಸಿತು. ಬ್ರೆಜಿಲ್ ಈ ಸಂಬಂಧವಾಗಿ ಡೆನ್ಮಾರ್ಕ್ ಸರಕಾರದೊಂದಿಗೆ ತೀವ್ರ ಸಂಧಾನ ನಡೆಸಿತ್ತು. ಕುಪನಾಂಬಾ ಆದಿವಾಸಿ ಜನಾಂಗದವರು ಕೂಡಾ ಭಾರೀ ದೊಡ್ಡ ಪ್ರತಿಭಟನೆಯನ್ನೂ ನಡೆಸಿದ್ದರು.

ಇವೆಲ್ಲವೂ ಸಾರುವ ಸಂದೇಶ ಒಂದೇ- ಬಲಾತ್ಕಾರವಾಗಿ ಕೊಂಡೊಯ್ದ ಒಂದು ದೇಶದ ಅಮೂಲ್ಯ ವಸ್ತುಗಳನ್ನು ಅದೇ ದೇಶಕ್ಕೆ ಮರಳಿಸಬೇಕು!

ಇನ್ನು ಕೆಲವರು ಈ ರೀತಿ ಪುರಾತನ ವಸ್ತುಗಳನ್ನು ಮರಳಿಸುವುದನ್ನು ವಿರೋಧಿಸುವುದಿದೆ. ಹಾಗೆ ಎಲ್ಲವನ್ನೂ ಮರಳಿಸುವುದರಿಂದ ಮ್ಯೂಸಿಯಂಗಳು ಖಾಲಿ ಬೀಳುತ್ತವೇ ಎಂಬ ವಿತಂಡವಾದವನ್ನೂ ಮಂಡಿಸುವುದಿದೆ. ಆದರೆ ಇಂತಹ ಹೇಳಿಕೆಯ ಹಿಂದೆಯೇ, ಈ ಮ್ಯೂಸಿಯಂಗಳೆಲ್ಲ ಬೇರೆ ದೇಶಗಳಿಂದ ಕದ್ದು ತಂದ ಅಥವಾ ಬಲವಂತದಿಂದ ಎತ್ತಿಕೊಂಡು ಬಂದ ವಸ್ತುಗಳಿಂದಲೇ ತುಂಬಿಕೊಂಡಿವೆ ಎಂಬ ತಪ್ಪೊಪ್ಪಿಗೆಯೂ ಸೇರಿಕೊಂಡಿದೆ. ಆದರೆ ಕೆಲವು ದೇಶಗಳ ಸಾಂಸ್ಕೃತಿಕ ಮಹತ್ವದ ವಸ್ತುಗಳನ್ನು ಕೇವಲ 'ಮ್ಯೂಸಿಯಂ ವಸ್ತು'ಗಳೆಂಬಂತೆ ಪರಿಗಣಿಸುವುದು ತಪ್ಪು. ಆಯಾ ದೇಶಕ್ಕೆ ಅದು ಸಾಂಸ್ಕೃತಿಕ ವೈಭವದ ಕುರುಹು. ಅವುಗಳನ್ನು ಆಯಾ ದೇಶಕ್ಕೆ ಮರಳಿಸುವುದು ಅವುಗಳ ಸಾಂಸ್ಕೃತಿಕ ಪರಂಪರೆಯನ್ನು ಗೌರವಿಸಿದಂತೆ.

ಕೊಹಿನೂರ್ ವಜ್ರವನ್ನು ಕೂಡಾ ಬ್ರಿಟನ್ ಭಾರತಕ್ಕೆ ಮರಳಿಸಬೇಕಾದುದೇ ಸೂಕ್ತವಾಗಿದೆ. ಈ ವಿಚಾರದಲ್ಲಿ ಅದು ನೈತಿಕ ದಿವಾಳಿತನವನ್ನು ಪ್ರದರ್ಶಿಸಬಾರದು. ಬೆನಿನ್ ಕಂಚಿನ ವಸ್ತುಗಳನ್ನು ಮರಳಿಸಿದ, ಪಾರ್ಥೆನನ್ ಕೃತಿಗಳನ್ನು ಮರಳಿಸುವ ಕುರಿತಂತೆ ಸಂಧಾನದಲ್ಲಿ ತೊಡಗಿರುವ ಬ್ರಿಟನ್ ಕೊಹಿನೂರ್‌ನ್ನು ಮಾತ್ರ ರಾಜನ ಕಿರೀಟದಲ್ಲಿ ಈಗಲೂ ಪ್ರದರ್ಶಿಸುತ್ತಿರುವುದು ಹಾಗೂ ಆ ಮೂಲಕ ಅದು ಬ್ರಿಟನ್‌ಗೇ ಸೇರಿದ ವಸ್ತು ಎಂಬಂತೆ ಬಿಂಬಿಸುತ್ತಿರುವುದು ಸರಿಯಲ್ಲ. ಕೊಹಿನೂರ್‌ನ ಕುರಿತಂತೆ ಬ್ರಿಟನ್ ಸ್ಪಷ್ಟನೆ ನೀಡುವ ಅಗತ್ಯವಿದೆ. ಸಾಂಸ್ಕೃತಿಕ ವಸ್ತುಗಳನ್ನು ಲೂಟಿ ಮಾಡುವುದೆಂದರೆ ಆ ದೇಶದ ಜನರ ಸಾಮೂಹಿಕ ಸ್ಮರಣೆಯನ್ನೆ ನಾಶಪಡಿಸಿದಂತೆ ಹಾಗೂ ಅಸ್ಮಿತೆಯನ್ನೆ ಕಸಿದುಕೊಂಡಂತೆ ಎಂಬುದಾಗಿ ಯುನೆಸ್ಕೋದ ಮಹಾತ್ಮರ್ ಎಂ. ಬೊವ್ ಎಂಬವರು ಕೆಲ ದಶಕಗಳ ಹಿಂದೆ ಹೇಳಿದ್ದರು. ಬ್ರಿಟನ್ ಅದಕ್ಕೆ ಕಿವಿಗೊಡಬೇಕಾಗಿದೆ. ಕೊಹಿನೂರ್ ಭಾರತಕ್ಕೆ ಸೇರಿದ್ದು. ಜಗತ್ತೀಗ ತಾನು ಲೂಟಿ ಮಾಡಿದ ಸ್ವತ್ತುಗಳನ್ನು ಅದರ ಮಾಲಿಕರಿಗೆ ಮರಳಿಸುತ್ತಿದೆ. ಬ್ರಿಟನ್ ಕೂಡಾ ಅದೇ ದಾರಿ ತುಳಿಯಬೇಕಾಗಿದೆ. ಕೊಹಿನೂರ್ ಇಂದಲ್ಲ ನಾಳೆ ಭಾರತಕ್ಕೆ ಮರಳಬೇಕಾಗಿರುವುದು ಅನಿವಾರ್ಯವಾಗಿದೆ.

ಈ 'ತಾಪ'ವ ನಾ ತಾಳೆನು!


ವಾರದ ವರಸೆ

• ಸಂದೇಶ್ ನಾಯ್ಕ್ ಹಕ್ಲಾಡಿ
naiksh2@gmail.com



ಮನೆ-ಮನಸ್ಸು ಎಂದ ಮೇಲೆ ಕೋಪ-ತಾಪದ ಪ್ರಭಾವ ಇದ್ದೇ ಇರುತ್ತದೆ. ಕೋಪದಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗುವುದು, ಪರಿಣಾಮವೆಂಬಂತೆ ಒಟ್ಟಾರೆ ವಾತಾವರಣವು ಬಿಸಿಯೇರುವುದು ಸಾಮಾನ್ಯ. ಮಾತು, ಚರ್ಚೆ, ವಾಗ್ವಾದ, ಜಗಳ ಇತ್ಯಾದಿಗಳ ಸಂದರ್ಭದಲ್ಲಿ 'ಕಾವೇರಿದೆ', 'ಹೀಟೆಡ್' ಎಂಬೆಲ್ಲ ವಿಶೇಷಣಗಳನ್ನು ಬಳಸುವುದರಿಂದಲೂ ಆ ಸನ್ನಿವೇಶದ 'ಬಿಸಿ'ಯ ಅಸ್ತಿತ್ವದ ಬಗ್ಗೆ ಯಾವ ಅನುಮಾನವೂ ಇಲ್ಲ ಎಂದೆನ್ನಬಹುದು. ಅಂದರೆ ಕೋಪದಿಂದ ಉಂಟಾಗುವ ಆ ಬಿಸಿಯನ್ನೇ 'ಕೋಪ-ತಾಪ' ಎಂದು ಜೋಡುನುಡಿಯಂತೆ ಹೇಳುವುದಿರಬೇಕು. ಅಲ್ಲಿ ಕೋಪವೇ ತಾಪಕ್ಕೆ ಕಾರಣವೆನ್ನುವುದು ಸ್ಪಷ್ಟ. ಅಂತೆಯೇ ಈಗಲೂ ಕೋಪ-ತಾಪಗಳೆರಡೂ ಭಾರೀ ಪ್ರಮಾಣದಲ್ಲಿ ಕಾಣಿಸಿಕೊಳ್ಳುತ್ತಿವೆ. ಆದರೆ ಯಾವುದರಿಂದ ಯಾವುದು ಎನ್ನುವುದನ್ನು ಕೊಂಚ ಅವಲೋಕಿಸಬೇಕಷ್ಟೇ. ಹೌದು, ಈಗ ತಾಪದಿಂದಲೇ ಕೋಪ ಹುಟ್ಟುತ್ತಿದೆ ಎನ್ನುವುದೇ ಸರಿಯಾದ ಅಭಿಪ್ರಾಯ. ಬೇಸಿಗೆಯ ಬೇಗೆಯ ಬಿಸಿಗೆ, ತಾಪಮಾನ ಒಂದೇ ಪ್ರಮಾಣದಲ್ಲಿ ಏರಿ, ಆ ಬಿಸಿಯನ್ನು ಸಹಿಸಿಕೊಳ್ಳಲು ಸಾಧ್ಯವಾಗದೇ ಇರುವ ಕಾರಣಕ್ಕೆ ಕೋಪ ಉಂಟಾದರೆ ಅಚ್ಚರಿಯಿಲ್ಲ. ಆ ಕಾರಣಕ್ಕೆ ಜನರು ಪರಿ ಪರಿಯಾಗಿ ಪರಿತಪಿಸುವಂತಾಗಿದೆ. ಬೇಸಿಗೆಯ ಈ ದಿನಗಳಲ್ಲಿ ಭಾರೀ ಪ್ರಮಾಣದಲ್ಲಿ ಏರಿಕೆಯಾಗುವ ತಾಪಮಾನದಿಂದ ಉಂಟಾಗುವ ತಾಪತ್ರಯಗಳು ಒಂದೆರಡಲ್ಲ.

ಕೋಪೋದ್ರಿಕ್ತಗೊಂಡಿದೆಯೋ ಎಂಬಂತೆ ಗೋಚರಿಸುವ ತಾಪದ ಪ್ರತಾಪಕ್ಕೆ ಸಿಕ್ಕು ಜನರಂತೂ ಈ ಕಾಲದಲ್ಲಿ ಅಕ್ಷರಶಃ ಬಳಲಿ ಬೆಂಡಾಗಿದ್ದಾರೆ ಹಾಗೂ ಬೆವರಿ ಒದ್ದೆ ಮುದ್ದೆಯಾಗಿದ್ದಾರೆ. ಎಲ್ಲೇ ಯಾರ ಬಾಯಲ್ಲೇ ಕೇಳಿದರೂ ಒಂದೇ ಮಾತು, "ಅಯ್ಯಯ್ಯೋ ಇದೆಂಥಾ ಸೆಕೆಯಪ್ಪ?!" ಇದನ್ನೇ ಸಮಯ-ಸಂದರ್ಭ-ಸನ್ನಿವೇಶಗಳಿಗೆ ತಕ್ಕಂತೆ ಬೇರೆ ಬೇರೆ ರೀತಿಯಲ್ಲಿ ಹೇಳುತ್ತಲೇ ಇರುತ್ತಾರೆ. ಈ 'ಕಾಲ'ದ ಎಲ್ಲರ ಬಾಯಲ್ಲೂ, ಬರಹದಲ್ಲೂ ಈ ಕುರಿತ ವಿಚಾರಗಳು ನುಸುಳುವ ಸಾಧ್ಯತೆ ದಟ್ಟವಾಗಿರುತ್ತದೆ. ಇದನ್ನು ಪದೇ ಪದೇ ಹೇಳುವುದರಿಂದ ಈ ಸಂಬಂಧದ ಮಾತುಕತೆಗಳನ್ನು 'ಸೆಕೆ'-ಗೀತ ಎಂದು ಕರೆಯಬಹುದು. ಅತ್ತ 'ಸಖಿ'-ಗೀತ ಮರ ಸುತ್ತುವ ಪ್ರಕ್ರಿಯೆಯ ಭಾಗವಾಗಿ ಕಾಣಿಸಿಕೊಂಡರೆ, ಇತ್ತ ಈ 'ಸೆಕೆ'-ಗೀತ ಸಮ್ಮರ್(summer)ನ ಸುಸ್ತಾಗುವುದರ ಜೊತೆಗೆ ಕಾಣಿಸಿಕೊಳ್ಳುವಂಥದ್ದು. ಅಂದರೆ ಸಖಿ-ಗಾಲ ಅದ್ಯಾರಿಗೆಲ್ಲ ಸಿಗುವುದೋ ಬಿಡುವುದೋ ಆದರೆ 'ಸೆಕೆ'-ಗಾಲವಂತೂ ಎಲ್ಲರಿಗೂ ಸಿಕ್ಕೇ ಸಿಗುತ್ತದೆ ಎನ್ನುವುದಕ್ಕೆ ದಿನದಿಂದ ದಿನಕ್ಕೆ ಏರುವ ಬಿಸಿಲೇ ಸಾಕ್ಷಿ. ಈ ಏರುವ ಬಿಸಿಲಿನ ತೀವ್ರತೆ ಅದ್ಯಾವ ಮಟ್ಟಿಗೆ ಇದೆಯೆಂದರೆ, ಯಾರಾದರೂ 'ನಿಮ್ಮೂರು ಯಾವೂರು..?' ಎಂದು ಥಟ್ಟನೇ ಪ್ರಶ್ನಿಸಿದರೆ, ಅತ್ತಲಿಂದ ನಾವು, 'ನಮ್ಮೂರು... ಬಿಸಿಲೂರು...!' ಎಂದುತ್ತರಿಸಿದರೂ ಆಶ್ಚರ್ಯವೇನಿಲ್ಲ. ಬೇಸಿಗೆಯ ಹಿನ್ನೆಲೆಯಲ್ಲಿ ನೋಡಿದರೆ ಆ ಉತ್ತರ ತಪ್ಪು ಅಂತಲೂ ಅನಿಸಲಿಕ್ಕಿಲ್ಲ.



ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲಿ ಮುಳುಗುವ ಸೂರ್ಯ ಹೊಳೆಯುತ್ತಾನೆ, ಮಿನುಗುತ್ತಾನೆ ಹಾಗೂ ಬೆಳಗುತ್ತಾನೆ ಎಂದೆಲ್ಲ ನಾವು ಕೇಳಿಕೊಂಡೇ ಬಂದವರು. ಆದರೆ ಆತ ಅದನ್ನಷ್ಟೇ ಮಾಡುವುದಿಲ್ಲ, ಆಗಾಗ ನಮ್ಮನ್ನು ಬೆದರಿಸುತ್ತಾನೆ, ಹೆದರಿಸುತ್ತಾನೆ, ಬೆವರಿಳಿಸಿ ಬೆಂಡಾಗುವಂತೆ ಮಾಡುವ ಮೂಲಕ ನಮಗೆ ಅಕ್ಷರಶಃ ಸವಾಲನ್ನೇ ಹಾಕುತ್ತಾನೆ ಎನ್ನುವುದು ಪ್ರತೀ ಬೇಸಿಗೆಯ ಸಂದರ್ಭದಲ್ಲೂ ಸಾಬೀತಾಗುತ್ತದೆ. ಆ ಕಾಲದಲ್ಲೇ ತಾನೇ ಅವನು ನಮ್ಮಲ್ಲಿ ಒಂದು ಬಗೆಯ ಭಯವನ್ನೇ ಹುಟ್ಟು ಹಾಕುವುದು! ಈತನ ಈ ಉರಿಮುಖ, ಕೆಕ್ಕರಿಸಿ ನೋಡುವ ಕೆಂಡದಂಥ ಕಣ್ನೋಟದ ಪ್ರಭಾವದಿಂದಾಗಿ, ಯಾರಾದರೂ ಮನೆಯ ಹೊರಗಡೆ ಕಾಲಿರಿಸುವುದು ಎಂದರೆ ಅದೊಂಥರ ಪರೀಕ್ಷೆಯನ್ನು ಎದುರಿಸಿದಂತೆಯೇ ಸರಿ. ಯಾವ ಪರೀಕ್ಷೆ ಎಂದಿರಾ? ಅದೇ, 'ನೋಡೋಣ ಅದೆಷ್ಟು ಹೊತ್ತು ಈ ಬಿಸಿಲನ್ನು ತಡೆದುಕೊಳ್ಳಬಲ್ಲಿರಿ? ಹೊರಗೆ ಧೈರ್ಯವಾಗಿ ಸುತ್ತಾಡುವಿರಿ?' ಎಂಬಿತ್ಯಾದಿ ಟೆಸ್ಟನ್ನು ಎದುರಿಸಿದಂತೆಯೇ ಸರಿ. ಯಾವ್ಯಾವುದೋ ಡೇರ್ ಚಾಲೆಂಜ್ ಗೊತ್ತಿರುವ ನಮಗೆ, ಬೇಸಿಗೆಯಲ್ಲಿ ಬಿಸಿಲಿಗೆ ಹೊರಗಡೆ ಕಾಲಿಡುವುದೇ 'the toughest dare challenge' ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ.

'ಬಿಸಿಲಲ್ಲಿ ಒಣಗಿಸು, ನೆರಳಲ್ಲಿ ಮಲಗಿಸು ರಾಘವೇಂದ್ರ; ಬಿಸಿಲಲ್ಲಿ ಕೆಂಪಾಗಿ, ನೆರಳಲ್ಲಿ ತಂಪಾಗಿ ನಗುನಗುತಾ ಇರುವೆ ರಾಘವೇಂದ್ರ' ಎಂಬ ಭಕ್ತಿಗೀತೆಯಲ್ಲಿ ಬರುವಂತೆ, ವರ್ಷದ ಬೇರೆ ಯಾವುದೇ ಕಾಲದಲ್ಲಿ ಕೇಳಿಕೊಳ್ಳುವಂತೆ ಬಹುಶಃ ಈಗ ಯಾರೂ ಕೋರಿಕೊಳ್ಳರೇನೋ ಎನಿಸುತ್ತದೆ. ಬಿಸಿಲಿನ ತೀವ್ರತೆ ಅದ್ಯಾವ ಮಟ್ಟಿಗೆ ಇದೆಯೆಂದರೆ, 'ಅದೇನೇ ಇರಲಿ, ಹೇಗಾದರೂ ಆಗಲಿ ನೆರಳಲ್ಲೇ ಮಲಗಿಸು ದೇವಾ' ಎಂಬ ಕೋರಿಕೆಯನ್ನು ಮುಂದೊಡ್ಡುವವರ ಸಂಖ್ಯೆಯೇ ಹೆಚ್ಚಿರುತ್ತದೆ. ಆದಾಗ್ಯೂ ಬಿಸಿಲಲ್ಲಿ ಒಣಗಿಸಿದರೆ, ಹಾಡಲ್ಲಿ ಬರುವಂತೆ ಜಸ್ಟ್ ಕೆಂಪಾಗದೆ ಕೆಣ್ಣು ಕೆಂಪಾಗಿಸಿಕೊಂಡು, ಕೋಪದಲ್ಲಿ ಕೆಕ್ಕರಿಸಿಕೊಂಡು ನೋಡುತ್ತಾರಷ್ಟೇ! ಹಾಗೆಯೇ ಬಿಸಿಲಿಗೇ ಬಾಸ್ ಆಗಿರುವ ಆ ಭಾಸ್ಕರನಲ್ಲಿ ಏರುತ್ತಿರುವ ಬಿಸಿಲ ಬಗ್ಗೆ 'ಬಸ್ ಕರೋ ಯಾರ್' ಎಂದು ಭಿನ್ನವಿಸಿಕೊಳ್ಳುವವರ ಸಂಖ್ಯೆಯೂ ಭಾರೀ ಪ್ರಮಾಣದಲ್ಲಿದೆ.

ಬೇಸಿಗೆಯ ಈ ಕಾಲದಲ್ಲಿ ಹೀಗೆ ಎಲ್ಲೆಲ್ಲೂ ಏರುತ್ತಿರುವ ಬಿಸಿಯ ಪರಿಣಾಮವನ್ನು ಗಮನಿಸುತ್ತಿದ್ದರೆ, ಈ ಭೂಮಿಯ ಮೇಲೆ ವಾಸಿಸುತ್ತಿರುವ ನಮ್ಮೆಲ್ಲರ ಬದುಕು 'ಬಾಣಲೆಯಿಂದ ಬೆಂಕಿಗೋ...? ಅಥವಾ ಬೆಂಕಿಯಿಂದ ಬಾಣಲೆಗೋ..?' ಎಂಬ ಅನುಮಾನವೊಂದು ಮೂಡದೇ ಇರಲಾರದು. ಇನ್ನು ಆಗಾಗ ಉಲ್ಲೇಖಿಸಲ್ಪಡುವ ನರಕದ ಕುದಿಯುವ ಎಣ್ಣೆ ಬಾಣಲೆಯ ಶಿಕ್ಷೆಯೂ ಈ ಸಂದರ್ಭದಲ್ಲಿ ನೆನಪಿಗೆ ಬರದೇ ಇರಲಾರದು. ಅಲ್ಲ ನಮ್ಮನ್ನೆಲ್ಲಾ ಸೃಷ್ಟಿಸಿ ಈ ಭೂಮಿಯ ಮೇಲೆ ಬಿಟ್ಟ ಆ ದೇವರೇನಾದರೂ, ಆ ನರಕದ ಶಿಕ್ಷೆಯ ಅನುಭವ ಸ್ವಲ್ಪ ಸ್ವಲ್ಪ ಈ ಭೂಮಿಯ ಮೇಲೆಯೇ ಆಗಲಿ ಎಂದೇನಾದರೂ, ಸೂರ್ಯನಿಗೇ ಸುಪಾರಿ ಕೊಟ್ಟು ಈ ಪರಿ ಬಿಸಿಯೇರುವಂತೆ ಮಾಡಿದ್ದಾನೆಯೋ ಎಂಬ ಶಂಕೆಯೊಂದು ಮೂಡುವುದರಲ್ಲಿ ಎರಡು ಮಾತಿಲ್ಲ. ಅಷ್ಟೇ ಅಲ್ಲದೇ ನಾವೂ ಬೇಸಿಗೆ, ಮಳೆಗಾಲ ಹಾಗೂ ಚಳಿಗಾಲಗಳೆಂಬ ವ್ಯತ್ಯಾಸವೇ ಇಲ್ಲದೆ ಪ್ರತಿನಿತ್ಯವೂ ಅದೆಷ್ಟೋ ಆಹಾರ ಪದಾರ್ಥಗಳಿಗೆ ಕೆಂಡ, ಕಾವಲಿ, ಓವೆನ್, ಕಾದ ಎಣ್ಣೆ ಬಾಣಲಿಯ ಮೂಲಕ ಭಾರೀ ಬಿಸಿ ಮುಟ್ಟಿಸುತ್ತಲೇ ಇರುತ್ತೇವಲ್ಲ. ಅದು ಹೇಗಿರುತ್ತದೆ ಎನ್ನುವುದರ ಒಂದಂಶವಾದರೂ ನಾವೆಲ್ಲರೂ ಅನುಭವಿಸಲೇಬೇಕು ಎಂಬುವುದು ಆ ಆಹಾರ ಪದಾರ್ಥಗಳ ಮನದ ಕೋರಿಕೆಯೇ ಇರಬೇಕು. ಅದನ್ನು ಈಡೇರಿಸಲೆಂದೇ ದೇವರು ಬೇಸಿಗೆಯನ್ನು ಈ ಮಟ್ಟಿಗೆ ಬಿಸಿಯಾಗಿಸಿದ್ದಾನೆ ಎಂದರೆ ಅಲ್ಲ ಎನ್ನಲಾಗದು!

ಇಂತಿಪ್ಪ ಬೇಸಿಗೆಯ ಬಗ್ಗೆ ಉರಿ ಉರಿದು ಬೀಳಲು, ಅದರ ವಿರುದ್ಧ ಮುರಿದುಕೊಂಡು ಬಿದ್ದು ಮಾತನಾಡಲು ನಾ ಮುಂದು, ತಾ ಮುಂದು ಎಂದು ಬರುವವರ ಸಂಖ್ಯೆ ಇರುವಂತೆಯೇ 'ಬಿಸಿಲೇ ಬಾ ಇನ್ನೂ ಬಾ.. ನೀ ಬಂದು ನಿನ್ನ ಉರಿ ಮುಖ ಇನ್ನೂ ತೋರು ಬಾ, ನಿಗಿ ನಿಗಿ ಕೆಂಡದ ಕಾವಾಗಿ ಬಾ.. ಸುಡು ಸುಡು ಅಗ್ನಿ ಜ್ವಾಲೆಯಾಗಿ ಬಾ' ಎಂದು ಗಾನಪೂರ್ಣವಾಗಿ ಹಾಡುವ ಮೂಲಕ ಕರೆದು ತಮ್ಮ ಬಿಸಿಯ ಅಗತ್ಯವನ್ನು ನೀಗಿಸುವಂತೆ ಪರಿ ಪರಿಯಾಗಿ ಭಿನ್ನವಿಸಿಕೊಳ್ಳುವವರೂ ಇದ್ದಾರೆ. ಅದ್ಯಾರಪ್ಪಾ ಆ ಅಸಾಮಿಗಳು ಎಂದು ನೀವು ಮುಖ ಸಿಂಡರಿಸದಿರಿ. ಅವರೇ ಹಪ್ಪಳ, ಸಂಡಿಗೆ ಇತ್ಯಾದಿಗಳನ್ನು ದಂಡಿಯಾಗಿ ತಯಾರಿಸಿ ಈ ಬಿಸಿಲಲ್ಲಿ ಒಣಗಿಸಿ, ಮಳೆ-ಚಳಿಗಾಲಕ್ಕೆ ಬಳಸಲು ಆಯಿತೆಂದು, ಈ ಬಿಸಿ ಬಿಸಿ ಬಿಸಿಲಲ್ಲೂ ನೆಮ್ಮದಿಯ ನಿಟ್ಟುಸಿರು ಹೊರಚೆಲ್ಲುವವರು. ಬಿಸಿಲನ್ನು ಬರಸೆಳೆದು ಆಲಂಗಿಸಿ, ಆಹ್ವಾನಿಸಿಕೊಳ್ಳುವವರು.

ಈ ಎಲ್ಲಾ ದೂರು-ದುಮ್ಮಾನಗಳ ಹೊರತಾಗಿಯೂ ಈ ಬೇಸಿಗೆ, ಈ ಬಿಸಿಲಿಗೆ ಅದರದೇ ಆದ ಹೊಳಪಿದೆ. ಅದು ಈ ಮೂಲಕ ನಮಗೆ ಕಲಿಸುವ ಪಾಠ ಸಣ್ಣದೇನಲ್ಲ. ಅದು ನಮ್ಮ ಕಾರ್ಯವೈಖರಿಯನ್ನು ನಿಯಂತ್ರಿಸುತ್ತದೆ, ನಮ್ಮನ್ನು ಕೊಂಚ ನಿಧಾನಗೊಳಿಸುತ್ತದೆ. ಅದೇ ಹೊತ್ತಲ್ಲಿ ಸಣ್ಣ ಸಣ್ಣ ಖುಷಿ, ಅನುಕೂಲಗಳು ಹಾಗೂ ಆರಾಮದಾಯಕ ಕ್ಷಣಗಳನ್ನು ಪ್ರಶಂಸಿಸುವುದನ್ನೂ ಅದು ಕಲಿಸುತ್ತದೆ. ಮರ, ನೆರಳು, ನೀರು, ತಂಪು ಅಷ್ಟೇ ಏಕೆ ಅದೆಷ್ಟೋ ದಿನಗಳಿಂದ ಛಾವಣಿಯಲ್ಲಿ ನೇತಾಡಿಕೊಂಡು ಅದರಷ್ಟಕ್ಕೆ ಅದು ತಿರುಗುತ್ತಾ ಕೆಲವೊಮ್ಮೆ ಸುಮ್ಮನೇ ಸ್ತಬ್ಧವಾಗಿ ಇರುತ್ತಿದ್ದ ಫ್ಯಾನ್‌ನ ನಿಜವಾದ ಬೆಲೆ ಅರ್ಥವಾಗಲೂ ಈ ಬೇಸಿಗೆಯೇ ಬರಬೇಕಲ್ಲವೇ? 'ಅಯ್ಯೋ ಇದೆಲ್ಲ ಇದ್ದಿದ್ದೇ, ಎಲ್ಲವೂ ನಮ್ಮ ನಿಯಂತ್ರಣದಲ್ಲೇ ಇದೆ' ಎಂಬ ಮನುಷ್ಯನ ಅಹಂ ಕೇಂದ್ರಿತ ಮನೋಧೋರಣೆಯಿಂದ ಬೇಸತ್ತು ಹೋಗಿರುವ ಈ ಸೃಷ್ಟಿಯೇ ಬೇಸಿಗೆಯ ರೂಪದಲ್ಲಿ ಬಿಸಿ ಮುಟ್ಟಿಸಲು ಪ್ರಯತ್ನಿಸುವ ಮೂಲಕ ಬೇರೆಯದೇ ಸಂದೇಶವನ್ನು ರವಾನಿಸುತ್ತಿದೆ. ಅದನ್ನು ಸಮರ್ಪಕವಾಗಿ ಅರ್ಥೈಸಿಕೊಂಡರೆ ನಮಗೂ ಒಳ್ಳೆಯದು, ನಿಮಗೂ ಒಳ್ಳೆಯದು ಎಂದು ಅದು ಸಾರಿ ಸಾರಿ ಹೇಳುತ್ತಿದೆ, ನಾವು ಕೇಳಿಸಿಕೊಳ್ಳಬೇಕಷ್ಟೇ!

ಓವರ್‌ಡೋಸ್: ಕೌನ್ ಬನೇಗಾ ಕರೋಡ್‌ಪತಿಯಲ್ಲಿ ಭಾಗವಹಿಸದೆಯೂ ನಾವು ಕುಳಿತುಕೊಳ್ಳುವ ಕುರ್ಚಿ 'ಹಾಟ್ ಸೀಟ್' ಆಗುತ್ತದೆ ಎಂದರೆ ಭಾರೀ ಬೇಸಿಗೆ ಕಾಲಿಟ್ಟಿದೆ ಎಂದೇ ಅರ್ಥ!

ಅಮೆರಿಕಕ್ಕೆ ಇರಾನ್‌ನ 14 ಅಂಶಗಳ ಹೊಸ ಪ್ರಸ್ತಾವ

ನಷ್ಟದ ಒಪ್ಪಂದ ಅಥವಾ ಕದನ: ಆಯ್ಕೆ ನಿಮ್ಮದು!

ಟೆಹ್ರಾನ್: ಒಂದು ನಷ್ಟದ ಒಪ್ಪಂದ ಮಾಡಿಕೊಳ್ಳುತ್ತೀರೋ ಅಥವಾ ಯುದ್ಧ ಎದುರಿಸುತ್ತೀರೋ, ಆಯ್ಕೆ ನಿಮ್ಮದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್‌ಗೆ ಇರಾನ್ ಸೇನೆ ಖಡಕ್ ಎಚ್ಚರಿಕೆ ನೀಡಿದೆ. ಯುದ್ಧ ಕೊನೆಗೊಳಿಸಲು 30 ದಿನಗಳ ಗಡುವಿನ ಸಹಿತ 14 ಅಂಶಗಳನ್ನು ಒಳಗೊಂಡ ಪ್ರಸ್ತಾವವನ್ನು ಇರಾನ್, ಟ್ರಂಪ್ ಮುಂದಿಟ್ಟಿದೆ.

ಹಾರ್ಮುಜ್ ಜಲಸಂಧಿ ಮತ್ತು ಇರಾನ್ ಬಂದರುಗಳ ಮೇಲಿನ ಅಮೆರಿಕ ಸೇನೆಯ ಜಲದಿಗ್ಬಂಧನ ಮತ್ತು ಜಾಗತಿಕ ತೈಲ ಮತ್ತು ಅನಿಲ ಸರಬರಾಜು ವ್ಯತ್ಯಯದಿಂದ ಮಧ್ಯಪ್ರಾಚ್ಯದಲ್ಲಿ ಪರಿಸ್ಥಿತಿ ಉದ್ವಿಗ್ನತೆ ಹೆಚ್ಚಾಗುತ್ತಿದೆ. ಈ ವೇಳೆ ಇರಾನ್ ಜತೆಗಿನ ಬಿಕ್ಕಟ್ಟು ಶಮನಗೊಳಿಸಲು ಟ್ರಂಪ್‌ಗೆ ಹೆಚ್ಚು ಆಯ್ಕೆಗಳಿಲ್ಲ. ಇದನ್ನು ಚೆನ್ನಾಗಿ ಅರಿತ ಇರಾನ್ ಸವಾಲೊಡ್ಡಿದೆ. ಅಮೆರಿಕದ ಪ್ರಸ್ತಾವವನ್ನು ಒಪ್ಪಿಕೊಳ್ಳದ ಇರಾನ್ ತನ್ನ ಹೊಸ ಷರತ್ತುಗಳನ್ನು ಮುಂದಿಟ್ಟಿದೆ.

ಇರಾನ್‌ನೊಂದಿಗೆ ಒಂದು ನಷ್ಟದಾಯಕ ಒಪ್ಪಂದವನ್ನು ಅಧ್ಯಕ್ಷ ಟ್ರಂಪ್ ಮಾಡಿಕೊಳ್ಳಲಿ ಅಥವಾ ಅಸಾಧ್ಯವಾದ ಸೇನಾ ಕಾರ್ಯಾಚರಣೆಯನ್ನು ಎದುರಿಸಲು ಸಿದ್ಧರಾಗಲಿ. ಅಮೆರಿಕಕ್ಕೆ ನಿರ್ಧಾರ ತೆಗೆದುಕೊಳ್ಳಲು ಅವಕಾಶ ಕಡಿಮೆಯಾಗಿದೆ. ಅಮೆರಿಕ ವಿಧಿಸಿದ ಜಲ ದಿಗ್ಬಂಧನ ತೆರವುಗೊಳಿಸಲು ಇರಾನ್ ಅಂತಿಮ ಗಡುವು(ದಿನಾಂಕ ಉಲ್ಲೇಖಿಸಿಲ್ಲ) ನೀಡಿದೆ. ಮಧ್ಯಪ್ರಾಚ್ಯ ಬಿಕ್ಕಟ್ಟಿನ ಬಗ್ಗೆ ಚೀನಾ, ರಷ್ಯಾ ಮತ್ತು ಯುರೋಪ್ ರಾಷ್ಟ್ರಗಳು ನಿಲುವು ಬದಲಾಗುತ್ತಿವೆ ಎಂದ ಇರಾನ್ ಸೇನೆ (ಐಆರ್‌ಜಿಸಿ), ಅಮೆರಿಕದ ಮೇಲೆ ಭಾರೀ ಅಂತಾರಾಷ್ಟ್ರೀಯ ಒತ್ತಡ ಇರುವುದನ್ನು ಸ್ಪಷ್ಟಪಡಿಸಿದೆ.

ಇರಾನ್‌ಗೆ ಟೋಲ್ ಪಾವತಿಸಿದರೆ ನಿರ್ಬಂಧ: ಹಾರ್ಮುಜ್‌ನಲ್ಲಿ ಸುರಕ್ಷಿತವಾಗಿ ಜಲಸಂಧಿ ದಾಟಲು ಇರಾನ್‌ಗೆ ಟೋಲ್ ಹಣ ಪಾವತಿಸುವ ಹಡಗುಗಳ ಮೇಲೆ ನಿರ್ಬಂಧ ಹೇರುವುದಾಗಿ ಅಮೆರಿಕ ಎಚ್ಚರಿಕೆ ನೀಡಿದೆ. ಕೆಲವು ಹಡಗುಗಳಿಂದ ಹಣ ವಸೂಲಿ ಮಾಡಿ ಸಂಚರಿಸಲು ಇರಾನ್ ಅನುಮತಿ ನೀಡಿತ್ತು.

ಇಬ್ಬರು ಇಸ್ರೇಲಿ ಗೂಢಚಾರಿಗಳಿಗೆ ಗಲ್ಲು: ಇಸ್ರೇಲ್ ಪರ ಗೂಢಚಾರ ನಡೆಸುತ್ತಿದ್ದ ಇಬ್ಬರು ಪುರುಷರನ್ನು ಇರಾನ್ ಶನಿವಾರ ಗಲ್ಲಿಗೇರಿಸಿದೆ. ರಹಸ್ಯ ಮಾಹಿತಿಗಳನ್ನು ಮೊಸಾದ್‌ಗೆ ಕಳುಹಿಸುತ್ತಿದ್ದರೆಂದು ಒಪ್ಪಿಕೊಂಡಿದ್ದಾರೆ.

ಅಣ್ವಸ್ತ್ರ ಯೋಜನೆ ಕೈಬಿಡಲು ಇರಾನ್‌ಗೆ ಜರ್ಮನಿ ಸಲಹೆ: ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಅವರೊಂದಿಗೆ ದೂರವಾಣಿ ಕರೆ ಮೂಲಕ ಸಂಭಾಷಣೆ ನಡೆಸಿದ ಜರ್ಮನಿ ವಿದೇಶಾಂಗ ಸಚಿವ ಜೊಹಾನ್ ವೇಡ್‌ಫಾಲ್, ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಹಾಗೂ ಅಣ್ವಸ್ತ್ರ ಯೋಜನೆ ಕೈಬಿಡಲು ಸಲಹೆ ನೀಡಿದ್ದಾರೆ. ಪಾಲುದಾರ ಅಮೆರಿಕ ಪರವಾಗಿ ಜರ್ಮನಿ ಮಾತುಕತೆ ನಡೆಸಿದೆ.

ಹಾನಿಯಾದ ವಿಶ್ವವಿದ್ಯಾಲಯ ಇನ್ನು ಮ್ಯೂಸಿಯಂ: ಅಮೆರಿಕ-ಇಸ್ರೇಲ್ ದಾಳಿಗೆ ಹಾನಿಗೊಳಗಾದ ಇಸ್ಫಹಾನ್ ತಾಂತ್ರಿಕ ವಿಶ್ವವಿದ್ಯಾಲಯವನ್ನು ಯುದ್ಧ ಮ್ಯೂಸಿಯಂ ಆಗಿ ಪರಿವರ್ತಿಸಲು ಇರಾನ್ ನಿರ್ಧರಿಸಿದೆ.



ಪ್ರಸ್ತಾವ ಪರಾಮರ್ಶೆ ಮಾಡುವೆ: ಟ್ರಂಪ್

ಯುದ್ಧ ಕೊನೆಗೊಳಿಸಲು ಇರಾನ್ ಮುಂದಿಟ್ಟಿರುವ ಹೊಸ ಪ್ರಸ್ತಾವವನ್ನು ತಕ್ಷಣಕ್ಕೆ ಒಪ್ಪದಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪರಿಶೀಲನೆ ನಡೆಸುವುದಾಗಿ ಹೇಳಿದ್ದು, ಕದನ ವಿರಾಮ ಒಪ್ಪಂದ ಆಗುವ ಕುರಿತು ಸಂಶಯ ವ್ಯಕ್ತಪಡಿಸಿದ್ದಾರೆ. ಫ್ಲೋರಿಡಾದಲ್ಲಿ ತಮ್ಮ ವಿಮಾನ ಏರುವ ಮುನ್ನ ಪತ್ರಕರ್ತರ ಜತೆ ಟ್ರಂಪ್ ಮಾತನಾಡಿದ್ದರು. ಇರಾನ್ ಹೊಸ ಪ್ರಸ್ತಾವದ ಕುರಿತು ಆದಷ್ಟು ಬೇಗನೆ ಪರಾಮರ್ಶೆ ನಡೆಸುತ್ತೇನೆ. ಕಳೆದ 47 ವರ್ಷಗಳಿಂದ ಇರಾನ್ ಮಾನವೀಯತೆಯ ಮೇಲೆ ನಡೆಸಿದ ಅಪರಾಧಗಳಿಗೆ ಇನ್ನೂ ದೊಡ್ಡ ಬೆಲೆ ಕಟ್ಟಿಲ್ಲ. ಹೀಗಾಗಿ ಇರಾನ್ ಪ್ರಸ್ತಾವ ಸ್ವೀಕರಿಸುವುದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ಟ್ರಂಪ್ ಪ್ರತಿಕ್ರಿಯಿಸಿದ್ದಾರೆ. ಪಾಕಿಸ್ತಾನ ಮುಖೇನ ಅಮೆರಿಕ ಕಳುಹಿಸಿದ 9 ಅಂಶಗಳನ್ನು ಒಳಗೊಂಡ ಕದನ ವಿರಾಮ ಒಪ್ಪಂದ ಪ್ರಸ್ತಾವಕ್ಕೆ ಉತ್ತರವಾಗಿ ಇರಾನ್ 14 ಷರತ್ತುಗಳ ಪ್ರಸ್ತಾವವನ್ನು ಕಳುಹಿಸಿದೆ. ಇದೇ ವಾರ, ಯುದ್ಧ ಅಂತ್ಯಗೊಳಿಸಲು ಇರಾನ್ ಕಳುಹಿಸಿದ್ದ ಪ್ರಸ್ತಾವವನ್ನು ಅಮೆರಿಕ ಅಧ್ಯಕ್ಷರು ತಿರಸ್ಕರಿಸಿದ್ದರು. ಹಾರ್ಮುಜ್ ತೆರೆಯಲು ಟ್ರಂಪ್ ಹೊಸ ಯೋಜನೆ ಹಾಕಿಕೊಂಡಿದ್ದಾರೆ.

ರನ್‌ವೇಗೆ ಜಿಗಿದ ಅಸ್ವಸ್ಥ ಪ್ರಯಾಣಿಕ

ಚೆನ್ನೈ: ಏರ್ ಅರೇಬಿಯಾ ವಿಮಾನ ಸಂಚರಿಸುತ್ತಿದ್ದ ವೇಳೆ ತುರ್ತು ನಿರ್ಗಮನ ದ್ವಾರದಿಂದ (ಎಮರ್ಜೆನ್ಸಿ ಎಕ್ಸಿಟ್) ಅಸ್ವಸ್ಥ ಪ್ರಯಾಣಿಕನೊರ್ವ ರನ್‌ವೇಗೆ ಜಿಗಿದ ಘಟನೆ ಚೆನ್ನೈ ವಿಮಾನ ನಿಲ್ದಾಣದಲ್ಲಿ ಭಾನುವಾರ ನಡೆದಿದೆ. ಶಾರ್ಜಾದಿಂದ ಚೆನ್ನೈಗೆ ಬಂದಿಳಿದ ವೇಳೆ ಅಸ್ವಸ್ಥನಾಗಿದ್ದ 34 ವರ್ಷದ ಶರೀಫ್ ಮೊಹಮ್ಮದ್ ನಬ್ರುದ್ದೀನ್ ವಿಮಾನದ ತುರ್ತು ನಿರ್ಗಮನ ದ್ವಾರದಿಂದ ರನ್‌ವೇಗೆ ಜಿಗಿದಿದ್ದು, ತಕ್ಷಣವೇ ಫ್ಲೈಟ್ ಮುಖ್ಯಸ್ಥರು ಕ್ರಮವಾಗಿ ವಿಮಾನವನ್ನು ನಿಲುಗಡೆಗೊಳಿಸಿದ್ದಾರೆ. ಅಲ್ಲದೆ, ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ತುರ್ತು ಆಗಿರುವ ಮಾಹಿತಿ ನೀಡಿದ್ದಾರೆ. ಪುದುಕ್ಕೋಟ್ಟೈ ನಿವಾಸಿ ಶರೀಫ್ ಮೊಹಮ್ಮದ್ ಪ್ರಯಾಣ ಸಂದರ್ಭದಲ್ಲಿ ಎರಡು ಬಾರಿ ವಿಮಾನದೊಳಗೆ ವಾಂತಿ ಮಾಡಿದ್ದ. ಅಸ್ವಸ್ಥನಾಗಿದ್ದರಿಂದ ರನ್‌ವೇಗೆ ಜಿಗಿದಿದ್ದಾನೆ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಈ ಘಟನೆಯಿಂದಾಗಿ ಹಲವು ವಿಮಾನಗಳ ಸಂಚಾರವು ತಡವಾಗಿದ್ದವು.

ಪಶ್ಚಿಮ ಬಂಗಾಳದ ಫಲಿತಾಂಶದ ದಿನ: ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆಯೇ?

ಮಮತಾಗೆ ಅಗ್ನಿಪರೀಕ್ಷೆ

ಪಶ್ಚಿಮ ಬಂಗಾಳದ 2026ರ ವಿಧಾನಸಭಾ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಲಿದ್ದು, ಇಡೀ ರಾಜ್ಯ ಕಾತರದಿಂದ ಕಾಯುತ್ತಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮತ್ತೊಮ್ಮೆ ಅಧಿಕಾರ ಹಿಡಿಯುತ್ತಾರೆಯೇ? ಅಥವಾ ಬಿಜೆಪಿ ಐತಿಹಾಸಿಕ ಜಯ ಸಾಧಿಸಲಿದೆಯೇ? ಎಂಬುದು ಕೆಲವೇ ಗಂಟೆಗಳಲ್ಲಿ ನಿರ್ಧಾರವಾಗಲಿದೆ. ಎರಡು ಹಂತಗಳ ಮತದಾನ ಪ್ರಮಾಣ ಮತದಾರರ ಅಸಾಧಾರಣ ಆಸಕ್ತಿಯನ್ನು ಸೂಚಿಸುತ್ತದೆ. ಮೊದಲ ಹಂತದಲ್ಲಿ ಶೇ. 93 ರಷ್ಟು ಮತದಾನ ದಾಖಲಾಗಿದ್ದರೆ, ಎರಡನೇ ಹಂತದಲ್ಲಿ ಈ ಪ್ರಮಾಣ ಶೇ.90ರಷ್ಟಿದೆ. ಈ ಚುನಾವಣೆ, ಮಮತಾ ಬ್ಯಾನರ್ಜಿ ಅವರ ಇತ್ತೀಚಿನ ರಾಜಕೀಯ ಜೀವನದಲ್ಲಿ ಇದೊಂದು ಅತ್ಯಂತ ಕಠಿಣ ಹೋರಾಟ ಎಂದು ವಿಶ್ಲೇಷಿಸಲಾಗುತ್ತಿದೆ. ಬಂಗಾಳದ ಮತದಾರರು ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಮುಂದುವರಿಕೆಯನ್ನು ಬಯಸಿದ್ದಾರೋ ಇಲ್ಲವೋ ಎಂಬ ಕುತೂಹಲಕ್ಕೆ ತೆರೆ ಬೀಳಲಿದೆ.

ಬಿಜೆಪಿಯ ಐತಿಹಾಸಿಕ ಹಾದಿ

ಬಿಜೆಪಿ ಈ ಬಾರಿ ಬಂಗಾಳದಲ್ಲಿ ಸರ್ಕಾರ ರಚಿಸುವ ದೃಢ ವಿಶ್ವಾಸದೊಂದಿಗೆ ಅಖಾಡಕ್ಕಿಳಿದಿದೆ. ಉತ್ತರ ಬಂಗಾಳ ಮತ್ತು ಗಡಿ ಜಿಲ್ಲೆಗಳ ಹೊರತಾಗಿ, ಟಿಎಂಸಿ ಭದ್ರಕೋಟೆಯಾಗಿರುವ ದಕ್ಷಿಣ ಬಂಗಾಳ ಮತ್ತು ನಗರ ಪ್ರದೇಶಗಳಲ್ಲಿ ಬಿಜೆಪಿ ತನ್ನ ಪ್ರಭಾವ ವಿಸ್ತರಿಸಲು ಪ್ರಯತ್ನಿಸಿದೆ. ಭ್ರಷ್ಟಾಚಾರ, ಕಾನೂನು ಸುವ್ಯವಸ್ಥೆ ಮತ್ತು ಆಡಳಿತಾತ್ಮಕ ಬದಲಾವಣೆಯ ಭರವಸೆಗಳನ್ನು ನೀಡಿ ಬಿಜೆಪಿ ಮತದಾರರನ್ನು ಸೆಳೆಯಲು ಮುಂದಾಗಿದೆ.

ಮತದಾರರ ಪಟ್ಟಿ ಪರಿಷ್ಕರಣೆ


ಸುಮಾರು 90 ಲಕ್ಷ ಮತದಾರರ ಹೆಸರುಗಳನ್ನು ಪಟ್ಟಿಯಿಂದ ತೆಗೆದುಹಾಕಿರುವ 'ವಿಶೇಷ ತೀವ್ರ ಪರಿಷ್ಕರಣೆ' (ಎಸ್‌ಐಆರ್) ಈ ಚುನಾವಣೆಯ ಪ್ರಮುಖ ಕೇಂದ್ರವಾಗಿತ್ತು. ಮತದಾನ ಪ್ರಮಾಣ ದಾಖಲೆಯ ಹೆಚ್ಚಳಕ್ಕೆ ಎಸ್‌ಐಆರ್ ಕೂಡ ಕಾರಣ ಎನ್ನಲಾಗುತ್ತಿದೆ. ಆದರೆ, ಮೃತಪಟ್ಟ ಮತ್ತು ನಕಲಿ ಮತದಾರರನ್ನು ತೆಗೆಯಲಾಗಿದೆ ಎಂದು ಚುನಾವಣಾ ಆಯೋಗ ಹೇಳಿದ್ದರೆ, ಇದು ಒಂದು ವರ್ಗದ ಮತದಾರರನ್ನು ಗುರಿಯಾಗಿಸಿಕೊಂಡು ಮಾಡಿದ ತಂತ್ರ ಎಂದು ಟಿಎಂಸಿ ಆರೋಪಿಸಿದೆ. ಈ ವಿಷಯ ಚುನಾವಣಾ ಪ್ರಚಾರದಲ್ಲಿ ದೊಡ್ಡ ಮಟ್ಟದ ಚರ್ಚೆಗೆ ನಾಂದಿ ಹಾಡಿತ್ತು.

ಭವಾನಿಪುರದ ಪ್ರತಿಷ್ಠೆಯ ಹೋರಾಟ

ಇಡೀ ಚುನಾವಣೆಯ ಸಂಘರ್ಷಕ್ಕೆ ಭವಾನಿಪುರ ಕ್ಷೇತ್ರ ಕನ್ನಡಿಯಂತಿದೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಸುವೇಂದು ಅಧಿಕಾರಿ ನಡುವಿನ ಈ ಹೈ-ಪ್ರೊಫೈಲ್ ಪೈಪೋಟಿ, ಕೇವಲ ಒಂದು ಸ್ಥಳೀಯ ಸ್ಪರ್ಧೆಯಲ್ಲ; ಇದು ರಾಜ್ಯದ ಒಟ್ಟಾರೆ ಜನಮತವನ್ನು ಅಳೆಯುವ ಮಾನದಂಡದಂತಿದೆ. ಇಲ್ಲಿ ಟಿಎಂಸಿ ಜಯಗಳಿಸಿದರೆ ಅದು ಮಮತಾ ಅವರ ನಾಯಕತ್ವಕ್ಕೆ ಸಿಕ್ಕ ದೊಡ್ಡ ಮನ್ನಣೆಯಾಗಲಿದೆ. ಒಂದು ವೇಳೆ ಸೋತರೆ, ಅದು ಬಂಗಾಳದ ರಾಜಕೀಯ ಇತಿಹಾಸದಲ್ಲೇ ಮಹತ್ವದ ಬದಲಾವಣೆಯ ಸಂಕೇತವಾಗಲಿದೆ. ಮೇ 4ರ ಫಲಿತಾಂಶಕ್ಕಾಗಿ ಇಡೀ ರಾಜ್ಯ ಕಾಯುತ್ತಿದ್ದು, ಸ್ಟ್ರಾಂಗ್ ರೂಮ್‌ಗಳ ಹೊರಗೆ ಬೀಡುಬಿಟ್ಟಿರುವ ಪಕ್ಷದ ಕಾರ್ಯಕರ್ತರ ಉಪಸ್ಥಿತಿ, ಈ ಖೇಲಾ(ಆಟ) ಎಷ್ಟು ಗಂಭೀರವಾಗಿದೆ ಎಂಬುದನ್ನು ತೋರಿಸುತ್ತಿದೆ.

ಇಂದು ಸಂಪೂರ್ಣ ಚಿತ್ರಣವಿಲ್ಲ

ಪಶ್ಚಿಮ ಬಂಗಾಳದ ಫಾಲ್ಟಾ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣಾ ಅಕ್ರಮಗಳು ಮತ್ತು ಇವಿಎಂ ಯಂತ್ರಗಳ ಮೇಲೆ ಕಪ್ಪು ಪಟ್ಟಿ ಹಚ್ಚಿದ ದೂರುಗಳು ಕೇಳಿಬಂದ ಹಿನ್ನೆಲೆಯಲ್ಲಿ ಇಡೀ ಕ್ಷೇತ್ರದಲ್ಲಿ ಮರುಮತದಾನಕ್ಕೆ ಚುನಾವಣಾ ಆಯೋಗ ದಿನಾಂಕ ನಿಗದಿ ಮಾಡಿದೆ. ಹೀಗಾಗಿ ಮೇ 4 ರಂದು ಕೇವಲ 293 ಕ್ಷೇತ್ರಗಳ ಫಲಿತಾಂಶ ಬರಲಿದ್ದು, ಫಾಲ್ಟಾ ಕ್ಷೇತ್ರಕ್ಕೆ ಮೇ 21ರಂದು ಮರುಮತದಾನ ನಡೆದು, ಮೇ 24ರಂದು ಫಲಿತಾಂಶ ಪ್ರಕಟವಾಗಲಿದೆ.



ಸುದ್ದಿ ಸಮಗ್ರ

ಅಧಿಕಾರಕ್ಕಾಗಿ ಹೈ-ವೋಲ್ಟೇಜ್ ಕದನ

ಈ ಬಾರಿಯ ಚುನಾವಣೆ ಆಡಳಿತಾರೂಢ ಟಿಎಂಸಿ ಮತ್ತು ಬಿಜೆಪಿ ನಡುವಿನ ನೇರ ಸಂಘರ್ಷವಾಗಿ ಮಾರ್ಪಟ್ಟಿದೆ. ಕಳೆದ ಒಂದು ದಶಕದಲ್ಲಿ ಬಂಗಾಳದ ರಾಜಕೀಯ ಚಿತ್ರಣ ಸಂಪೂರ್ಣ ಬದಲಾಗಿದೆ. ಒಂದು ಕಾಲದಲ್ಲಿ ರಾಜ್ಯದಲ್ಲಿ ಅಷ್ಟೇನೂ ಪ್ರಭಾವ ಹೊಂದಿರದ ಬಿಜೆಪಿ, ಈಗ ಎಡರಂಗ ಮತ್ತು ಕಾಂಗ್ರೆಸ್ ಅನ್ನು ಹಿಂದಿಕ್ಕಿ ಪ್ರಮುಖ ವಿರೋಧ ಪಕ್ಷವಾಗಿ ಹೊರಹೊಮ್ಮಿದೆ. ಈ ಚುನಾವಣೆಯ ಫಲಿತಾಂಶ ಕೇವಲ ರಾಜ್ಯಕ್ಕೆ ಮಾತ್ರವಲ್ಲದೆ, ರಾಷ್ಟ್ರ ರಾಜಕೀಯದ ಮೇಲೂ ದೊಡ್ಡ ಪ್ರಭಾವ ಬೀರಲಿದೆ.

ಮಮತಾಗೆ ಒತ್ತಡ

ಮಮತಾ ಬ್ಯಾನರ್ಜಿ ಅವರ 15 ವರ್ಷಗಳ ಆಡಳಿತದ ಮೇಲಿನ ಜನಾಭಿಪ್ರಾಯವಾಗಿ ಈ ಫಲಿತಾಂಶವನ್ನು ನೋಡಲಾಗುತ್ತಿದೆ. ಜನಸಾಮಾನ್ಯರೊಂದಿಗೆ ಅವರು ಹೊಂದಿರುವ ನಿಕಟ ಸಂಬಂಧ ಅವರ ಬಲವಾಗಿದ್ದರೆ, ಆಡಳಿತ ವಿರೋಧಿ ಅಲೆ ಮತ್ತು ಭ್ರಷ್ಟಾಚಾರದ ಆರೋಪಗಳು ಸವಾಲಾಗಿವೆ. ಇಲ್ಲಿನ ಗೆಲುವು ಮಮತಾ ಅವರಿಗೆ ದೇಶದ ಪ್ರಭಾವಿ ಪ್ರಾದೇಶಿಕ ನಾಯಕಿಯಾಗಿ ಸ್ಥಾನ ನೀಡಬಹುದು, ಆದರೆ ಹಿನ್ನಡೆಯಾದರೆ ಅವರ ರಾಷ್ಟ್ರೀಯ ವರ್ಚಸ್ಸಿಗೆ ಹೊಡೆತ ಬೀಳಲಿದೆ.

ಮೂರನೇ ಶಕ್ತಿಯ ಕುಸಿತ

ಒಂದು ಕಾಲದಲ್ಲಿ ಬಂಗಾಳವನ್ನು ಆಳಿದ್ದ ಎಡರಂಗ ಮತ್ತು ಕಾಂಗ್ರೆಸ್ ಈ ಬಾರಿ ಸಂಪೂರ್ಣವಾಗಿ ಅಂಚಿಗೆ ತಳ್ಳಲ್ಪಟ್ಟಿವೆ. ಇದು ಟಿಎಂಸಿ ವಿರೋಧಿ ಮತಗಳು ಬಿಜೆಪಿಯತ್ತ ಕ್ರೋಢೀಕರಣಗೊಳ್ಳಲು ಕಾರಣವಾಗಿದೆ. ಈ ಬದಲಾವಣೆ, ರಾಜ್ಯದ ಚುನಾವಣಾ ಲೆಕ್ಕಾಚಾರಗಳನ್ನು ಸಂಪೂರ್ಣವಾಗಿ ಬದಲಿಸಿದೆ.

ದೀದಿಗೆ ಮುಖಭಂಗ

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯ ಮತ ಎಣಿಕೆಗೆ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ವಲಯದ ಸಂಸ್ಥೆಗಳ(ಪಿಎಸ್‌ಯು) ಸಿಬ್ಬಂದಿ ನಿಯೋಜಿಸುವ ಚುನಾವಣಾ ಆಯೋಗದ ನಿರ್ಧಾರಕ್ಕೆ ಸುಪ್ರೀಂ ಕೋರ್ಟ್ ಹಸ್ತಕ್ಷೇಪ ಮಾಡಲು ನಿರಾಕರಿಸಿದ್ದರಿಂದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮುಖಭಂಗ ಅನುಭವಿಸಿದ್ದರು.

ಕಲ್ಯಾಣ ಯೋಜನೆಗಳು, ಆಡಳಿತ ವಿರೋಧಿ ಅಲೆ

ತೃಣಮೂಲ ಕಾಂಗ್ರೆಸ್‌ನ(ಟಿಎಂಸಿ) ರಕ್ಷಣಾತ್ಮಕ ಹೋರಾಟದ ಕೇಂದ್ರಬಿಂದುವಾಗಿರುವುದು ಅಲ್ಲಿನ ಬಲಿಷ್ಠ ಕಲ್ಯಾಣ ಯೋಜನೆಗಳು. ಮಹಿಳೆಯರಿಗೆ ನೇರ ನಗದು ವರ್ಗಾವಣೆ ಮಾಡುವ 'ಲಕ್ಷ್ಮೀರ್ ಭಂಡಾರ್'ನಂತಹ ಕಾರ್ಯಕ್ರಮಗಳು ಮಮತಾ ಬ್ಯಾನರ್ಜಿ ಅವರಿಗೆ ಬೆಂಬಲ ಒದಗಿಸಿವೆ. ರಾಜ್ಯದಲ್ಲಿ ಮಹಿಳಾ ಮತದಾರರ ಸಂಖ್ಯೆ 3.44 ಕೋಟಿಗೆ ತಲುಪಿದ್ದು, ಫಲಿತಾಂಶ ನಿರ್ಧರಿಸುವಲ್ಲಿ ಅವರ ಪಾತ್ರವೇ ಅತ್ಯಂತ ಪ್ರಮುಖವಾಗಿದೆ. ಇನ್ನೊಂದೆಡೆ, ಬಿಜೆಪಿ ಉತ್ತರ ಬಂಗಾಳದಲ್ಲಿ ತನ್ನ ಹಿಡಿತವನ್ನು ಬಲಪಡಿಸಿಕೊಳ್ಳುವ ಜತೆಗೆ ದಕ್ಷಿಣದ ಟಿಎಂಸಿ ಭದ್ರಕೋಟೆಯಾದ ಪ್ರೆಸಿಡೆನ್ಸಿ ವಿಭಾಗವನ್ನು ಭೇದಿಸುವುದು ಕೇಸರಿ ಪಡೆಯ ತಂತ್ರವಾಗಿತ್ತು.

ಕಿರುಸುದ್ದಿ

ಖಲಿಸ್ತಾನಿ ಧ್ವಜ ಪ್ರದರ್ಶನ: ಗಾಯನ ನಿಲ್ಲಿಸಿದ ದಿಲ್ಜಿತ್

ಕ್ಯಾಲ್ಗರಿ: ಪ್ರಸಿದ್ಧ ಪಂಜಾಬಿ ಗಾಯಕ ದಿಲ್ಜಿತ್ ದೋಸಾಂಜ್ ಅವರ ಔರಾ ಟೂರ್ ಅಂಗವಾಗಿ ಕೆನಡಾದ ಕ್ಯಾಲ್ಗರಿಯಲ್ಲಿ ಸಂಗೀತ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ಕೆಲವು ಪ್ರೇಕ್ಷಕರು ಖಲಿಸ್ತಾನಿ ಧ್ವಜ ತೋರಿಸಿ ವಿರೋಧಿಸಿದ್ದು, ದಿಲ್ಜಿತ್ ತಕ್ಷಣವೇ ತಮ್ಮ ಕಾರ್ಯಕ್ರಮವನ್ನು ಸ್ಥಗಿತಗೊಳಿಸಿದ್ದಾರೆ. ಸಿಖ್ ಸಮುದಾಯದ ಟೀಕೆಗೆ ಪ್ರತಿಕ್ರಿಯಿಸಿದ ದಿಲ್ಜಿತ್, ಎಲ್ಲೇ ಹೋದರೂ ಯಾವುದೇ ವೇದಿಕೆ ಸಿಕ್ಕರೂ ಪಂಜಾಬ್ ಬಗ್ಗೆ ಮಾತನಾಡುತ್ತೇನೆ. ಇನ್ನು ಎಷ್ಟು (ಖಲಿಸ್ತಾನಿ) ಧ್ವಜ ಪ್ರದರ್ಶಿಸುವಿರೋ ಪ್ರದರ್ಶಿಸಿ ಎಂದು ಹೇಳಿದ್ದಾರೆ.

551 ನಗರಗಳು, 14 ವಿದೇಶಿ ಕೇಂದ್ರಗಳಲ್ಲಿ ನೀಟ್ ಪರೀಕ್ಷೆ

ಹೊಸದಿಲ್ಲಿ: ದೇಶದಾದ್ಯಂತ 551 ನಗರಗಳಲ್ಲಿ ಹಾಗೂ 14 ವಿದೇಶಿ ನಗರಗಳಲ್ಲಿ ಭಾನುವಾರ ನೀಟ್-ಯುಜಿ 2026 ಪರೀಕ್ಷೆ ಸುಸೂತ್ರವಾಗಿ ನಡೆಯಿತು. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಪರೀಕ್ಷೆಯ ಸಿದ್ಧತೆಗಳನ್ನು ಪರಿಶೀಲಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಮುಖ್ಯ ಕಚೇರಿಗೆ ಭೇಟಿ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್‌ನಿಂದ ಅಮೆರಿಕದ ಫೈಟರ್ ಜೆಟ್‌ಗಳ ಖರೀದಿ

ಜೆರುಸಲೇಂ: ಇಸ್ರೇಲ್ ರಕ್ಷಣಾ ಸಚಿವಾಲಯ ತನ್ನ ವಾಯುಪಡೆಯನ್ನು ಬಲಪಡಿಸಲು ಅಮೆರಿಕದ ಲಾಕ್ಹೀಡ್ ಮಾರ್ಟಿನ್ ಮತ್ತು ಬೋಯಿಂಗ್ ಕಂಪನಿಗಳಿಂದ ಸುಧಾರಿತ ಎಫ್-35 ಮತ್ತು ಎಫ್-15ಐಎ ಯುದ್ಧ ವಿಮಾನಗಳನ್ನು ಖರೀದಿಸುವ ಒಪ್ಪಂದವನ್ನು ಅಂತಿಮಗೊಳಿಸಿದೆ. ಈ ಒಪ್ಪಂದದ ಪ್ರಕಾರ, ಲಾಕ್ಹೀಡ್ ಮಾರ್ಟಿನ್‌ನಿಂದ 3 ಬಿಲಿಯನ್ ಡಾಲರ್ ಮೌಲ್ಯದ 25 ಎಫ್-35 ಸ್ಟೆಲ್ತ್ ಫೈಟರ್‌ಗಳನ್ನು ಖರೀದಿಸಲಾಗುತ್ತದೆ. ಇದರ ಜೊತೆಗೆ, 25 ಎಫ್-15ಐಎ ವಿಮಾನಗಳಿಗಾಗಿ ಬೋಯಿಂಗ್ ಸಂಸ್ಥೆಯೊಂದಿಗೆ 5.2 ಬಿಲಿಯನ್ ಡಾಲರ್ ಒಪ್ಪಂದಕ್ಕೆ ಸಹಿ ಹಾಕಲಾಗಿದೆ. ಭವಿಷ್ಯದಲ್ಲಿ ಇನ್ನೂ 25 ಎಫ್-15 ವಿಮಾನಗಳನ್ನು ಖರೀದಿಸುವ ಅವಕಾಶವೂ ಇರಲಿದೆ. ಅಮೆರಿಕ ಇಸ್ರೇಲ್‌ಗೆ ನೀಡುವ ಮಿಲಿಟರಿ ನೆರವಿನ ಹಣವನ್ನು ಇದಕ್ಕಾಗಿ ಬಳಸಲಾಗುತ್ತಿದೆ. ಎಫ್-15ಐಎ ವಿಮಾನಗಳ ವಿತರಣೆ 2031ರಿಂದ ಪ್ರಾರಂಭವಾಗಲಿದ್ದು, ಪ್ರತಿ ವರ್ಷ ನಾಲ್ಕರಿಂದ ಆರು ವಿಮಾನಗಳು ಬರಲಿವೆ. ಎಫ್-35 ವಿಮಾನಗಳ ವಿತರಣೆ 2028ರಿಂದ ಆರಂಭವಾಗಲಿದ್ದು, ವರ್ಷಕ್ಕೆ ಮೂರರಿಂದ ಐದು ವಿಮಾನಗಳು ಪೂರೈಕೆಯಾಗಲಿವೆ. ಈ ವಿಮಾನಗಳಲ್ಲಿ ಇಸ್ರೇಲ್ ಅಭಿವೃದ್ಧಿಪಡಿಸಿದ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಅಳವಡಿಸಲಾಗುತ್ತದೆ. ರಕ್ಷಣಾ ಸಚಿವಾಲಯದ ಮಹಾನಿರ್ದೇಶಕ ಇಯಾಲ್ ಜಮೀರ್ ಈ ಖರೀದಿ ದೀರ್ಘಕಾಲದ ದೃಷ್ಟಿಕೋನವನ್ನು ಒಳಗೊಂಡಿದೆ. ಪ್ರಾದೇಶಿಕ ಉದ್ವಿಗ್ನತೆ ಮತ್ತು ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆಗಳ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಹಳೆಯ ವಿಮಾನಗಳನ್ನು ಹಂತ ಹಂತವಾಗಿ ಬದಲಿಸಿ ವಾಯುಪಡೆಯನ್ನು ಆಧುನೀಕರಿಸುವುದು ಇದರ ಮುಖ್ಯ ಉದ್ದೇಶ ಎಂದಿದ್ದಾರೆ.

ದಿಲ್ಲಿ ವಸತಿ ಕಟ್ಟಡದಲ್ಲಿ ಬೆಂಕಿ: 9 ಜನರ ಸಾವು

ಹೊಸದಿಲ್ಲಿ: ಪೂರ್ವ ದಿಲ್ಲಿಯ ವಿವೇಕ್ ವಿಹಾರ್ ಪ್ರದೇಶದ ನಾಲ್ಕು ಅಂತಸ್ತಿನ ವಸತಿ ಸಮುಚ್ಚಯವೊಂದರಲ್ಲಿ ಭಾನುವಾರ ಮುಂಜಾನೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಒಂದೂವರೆ ವರ್ಷದ ಮಗು ಸೇರಿದಂತೆ ಒಂಬತ್ತು ಜನರು ಮೃತಪಟ್ಟಿದ್ದಾರೆ. ಇತರೆ ಇಬ್ಬರು ಗಾಯಗೊಂಡಿದ್ದಾರೆ.

ಮುಂಜಾನೆ ಸುಮಾರು 4 ಗಂಟೆಗೆ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಕಾಣಿಸಿಕೊಂಡ ಬೆಂಕಿ ನಂತರ ಮೂರು ಮತ್ತು ನಾಲ್ಕನೇ ಅಂತಸ್ತಿಗೆ ವ್ಯಾಪಿಸಿತು. 14 ಅಗ್ನಿಶಾಮಕ ವಾಹನಗಳು ಸತತ ಎರಡು ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಬೆಳಗ್ಗೆ 6 ಗಂಟೆಗೆ ಬೆಂಕಿಯನ್ನು ಹತೋಟಿಗೆ ತಂದವು. ರಕ್ಷಣಾ ತಂಡ, ಕಟ್ಟಡದಲ್ಲಿದ್ದ ಹನ್ನೆರಡಕ್ಕೂ ಹೆಚ್ಚು ಜನರನ್ನು ರಕ್ಷಿಸಿದ್ದು, ಗಾಯಾಳುಗಳನ್ನು ಗುರು ತೇಗ್ ಬಹದ್ದೂರ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೃತರನ್ನು ಅರವಿಂದ್ ಜೈನ್ ಕುಟುಂಬದ ಐವರು, ನಿತಿನ್ ಜೈನ್ ಕುಟುಂಬದ ಮೂವರು ಮತ್ತು ಶಿಖಾ ಜೈನ್ ಎಂದು ಗುರುತಿಸಲಾಗಿದೆ. ಬೆಂಕಿ ನಂದಿಸಿದ ನಂತರ ಶೋಧ ಕಾರ್ಯ ನಡೆಸಲಾಯಿತೆಂದು ಡಿಸಿಪಿ ರಾಜೇಂದ್ರ ಪ್ರಸಾದ್ ಮೀನಾ ತಿಳಿಸಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣ ತಿಳಿದುಬಂದಿಲ್ಲವಾದರೂ, ಎಸಿ ಸ್ಫೋಟದಿಂದಾಗಿ ಈ ಘಟನೆ ಸಂಭವಿಸಿರಬಹುದು ಎಂದು ಪ್ರತ್ಯಕ್ಷದರ್ಶಿಗಳು ಶಂಕಿಸಿದ್ದಾರೆ. ದಿಲ್ಲಿ ಮುಖ್ಯಮಂತ್ರಿ ರೇಖಾ ಗುಪ್ತಾ, ಈ ಘಟನೆಗೆ ತೀವ್ರ ಸಂತಾಪ ಸೂಚಿಸಿದ್ದು, ಸಂತ್ರಸ್ತ ಕುಟುಂಬಗಳಿಗೆ ಅಗತ್ಯ ನೆರವು ನೀಡಲು ಸೂಚಿಸಿದ್ದಾರೆ.

ಹಾರ್ಮುಜ್ ದಾಟಿದ ಭಾರತದ ಅನಿಲ ನೌಕೆ

ಹೊಸದಿಲ್ಲಿ: ಭಾರತಕ್ಕೆ ಎಲ್‌ಪಿಜಿ ಸಾಗಿಸುತ್ತಿದ್ದ ಟ್ಯಾಂಕರ್ ಹಾರ್ಮುಜ್ ಜಲಸಂಧಿಯನ್ನು ಯಶಸ್ವಿಯಾಗಿ ದಾಟಿದ್ದು, ಈಗ ದೇಶದತ್ತ ಪ್ರಯಾಣ ಮುಂದುವರಿಸಿದೆ. ಮಾರ್ಷಲ್ ದ್ವೀಪಗಳ ಧ್ವಜ ಹೊತ್ತಿರುವ ಎಂಟಿ ಸರ್ವಶಕ್ತಿ ಹೆಸರಿನ ಈ ಗ್ಯಾಸ್ ಟ್ಯಾಂಕರ್‌ನಲ್ಲಿ 46,313 ಟನ್ ಎಲ್‌ಪಿಜಿ ಭರ್ತಿಯಾಗಿದ್ದು, 20 ಸಿಬ್ಬಂದಿ ಇದ್ದಾರೆ. ಇವರಲ್ಲಿ 18 ಮಂದಿ ಭಾರತೀಯರು ಸೇರಿದ್ದಾರೆ. ಮೇ 2ರಂದು ಪ್ರಮುಖ ಸಾಗರ ದ್ವಾರವಾದ ಹೋರ್ಮುಜ್ ಜಲಸಂಧಿ ದಾಟಿದ ಈ ಹಡಗು ಮೇ 13ರೊಳಗೆ ವಿಶಾಖಪಟ್ಟಣಂ ಬಂದರಿಗೆ ತಲುಪುವ ನಿರೀಕ್ಷೆಯಿದೆ. ಈ ಸರಕು ದೇಶದ ಅರ್ಧ ದಿನದ ಅವಶ್ಯಕತೆಯನ್ನು ಪೂರೈಸುವಷ್ಟು ಇದ್ದು, ಎರಡು ತಿಂಗಳಿಂದ ಮುಂದುವರಿದಿರುವ ಪಶ್ಚಿಮ ಏಷ್ಯಾ ಸಂಘರ್ಷದ ಪರಿಣಾಮ ಉಂಟಾದ ಸರಬರಾಜು ಅಡಚಣೆಗಳನ್ನು ಭಾಗಶಃ ನಿವಾರಿಸಲು ಸಹಕಾರಿಯಾಗಲಿದೆ. ಹಡಗು ಟ್ರ್ಯಾಕಿಂಗ್ ಮಾಹಿತಿ ಪ್ರಕಾರ, ಭಾನುವಾರ ಸಂಜೆ ಈ ಟ್ಯಾಂಕರ್ ಒಮಾನ್ ಕೊಲ್ಲಿಯಲ್ಲಿ ಸಂಚರಿಸುತ್ತಿತ್ತು. ಪರ್ಷಿಯನ್ ಗಲ್ಫ್ ಮತ್ತು ಭಾರತೀಯ ಬಂದರುಗಳ ನಡುವೆ ಹಿಂದಿನಿಂದಲೂ ಸಂಚಾರ ನಡೆಸುತ್ತಿರುವ ಈ ಭಾರೀ ಗ್ಯಾಸ್ ಟ್ಯಾಂಕರ್ ಅನ್ನು ಸರ್ಕಾರಿ ಸಂಸ್ಥೆ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಚಾರ್ಟರ್ ಮಾಡಿಕೊಂಡಿದೆ. ಇರಾನ್‌ಗೆ ಸಂಬಂಧಿಸಿದ ಹಡಗುಗಳ ಮೇಲೆ ಅಮೆರಿಕದ ನಿರ್ಬಂಧ ಆರಂಭವಾದ ನಂತರ ಯುದ್ಧ ವಲಯವನ್ನು ದಾಟಿದ ಭಾರತಕ್ಕೆ ಸಂಬಂಧಿಸಿದ ಮೊದಲ ಟ್ಯಾಂಕರ್ ಇದಾಗಿದೆ. ಈ ನಡುವೆ ಹೋರ್ಮುಜ್ ಜಲಸಂಧಿಯ ಪಶ್ಚಿಮ ಭಾಗದಲ್ಲಿ ಇನ್ನೂ 14 ಭಾರತೀಯ ಹಡಗುಗಳು ಸಿಲುಕಿಕೊಂಡಿವೆ.

ಪಾಕ್‌ನ ಫೆಡರಲ್ ಸಿವಿಲ್ ಸರ್ವಿಸ್‌ಗೆ ಹಿಂದುಗಳ ಆಯ್ಕೆ


ಇಸ್ಲಾಮಾಬಾದ್: ತೀರಾ ಅಚ್ಚರಿಯ ಬೆಳವಣಿಗೆಯಲ್ಲಿ, ಪಾಕಿಸ್ತಾನದ ಅಲ್ಪಸಂಖ್ಯಾತ ಹಿಂದು ಸಮುದಾಯದ ಇಬ್ಬರು ಯುವಕರು, ಪಾಕಿಸ್ತಾನದ ಫೆಡರಲ್ ಸಿವಿಲ್ ಸರ್ವಿಸ್‌ಗೆ ಆಯ್ಕೆಯಾಗಿದ್ದಾರೆ. ಪಾಕ್‌ನ ಫೆಡರಲ್ ಪಬ್ಲಿಕ್ ಸರ್ವಿಸ್ ಕಮಿಷನ್(ಎಫ್‌ಪಿಎಸ್‌ಸಿ)ಪ್ರಕಟಿಸಿರುವ ಫಲಿತಾಂಶ ಪಟ್ಟಿಯಲ್ಲಿ ಸಿಂಧ್ ಪ್ರಾಂತ್ಯದ ಜೀವನ್ ರೆಬರಿ ಮತ್ತು ಖೇಮ್‌ಚಂದ್ ಜಂದೋರಾ ಹೆಸರಿವೆ. ಸೆಂಟ್ರಲ್ ಸುಪೀರಿಯರ್ ಸರ್ವಿಸಸ್‌ಗೆ(ಸಿಎಸ್‌ಎಸ್) ಸೇರ್ಪಡೆಯಾಗಲಿರುವ 170 ಅಭ್ಯರ್ಥಿಗಳ ಪೈಕಿ ಈ ಹಿಂದು ಯುವಕರು ಒಳಗೊಂಡಿದ್ದಾರೆ. ಈ ಸುದ್ದಿ ವಿಶೇಷತೆ ಪಡೆದಿರುವುದು ಯಾಕೆಂದರೆ, ಪಾಕ್‌ನ ಸರ್ಕಾರಿ ಹುದ್ದೆಗಳಿಗೆ ಹಿಂದುಗಳ ನೇಮಕ ಐತಿಹಾಸಿಕವಾಗಿ ತೀರಾ ಕಡಿಮೆ. ಪಾಕ್‌ನಲ್ಲಿನ ಹಿಂದುಗಳ ಒಟ್ಟು ಜನಸಂಖ್ಯೆ 3.8 ಮಿಲಿಯನ್. ಪಾಕ್‌ನ ಬೃಹತ್ ಅಲ್ಪಸಂಖ್ಯಾತ ಸಮುದಾಯವಾಗಿದ್ದಾರೆ ಹಿಂದುಗಳು. ಬಹುತೇಕ ಹಿಂದುಗಳು ವಾಸವಿರೋದು ಸಿಂಧ್ ಪ್ರಾಂತ್ಯದಲ್ಲಿ ಎಂದು 2023ರ ಜನಸಂಖ್ಯಾ ಗಣತಿ ತಿಳಿಸಿದೆ. ಪಾಕ್‌ನ ಫೆಡರಲ್ ಸರ್ವಿಸ್ ಕಮಿಷನ್ ಲಿಖಿತ ಪರೀಕ್ಷೆಗೆ ದೇಶಾದ್ಯಂತದ 12,792ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು.

ನೀತಿ ಆಯೋಗದ ಪೂರ್ಣಾವಧಿ ಸದಸ್ಯರನ್ನಾಗಿ ನೇಮಿಸಿದ ಪ್ರಧಾನಿ

ರಾಜ್ಯದ ಬಾಲಸುಬ್ರಹ್ಮಣ್ಯಂಗೆ ಉನ್ನತ ಹುದ್ದೆ

ಹೊಸದಿಲ್ಲಿ: ಕರ್ನಾಟಕದ ಡಾ.ಆರ್.ಬಾಲಸುಬ್ರಹ್ಮಣ್ಯಂ ಮತ್ತು ಡಾ. ಜೋರಂ ಅನಿಯಾ ಅವರನ್ನು ನೀತಿ ಆಯೋಗದ ಪೂರ್ಣಾವಧಿ ಸದಸ್ಯರನ್ನಾಗಿ ನೇಮಕ ಮಾಡಲು ಪ್ರಧಾನಿ ನರೇಂದ್ರ ಮೋದಿ ಅನುಮೋದನೆ ನೀಡಿದ್ದಾರೆ.


ಈ ಹೊಸ ನೇಮಕಾತಿಗಳೊಂದಿಗೆ ಸರ್ಕಾರದ ಥಿಂಕ್ ಟ್ಯಾಂಕ್ ನೀತಿ ಆಯೋಗದ ಪೂರ್ಣಾವಧಿ ಸದಸ್ಯರ ಸಂಖ್ಯೆ ಏಳಕ್ಕೆ ಏರಿಕೆಯಾಗಿದೆ. ಏಪ್ರಿಲ್ 24, 2026ರಂದು ಹೊರಡಿಸಲಾದ ಸಂಪುಟ ಸಚಿವಾಲಯದ ಅಧಿಸೂಚನೆಯ ಮುಂದುವರಿದ ಭಾಗವಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಅಶೋಕ್ ಕುಮಾರ್ ಲಹಿರಿ ಆಯೋಗದ ಉಪಾಧ್ಯಕ್ಷರಾಗಿದ್ದು, ಕೆ.ವಿ. ರಾಜು, ಎಂ.ಶ್ರೀನಿವಾಸ್, ಅಭಯ್ ಕರಂದಿಕರ್, ಗೋವರ್ಧನ್ ದಾಸ್ ಮತ್ತು ರಾಜೀವ್ ಗೌಬಾ ಇತರ ಪೂರ್ಣಾವಧಿ ಸದಸ್ಯರಾಗಿದ್ದಾರೆ.



ಶಿಕ್ಷಣ ತಜ್ಞೆ ಡಾ.ಜೋರಂ ಅನಿಯಾ: ಅರುಣಾಚಲ ಪ್ರದೇಶದ ಡಾ. ಅನಿಯಾ, ಸಂಶೋಧನೆ ಮತ್ತು ಸಾರ್ವಜನಿಕ ನೀತಿ ನಿರೂಪಣೆಯಲ್ಲಿ 18 ವರ್ಷಗಳ ಅನುಭವ ಹೊಂದಿದ್ದಾರೆ. ಇವರು ಅರುಣಾಚಲ ಪ್ರದೇಶದ ಖಾಸಗಿ ಶಿಕ್ಷಣ ನಿಯಂತ್ರಣ ಆಯೋಗದ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ನ್ಯಿಶಿ ಸಮುದಾಯದಿಂದ ಪಿಎಚ್‌ಡಿ ಪದವಿ ಪಡೆದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಇವರದ್ದಾಗಿದ್ದು, ದೇಶೀಯ ಜ್ಞಾನ ಪದ್ಧತಿಗಳ ಕುರಿತು ಹಲವು ಪುಸ್ತಕಗಳನ್ನು ಬರೆದಿದ್ದಾರೆ.

ವಿದ್ವಾಂಸ, ಲೇಖಕ, ವೈದ್ಯ ಆರ್. ಬಾಲಸುಬ್ರಹ್ಮಣ್ಯಂ

ಡಾ.ಬಾಲಸುಬ್ರಹ್ಮಣ್ಯಂ, ವೈದ್ಯರು, ಲೇಖಕರು ಮತ್ತು ಅಭಿವೃದ್ಧಿ ಕಾರ್ಯಕರ್ತರು. ಇವರು ಮೈಸೂರನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡು ಹಲವು ಸಾಮಾಜಿಕ ಚಟುವಟಿಕೆ ನಡೆಸುತ್ತಿದ್ದಾರೆ. ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್(ಎಸ್‌ವಿವೈಎಂ) ಮತ್ತು ಗ್ರಾಸ್‌ರೂಟ್ಸ್ ರಿಸರ್ಚ್ ಅಂಡ್ ಅಡ್ವೊಕಸಿ ಮೂವ್‌ಮೆಂಟ್ (ಜಿಆರ್‌ಎಎಂ) ಸಂಸ್ಥೆಗಳ ಸಂಸ್ಥಾಪಕರು. ಹಾರ್ವರ್ಡ್ ವಿಶ್ವವಿದ್ಯಾಲಯದ ಹಾರ್ವರ್ಡ್ ಕೆನಡಿ ಸ್ಕೂಲ್‌ನಿಂದ ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಇವರು, ಸಾರ್ವಜನಿಕ ನೀತಿ ವಿಶ್ಲೇಷಣೆಯಲ್ಲಿ ಪರಿಣತರು.



ಹಿಂಸಾಚಾರಕ್ಕೆ ಹಣ ಸಂಗ್ರಹ ಹಿನ್ನೆಲೆ ಕೆನಡಾದಿಂದ ಮಹತ್ವದ ನಿರ್ಧಾರ

ಖಲಿಸ್ತಾನಿ ಉಗ್ರರಿಗೆ ಭದ್ರತಾ ಅಪಾಯ ಮುದ್ರೆ

ಒಟ್ಟಾವಾ: ಕೆನಡಾದಲ್ಲಿ ಕಾರ್ಯನಿರ್ವಹಿಸುತ್ತಿರುವ ಖಲಿಸ್ತಾನಿ ಉಗ್ರ ಗುಂಪುಗಳು ದೇಶದ ರಾಷ್ಟ್ರೀಯ ಭದ್ರತೆಗೆ ಗಂಭೀರ ಅಪಾಯವಾಗಿವೆ ಎಂದು ಕೆನಡಾದ ಗುಪ್ತಚರ ಸಂಸ್ಥೆ ಎಚ್ಚರಿಕೆ ನೀಡಿದೆ. ತಮ್ಮ ಹಿಂಸಾತ್ಮಕ ಅಜೆಂಡಾವನ್ನು ಮುಂದುವರಿಸಲು ಕೆಲವು ಉಗ್ರರು ಕೆನಡಾದ ಸಂಸ್ಥೆಗಳನ್ನೇ ದುರುಪಯೋಗ ಪಡಿಸಿಕೊಳ್ಳುತ್ತಿರುವುದಾಗಿ ವರದಿ ಎಚ್ಚರಿಸಿದೆ.

ಕೆನಡಾದ ಭದ್ರತಾ ಗುಪ್ತಚರ ಸಂಸ್ಥೆಯ 2025ರ ಸಾರ್ವಜನಿಕ ವರದಿಯಲ್ಲಿ, ಕೆನಡಾ ಆಧಾರಿತ ಖಲಿಸ್ತಾನಿ ಉಗ್ರರ ಸಿಬಿಕೆಇ ಹಿಂಸಾತ್ಮಕ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ ಇನ್ನೂ ಮುಂದುವರಿದಿದ್ದು, ಇದು ದೇಶದ ಭದ್ರತೆಗೆ ಮತ್ತು ಕೆನಡಾದ ಹಿತಾಸಕ್ತಿಗಳಿಗೆ ಧಕ್ಕೆಯಾಗಿದೆ ಎಂದು ಉಲ್ಲೇಖಿಸಲಾಗಿದೆ.

ಕೆಲವು ಉಗ್ರರು ಕೆನಡಾದ ನಾಗರಿಕರೊಂದಿಗೆ ಸಂಪರ್ಕ ಹೊಂದಿದ್ದು, ಸಂಸ್ಥೆಗಳ ಮೂಲಕ ತಮ್ಮ ಪ್ರಚಾರ ನಡೆಸುವುದಲ್ಲದೆ, ಹಿಂಸೆಯ ಅರಿವಿಲ್ಲದ ಸಮುದಾಯದ ಸದಸ್ಯರಿಂದ ಹಣ ಸಂಗ್ರಹಿಸಿ ಅದನ್ನು ಹಿಂಸಾತ್ಮಕ ಚಟುವಟಿಕೆಗಳಿಗೆ ಬಳಸುತ್ತಿರುವುದಾಗಿ ವರದಿ ತಿಳಿಸಿದೆ.

ಖಲಿಸ್ತಾನಿ ಉಗ್ರ ಸಂಘಟನೆಗಳು ಭಾರತದಲ್ಲೇ ಪ್ರತ್ಯೇಕ ರಾಷ್ಟ್ರ ಸ್ಥಾಪನೆಗೆ ಒತ್ತಾಯಿಸುತ್ತಿದ್ದು, ವಿಭಜನೆ ಚಟುವಟಿಕೆಗಳ ಹಿನ್ನೆಲೆ ಅವುಗಳನ್ನು ಭಾರತ ಸರ್ಕಾರ ಭಯೋತ್ಪಾದಕ ಸಂಘಟನೆಗಳೆಂದು ಘೋಷಿಸಿದೆ.

ಈ ವರದಿ, 1985ರಲ್ಲಿ ನಡೆದ ಏರ್ ಇಂಡಿಯಾ ವಿಮಾನ 182 ಸ್ಫೋಟದ 40ನೇ ವಾರ್ಷಿಕೋತ್ಸವದ ಒಂದು ವರ್ಷದ ನಂತರ ಹೊರಬಂದಿದೆ. ಈ ದಾಳಿಯಲ್ಲಿ 329 ಮಂದಿ ಮೃತಪಟ್ಟಿದ್ದು, ಇದು ಕೆನಡಾ ಇತಿಹಾಸದ ಅತಿ ಭೀಕರ ಉಗ್ರ ದಾಳಿ ಎಂದು ವರದಿ ಉಲ್ಲೇಖಿಸಿದೆ.



'ಹಿಂಸಾಚಾರವನ್ನು ಉತ್ತೇಜಿಸುವುದು, ಹಣ ಸಂಗ್ರಹಿಸುವುದು ಅಥವಾ ಭಾರತದಲ್ಲಿ ದಾಳಿಗಳನ್ನು ಯೋಜಿಸುವ ಉದ್ದೇಶದಿಂದ ಕೆನಡಾವನ್ನು ಆಧಾರವಾಗಿ ಬಳಸುವ ಕೆಲವೇ ವ್ಯಕ್ತಿಗಳನ್ನಷ್ಟೇ ಖಲಿಸ್ತಾನಿ ಅತಿರೇಕಿಗಳೆಂದು ಪರಿಗಣಿಸಲಾಗಿದೆ,' ಎಂದು ವರದಿ ತಿಳಿಸಿದೆ.

ಪ್ರಸ್ತುತ ಪ್ರಧಾನಿ ಮಾರ್ಕ್ ಕಾರ್ನಿ ಅವರ ನೇತೃತ್ವದಲ್ಲಿ, ಭಾರತ ಮತ್ತು ಕೆನಡಾ ನಡುವಿನ ದ್ವಿಪಕ್ಷೀಯ ಸಂಬಂಧಗಳನ್ನು ಪುನರ್‌ನಿರ್ಮಿಸಲು ಎರಡೂ ದೇಶಗಳು ಪ್ರಯತ್ನಿಸುತ್ತಿವೆ. ಇದರ ಬೆನ್ನಲ್ಲೇ ಖಲಿಸ್ತಾನಿ ಉಗ್ರರ ವಿರುದ್ಧ ಇಂಥ ವರದಿ ಬಂದಿದೆ.

ಮೇ 3 – 300ನೇ ವಾರದ ಸ್ವಚ್ಛತೆ ಹೊಸ ಭಾಷ್ಯ ಬರೆದ ಪಂಚವರ್ಣದ 300ನೇ ವಾರದ ಅಭಿಯಾನ

1,770 ಕೆ.ಜಿ ತ್ಯಾಜ್ಯ ಕಡಲ ಕಿನಾರೆಯಿಂದ ಮುಕ್ತ





ಕೋಟ: ರಾಜ್ಯದಲ್ಲೆ ಹೊಸ ಭಾಷ್ಯ ಬರೆದ ಪಂಚವರ್ಣದ ಸಮುದ್ರ ತಟ ಸ್ವಚ್ಛತಾ ಅಭಿಯಾನ ನನ್ನ ಜೀವನದಲ್ಲಿ ಕಂಡ ಅಪರೂಪದ ಕಾರ್ಯಕ್ರಮಗಳಲ್ಲೊಂದು ಎಂದು ಉಡುಪಿ ಮತ್ತು ಚಿಕ್ಕಮಗಳೂರು ಲೋಕಸಭಾ ಸಂಸದ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಭಾನುವಾರ ಕೋಡಿ ಗ್ರಾಮಪಂಚಾಯತ್‌ನಲ್ಲಿ ಕೋಟದ ಪಂಚವರ್ಣ ಯುವಕ ಮಂಡಲ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲದ ನೇತೃತ್ವದಲ್ಲಿ ಜಿಲ್ಲಾಡಳಿತ ಹಾಗೂ ಸ್ಥಳೀಯಾಡಳಿತ, ಗೀತಾನಂದ ಫೌಂಡೇಶನ್ ಮಣೂರು, ಕೋಡಿ ಗ್ರಾಮಪಂಚಾಯತ್, ಕ್ಯಾಪ್ಸ್ ಫೌಂಡೇಶನ್ ಬೆಂಗಳೂರು, ಶ್ರೀಕೃಷ್ಣ ಪ್ರಸಾದ್ ಕ್ಯಾಶು, ಸ್ಟೀಲ್ ಇಂಡಸ್ಟ್ರೀಸ್ ವಂಡಾರು ಇವರುಗಳ ಸಹಯೋಗದೊಂದಿಗೆ 300ನೇ ಭಾನುವಾರದ ಪರಿಸರಸ್ನೇಹಿ ಬೃಹತ್ ಬೀಚ್ ಸ್ವಚ್ಛತಾ ಅಭಿಯಾನವನ್ನು ಉದ್ಘಾಟಿಸಿ ಸಂಸದರು ಮಾತನಾಡಿದರು.

ಇದೊಂದು ಸಂಘಟನೆ ಈ ರೀತಿಯ ನಿರಂತರ ವಾರಗಳ ಸ್ವಚ್ಛತಾ ಕಾರ್ಯ ಇಡೀ ರಾಜ್ಯಕ್ಕೆ ಮಾದರಿಯಾಗಿದೆ. ಅದೇ ರೀತಿ ಉಡುಪಿ ಜಿಲ್ಲೆ ಸ್ವಚ್ಛತೆಯ ವಿಚಾರದಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳಲು ಸಿದ್ಧತೆ ನಡೆಸಿದೆ. ಅದರಂತೆ ನಡೆದರೆ ದೇಶದಲ್ಲೆ ಉಡುಪಿ ಜಿಲ್ಲೆ ಮೊದಲ ಸ್ಥಾನದಲ್ಲಿ ನಿಲ್ಲಲಿದೆ. ಹೆದ್ದಾರಿಗಳಲ್ಲಿ ಕಸ ಎಸೆಯುವ ಮನಸ್ಥಿತಿ ಅತ್ಯಂತ ಹೀನ ಮನಸ್ಥಿತಿಯನ್ನು ತೋರಿಸುತ್ತದೆ ಎಂದರು.

ಉಡುಪಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್ ಮಾತನಾಡಿ, ಸ್ವಚ್ಛತೆಯಲ್ಲಿ ಉಡುಪಿ ಜಿಲ್ಲೆ ಮುಂಚೂಣಿಗೆ ನಿಲ್ಲಲಿದೆ. 300ನೇ ವಾರ ಆಯೋಜನೆಯ ಸ್ವಚ್ಛತಾ ಅಭಿಯಾನ ಹೊಸ ದಿಕ್ಕಿಗೆ ಪ್ರೇರಣೆಯಾಗಲಿದೆ ಎಂದರು.

300ನೇ ವಾರವನ್ನು ತಮ್ಮ ಹುಟ್ಟುಹಬ್ಬಕ್ಕೆ ಸಮರ್ಪಿಸಿದ ಹಿನ್ನೆಲೆಯಲ್ಲಿ ಮಾತನಾಡಿದ ಆನಂದ್ ಸಿ. ಕುಂದರ್, ಸಮಾಜ ಪರಿವರ್ತನೆಗೆ ಈ ಅಭಿಯಾನ ಸಹಕಾರಿಯಾಗಲಿದೆ, ನಮ್ಮ ಕಸ ನಮ್ಮ ಜವಾಬ್ದಾರಿ ಎಂಬುವುದನ್ನು ಅರಿತು ಕಾರ್ಯ ನಿರ್ವಹಿಸಿದರೆ ಇಡೀ ಪರಿಸರ ಸ್ವಚ್ಛವಾಗಿಡಲು ಸಾಧ್ಯ ಎಂದರು. ಇದೇ ವೇಳೆ ನೂರು ವಾರಗಳನ್ನು ಸಂಭ್ರಮಿಸಿಕೊಂಡ ಗೀತಾನಂದ ಫೌಂಡೇಶನ್‌ನ ಆನಂದ ಸೃಷ್ಟಿ ಸಂಯೋಜಕ ಶ್ರೀನಿವಾಸ್ ಕುಂದರ್ ಅವರನ್ನು ಗೌರವಿಸಿ ಅಭಿನಂದಿಸಲಾಯಿತು.

ಸ್ವಚ್ಛತಾ ಅಭಿಯಾನದ ಪ್ರಯುಕ್ತ ಕ್ಯಾಪ್ಸ್ ಫೌಂಡೇಶನ್ ಕೊಡಮಾಡಿದ ಟೀ ಶರ್ಟ್ ಹಾಗೂ ಶ್ರೀಕೃಷ್ಣ ಪ್ರಸಾದ್ ಕ್ಯಾಶು ಇಂಡಸ್ಟ್ರೀಸ್ ನೀಡಿದ ಕ್ಯಾಪ್ ಅನ್ನು ಅನಾವರಣಗೊಳಿಸಲಾಯಿತು.

ಅಧ್ಯಕ್ಷತೆಯನ್ನು ಪಂಚವರ್ಣ ಯುವಕ ಮಂಡಲದ ಅಧ್ಯಕ್ಷ ಮನೋಹರ್ ಪೂಜಾರಿ ವಹಿಸಿದ್ದರು. ಮುಖ್ಯ ಅಭ್ಯಾಗತರಾಗಿ ಜಿಲ್ಲಾಪಂಚಾಯತ್ ಯೋಜನಾಧಿಕಾರಿ ಉದಯ್ ಕುಮಾರ್ ಶೆಟ್ಟಿ, ಜಿಲ್ಲಾ ಪಂಚಾಯತ್ ಸ್ವಚ್ಛ ಭಾರತ್ ಮಿಷನ್ ಸಂಯೋಜಕ ರಘುನಾಥ್, ಶ್ರೀಕೃಷ್ಣಪ್ರಸಾದ್ ಕ್ಯಾಶು, ಸ್ಟೀಲ್ ಇಂಡಸ್ಟ್ರೀಸ್ ಮಾಲಿಕ ಸಂಪತ್ ಕುಮಾರ್ ಶೆಟ್ಟಿ, ಸಂಸದರ ಆಪ್ತ ಸಹಾಯಕ ಹರೀಷ್ ಕುಮಾರ್ ಶೆಟ್ಟಿ, ಬ್ರಹ್ಮಾವರ ತಾ.ಪಂ. ಇಒ ಎಚ್. ವಿ. ಇಬ್ರಾಹಿಂಪುರ, ಮುಂಬೈ ಒಎನ್‌ಜಿಸಿ ನಿವೃತ್ತ ಅಧಿಕಾರಿ ಬನ್ನಾಡಿ ನಾರಾಯಣ ಆಚಾರ್, ಕೋಟ ಸಹಕಾರಿ ವ್ಯವಸಾಯಕ ಸಂಘದ ಅಧ್ಯಕ್ಷ ಡಾ. ಕೃಷ್ಣ ಕಾಂಚನ್, ಕೋಡಿ ಪಂಚಾಯತ್ ಮಾಜಿ ಅಧ್ಯಕ್ಷರಾದ ಗೀತಾ ಖಾರ್ವಿ, ಪ್ರಭಾಕರ್ ಮೆಂಡನ್, ಕೋಟತಟ್ಟು ಪಂಚಾಯತ್ ಮಾಜಿ ಅಧ್ಯಕ್ಷ ಸತೀಶ್ ಕುಂದರ್, ಕೋಟ ಗ್ರಾ.ಪಂ. ಪಿಡಿಒ ಉಮೇಶ್, ಸಾಲಿಗ್ರಾಮ ಪಟ್ಟಣ ಪಂಚಾಯತ್ ಆರೋಗ್ಯ ನಿರೀಕ್ಷಣಾಧಿಕಾರಿ ಮಮತಾ, ಗೆಳೆಯರ ಬಳಗ ಕಾರ್ಕಡ ಅಧ್ಯಕ್ಷ ತಾರಾನಾಥ ಹೊಳ್ಳ, ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾ.ಯೋ ಕೋಟ ವಲಯ ಮೇಲ್ವಿಚಾರಕ ನಾಗೇಶ್, ಪಂಚವರ್ಣ ಮಹಿಳಾ ಮಂಡಲದ ಅಧ್ಯಕ್ಷೆ ಲಲಿತಾ ಪೂಜಾರಿ, ಸ್ಥಾಪಕಾಧ್ಯಕ್ಷ ಶೇವಧಿ ಸುರೇಶ್ ಗಾಣಿಗ ಉಪಸ್ಥಿತರಿದ್ದರು.

ಕೋಡಿ ಪಂಚಾಯತ್ ಪಿಡಿಒ ರವೀಂದ್ರ ರಾವ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪಂಚವರ್ಣ ಸುಜಾತ ಬಾಯರಿ ಸ್ವಾಗತಿಸಿದರು. ಶಿಕ್ಷಕ ಸತೀಶ್ಚಂದ್ರ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಂಯೋಜಕ ರವೀಂದ್ರ ಕೋಟ ವಂದಿಸಿದರು.

5 ವರೆ ಕಿಮೀ 1770.ಕೆ.ಜಿ ತ್ಯಾಜ್ಯ ತೆರವು

ಕೋಡಿ ಗ್ರಾಮಪಂಚಾಯತ್ ಹೊಸಬೇಂಗ್ರೆ ಲೈಟ್ ಹೌಸ್‌ನಿಂದ ಆರಂಭಗೊಂಡ ಈ ಸ್ವಚ್ಛತಾ ಅಭಿಯಾನ ಸಾಲಿಗ್ರಾಮ ಪಟ್ಟಣಪಂಚಾಯತ್, ಕೋಟತಟ್ಟು ಗ್ರಾಮಪಂಚಾಯತ್, ಕೋಟ ಗ್ರಾಮಪಂಚಾಯತ್ ವ್ಯಾಪ್ತಿಯ ಎಲ್ಲಾ ಬೀಚ್‌ಗಳಲ್ಲಿರುವ ಭಾರೀ ಪ್ರಮಾಣದ ಸುಮಾರು 1770 ಕೆ.ಜಿ.ಯ 882 ಚೀಲ ತ್ಯಾಜ್ಯವನ್ನು ಬೀಚ್‌ನಿಂದ ತೆರವುಗೊಳಿಸಲಾಯಿತು.

500 ಅಧಿಕ ಮಂದಿ ಸ್ವಬ್ಬಾಗೃಹಿಗಳು ಭಾಗಿ

ಇದೇ ಮೊದಲ ಬಾರಿ ಈ ಪ್ರಮಾಣದ ದೂರ ಕ್ರಮಿಸುವ ಬೀಚ್ ಕ್ಲಿನಿಂಗ್ ಅಭಿಯಾನ ರಾಜ್ಯದಲ್ಲೆ ಪ್ರಥಮ ಬಾರಿಗೆ ಆಯೋಜನೆಗೊಂಡಿದ್ದು. ಸುಮಾರು 500ಕ್ಕೂ ಅಧಿಕ ಮಂದಿ ಈ ಅಭಿಯಾನದಲ್ಲಿ ಭಾಗಿಯಾಗಿ ಹೊಸ ದಾಖಲೆ ನಿರ್ಮಿಸಿದರು. ಜಿಲ್ಲಾ ಪೊಲೀಸ್ ಇಲಾಖೆ, ಕರಾವಳಿ ಕಾವಲು ಪಡೆ, ಆರೋಗ್ಯ ಕೇಂದ್ರಗಳು ಸೇರಿದಂತೆ ಅನೇಕ ಸಂಸ್ಥೆಗಳು ಕಣ್ಗಾವಲು ವಹಿಸಿದ್ದು ವಿಶೇಷವಾಗಿ ಕಂಡುಬಂತು.

ಯಾವ ಯಾವ ಸಂಘಟನೆ , ಶಿಕ್ಷಣ ಸಂಸ್ಥೆಗಳು ಭಾಗಿ

ಈ ಬೃಹತ್ ಬೀಚ್ ಕ್ಲಿನಿಂಗ್ ಅಭಿಯಾನದಲ್ಲಿ ಈಗಾಗಲೇ ಹಲವು ಸಂಘ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳು ಭಾಗಿಯಾಗಿದು, ಅವುಗಳಲ್ಲಿ ಆಶ್ರೀತ್ ಸಮೂಹ ಶಿಕ್ಷಣ ಸಂಸ್ಥೆಗಳು, ಎಂ.ಐ.ಟಿ ಮಣಿಪಾಲ, ಎಂ.ಐ.ಟಿ ಮೂಡ್ಲಕಟ್ಟೆ ಇನ್ಸ್ಟಿಟ್ಯೂಟ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಉಡುಪಿ ಜಿಲ್ಲೆಯ ವಿವಿಧ ವಲಯ ಒಕ್ಕೂಟ ಇದರ ಶೌರ್ಯ ಟೀಮ್, ಲಕ್ಷ್ಮೀಸೋಮಬಂಗೇರ ಡಿಗ್ರಿ ಕಾಲೇಜು, ವಿವೇಕ ವಿದ್ಯಾಸಂಸ್ಥೆ ಕೋಟ, ಕೋಟತಟ್ಟು, ಕೋಡಿ ಗ್ರಾಮಪಂಚಾಯತ್‌ಗಳ ಸಂಜೀವಿ ಒಕ್ಕೂಟ, ಸ್ತ್ರೀ ಶಕ್ತಿ ಸಂಘಟನೆಗಳು, ಮಾಜಿ ಪಂಚಾಯತ್ ಪ್ರತಿನಿಧಿಗಳು, ಜನತಾ ಸಮೂಹ ಸಂಸ್ಥೆ ಕೋಟ, ಫಾರ್ಚುನ್ ನರ್ಸಿಂಗ್ ಕಾಲೇಜು ಮಾಬುಕಳ, ಗೀತಾನಂದ ಫೌಂಡೇಶನ್ ಮಣೂರು, ಶ್ರೀರಾಮ ಪರ್ವ ಗೆಳೆಯರ ಬಳಗ ಕೋಡಿ, ಪ್ರಗತಿ ಯುವಕ ಮಂಡಲ ಕೋಡಿ, ಸುಮಧುರ ಯುವಕ ಸಂಘ ಕೋಡಿ, ವಿನ್ ಲೈಟ್ ಸ್ಪೋರ್ಟ್ಸ್ ಕ್ಲಬ್ ಪಾರಂಪಳ್ಳಿ, ಅರಮ ವಿಜಯ ಸ್ಪೋರ್ಟ್ಸ್ ಕ್ಲಬ್ ಪಡುಕರೆ, ತೋಳಾರ್ ಓಷಿಯನ್ ಪ್ರಾಡೆಕ್ಟ್ ಪಡುಕರೆ, ಪಾಂಚಜನ್ಯ ಸಂಘ ಪಾರಂಪಳ್ಳಿ, ಅಯೋಧ್ಯಾ ಫ್ರೆಂಡ್ಸ್ ಕೋಡಿ, ಕ್ಲಿನ್ ಕುಂದಾಪುರ, ಕ್ಲಿನ್ ತ್ರಾಸಿ, ಕ್ಲಿನ್ ಕಿನಾರ ಬೈಂದೂರು, ಕೋಡಿ ಗ್ರಾ.ಪಂ, ಕೋಟತಟ್ಟು ಗ್ರಾ.ಪಂ, ಕೋಟ ಗ್ರಾ.ಪಂ, ಸಾಲಿಗ್ರಾಮ ಪಟ್ಟಣಪಂಚಾಯತ್‌ಗಳು ಭಾಗಿಯಾಗಿ ಸಹಯೋಗ ನೀಡಿದವು.

ಮಕ್ಕಳ ಸುಪ್ತ ಪ್ರತಿಭೆಯ ಅನಾವರಣಕ್ಕೆ ಇಂತಹ ಬೇಸಿಗೆ ಶಿಬಿರಗಳು ಉಪಯುಕ್ತ



ಬೈಂದೂರು: ಮಕ್ಕಳು ರಜಾ ದಿನಗಳಲ್ಲಿ ಮೊಬೈಲ್, ಕಂಪ್ಯೂಟರ್ ಮುಂದೆ ಕುಳಿತು ಮಾನಸಿಕ ಒತ್ತಡಕ್ಕೆ ಒಳಗಾಗುವ ಜತೆಗೆ ದೈಹಿಕ ಕ್ಷಮತೆಯನ್ನು ಕಳೆದುಕೊಳ್ಳುತ್ತಿರುವ ಇಂದಿನ ಕಾಲಘಟ್ಟದಲ್ಲಿ ಓದಿನ ಜತೆಗೆ ಸ್ವಲ್ಪ ಮೋಜು ನೀಡುವ ಮೂಲಕ ಮಕ್ಕಳ ಸೂಪ್ತ ಪ್ರತಿಭೆಯ ಅನಾವರಣಕ್ಕೆ ಇಂತಹ ಬೇಸಿಗೆ ಶಿಬಿರಗಳು ಉಪಯುಕ್ತವಾಗಲಿದೆ. ಮಕ್ಕಳಿಗೆ ಚಿಕ್ಕಂದಿನಿಂದಲೇ ಕಲೆ, ಸಂಗೀತ, ನಾಟಕ ಮೊದಲಾದುವುಗಳಲ್ಲಿ ಆಸಕ್ತಿ ಮೂಡುವಂತೆ ಮಾಡಿದರೆ ಮುಂದೆ ಅವರು ಜೀವನದಲ್ಲಿ ವಿಶೇಷ ವ್ಯಕ್ತಿಗಳಾಗಿ ಗುರುತಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ಜಿಲ್ಲಾ ಭಗವದ್ಗೀತಾ ಅಭಿಯಾನದ ಸಂಚಾಲಕ ಬಿಜೂರು ರಾಮಕೃಷ್ಣ ಶೇರುಗಾರ್ ಹೇಳಿದರು.

ಇಲ್ಲಿನ ಶಾರದಾ ವೇದಿಕೆಯಲ್ಲಿ ಶನಿವಾರ ಸಂಜೆ ಲಾವಣ್ಯ ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ರೂಪುಗೊಂಡ ನಾಟಕ ಪ್ರದರ್ಶನದ ಉದ್ಘಾಟನಾ ಸಮಾರಂಭದಲ್ಲಿ ಶುಭಾಶಂಸನೆ ನೀಡಿದರು.

ಸಮಾರಂಭ ಉದ್ಘಾಟಿಸಿ ಮಾತನಾಡಿದ ಲಾವಣ್ಯದ ಗೌರವಾಧ್ಯಕ್ಷ ವಿ. ಆರ್. ಬಾಲಚಂದ್ರ, ಶಾಲೆಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿರುವ ಮಕ್ಕಳ ಮೇಲೆ ಅಂಕ ಗಳಿಸುವ ದೃಷ್ಟಿಯಿಂದ ಮಾನಸಿಕ ಒತ್ತಡ ಹೆಚ್ಚಾಗುತ್ತಿದೆ. ಪಾಠೇತರ ಚಟುವಟಿಕೆಗಳಲ್ಲಿ ಮಕ್ಕಳ ತಮ್ಮನ್ನು ತಾವು ತೊಡಗಿಸಿಕೊಂಡಾಗ, ಪಾಠದಷ್ಟೇ ಪಾಠೇತರ ಚಟುವಟಿಕೆಗಳ ಮೇಲೆ ಗಮನ ಕೇಂದ್ರಿಕರಿಸಿದಾಗ ಮಾನಸಿಕ ಒತ್ತಡ ಕಡಿಮೆಯಾಗಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪ್ರತಿ ವರ್ಷ ಬೇಸಿಗೆ ರಜೆಯಲ್ಲಿ ಮಕ್ಕಳಿಗಾಗಿ ಉಚಿತ ರಂಗಶಿಬಿರವನ್ನು ಹಮ್ಮಿಕೊಂಡು ಮಕ್ಕಳ ಮನೋಭೂಮಿಕೆಗೆ ಅನುಗುಣವಾದ ರಂಗಕೃತಿಯನ್ನು ಪ್ರದರ್ಶಿಸುತ್ತಾ ಬಂದಿರುವ ಲಾವಣ್ಯ, ಬಾಲಕಲಾವಿದರ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಮೂಲಕ ಹೊಸ ತಲೆಮಾರನ್ನು ರೂಪಿಸುತ್ತಾ ಬಂದಿದೆ ಎಂದರು.

ಲಾವಣ್ಯ ಅಧ್ಯಕ್ಷ ನರಸಿಂಹ ಬಿ. ನಾಯಕ್ ಅಧ್ಯಕ್ಷತೆವಹಿಸಿದ್ದರು. ಉದ್ಯಮಿಗಳಾದ ಡಾ. ಗೋವಿಂದ ಬಾಬು ಪೂಜಾರಿ, ರಾಜೇಂದ್ರ ಹೆಜ್ಜಾಲ್ ಶುಭಹಾರೈಸಿದರು. ಮೂರ್ತಿ ಡಿ. ಪಡುವರಿ ಪ್ರಾರ್ಥಿಸಿದರು, ಲಾವಣ್ಯ ವ್ಯವಸ್ಥಾಪಕ ಬಿ. ಗಣೇಶ ಕಾರಂತ್ ಸ್ವಾಗತಿಸಿ, ರಾಜೇಶ ನಾಯ್ಕ್ ನಿರೂಪಿಸಿದರು. ಸತ್ಯಪ್ರಸನ್ನ ವಂದಿಸಿದರು. ನಂತರ ಮಕ್ಕಳ ರಂಗ ತರಬೇತಿ ಶಿಬಿರದಲ್ಲಿ ರೂಪುಗೊಂಡ ಮಿನುಗಲೆ ಮಿನುಗಲೆ ನಕ್ಷತ್ರ ನಾಟಕ ಪ್ರದರ್ಶನಗೊಂಡಿತು.

> ಓದಿನ ಜತೆಗೆ ಸ್ವಲ್ಪ ಮೋಜು ನೀಡುವ ಮೂಲಕ ಮಕ್ಕಳ ಸೂಪ್ತ ಪ್ರತಿಭೆಯ ಅನಾವರಣಕ್ಕೆ ಇಂತಹ ಬೇಸಿಗೆ ಶಿಬಿರಗಳು ಉಪಯುಕ್ತ

ರೋಟರಾಕ್ಟ್ ರಾಜ್ಯ ಮಟ್ಟದ ವಾರ್ಷಿಕ ರಸಪ್ರಶ್ನೆ ಸ್ಪರ್ಧಾಕೂಟ -2026

ಕಾವ್ಯ, ಶ್ರೀನಿಧಿ ತಂಡಕ್ಕೆ ಪ್ರಶಸ್ತಿ



ಮಂಗಳೂರು: ಜಿಲ್ಲಾ ರೋಟರಾಕ್ಟ್ ಸಂಸ್ಥೆಮತ್ತು ರೋಟರಾಕ್ಟ್ ಮಂಗಳೂರು ಸಿಟಿ ಸಂಸ್ಥೆಯ ಜಂಟಿ ಆಶ್ರಯಲದಲ್ಲಿ ರೋಟರಾಕ್ಟ್ ಮಾಹಿತಿ ಮತ್ತು ಜಾಗೃತಿ ಅಭಿಯಾನದ ಅಂಗವಾಗಿ ದಿ. ಶಾಂತರಾಮ್ ವಾಮಂಜೂರು ಸ್ಮಾರಕ 20ನೇ ವಾರ್ಷಿಕ ರಾಜ್ಯ ಮಟ್ಟದ ಅಂತರ್ ಕ್ಲಬ್ ರೋಟರಾಕ್ಟ್ ರಸಪ್ರಶ್ನೆ ಸ್ಪರ್ಧಾಕೂಟವು ಭಾನುವಾರ ಜರಗಿತು.

ನಗರದ ರೋಟರಾಕ್ಟ್ ಕ್ಲಬ್ ಮಣೇಲ್ ಶ್ರೀನಿವಾಸ ನಾಯಕ್ ಉದ್ಯಮ ಆಡಳಿತ ಕಾಲೇಜನ್ನು ಪ್ರತಿನಿಧಿಸಿದ ಕಾವ್ಯ ಮತ್ತು ಶ್ರೀನಿಧಿ ತಂಡವು ಪ್ರಥಮ ಸ್ಥಾನ ಗಳಿಸಿತು.

ರೋಟರಾಕ್ಟ್ ಕ್ಲಬ್ ಮೈಸೂರನ್ನು ಪ್ರತಿನಿಧಿಸಿದ ಪ್ರಜ್ವಲ್ ದ್ವಿತೀಯ ಸ್ಥಾನವನ್ನು ಪಡೆದರು.

ನಟ ಭೋಜರಾಜ ವಾಮಂಜೂರು ತಮ್ಮ ದಿವಂಗತ ಸಹೋದರ ಶಾಂತ ರಾಮ್ ವಾಮಂಜೂರು ಸ್ಮರಣಾರ್ಥ ವರ್ಷಂಪ್ರತಿ ಈ ಸ್ಪರ್ಧಾ ಕೂಟವನ್ನು ಆಯೋಜಿಸುವ ರೋಟ ರಾಕ್ಟ್ ಸಂಸ್ಥೆಗೆ ಕೃತಜ್ಞತೆ ಸಲ್ಲಿಸಿ, ಸ್ಪರ್ಧಾ ವಿಜೇತರಿಗೆ ಪ್ರಶಸ್ತಿ, ಪ್ರಶಸ್ತಿ ಪ್ರಮಾಣ ಪತ್ರ ಪ್ರದಾನ ಅಭಿನಂದಿಸಿದರು. ಮುಖ್ಯಅತಿಥಿ ರೋಟರಿ ಮಂಗಳೂರು ಸೆಂಟ್ರಲ್ ಸಂಸ್ಥೆಯ ಅಧ್ಯಕ್ಷ ಭಾಸ್ಕರ ರೈ, ರೋಟರಾಕ್ಟ್ ಯುವ ಸದಸ್ಯರು ಸಂಸ್ಥೆಯ ಧ್ಯೇಯ, ನೀತಿ, ಮಾಹಿತಿ, ಉದ್ದೇಶಗಳ ಜ್ಞಾನವನ್ನು ವೃದ್ಧಿಸಬೇಕು ಮತ್ತು ಸಂಸ್ಥೆಯ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸಬೇಕು ಎಂದರು. ರೋಟರಾಕ್ಟ್ ದಕ್ಷಿಣ ಏಷ್ಯಾ ಸಂಸ್ಥೆಯ ಅಧ್ಯಕ್ಷ ಸ್ಟೀವನ್ ಡೇರಿಲ್ ಡಿಸೋಜ ಉಪಸ್ಥಿತರಿದ್ದರು.

ರೋಟರಾಕ್ಟ್ ಮಂಗಳೂರು ಸಿಟಿ ಸಂಸ್ಥೆಯ ಅಧ್ಯಕ್ಷ ಅಕ್ಷಯ್ ರೈ ಸ್ವಾಗತಿಸಿದರು. ಜಿಲ್ಲಾ ಮಟ್ಟದ 7 ತಂಡಗಳು ಅಂತಿಮ ಮತ್ತು ನಿರ್ಣಾಯಕ ಸುತ್ತಿಗೆ ಪಡೆದಿದ್ದವು. ಈ ಸ್ಪರ್ಧಾಕೂಟವನ್ನು ರೋಟರಾಕ್ಟ್ ಮಂಗಳೂರು ಸಿಟಿ ಸಂಸ್ಥೆಯ ಸಭಾಪತಿ ಡಾ. ದೇವದಾಸ್ ರೈ ನಿರೂಪಿಸಿದರು. ವಲಯ ಪ್ರತಿನಿಧಿ ಚಮನ್ ವಂದಿಸಿದರು.

ಅಂಬಿಕಾದಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದಿಂದ ಶಂಕರ ವಿಜಯ ಸ್ಪರ್ಧೆಗಳ ಆಯೋಜನೆ



ಪುತ್ತೂರು: ಸನಾತನ ಹಿಂದೂ ಧರ್ಮದ ಮೇಲೆ ನಿರಂತರವಾಗಿ ರಾಜಕೀಯ, ಧಾರ್ಮಿಕ ಹಾಗೂ ಸಾಂಸ್ಕೃತಿಕ ದಾಳಿಗಳು ನಡೆದುಬಂದಿರುವುದು ಇತಿಹಾಸದಲ್ಲಿ ದಾಖಲಾದ ಸತ್ಯ. ಅಂತಹ ದಾಳಿಗಳ ಪರಿಣಾಮಗಳನ್ನು ಹಿಂದೂಸಮಾಜ ಇಂದಿಗೂ ಅನುಭವಿಸುತ್ತಿದೆ. ನಮ್ಮತನವನ್ನು ಮರೆತು ಬದುಕುವ ವಾತಾವರಣದಲ್ಲಿ ನಾವಿದ್ದೇವೆ. ಆದ್ದರಿಂದ ಸನಾತನ ವಿಚಾರಧಾರೆಗಳನ್ನು ತಿಳಿಸಿಕೊಡುವ ಪ್ರಯತ್ನಗಳು ನಡೆಯಬೇಕಿದೆ ಎಂದು ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯ ಬಾಲಕೃಷ್ಣ ಬೋರ್ಕರ್ ಹೇಳಿದರು.

ಅವರು ಭಾನುವಾರ ನಗರದ ಬಪ್ಪಳಿಗೆಯ ಅಂಬಿಕಾ ವಿದ್ಯಾಲಯ ಸಿಬಿಎಸ್‌ಇ ಸಂಸ್ಥೆಯ ಆವರಣದಲ್ಲಿ ಶೃಂಗೇರಿಯ ಶ್ರೀ ಶಾರದಾಪೀಠದ ವತಿಯಿಂದ ಶ್ರೀ ಶಂಕರ ಭಗವತ್ಪಾದರ ಜನ್ಮಜಯಂತಿ ಪ್ರಯುಕ್ತ ಆಯೋಜಿಸಲಾದ ಶಂಕರ ವಿಜಯ ಸ್ಪರ್ಧೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಬ್ರಿಟಿಷರ ಆಡಳಿತ ಕಾಲದಲ್ಲೂ ನಮ್ಮ ವಿಚಾರಧಾರೆಗಳನ್ನು ಅರಿತುಕೊಳ್ಳುವುದಕ್ಕೆ ಮಾಧ್ಯಮವಾಗಿರುವ ಸಂಸ್ಕೃತ ಭಾಷೆಯ ಅಧ್ಯಯನಾವಕಾಶಗಳು ಸಾಕಷ್ಟಿದ್ದವು. ಆದರೆ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸಂಸ್ಕೃತದ ಆದ್ಯತೆ ಕಡಿಮೆಯಾಗುತ್ತಾ ಬಂದುದರ ಪರಿಣಾಮ ನಮ್ಮ ಸನಾತನ ಸಂಗತಿಗಳು ನಮಗಿಂದು ತಿಳಿಯದಂತಾಗಿದೆ. ಭಾರತೀಯರೇ ಭಾರತೀಯ ಉತ್ಕೃಷ್ಟ ಸಂಗತಿಗಳನ್ನು ತಿಳಿಯುವ ಬಗೆಗೆ ಆಸ್ಥೆ ವಹಿಸದಿದ್ದರೆ ಸಮಾಜದ ಬೆಳವಣಿಗೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಪ್ರಸ್ತಾವನೆಗೈದ ಶೃಂಗೇರಿ ಮಠದ ಶಾಂಕರ ತತ್ವ ಪ್ರಸಾರ ಅಭಿಯಾನದ ರಾಜ್ಯ ಸಂಚಾಲಕ ವಿದ್ವಾನ್ ತೇಜಶಂಕರ ಸೋಮಯಾಜಿ ಮಾತನಾಡಿ, ಆದಿ ಶಂಕರಾಚಾರ್ಯರ ವಿಚಾರಗಳನ್ನು ಇಂದಿನ ಮಕ್ಕಳು ಅರಿತುಕೊಳ್ಳಬೇಕಾದ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಶಂಕರ ಭಗವತ್ಪಾದರ ವಿಚಾರಗಳ ಆಧಾರದಮೇಲೆ ಹಲವು ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ವಿವರಿಸಿದರು.

ವೇದಿಕೆಯಲ್ಲಿ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿ ಗಣೇಶ ಪ್ರಸಾದ್ ಎ. ಉಪಸ್ಥಿತರಿದ್ದರು. ಉಪನ್ಯಾಸಕಿ ಕುಸುಮಾ ಸ್ವಾಗತಿಸಿ, ಶಿಕ್ಷಕಿ ಗೌರಿ ವಂದಿಸಿದರು. ಸಭಾ ಕಾರ್ಯಕ್ರಮದ ಅನಂತರ ವಿವಿಧ ಸ್ಪಥೆಗಳು ಸಂಪನ್ನಗೊಂಡವು.

ಪುತ್ತೂರು, ಬಂಟ್ವಾಳ, ಸುಳ್ಯ, ಕಡಬ, ಮಂಜೇಶ್ವರ ಹಾಗೂ ಕಾಸರಗೋಡು ತಾಲೂಕುಗಳ ಸ್ಪರ್ಧಾರ್ಥಿಗಳಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶ ಒದಗಿಸಿಕೊಡಲಾಗಿತ್ತು. ಎಳೆಯ ಮಕ್ಕಳಿಗೆ ಸ್ತೋತ್ರ ಕಂಠಪಾಠ, ಜೂನಿಯರ್ ಹಾಗೂ ಸೀನಿಯರ್ ವಿಭಾಗದಲ್ಲಿ ಭಾಷಣ ಸ್ಪರ್ಧೆ ಮತ್ತು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಆಯೋಜಿಸಲಾಗಿತ್ತು.

ಲ್ಯಾಪ್‌ಟಾಪ್, ಟ್ಯಾಬ್ ಒಳಗೊಂಡಂತೆ ಎರಡೂವರೆ ಲಕ್ಷ ರೂಪಾಯಿಗಳೂ ಅಕ ಮೊತ್ತದ ಬಹುಮಾನಗಳನ್ನು ಈ ಸ್ಪರ್ಧೆ ಒಳಗೊಂಡಿದ್ದು, ವಿಜೇತರಿಗೆ ಮೇ 7ರಂದು ಬಪ್ಪಳಿಗೆಯ ಶ್ರೀ ಶಂಕರ ಸಭಾಭವನದಲ್ಲಿ ನಡೆಯುವ ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ರಜತ ಮಹೋತ್ಸವ ಸಮಾರೋಪ ಸಮಾರಂಭದಲ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರು ಬಹುಮಾನ ವಿತರಿಸಲಿದ್ದಾರೆ.

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸಂಮೃದ್ಧಿ(ನಂ.SM-52) ಡ್ರಾ ಮೇ 3ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
ML 501536 (THIRUVANANTHAPURAM)
Consolation Prize Rs.5,000/-
MA 501536 MB 501536 MC 501536 MD 501536
ME 501536 MF 501536 MG 501536 MH 501536
MJ 501536 MK 501536 MM 501536
2nd Prize Rs.25,00,000/- [25 Lakhs]
ME 274958 (ADIMALY)
3rd Prize Rs.5,00,000/- [5 Lakhs]
MB 495517 (CHERTHALA)

FOR THE TICKETS ENDING WITH THE FOLLOWING NUMBERS

4th Prize Rs.5,000/-
0270 0881 1359 1506 1786 1819 2405 3314 3532 3571
3577 3801 4314 5918 6294 7140 7488 8650 9580
5th Prize Rs.2,000/-
1464 1526 2004 2445 6985 8593
6th Prize Rs.1,000/-
1006 1028 1122 1490 1496 2100 2521 2550 2965 3783
4961 6050 6176 7167 7387 7714 7866 8147 8401 8574
8754 8877 8999 9772 9949
7th Prize Rs.500/-
0019 0410 0887 1145 1192 1485 1514 1571 1621 1739
1778 1800 1863 2153 2181 2216 2403 2437 2631 2651
2705 2745 2823 2857 2896 2969 3008 3039 3131 3147
3315 3327 3764 3816 3967 4099 4293 4329 4353 4764
4802 5068 5160 5242 5365 5466 5588 5617 5737 5775
5991 6057 6175 6880 6892 7090 7109 7254 7432 7536
7995 8004 8113 8276 8442 8555 8688 8838 8913 8995
9100 9156 9220 9408 9818 9871
8th Prize Rs.200/-
0297 0392 0416 0449 0471 0496 0635 0670 0677 0748
1045 1191 1196 1297 1409 1720 2132 2296 2558 2670
2677 2763 2966 2970 3240 3301 3317 3446 3584 3773
3844 3872 3949 3995 4290 4325 4462 4464 4484 4577
4699 4700 4743 4777 4994 5168 5174 5520 5788 5848
6211 6276 6451 6521 6660 6699 6875 6975 6994 7009
7044 7060 7077 7151 7208 7239 7259 7264 7276 7375
7397 7702 7715 7885 7934 7942 8028 8353 8547 8607
8645 8690 9055 9162 9312 9342 9388 9407 9436 9921
9954 9986
9th Prize Rs.100/-
0049 0121 0176 0338 0386 0439 0480 0569 0581 0616
0642 0752 0763 0872 0922 0971 0976 1014 1244 1282
1512 1529 1553 1556 1616 1617 1732 1825 1867 1871
1985 2010 2068 2086 2159 2396 2420 2531 2736 2878
2988 3188 3263 3456 3567 3609 3706 3880 3897 3944
4078 4195 4202 4346 4391 4429 4509 4538 4551 4648
4880 4928 4929 5000 5032 5061 5130 5186 5223 5265
5351 5460 5511 5514 5722 5734 5764 5905 5943 5965
6026 6107 6305 6311 6316 6339 6361 6393 6590 6633
6661 6696 6769 6836 6845 6873 6919 6924 7036 7101
7172 7198 7247 7341 7403 7427 7501 7540 7593 7613
7633 7673 7755 7799 8019 8077 8166 8241 8255 8278
8302 8446 8537 8618 8681 8685 8770 8789 8869 8876
8961 9019 9088 9108 9144 9148 9245 9280 9288 9300
9455 9469 9498 9543 9576 9614 9673 9674 9777 9953

ಶಾಮ್ ಇನ್ಸ್ಟಿಟ್ಯೂಶನ್‌ನ 'ಕಜ್ಜ' ತುಳು ಸಿನಿಮಾದ ಆಡಿಯೋ, ಟ್ರೇಲರ್ ಬಿಡುಗಡೆ

ತುಳು ಸಿನಿಮಾಗಳ ಮೂಲಕ ತುಳು ಭಾಷೆ ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ: ಡಾ. ಎಂ. ಮೋಹನ್ ಆಳ್ವ



ಮಂಗಳೂರು: ನಾಟಕ, ಸಿನಿಮಾಗಳ ಮೂಲಕ ತುಳು ಭಾಷೆ ಇಂದು ಜಾಗತಿಕ ಮಟ್ಟದಲ್ಲಿ ಮನ್ನಣೆ ಪಡೆದಿದೆ. ಎಲ್ಲರೂ ಇಷ್ಟಪಡುವ ಭಾಷೆ ತುಳು. ಸುಮುಖ ಪ್ರೊಡಕ್ಷನ್ ಲಾಂಛನದಲ್ಲಿ ಈ ಹಿಂದೆ ತೆರೆಕಂಡ 'ತುಡರ್' ಯಶಸ್ವಿ ಪ್ರದರ್ಶನ ದಾಖಲಿಸಿದೆ. ಅದೇ ತಂಡದಿಂದ 'ಕಜ್ಜ' ತುಳು ಸಿನಿಮಾ ಪ್ರೇಕ್ಷಕರ ಮನಗೆಲ್ಲಲಿ ಎಂದು ಮೂಡುಬಿದರೆ ಆಳ್ವಾಸ್ ಸಂಸ್ಥೆ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ ಹೇಳಿದರು.

ಮಂಗಳೂರು ಪುರಭವನದಲ್ಲಿ ಜರಗಿದ ಶಾಮ್ ಇನ್ಸ್ಟಿಟ್ಯೂಶನ್ ಪ್ರಸ್ತುತ ಪಡಿಸುವ 'ಕಜ್ಜ' ತುಳು ಸಿನಿಮಾದ ಆಡಿಯೋ ಮತ್ತು ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಅನುವಂಶಿಕ ಅರ್ಚಕ ಲಕ್ಷ್ಮೀನಾರಾಯಣ ಅಸ್ರಣ್ಣ 'ಕಜ್ಜ' ಸಿನಿಮಾದ ಮೂಲಕ ಪ್ರಮುಖ ಪ್ರೊಡಕ್ಷನ್ ತಂಡ ತುಳು ಭಾಷೆಯಲ್ಲಿ ಸಿನಿಮಾ ಮಾಡುತ್ತಿದೆ. ದೈವ ದೇವರ ಮೇಲಿನ ನಂಬಿಕೆ, ಶ್ರದ್ಧೆ ಭಕ್ತಿಯಿಂದ ಕೆಲಸ ಮಾಡಿದಾಗ ಯಶಸ್ಸು ಲಭಿಸುತ್ತದೆ ಎಂದರು.

ಮುಖ್ಯ ಅತಿಥಿಯಾಗಿದ್ದ ನಾಟಕ, ಸಿನಿಮಾ ನಿರ್ದೇಶಕ ವಿಜಯಕುಮಾರ್ ಕೊಡಿಯಾಲ್‌ಬೈಲ್ ಮಾತನಾಡಿ, 'ಕಜ್ಜ' ತುಳು ಸಿನಿಮಾ ತುಳುವಿನಲ್ಲಿ ಮೈಲುಗಲ್ಲಾಗಲಿ ಎಂದರು.

ಮುಖ್ಯ ಅತಿಥಿ ಸರ್ವೋತ್ತಮ ಶೆಟ್ಟಿ ಅಬುದಾಬಿ ಮಾತನಾಡಿ, 'ಕಜ್ಜ' ಒಳ್ಳೆಯ ಸಿನಿಮಾ ಆಗಿ ಮೂಡಿಬಂದು ಪ್ರೇಕ್ಷಕರ ಮನಸ್ಸಿನಲ್ಲಿ ಉಳಿಯಲಿ ಎಂದರು.

ಆಡಿಯೋ, ಟ್ರೇಲರ್ ಬಿಡುಗಡೆಗೊಳಿಸಿದ ನಟ ವಸಿಷ್ಠ ಸಿಂಹ, ಅತಿಥಿಯಾಗಿದ್ದ ಸ್ಪೀಕರ್ ಯು.ಟಿ ಖಾದರ್, ಶಾಸಕ ವೇದವ್ಯಾಸ ಕಾಮತ್, ಕಲ್ಕೂರ ಪ್ರತಿಷ್ಠಾನ ಅಧ್ಯಕ್ಷ ಪ್ರದೀಪ ಕುಮಾರ ಕಲ್ಕೂರ ಶುಭ ಹಾರೈಸಿದರು.

ಪ್ರಮುಖರಾದ ಹರಿಕೃಷ್ಣ ಪುನರೂರು, ಅರವಿಂದ ಬೋಳಾರ್, ಎಂ.ಪಿ. ಶೆಣೈ, ವಿಶ್ವನಾಥ ಶೆಟ್ಟಿ ದುಬೈ, ಸತೀಶ್ ಬಂದಲೆ, ಉದಯ ಪೂಜಾರಿ ಬಲ್ಲಾಲ್‌ಭಾಗ್, ದಿವ್ಯಾ ರೈ, ನಿರ್ಮಾಪಕ ವಿಶಾಂತ್ ಮೆನೆಜೆಸ್, ಸಹ ನಿರ್ಮಾಪಕ ಪ್ರವೀಣ್ ಸುವರ್ಣ, ನಟ ಸಿದ್ದಾರ್ಥ್ ಶೆಟ್ಟಿ, ಸಂಗೀತ ನಿರ್ದೇಶಕ ಲಿಖಿತ್ ಪ್ರಸಾದ್ ಶೆಟ್ಟಿ, ಲಂಚುಲಾಲ್, ಹರೀಶ್ ಶೆಟ್ಟಿ, ಆರತಿ ಶೆಟ್ಟಿ, ಪ್ರಕಾಶ್ ಮಹಾದೇವನ್ ಉಪಸ್ಥಿತರಿದ್ದರು.

ಚಿತ್ರದ ಕಥೆ ಹಾಗೂ ಸಾಹಿತ್ಯ ಬರೆದ ಮೋಹನ್ ರಾಜ್ ಸ್ವಾಗತಿಸಿದರು. ಅನುರಾಗ್ ಕಾರ್ಯಕ್ರಮ ನಿರ್ವಹಿಸಿದರು. 'ಕಜ್ಜ' ಸಿನಿಮಾ ಮೇ 15 ರಂದು ತೆರೆ ಕಾಣಲಿದೆ.

ಜಿಟಿಟಿಸಿಯಲ್ಲಿ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಂಗಳೂರು: ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಸರಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ)ಯಲ್ಲಿ ಮೂರು ವರ್ಷಗಳ ಅವಧಿಯ ಡಿಪ್ಲೊಮಾ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಜಿಟಿಟಿಸಿಯಲ್ಲಿ ಡಿಪ್ಲೊಮಾ ಇನ್ ಟೂಲ್ ಆ್ಯಂಡ್ ಡೈ ಮೇಕಿಂಗ್, ಡಿಪ್ಲೊಮಾ ಇನ್ ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್ ಹಾಗೂ ಆರ್ಟಿಫಿಶಿಯಲ್ ಇಂಟಲಿಜೆನ್ಸ್ ಆ್ಯಂಡ್ ಮೆಷಿನ್ ಲರ್ನಿಂಗ್ ಕೋರ್ಸ್‌ಗಳಿವೆ. ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಎಸ್ಸೆಸ್ಸೆಲ್ಸಿಯಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದರೆ ವಿದ್ಯಾರ್ಥಿ ವೇತನವೂ ದೊರೆಯಲಿದೆ. ಮೇ 10 ಮೊದಲ ಹಂತದಲ್ಲಿ ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಎಂದು ಪ್ರಾಂಶುಪಾಲ ಲಕ್ಷ್ಮೀನಾರಾಯಣ ಸಿ.ಆರ್ ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪಿಯುಸಿ ಸಯನ್ಸ್ ಹಾಗೂ ಐಟಿಐ ಮೆಕಾನಿಕಲ್ ವಿದ್ಯಾರ್ಹತೆ ಹೊಂದಿರುವವರು ನೇರವಾಗಿ ದ್ವಿತೀಯ ವರ್ಷಕ್ಕೆ ಪ್ರವೇಶಾತಿಗೆ ಅರ್ಹರು. ಎಲ್ಲ ಕೋರ್ಸ್ ಗಳಲ್ಲಿ ಶೇ.30ರಷ್ಟು ಪಠ್ಯ ಮತ್ತು ಶೇ.70ರಷ್ಟು ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ ಎಂದವರು ತಿಳಿಸಿದರು.

ಪ್ರತಿ ವಿದ್ಯಾರ್ಥಿಗೂ ಒಂದು ವರ್ಷದ ಇಂಟರ್ನ್ ಶಿಪ್ ತರಬೇತಿ ಕಡ್ಡಾಯ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಮಾಸಿಕ 15 ಸಾವಿರ ರೂ. ನಿಂದ 20 ಸಾವಿರ ರೂ. ವರೆಗೆ ಶಿಷ್ಯ ವೇತನವೂ ದೊರೆಯಲಿದೆ. ಇದರಿಂದ ಕೈಗಾರಿಕೆಗಳಲ್ಲಿ ನೇರವಾಗಿ ಕೆಲಸ ಮಾಡಲು ಅನುಕೂಲವಾಗಲಿದೆ ಎಂದು ಲಕ್ಷ್ಮೀನಾರಾಯಣ ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಉಪನ್ಯಾಸಕರಾದ ಯಜ್ಞೇಶ್ ಶೆಟ್ಟಿಗಾರ್, ಪ್ರಮಿತ್ ಶೆಟ್ಟಿ, ಝಿಟಾ ಡಿ'ಸೋಜಾ, ಗೌತಮ್ ಉಪಸ್ಥಿತರಿದ್ದರು.

ಸುಳ್ಯ ತಾಲೂಕಿಗೆ ಸುಧಾಮೂರ್ತಿ, ಕಾಗೇರಿ ಭೇಟಿ

ಸುಳ್ಯ: ರಾಜ್ಯಸಭಾ ಸದಸ್ಯರಾದ ಸುಧಾಮೂರ್ತಿ, ನಟ ಜಗ್ಗೇಶ್, ಲೋಕಸಭಾ ಸದಸ್ಯ ವಿಶ್ವೇಶ್ವರ ಹೆಗಡೆ ಕಾಗೇರಿ ಸಹಿತ ಹಲವು ರಾಜ್ಯಸಭಾ, ಲೋಕಸಭಾ ಸದಸ್ಯರು ಸುಳ್ಯದ ನಾನಾ ಭಾಗಗಳಿಗೆ ಭಾನುವಾರ ಭೇಟಿ ನೀಡಿದರು. ಮಡಿಕೇರಿಯಲ್ಲಿ ಸೋಮವಾರ ರಾಷ್ಟ್ರೀಯ ಹೆದ್ದಾರಿಯ ಬಗ್ಗೆ ಸಭೆ ನಡೆಯಲಿದ್ದು, ಮಂಗಳೂರಿನಿಂದ ಮಡಿಕೇರಿಯತ್ತ ತೆರಳುವ ಸಂದರ್ಭ ಸುಮಾರು 75 ಜನರ ತಂಡವು ವಿನೋಬನಗರ ಗೇರುಬೀಜ ಫ್ಯಾಕ್ಟರಿ ಹಾಗೂ ಗ್ರ್ಯಾಂಡ್ ರಸಪಾಕ ಹೊಟೇಲ್‌ಗೆ ಭೇಟಿ ನೀಡಿದರು. ಈ ಸಂದರ್ಭದಲ್ಲಿ ಪದ್ಮಾವತಿ ಕಾಮತ್, ಸುಧಾಕರ ಕಾಮತ್, ಶುಭಾ ಕಾಮತ್ ಸಿಬ್ಬಂದಿ ವರ್ಗ ಹಾಗೂ ರಸಪಾಕ ಹೋಟೆಲ್ ಮಾಲಕ ನಾರಾಯಣಕ್ಕೆ ಕೇಕಡ್ಕ ದಂಪತಿ ಸೇರಿದಂತೆ ಉಪಸ್ಥಿತರಿದ್ದರು.

ಮುನೇಶ್ವರ ಬಡಾವಣೆಯಲ್ಲಿ ರಸ್ತೆ ಕಾಮಗಾರಿಗೆ ಚಾಲನೆ



ಬ್ಯಾಟರಾಯನಪುರ: ಬ್ಯಾಟರಾಯನಪುರ ಕ್ಷೇತ್ರದ ನಗರ ವ್ಯಾಪ್ತಿಯ ಕೊಡಿಗೇಹಳ್ಳಿಯ ಮುನೇಶ್ವರ ಬಡಾವಣೆಯಲ್ಲಿ ಸುಮಾರು 2 ಕೋಟಿ ರೂ.ವೆಚ್ಚದ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮ ಗಾರಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಭೂಮಿಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, 2 ಕೋಟಿ ರೂ. ವೆಚ್ಚದಲ್ಲಿ ಬ್ಯಾಟರಾಯನಪುರ ಕ್ಷೇತ್ರ ವ್ಯಾಪ್ತಿಯ ಲೊಟ್ಟೆಗೊಲ್ಲಹಳ್ಳಿ, ಮುನೇಶ್ವರ ಬಡಾವಣೆ ಸೇರಿದಂತೆ ಕೊಡಿಗೇಹಳ್ಳಿ ವಾರ್ಡ್ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ಕಾಂಕ್ರೀಟ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗುತ್ತಿದ್ದು, ಇದರ ಭಾಗವಾಗಿ ಇಂದು ಮುನೇಶ್ವರ ಬಡಾವಣೆಯಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ವಾರ್ಡ್ ವ್ಯಾಪ್ತಿಯ ಇನ್ನುಳಿದ ಬಡಾವಣೆಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುವುದು ಎಂದರು. ಕಾಂಗ್ರೆಸ್ ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಹನುಮಂತಿ, ಕೊಡಿಗೇಹಳ್ಳಿ ವಾರ್ಡ್ ಕಾಂಗ್ರೆಸ್ ಅಧ್ಯಕ್ಷ ವೆಂಕಟಸ್ವಾಮಿ, ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಶಾಂತ್ ಸೇರಿದಂತೆ ಇತರರಿದ್ದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಗೆ ತಡೆ

ಬೆಂಗಳೂರು: ಕರ್ನಾಟಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಗೆ ಸಿಟಿ ಸಿವಿಲ್ ನ್ಯಾಯಾಲಯ ಅಧಿಕೃತವಾಗಿ ಪೂರ್ಣ ಪ್ರಮಾಣದ ತಡೆ ನೀಡಿ ಆದೇಶಿಸಿದೆ ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಕೆ.ನಾಗನ ಗೌಡ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಂದಿನ ಹಂತದ ವಿಚಾರಣೆ ಜೂ.29 ರಂದು ನಡೆಯಲಿದೆ. ಅಲ್ಲಿಯವರೆಗೆ ಯಾವುದೇ ಚುನಾವಣಾ ಪ್ರಕ್ರಿಯೆ ಮುಂದು ವರೆಸುವಂತಿಲ್ಲ ಎಂದರು. ನ್ಯಾಯಾಲಯ ತಡೆಯಾಜ್ಞೆ ದಿಕ್ಕರಿಸಿ, ಒಂದು ಹಂತದ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯನ್ನು ನಡೆಸ ಲಾಗಿತ್ತು. ಬೆಂಗಳೂರು ಸಿಟಿ ಸಿವಿಲ್ ನ್ಯಾಯಾಲಯದಿಂದ ರಾಜ್ಯಾದ್ಯಂತ ನಡೆಯುತ್ತಿರುವ ಶಿಕ್ಷಕರ ಸಂಘದ ಚುನಾವಣೆಗೆ ತಡೆಯಾಜ್ಞೆ ಇದ್ದರೂ ಸಂವಿಧಾನಕ್ಕೆ ಅಪಚಾರ ಮಾಡಲಾಗಿತ್ತು. ಚುನಾವಣೆ ರದ್ದುಪಡಿಸಿ, ಮರುಚುನಾವಣೆ ನಡೆಸಬೇಕು ಮತ್ತು ಚುನಾವಣಾ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಬೇಕು ಎಂದು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದಸ್ಯರು ದಾವೆ ಹೂಡಿದ್ದರು. ಕೋರ್ಟ್ ಸ್ಪಷ್ಟ ನಿರ್ದೇಶನ ದೊರೆತಿದೆ ಎಂದು ಹೇಳಿದರು.



ಭೇಟಿ



ಒಡಿಶ್ಸಾದ ಭುವನೇಶ್ವರದಲ್ಲಿ ನಡೆದ ಫೆಮಿನಾ ಮಿಸ್ ಇಂಡಿಯಾ ವರ್ಲ್ಡ್ - 2026 ಸೌಂದರ್ಯ ಸ್ಪರ್ಧೆ ಕಿರೀಟ ವಿಜೇತೆ, ಕನ್ನಡತಿ, ಶಾಸಕ ಸತೀಶ್ ಸೈಲ್ ಅವರ ಪುತ್ರಿ ಸಾಧ್ವಿ ಸೈಲ್ ಅವರು ಭಾನುವಾರ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಭೇಟಿ ಮಾಡಿದರು. ಶಾಸಕ ಸತೀಶ್ ಸೈಲ್ ಜತೆಗಿದ್ದರು.

ಕಿರುಸುದ್ದಿ

ಅಪೋಲೋ ಆಸ್ಪತ್ರೆ: ಹಿರಿಯರ ಆರೋಗ್ಯ ಸೇವೆ ವಿಸ್ತರಣೆ



ಬೆಂಗಳೂರು: ಅಪೋಲೋ ಹಾಸ್ಪಿಟಲ್ಸ್ ಬೆಂಗಳೂರು ಹಿರಿಯ ನಾಗರಿಕರಿಗೆ ವಿಶೇಷವಾಗಿ ರೂಪಿಸಲಾದ ಸಮಗ್ರ ಜೇರಿಯಾಟ್ರಿಕ್ ಕೇರ್ ಕಾರ್ಯಕ್ರಮ ಅಪೋಲೋ ಸೀನಿಯರ್ಸ್ ಫರ್ಸ್ಟ್ ವಿಸ್ತರಿಸುವುದಾಗಿ ಪ್ರಕಟಿಸಿದೆ. ಇದು ಭಾರತದಲ್ಲಿ ಹೆಚ್ಚು ರಚನಾತ್ಮಕ ಮತ್ತು ಸಹಯೋಗದ ವೃದ್ಧರ ಆರೈಕೆಯತ್ತ ಗಮನಾರ್ಹ ಹೆಜ್ಜೆಯಾಗಿದೆ. ಬನ್ನೇರುಘಟ್ಟ ರಸ್ತೆಯಲ್ಲಿ ಮೊದಲಿಗೆ ಪ್ರಾರಂಭಗೊಂಡ ಈ ಕಾರ್ಯಕ್ರಮ ಈಗ ಜಯನಗರ, ಶೇಷಾದ್ರಿಪುರ ಮತ್ತು ಸರ್ಜಾಪುರ ರಸ್ತೆಯ ಅಪೋಲೋ ಆಸ್ಪತ್ರೆಗಳಲ್ಲಿಯೂ ಲಭ್ಯವಾಗಲಿದ್ದು, ನಗರದಾದ್ಯಂತ ತನ್ನ ಏಕೀಕೃತ ಹಿರಿಯರ ಆರೈಕೆಯ ಲಭ್ಯತೆಯನ್ನು ಪೂರೈಸಲಿದೆ. ಈ ಪ್ರಾರಂಭ ಬನ್ನೇರುಘಟ್ಟದಲ್ಲಿ ಕಾರ್ಯಕ್ರಮದ ಒಂದನೇ ವರ್ಷಾಚರಣೆಯಾಗಿದ್ದು, ಅದರಲ್ಲಿ ಹಿರಿಯರ ಆರೋಗ್ಯ ಸೇವೆಗೆ ಸತತ ರೋಗಿ–ಕೇಂದ್ರಿತ ವಿಧಾನ ರೂಪಿಸಲು ನೆರವಾಗಲಿದೆ. ಇದು ಕಂತು ಕಂತಿನ ಚಿಕಿತ್ಸೆಯಿಂದ ದೀರ್ಘಾವಧಿ ಆರೋಗ್ಯ ನಿರ್ವಹಣೆ ಮತ್ತು ಪುನಶ್ಚೇತನದ ಬೆಂಬಲದತ್ತ ಮುನ್ನಡೆಯುತ್ತದೆ.

ಕಸಾಪ ದತ್ತಿ ಪ್ರಶಸ್ತಿಗೆ ಶಿವಸ್ವಾಮಿ, ಜಿತೇಂದ್ರ ಆಯ್ಕೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್‌ನಿಂದ ನೀಡುವ ವಿ.ಗೌರಮ್ಮ ಗಂಗಾಧರಯ್ಯ ಮಕ್ಕಳ ಸಿಬ್ಬಂದಿ ಸೇವಾ ದತ್ತಿ ಪ್ರಶಸ್ತಿಗೆ ಕೆ.ಸಿ.ಶಿವಸ್ವಾಮಿ ಹಾಗೂ ಎಸ್. ರಮಾದೇವಿ ವಿಶ್ವೇಶ್ವರಯ್ಯ ದತ್ತಿ ಪ್ರಶಸ್ತಿಗೆ ಎಂ.ಜೀತೆಂದ್ರ ಆಯ್ಕೆಯಾಗಿದ್ದಾರೆ. ಶಿವಸ್ವಾಮಿ ಅವರು 24 ವರ್ಷ ಹಾಗೂ ಜಿತೇಂದ್ರ ಅವರು 23 ವರ್ಷಗಳಿಂದ ಕಸಾಪದಲ್ಲಿ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೇ 5ರಂದು ಸಂಜೆ 4 ಗಂಟೆಗೆ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭದಲ್ಲಿ ಸಾಹಿತಿ ಹಂಪ ನಾಗರಾಜಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಕಸಾಪ ಆಡಳಿತಾಧಿಕಾರಿ ಕೆ.ಎ.ದಯಾನಂದ, ಮಾಜಿ ಅಧ್ಯಕ್ಷ ಡಾ.ಆರ್.ಕೆ.ನಲ್ಲೂರು ಪ್ರಸಾದ್ ಹಾಗೂ ಡಾ.ಮನು ಬಳಿಗಾರ್ ಇತರರು ಪಾಲ್ಗೊಳ್ಳಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕೊಡುಗೆಗಳ ಬಗ್ಗೆ ಜಗನ್ನಾಥ ಹೇಮಾದ್ರಿ ಅವರು ಉಪನ್ಯಾಸ ನೀಡಲಿದ್ದಾರೆ ಎಂದು ಕಸಾಪ ಪ್ರಕಟಣೆಯಲ್ಲಿ ತಿಳಿಸಿದೆ.



ನಗರದ ಖಾಸಗಿ ಹೋಟೆಲ್‌ನಲ್ಲಿ ಯುನಿವರ್ಸಲ್ ಬ್ಲಾಕ್‌ಚೈನ್ ಯುನಿವರ್ಸಿಟಿ (ಯುಬಿಯು), ಫ್ಲೋರಿಡಾ (ಯುಎಸ್‌ಎ)ದಿಂದ ಆಯೋಜಿಸಲಾದ ವರ್ಲ್ಡ್ ಮೆಟಾ ಸಮ್ಮಿಟ್-2026 ಅಂತಾರಾಷ್ಟ್ರೀಯ ಸಮಾವೇಶದಲ್ಲಿ ದೇಶ-ವಿದೇಶಗಳ ಗಣ್ಯರು, ತಂತ್ರಜ್ಞಾನ ತಜ್ಞರು, ಶೈಕ್ಷಣಿಕ ವಲಯದ ಪ್ರತಿನಿಧಿ ಭಾಗವಹಿಸಿದ್ದರು.

ಮೊದಲ ಹಂತದಲ್ಲಿ 56 ನೋಟಿಸ್ ಜಾರಿ | ಜಲಮಂಡಳಿಗೆ 12.15 ಕೋಟಿ ರೂ. ಸಂಗ್ರಹ

ಒಟಿಎಸ್‌ಗೆ ಗ್ರಾಹಕರ ಉತ್ತಮ ಸ್ಪಂದನೆ

ಬೆಂಗಳೂರು: ಜಲಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ಹೊಸದಾಗಿ ಜಾರಿಗೆ ತಂದಿರುವ ಒನ್ ಟೈಮ್ ಸೆಟಲ್‌ಮೆಂಟ್ (ಒಟಿಎಸ್) ಯೋಜನೆಗೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ಸಿಕ್ಕಿದ್ದು, ಮೊದಲ ಹಂತದಲ್ಲಿ 56 ಸಾವಿರ ನೋಟಿಸ್ ವಿತರಿಸಲಾಗಿದೆ. 12.15 ಕೋಟಿ ರೂ. ಸಂಗ್ರಹವಾಗಿದೆ ಎಂದು ಜಲಮಂಡಳಿ ತಿಳಿಸಿದೆ.

ಮಾಧ್ಯಮಕ್ಕೆ ಮಾಹಿತಿ ನೀಡಿರುವ ಜಲಮಂಡಳಿ, ದೀರ್ಘಕಾಲದಿಂದ ಬಿಲ್ ಬಾಕಿ ಉಳಿಸಿಕೊಂಡಿರುವ ಗ್ರಾಹಕರಿಗೆ ಆರ್ಥಿಕ ಹೊರೆ ತಗ್ಗಿಸುವ ಉದ್ದೇಶದಿಂದ ರೂಪಿಸಲಾದ ಈ ಯೋಜನೆಯು, ತ್ವರಿತ ಆಡಳಿತಾತ್ಮಕ ಅನುಷ್ಠಾನ ಮತ್ತು ಸಾರ್ವಜನಿಕರ ಸಹಭಾಗಿತ್ವದೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದೆ. 3,73,883 ದಾಖಲೆಗಳ ಪೈಕಿ ಒಟಿಎಸ್ ಯೋಜನೆಗೆ ಅರ್ಹವಾದ 2,81,019 ದಾಖಲೆಗಳನ್ನು ಯಶಸ್ವಿಯಾಗಿ ಪ್ರತ್ಯೇಕಿಸಲಾಗಿದೆ. ಈಗಾಗಲೇ 2,12,359 ನೋಟಿಸ್ ಗಳನ್ನು ಮುದ್ರಿಸಿ ಆಯಾ ಉಪ-ವಿಭಾಗಗಳಿಗೆ ವಿತರಣೆಗಾಗಿ ಕಳುಹಿಸಲಾಗಿದೆ ಎಂದು ಮಾಹಿತಿ ನೀಡಿದೆ.

ಈ ಬೃಹತ್ ಪ್ರಮಾಣದ ನೋಟಿಸ್‌ಗಳನ್ನು ನಿಭಾಯಿಸಲು ಮತ್ತು ಗ್ರಾಹಕರಿಗೆ ಯೋಜನೆಯ ಲಾಭ ಪಡೆಯಲು ವಿಳಂಬವಾಗದಂತೆ ನೋಡಿಕೊಳ್ಳಲು, ಮಂಡಳಿಯು ಮುದ್ರಣ ಕಾರ್ಯವನ್ನು ಹೊರಗುತ್ತಿಗೆ ನೀಡಿದೆ.

ನಿಯೋಜಿತ ಸಂಸ್ಥೆಯು ಪ್ರಸ್ತುತ ಪ್ರತಿ 48 ಗಂಟೆಗಳಿಗೆ 50,000 ದಷ್ಟು ನೋಟಿಸ್ ಗಳನ್ನು ಮುದ್ರಿಸುವ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಬಾಕಿ ಉಳಿದಿರುವ 1,17,098 ನೋಟಿಸ್ ಗಳನ್ನು ಮೇ 10 ರ, 2026 ರೊಳಗೆ ಮುದ್ರಿಸಿ, ಫಲಾನುಭವಿಗಳಿಗೆ ತಲುಪಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದೆ.



ಗ್ರಾಹಕರಿಗೆ ಬಡ್ಡಿ ಮನ್ನಾ ಸೌಲಭ್ಯ

ಈ ಯೋಜನೆಯ ಮೂಲಕ ಒಟ್ಟು 471.56 ಕೋಟಿ ರೂ. ಅಸಲು ಬಾಕಿಯನ್ನು ಸಂಗ್ರಹಿಸುವ ಗುರಿ ಜಲಮಂಡಳಿಯದ್ದಾಗಿದೆ. 252.29 ಕೋಟಿ ರೂ.ಗಳಷ್ಟು ಬಡ್ಡಿ ಮನ್ನಾದ ಸೌಲಭ್ಯವನ್ನು ಗ್ರಾಹಕರಿಗೆ ಈ ಯೋಜನೆ ಒದಗಿಸುತ್ತಿದೆ. ವಿತರಿಸಲಾದ ಕೇವಲ 56,765 ನೋಟಿಸ್‌ಗಳ ಮೊದಲ ಬ್ಯಾಚ್ ನಿಂದಲೇ ಮಂಡಳಿಯು ಬರೋಬ್ಬರಿ 12.15 ಕೋಟಿ ರೂ. ಸಂಗ್ರಹಿಸಿದೆ ಎಂದು ಜಲಮಂಡಳಿ ಮಾಹಿತಿ ನೀಡಿದೆ.

- ನಗರದಾದ್ಯಂತ 2,81,019 ಅರ್ಹ ಫಲಾನುಭವಿಗಳ ಗುರುತಿಸುವಿಕೆ
- ಈಗಾಗಲೇ 2,12,359 ನೋಟಿಸ್‌ಗಳ ಮುದ್ರಣ ಹಾಗೂ ಆಯಾ ಉಪ-ವಿಭಾಗಗಳಿಗೆ ರವಾನೆ
- ಮೊದಲ ಹಂತದಲ್ಲಿ 12.15 ಕೋಟಿ ರೂ. ಸಂಗ್ರಹ
- ಬಾಕಿ ಉಳಿದಿರುವ ನೋಟಿಸ್‌ನ್ನು ಮೇ 10ರ ರೊಳಗೆ ಮುದ್ರಿಸಿ ವಿತರಿಸುವ ಗುರಿ



ಯಾವುದೇ ಆರ್ಥಿಕ ಸಂಕಷ್ಟವಿಲ್ಲದೆ ಪ್ರತಿಯೊಬ್ಬ ನಾಗರಿಕರಿಗೂ ಶುದ್ಧ ನೀರು ಸಿಗಬೇಕೆಂಬ ಸಂಕಲ್ಪವೇ ಈ ಯೋಜನೆಯ ಹಿಂದಿನ ಪ್ರೇರಕ ಶಕ್ತಿಯಾಗಿದೆ. ಒಟಿಎಸ್ ಯೋಜನೆಗೆ ಅಭೂತಪೂರ್ವ ಪ್ರತಿಕ್ರಿಯೆ ಸಿಗುತ್ತಿದೆ ಎಲ್ಲಾ ಅರ್ಹ ನಾಗರಿಕರು ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

■ ಡಾ. ರಾಮ್ ಪ್ರಸಾತ್ ಮನೋಹರ್, ಜಲಮಂಡಳಿ ಅಧ್ಯಕ್ಷ

ಕೌಟುಂಬಿಕ ಕಲಹ: ಮಕ್ಕಳಿಗೆ ವಿಷ ಹಾಕಿ ತಾಯಿ ಆತ್ಮಹತ್ಯೆ

ಬೆಂಗಳೂರು: ನಗರದ ಯಶವಂತಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೌಟುಂಬಿಕ ಕಲಹದಿಂದ ಬೇಸರಗೊಂಡು ಮಹಿಳೆಯೊಬ್ಬರು ತನ್ನಿಬ್ಬರು ಮಕ್ಕಳಿಗೆ ವಿಷವುಣಿಸಿ ಕೊಲೆ ಮಾಡಿ ನಂತರ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾರೆ.

ಮತ್ತಿಕೆರೆ ನಿವಾಸಿ ಪವಿತ್ರಾ ಅವರು ತನ್ನ ಎರಡು ವರ್ಷದ ಮತ್ತು ನಾಲ್ಕು ವರ್ಷದ ವಯಸ್ಸಿನ ಇಬ್ಬರು ಗಂಡು ಮಕ್ಕಳಿಗೆ ವಿಷ ನೀಡಿದ್ದಾರೆ. ಬಳಿತ ತಾವು ಆತ್ಮಹತ್ಯೆಗೂ ಯತ್ನಿಸಿದ್ದಾರೆ. ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಪಾವಗಡದ ದಂಪತಿ ಕಳೆದ ಆರು ವರ್ಷದ ಹಿಂದೆ ನಗರಕ್ಕೆ ಬಂದು ನೆಲಸಿದ್ದರು. ಪ್ರಶಾಂತ್ ಮೊಬೈಲ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದರೆ, ಪವಿತ್ರಾ ಗೃಹಿಣಿಯಾಗಿದ್ದಳು. ದಂಪತಿಗೆ ಇಬ್ಬರು ಗಂಡು ಮಕ್ಕಳಿದ್ದರು. ದಂಪತಿ ನಡುವೆ ಇತ್ತೀಚಿಗೆ ಸಣ್ಣ-ಪುಟ್ಟ ಕಾರಣಕ್ಕೆ ಆಗಾಗ್ಗೆ ಗಲಾಟೆ ಯಾಗುತ್ತಿತ್ತು. ಶನಿವಾರ ಸಹ ದಂಪತಿ ನಡುವೆ ಗಲಾಟೆಯಾಗಿದೆ. ಪವಿತ್ರಾ ಪಾಷಾಣ ಹಾಲಿನಲ್ಲಿ ಬೆರೆಸಿ, ಮಕ್ಕಳಿಬ್ಬರಿಗೆ ಕುಡಿಸಿ, ಬಳಿಕ ತಾವು ಕುಡಿದಿದ್ದಾರೆ. ಪ್ರಶಾಂತ್ ಯಶವಂತಪುರ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಆದರೆ, ಮಕ್ಕಳಿಬ್ಬರೂ ಮೃತಪಟ್ಟಿದ್ದರು. ಯಶವಂತಪುರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಸ್ಪೋಕನ್ ಟ್ಯುಟೋರಿಯಲ್ ಸ್ಕಿಲ್ ಆಕ್ಸಿಲರೇಟರ್ ಲ್ಯಾಬ್ ಉದ್ಘಾಟನೆ

ತಾಂತ್ರಿಕ ಶಿಕ್ಷಣ ಕೌಶಲಾಭಿವೃದ್ಧಿಗೆ ಸಹಕಾರಿ

ಕೆಂಗೇರಿ: ತಾಂತ್ರಿಕ ಶಿಕ್ಷಣ ಕೇಂದ್ರದಲ್ಲಿ ಆಕ್ಸಿಲರೇಟರ್ ವಿದ್ಯಾರ್ಥಿಗಳ ಕೌಶಲಾಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಆರ್.ಎನ್.ಎಸ್. ಇಂಜಿನೀಯರಿಂಗ್ ಕಾಲೇಜಿನ ಪ್ರಾಂಶುಪಾಲ ಡಾ. ರಮೇಶ್ ಬಾಬು ಎಚ್.ಎನ್. ಹೇಳಿದರು.

ಕೆಂಗೇರಿ –ಉತ್ತರಹಳ್ಳಿ ಮುಖ್ಯ ರಸ್ತೆಯಲ್ಲಿರುವ ಆರ್ ಎನ್ ಎಸ್ ತಾಂತ್ರಿಕ ವಿದ್ಯಾಲಯದಲ್ಲಿ ಸ್ಪೋಕನ್ ಟ್ಯುಟೋರಿಯಲ್ ಎಡ್ಯುಪಿರಮಿಡ್ಸ್ ಸೈನ್ಸ್ ಹಾಗೂ ಐಟಿಐ ಬಾಂಬೆ ಸಹಯೋಗದಲ್ಲಿ ತೆರೆದಿರುವ ಕರ್ನಾಟಕದ ಪ್ರಥಮ ಸ್ಪೋಕನ್ ಟ್ಯುಟೋರಿಯಲ್ ಸ್ಕಿಲ್ ಆಕ್ಸಿಲರೇಟರ್ ಲ್ಯಾಬ್ ಉದ್ಘಾಟಿಸಿ ಮಾತನಾಡಿದ ಅವರು, ಆರ್ ಎನ್ ಎಸ್ ತಾಂತ್ರಿಕ ಶಿಕ್ಷಣ ಕಾಲೇಜು



ಹೊಸ ಮೈಲಿಗಲ್ಲು ನಿರ್ಮಿಸುವ ನಿಟ್ಟಿನಲ್ಲಿ ದೃಢ ಹೆಜ್ಜೆ ಇಟ್ಟಿದೆ. ಇಡೀ ರಾಜ್ಯದಲ್ಲಿ ಇಂತಹ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ನೀಡಲು ಆರ್ ಎನ್ ಎಸ್ ತಾಂತ್ರಿಕ ವಿದ್ಯಾಲಯ ಹೊರಹೊಮ್ಮಿದೆಂದರು.

ವಿದ್ಯಾರ್ಥಿಗಳು ಈ ಸೌಲಭ್ಯದ ಸದುಪಯೋಗ ಪಡೆದುಕೊಂಡು ಕೌಶಲ್ಯಧಾರಿತ ಶಿಕ್ಷಣ ಪಡೆಯುವುದರ ಜೊತೆಗೆ ಕೌಶಲ್ಯ ಅಭಿವೃದ್ಧಿಗೆ ಹೆಚ್ಚಿನ ಆಸಕ್ತಿ ತೋರುವ ಮೂಲಕ ಸಾಧನೆಗೆ ಪೂರಕವಾಗುತ್ತದೆ ಎಂದು ವಿಭಾಗದ ಮುಖ್ಯಸ್ಥ ಡಾ. ಸುರೇಶ್ ಎಲ್. ಕಿವಿ ಮಾತು ಹೇಳಿದರು. ಈ ವೇಳೆ ಶಿಕ್ಷಕರ ಸಂಯೋಜಕರು ಹಾಗೂ ಸ್ಪೋಕನ್ ಟ್ಯುಟೋರಿಯಲ್ ಸಮಿತಿ ಸದಸ್ಯರಿಗೆ ಪ್ರಮಾಣ ಪತ್ರ ನೀಡಿ ಸನ್ಮಾನಿಸಲಾಯಿತು. ವಿಭಾಗದ ಮುಖ್ಯಸ್ಥ ಡಾ.ಸುರೇಶ್.ಎಲ್, ಡಾ. ಅಂದೇ ಪಲ್ಲವಿ, ಚೈತ್ರ. ಎಚ್.ಗಾವಡೆ, ಸತೀಶ್ ಆರ್. ಶೆಟ್ಟಿ, ಕರಣ್ ಎಸ್.ಶೆಟ್ಟಿ, ಮುರುಳಿ ಕೃಷ್ಣ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ದೂರಿಗಾಗಿ ಗ್ರಾಹಕರು ಬೆಸ್ಕಾಂ ಸಹಾಯವಾಣಿ ಬಳಸಿ

ಬೆಂಗಳೂರು: ವಿದ್ಯುತ್ ಸಂಬಂಧಿತ ದೂರನ್ನು ದಾಖಲಿಸಲು ವಾಟ್ಸಪ್ ಸಹಾಯವಾಣಿ ಸಂಖ್ಯೆಗಳು ಹಾಗೂ ಬೆಸ್ಕಾಂ ಸಾಮಾಜಿಕ ಜಾಲತಾಣಗಳ ಮೂಲಕ ದೂರು ದಾಖಲಿಸಲು ಗ್ರಾಹಕರಿಗೆ ಬೆಸ್ಕಾಂ ಮನವಿ ಮಾಡಿದೆ.

ಬೆಸ್ಕಾಂನ 1912 ಸಹಾಯವಾಣಿ ಸಂಖ್ಯೆಯ ಸಂಪರ್ಕ ಸಾಧ್ಯವಾಗದಿದ್ದರೆ, 11 ವಿಭಾಗದ ವಾಟ್ಸಪ್ ಸಹಾಯವಾಣಿ ಸಂಖ್ಯೆ ಅಥವಾ ಸಾಮಾಜಿಕ ಜಾಲತಾಣಗಳಾದ ಬೆಸ್ಕಾಂ ಫೇಸ್ ಬುಕ್ ಖಾತೆ https://www.facebook.com/bescomblr, ಎಕ್ಸ್ ಖಾತೆ https://x.com/NammaBESCOM ಮೂಲಕ ದೂರು ದಾಖಲಿಸಬಹುದೆಂದು ಬೆಸ್ಕಾಂ ತಿಳಿಸಿದೆ.

ವಾಟ್ಸಪ್ ಸಹಾಯವಾಣಿ ಸಂಖ್ಯೆಗಳು: ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ ವೃತ್ತ-8277884011, ಪಶ್ಚಿಮ ವೃತ್ತ-8277884012, ಪೂರ್ವ ವೃತ್ತ-8277884013, ಉತ್ತರ ವೃತ್ತ-8277884014, ಕೋಲಾರ ಜಿಲ್ಲೆ -8277884015, ಚಿಕ್ಕಬಳ್ಳಾಪುರ ಜಿಲ್ಲೆ-8277884016, ಬೆಂಗಳೂರು ಗ್ರಾಮಾಂತರ ಜಿಲ್ಲೆ-8277884017, ರಾಮನಗರ ಜಿಲ್ಲೆ -8277884018, ತುಮಕೂರು ಜಿಲ್ಲೆ -8277884019, ಚಿತ್ರದರ್ಗ ಜಿಲ್ಲೆ-8277884020, ಮತ್ತು ದಾವಣಗೆರೆ ಜಿಲ್ಲೆ-8277884021. ಸಹಾಯವಾಣಿ ಸಂಖ್ಯೆಗಳಿಗೆ ಸಂದೇಶದ ಜೊತೆಗೆ ವಿದ್ಯುತ್ ಸಂಬಂಧಿತ ದೂರ ಫೋಟೋ ಹಾಗೂ ವಿಡಿಯೋವನ್ನು ಸಹ ಕಳುಹಿಸಬಹುದಾಗಿದೆ ಎಂದು ಬೆಸ್ಕಾಂ ತಿಳಿಸಿದೆ.

ಬದುಕನ್ನು ರೂಪಿಸಿದ ವಚನ ಪರಂಪರೆ

ಬೆಂಗಳೂರು: ಬಸವಣ್ಣನವರಿಂದ ಪ್ರಾರಂಭವಾದ ವಚನ ಪರಂಪರೆ ತಮ್ಮ ಬದುಕನ್ನು ರೂಪಿಸಿದೆ. ವಚನಗಳು ಜೀವನದ ದಿಕ್ಕು ತೋರಿಸುವ ದೀಪಗಳು. ಯಾವುದೇ ವಿಷಯದ ಮೇಲೆ ಮಾತನಾಡುವ ಶಕ್ತಿ ವಚನಗಳಿಂದಲೇ ಬರುತ್ತದೆ ಎಂದು ಸಾಹಿತಿ ಹಂಪ ನಾಗರಾಜಯ್ಯ ತಿಳಿಸಿದರು.

ನಗರದ ಜರಗನಹಳ್ಳಿಯಲ್ಲಿರುವ ಎಸ್.ಎಂ.ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರರ ಜಯಂತಿ ಮತ್ತು ಶರಣ ಮುಕುಟ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, ಸಿ.ಸೋಮಶೇಖರ್ ಅವರ ವಚನ ಸಾಹಿತ್ಯದ ಅಧ್ಯಯನ ಹಾಗೂ ಪಿಎಚ್.ಡಿ ಸಂಶೋಧನೆಗೆ ವಿಶೇಷ ಮೆಚ್ಚುಗೆ ಇದೆ. ಕೃಷ್ಣನ ಬಾಯಲ್ಲಿ ಬ್ರಹ್ಮಾಂಡ ಕಾಣುವಂತೆ, ಸೋಮಶೇಖರ್ ಅವರ ಮಾತುಗಳಲ್ಲಿ ವಚನಗಳ ಅಖಂಡ ಸಂಪತ್ತು ಗೋಚರಿಸುತ್ತದೆ ಎಂದರು.

ಸನ್ಮಾನ ಕೇವಲ ಆಚರಣೆ ಅಲ್ಲ, ಅದು ವ್ಯಕ್ತಿಯ ಸಾಧನೆಗೆ ಸಮಾಜ ನೀಡುವ ಗೌರವದ ಮುದ್ರೆ. ಹಿರಿಯರನ್ನು ಸನ್ಮಾನಿಸುವ ಅಪರೂಪದ ಅವಕಾಶ ದೊರೆತಿರುವುದು ತಮ್ಮ ಬದುಕಿನ ಸೌಭಾಗ್ಯ. ಜರಗನಹಳ್ಳಿ ಶಿವಶಂಕರ ಅವರ ಸಾಹಿತ್ಯ ಸೇವೆ ಸ್ಮರಣೀಯ. ಚುಟುಕುಗಳು ಮತ್ತು ಕಿರುಪದ್ಯಗಳ ಮೂಲಕ ಕನ್ನಡ ಸಾಹಿತ್ಯಕ್ಕೆ ಹೊಸ ಆಯಾಮ ನೀಡಿದರು.

ತಮ್ಮ ಕೃತಿಗಳ ಮೂಲಕ ಜನಮನಗಳಲ್ಲಿ ಶಾಶ್ವತ ಸ್ಥಾನ ಗಳಿಸಿದ್ದಾರೆ. ಅವರ ಸಾಹಿತ್ಯ ಶಿಲಾಲಿಪಿಯಂತೆ ಕಾಲಾಂತರಕ್ಕೂ ಉಳಿಯುತ್ತದೆ. ಯೋಗ್ಯರನ್ನು ಪ್ರಶಸ್ತಿಗಳಿಗೆ ಗುರುತಿಸುವುದು ಇಂದಿನ ಕಾಲದಲ್ಲಿ ದೊಡ್ಡ ಸವಾಲು. ಆದರೆ ಶರಣ ಮುಕಟ ಪ್ರಶಸ್ತಿ ನಿಜವಾಗಿ ಅರ್ಹರಿಗೆ ಸಂದಿದೆ. ಈ ಗೌರವವು ಕೇವಲ ವ್ಯಕ್ತಿಗಲ್ಲ, ಸಾಹಿತ್ಯ ಸೇವೆಯ ಪ್ರತೀಕಕ್ಕೆ ಎಂದರು. ಕಾರ್ಯಕ್ರಮದಲ್ಲಿ ಶರಣ ಮುಕಟ ಪ್ರಶಸ್ತಿಯನ್ನು ಸಾಹಿತಿ ಗೊ.ರು. ಚೆನ್ನಬಸಪ್ಪ ಅವರಿಗೆ ನೀಡಲಾಯಿತು.

ಆಳವಾಗಿ ಬೇರು ಬಿಡುವ ಗಿಡ ನೆಡಿ

ಬೆಂಗಳೂರು: ನಗರದಲ್ಲಿ ಏ.29 ರಂದು ಸುರಿದ ಮಳೆಗೆ ನೂರಾರು ಮರಗಳು ಧರೆಗುರುಳಿ ಸಾರ್ವಜನಿಕ ಸಂಚಾರಕ್ಕೆ ತೀವ್ರ ವ್ಯತ್ಯಯ ಉಂಟಾಗಿತ್ತು. ಆದ್ದರಿಂದ ಕೂಡಲೇ ಅಪಾಯಕಾರಿ ಮರಗಳನ್ನು ತೆರವುಗೊಳಿಸಿ. ತೆರವುಗೊಳಿಸಿದ ಖಾಲಿ ಜಾಗದಲ್ಲಿ ಮಣ್ಣಿನೊಳಗೆ ಆಳವಾಗಿ ಬೇರು ಬಿಡುವ ಸಸಿಗಳನ್ನು ನೆಟ್ಟು ಪೋಷಿಸಸಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ಕ್ಕೆ ಅರಣ್ಯ ಸಚಿವ ಈಶ್ವರ ಖಂಡ್ರೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಜಿಬಿಎ ಅಧಿಕಾರಿಗಳಿಗೆ ಅರಣ್ಯ ಸಚಿವ ಖಂಡ್ರೆ ಸೂಚನೆ

ನಗರದಾದ್ಯಂತ ಮಳೆ ಮತ್ತು ಗಾಳಿಗೆ ಮರಗಳು ಹಾಗೂ ಮರದ ರೆಂಬೆಗಳು ಮುರಿದು ಬೀಳುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಸಚಿವರು, ಗೆದ್ದಲು ಹಿಡಿದಿರುವ, ಒಳಗಿನಿಂದ ಟೊಳ್ಳಾಗಿರುವ ಹಾಗೂ ಬುಡ ಸಮೇತ ವಾಲಿ ನಿಂತಿರುವ ಅಪಾಯಕಾರಿ ಮರಗಳನ್ನು ತಕ್ಷಣವೇ ಗುರುತಿಸಿ ತೆರವುಗೊಳಿಸಲು ಸೂಚಿಸಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪರಶಿವಮೂರ್ತಿ ಹೇಳಿಕೆ

ಶಿವತತ್ವ ಚಿಂತಾಮಣಿ ಕೃತಿ ಬಹುತ್ವದ ಸಂಕೇತ

ಬೆಂಗಳೂರು: ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಿಕ ಇತಿಹಾಸದಲ್ಲಿ ಶಿವತತ್ವ ಚಿಂತಾಮಣಿ ಕೃತಿಯು ಒಂದು ವಿಶಿಷ್ಟ ಮೈಲಿಗಲ್ಲು. ಲಕ್ಕಣ್ಣ ದಂಡೇಶ ರಚಿತ ಈ ಕೃತಿ ಕೇವಲ ಒಂದು ಪುರಾಣ ಕಾವ್ಯವಲ್ಲ, ಬದಲಾಗಿ ಅದು ಅಂದಿನ ಕಾಲದ ಬಹುತ್ವದ ಸಂಕೇತವಾಗಿ ಇಂದಿಗೂ ಪ್ರಸ್ತುತವಾಗಿದೆ ಎಂದು ಹಂಪಿ ಕನ್ನಡ ವಿವಿ ಕುಲಪತಿ ಪ್ರೊ. ಡಿ.ವಿ. ಪರಶಿವಮೂರ್ತಿ ಹೇಳಿದರು.

ಮಿಥಿಕ್ ಸೊಸೈಟಿ ವತಿಯಿಂದ ಹಮ್ಮಿಕೊಂಡಿದ್ದ ಮಧ್ಯಕಾಲೀನ ಕರ್ನಾಟಕದ ಬಹುತ್ವದ ಪ್ರತಿಫಲನ ಶಿವತತ್ವ ಚಿಂತಾಮಣಿ ಎಂಬ ಉಪನ್ಯಾಸ ಮಾತನಾಡಿ, ಭಾಷಿಕವಾಗಿ ಬಹುತ್ವ ಎಂದರೆ ಒಂದಕ್ಕಿಂತ ಹೆಚ್ಚು ಎಂಬ ಅರ್ಥವಿದ್ದರೂ, ಲಕ್ಕಣ್ಣ ದಂಡೇಶನ ದೃಷ್ಟಿಯಲ್ಲಿ ಅದು ಸಾಂಸ್ಕೃತಿಕವಾಗಿ ಎಲ್ಲವನ್ನೂ ಒಳಗೊಳ್ಳುವ, ಗೌರವಿಸುವ ಮತ್ತು ಒಪ್ಪಿಕೊಳ್ಳುವ ವಿಶಾಲ ಮನೋಭಾವವಾಗಿದೆ. ಶಂಕರಾಚಾರ್ಯರು, ರಾಮಾನುಜಾಚಾರ್ಯರು, ಬಸವಣ್ಣನವರು ಹಾಗೂ ಹರಿದಾಸರ ಆಶಯವನ್ನು ಭವಿಷ್ಯದತ್ತ ಮುಖ ಮಾಡಿ ಕಟ್ಟಿಕೊಟ್ಟ ಪ್ರಬಲ ಕರ್ನಾಟಕದ ಚಿತ್ರಣ ಈ ಕೃತಿಯಲ್ಲಿದೆ ಎಂ ದರು.



ವಾರ್ಧಕ ಷಟ್ಪದಿಯಲ್ಲಿ ಕೃತಿ ರಚನೆ

ಸಾಮಾನ್ಯವಾಗಿ ಕವಿಗಳು ಸುಲಭವಾದ ಭಾಮಿನಿ ಷಟ್ಪದಿಯನ್ನು ಬಳಸುತ್ತಾರೆ. ಆದರೆ ಲಕ್ಕಣ್ಣ ದಂಡೇಶನು ಅತ್ಯಂತ ಕ್ಲಿಷ್ಟಕರವಾದ ಮತ್ತು ವಿಸ್ತಾರವಾದ ವಾರ್ಧಕ ಷಟ್ಪದಿಯನ್ನು ಆಯ್ದುಕೊಂಡಿದ್ದಾನೆ. ಒಬ್ಬನೇ ಶರಣನ ಬಗ್ಗೆ ಪದ್ಯ ಬರೆಯುವ ಬದಲು, ಒಂದೇ ಪದ್ಯದಲ್ಲಿ 10-12 ಶರಣರ ಹೆಸರನ್ನು ಉಲ್ಲೇಖಿಸುವ ಮೂಲಕ ಸಂಕ್ಷಿಪ್ತತೆಯಲ್ಲಿ ಸಮಗ್ರತೆಯನ್ನು ಸಾಧಿಸಿದ್ದಾನೆ ಎಂದು ಪ್ರೊ. ಡಿ.ವಿ. ಪರಶಿವಮೂರ್ತಿ ಹೇಳಿದರು.

ಲಕ್ಕಣ್ಣ ದಂಡೇಶ ಶೈವ ಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿದ್ದರೂ, ವೀರಶೈವ ತತ್ವಗಳನ್ನೊಳಗೊಂಡ ಈ ಬೃಹತ್ ಕೃತಿಯನ್ನು ರಚಿಸಿದ್ದು ಆ ಕಾಲದ ಧಾರ್ಮಿಕ ಸಹಿಷ್ಣುತೆ ಮತ್ತು ಉದಾತ್ತ ಮನೋಭಾವಕ್ಕೆ ಸಾಕ್ಷಿ. ಇಲ್ಲಿ ಬಹುತ್ವ ಎಂದರೆ ಕೇವಲ ಸಂಖ್ಯೆಯಲ್ಲ, ಬದಲಾಗಿ ಎಲ್ಲವನ್ನೂ ಒಳಗೊಳ್ಳುವ, ಒಪ್ಪಿಕೊಳ್ಳುವ ಮತ್ತು ಗೌರವಿಸುವ ಸಾಂಸ್ಕೃತಿಕ ಆಚರಣೆಯಾಗಿದೆ ಹೇಳಿದರು. ವಿಜಯನಗರದ ಅರಸ ಪ್ರೌಢದೇವರಾಯನ ಕಾಲವು ಸಾಹಿತ್ಯದ ಪುನರುತ್ಥಾನದ ಕಾಲ. ಆತ 12ನೇ ಶತಮಾನದ ವಚನಗಳನ್ನು ಸಂರಕ್ಷಿಸಿ, ಅವುಗಳಿಗೆ ವ್ಯಾಖ್ಯಾನ ಬರೆಸುವ ಮೂಲಕ ವಚನ ಸಾಹಿತ್ಯಕ್ಕೆ ಮರುಜೀವ ನೀಡಿದವನು. ಲಕ್ಕಣ್ಣ ದಂಡೇಶನು ಅರಸನ ಆಪ್ತನಾಗಿದ್ದುಕೊಂಡು, ತನ್ನ ಕೃತಿಯ ಮೂಲಕ ಶರಣರ ಚರಿತ್ರೆಗೆ ಆಧಾರವೊದಗಿಸಿದ್ದಾನೆ. ಬಸವಣ್ಣನವರ ಜನನ ಕಾಲದ ಕುರಿತು ನಿಖರವಾದ ಮಾಹಿತಿ ನೀಡುವಲ್ಲಿಯೂ ಈ ಕೃತಿ ಪ್ರಮುಖ ಪಾತ್ರ ವಹಿಸಿದೆಎಂದರು. ಕಾರ್ಯಕ್ರಮದಲ್ಲಿ ಮಿಥಿಕ್ ಸೊಸೈಟಿಯ ಅಧ್ಯಕ್ಷ ವಿ. ನಾಗರಾಜ್ ಉಪಸ್ಥಿತರಿದ್ದರು.

ರಂಗೋಲಿ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ

ರಂಗೋಲಿ ನಾಡಿನ ಸಂಸ್ಕೃತಿ ಪ್ರತೀಕ

ಕೆಂಗೇರಿ: ಗ್ರಾಮೀಣ ಪ್ರದೇಶದ ಮಹಿಳೆಯರನ್ನು ಪ್ರೋತ್ಸಾಹಿಸುವ ಮೂಲಕ ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ ಎಂದು ಕಗ್ಗಲೀಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚಿಕ್ಕರಾಜು ಹೇಳಿದರು.

ಕುಂಬಳಗೋಡು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಚೇಪಾಳ್ಯ, ಕಂಬೀಪುರ, ಹೊಸಪಾಳ್ಯ, ಗೇರು ಪಾಳ್ಯ, ಕಬ್ಬಾಳಮ್ಮನಪಾಳ್ಯ ಮುಂತಾದ ಗ್ರಾಮಗಳಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾಸಕ ಎಸ್.ಟಿ. ಸೋಮಶೇಖರ್ ಅವರ ನೇತೃತ್ವದಲ್ಲಿ ಮಹಿಳೆಯರಿಗಾಗಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಭಾರತೀಯ ಸಂಸ್ಕೃತಿಯ ಪ್ರತೀಕ, ರಂಗೋಲಿ, ಸಾಂಪ್ರದಾಯಿಕ ಕಲೆಯಾದ ರಂಗೋಲಿಗೆ ಪ್ರೋತ್ಸಾಹ ನೀಡುವುದರ ಜತೆಗೆ ಜಯಗಳಿಸಿದಂತಹ ಮಹಿಳೆಯರಿಗೆ ಬಹುಮಾನ ವಿತರಿಸಲಾಗುವುದು ಹಾಗೂ ಭಾಗವಹಿಸಿದ ಎಲ್ಲಾ ಮಹಿಳೆಯರಿಗೆ ಸಮಾಧಾನಕರ ಬಹುಮಾನ ನೀಡಲಾಗುವುದು ಎಂದರು.

ವಾರ್ಡ್ ಅಧ್ಯಕ್ಷ ಮಣ್ಣಿನ ಮಗ ರಾಮಕೃಷ್ಣ ಮಾತನಾಡಿ, ರಂಗೋಲಿ ಸ್ಪರ್ಧೆಗಳು ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಜತೆಗೆ, ಮಹಿಳೆಯರ ಸೃಜನಶೀಲತೆ ಪ್ರೋತ್ಸಾಹಿಸುವ, ಸಮುದಾಯದ ಬಾಂಧವ್ಯವನ್ನು ವೃದ್ಧಿಸಿ ಸೌಹಾರ್ದ ಮೂಡಿಸುವಂತಹ ಸುಂದರ ಕಲೆಯಾಗಿದೆ ಎಂದರು.



ಮಹಿಳಾ ಬ್ಲಾಕ್ ಅಧ್ಯಕ್ಷೆ ಸುಮಾ ಜನಾರ್ದನ್, ಕುಂಬಳಗೋಡು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಪಟೇಲ್ ದೇವರಾಜ್, ರಾಮಕೃಷ್ಣ ಮಾಜಿ ಉಪಾಧ್ಯಕ್ಷ ಗೋಪಾಲಕೃಷ್ಣ ಜೈ ಕರ್ನಾಟಕ ಅಧ್ಯಕ್ಷ ಶ್ರೀನಿವಾಸ್, ನಂಜೇಗೌಡ, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಧರ್ಮಯ್ಯ, ಅನೀಶ್, ಅನೀಫ್ ,ಅರುಣ್ ಕುಮಾರ್, ಮಹೇಂದ್ರ ಕಿರಣ್, ಲತಾ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

ವೀಲ್‌ಚೇರ್ ವಿತರಣೆ

ಬಂಟ್ವಾಳ :ತಾಲೂಕಿನ ನರಿಕೊಂಬು ಗ್ರಾಮದ ದೋಟ ಜನಾರ್ಧನರವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜನಮಂಗಳ ಕಾರ್ಯಕ್ರಮದಡಿಯಲ್ಲಿ ಉಚಿತವಾಗಿ ವೀಲ್‌ಚೇರ್ ವಿತರಿಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬಂಟ್ವಾಳ ಇದರ ತುಂಬೆ ವಲಯ ಮೇಲ್ವಿಚಾರಕಿ ಮಮತಾ ಬಿ. ಕೆ., ನರಿಕೊಂಬು ಕಾರ್ಯಕ್ಷೇತ್ರದ ಒಕ್ಕೂಟ ಸೇವಾಪ್ರತಿನಿಧಿಗಳಾದ ಕುಸುಮಾವತಿ, ಪ್ರತಿಭಾ, ಒಕ್ಕೂಟ ಪದಾಧಿಕಾರಿಗಳಾದ ಆಶಾಲತ, ತಿಮ್ಮಪ್ಪ ಗುವೇಲ್ ಮಾರ್, ರತ್ನಾವತಿ ದೋಟ, ಮೊದಲಾದವರು ಉಪಸ್ಥಿತರಿದ್ದರು.

ಕಿರುಸುದ್ದಿ

ರುಡ್ ಸೆಟ್ : ಫಾಸ್ಟ್ ಪುಡ್ ತಯಾರಿಕೆ ತರಬೇತಿ ಸಮಾರೋಪ

ಬೆಳ್ತಂಗಡಿ: ಉಜಿರೆಯಲ್ಲಿ ರುಡ್ ಸೆಟ್ ಸಂಸ್ಥೆಯ ವತಿಯಿಂದ ಹಮ್ಮಿಕೊಳ್ಳಲಾದ ಫಾಸ್ಟ್ ಪುಡ್ ತಯಾರಿಕೆ ತರಬೇತಿ ಕಾರ್ಯಕ್ರಮದ ಸಮಾರೋಪ ಸಮಾರಂಭ ನಡೆಯಿತು.ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಅರುಣ ಕುಮಾರ್, ಉಜಿರೆ ದಿಶಾ ಸಮೂಹ ಸಂಸ್ಥೆಗಳ ಮಾಲಕರು, ಭಾಗವಹಿಸಿ ತಮ್ಮ ಉದ್ಯಮದ ಬೆಳವಣಿಗೆಯ ಪಯಣವನ್ನು ವಿವರಿಸುತ್ತಾ, ಆಹಾರ ಉತ್ಪನ್ನ ಕ್ಷೇತ್ರದಲ್ಲಿ ಶುಚಿ ಮತ್ತು ರುಚಿಗೆ ಹೆಚ್ಚಿನ ಮಹತ್ವ ನೀಡಬೇಕು. ಗ್ರಾಹಕರ ವಿಶ್ವಾಸ ಗಳಿಸಲು ಗುಣಮಟ್ಟದ ಉತ್ಪನ್ನಗಳು ಅಗತ್ಯವಾಗಿದ್ದು, ಉದ್ಯಮದಲ್ಲಿ ಪರಿಶ್ರಮ, ಶಿಸ್ತಿನ ಜೊತೆಗೆ ಹೊಸತನವನ್ನು ನಿರಂತರವಾಗಿ ಅಳವಡಿಸಿಕೊಳ್ಳಬೇಕು ಎಂದು ಅವರು ತರಬೇತಿಗಾರರಿಗೆ ಪ್ರಮಾಣಪತ್ರಗಳನ್ನು ವಿತರಿಸಿದರು. ರುಡ್‌ಸೆಟಿ ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ವಿಜಯಕುಮಾರ್ ಬಿ.ಪಿ. ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಬ್ಯಾಂಕುಗಳ ಸಹಾಯವನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವ ಉದ್ಯೋಗದಲ್ಲಿ ಯಶಸ್ಸು ಸಾಧಿಸಬಹುದು ಎಂದು ಹೇಳಿದರು. ಸಂಸ್ಥೆಯ ನಿರ್ದೇಶಕರಾದ ಅಜಯ್ ಸ್ವಾಗತಿಸಿ, ತರಬೇತಿ ಕಾರ್ಯಕ್ರಮದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು.ಹಿರಿಯ ಉಪನ್ಯಾಸಕ ಅಬ್ರಹಾಂ ಜೇಮ್ಸ್ ಪಿ.ವಿ. ಕಾರ್ಯ ಕ್ರಮವನ್ನು ನಿರ್ವಹಿಸಿದರು. ಹಿರಿಯ ಉಪನ್ಯಾಸಕ ಕೆ. ಕರುಣಾಕರ ಜೈನ್ ವಂದಿಸಿದರು. ತರಬೇತಿಗಾರರಾದ ಅಶ್ವಥ್, ಅಶ್ವಿನಿ ಮತ್ತು ಮಂಗಳಾದೇವಿ ತಮ್ಮ ತರಬೇತಿ ಅನುಭವಗಳನ್ನು ಹಂಚಿಕೊಂಡರು.

ಅತಿಥಿ ಶಿಕ್ಷಕರ ಹುದ್ದೆ: ಅರ್ಜಿ ಆಹ್ವಾನ

ಮಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೌಲಾನ ಆಜಾದ್ ಮಾದರಿ ಶಾಲೆ, ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಿಗೆ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮತ್ತು ಅರ್ಜಿ ಸಲ್ಲಿಸಲು ಆಯಾ ಶಾಲೆಗಳು ಅಥವಾ ನಗರದ ಪಾಂಡೇಶ್ವರ ಓಲ್ಡ್‌ಕೆಂಟ್ ರೋಡ್ ಬಳಿ ಇರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಯವರ ಕಚೇರಿ ಸಂಪರ್ಕಿಸಬಹುದು. ಅರ್ಜಿಯನ್ನು ಮೇ 15 ರೊಳಗಾಗಿ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬೇಕು.ಮಾಹಿತಿಗಾಗಿ ವಾಟ್ಸಾಪ್ ಸಂಖ್ಯೆ: 9449006284 ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇತ್ರಾವತಿ ನದಿಯಲ್ಲಿ ಗಂಡಸಿನ ಶವ ಪತ್ತೆ

ಬಂಟ್ವಾಳ: ಪಾಣೆಮಂಗಳೂರಿನ ನೇತ್ರಾವತಿ ನದಿಯಲ್ಲಿ ಸುಮಾರು 60 ವರ್ಷ ಪ್ರಾಯದ ಅಪರಿಚಿತ ಗಂಡಸಿನ ಶವ ಪತ್ತೆಯಾಗಿದೆ. ನದಿಯಲ್ಲಿ ತೇಲಾಡುವ ಸ್ಥಿತಿಯಲ್ಲಿ ಗಂಡಸಿನ ಶವ ಕಂಡು ಬಂದ ಹಿನ್ನಲೆಯಲ್ಲಿ ಗಮನಿಸಿದವರು ಯಾರೋ ನೇರವಾಗಿ ಈಜುಗಾರ ಈಶ್ವರ ಮಲ್ಪೆಯವರಿಗೆ ಮಾಹಿತಿ ನೀಡಿದ್ದು, ಅವರು ಬಂಟ್ವಾಳ ನಗರ ಪೊಲೀಸ್ ಠಾಣೆಗೆ ಕರೆ ಮಾಡಿ ಮಾಹಿತಿ ಹಂಚಿಕೊಂಡಿದ್ದರು. ಸುದ್ದಿ ತಿಳಿದ ಬಂಟ್ವಾಳ ಅಗ್ನಿಶಾಮಕ ದಳದ ಸಿಬ್ಬಂದಿಗಳು ಸ್ಥಳಕ್ಕಾಗಮಿಸಿ ಶವವನ್ನು ಮೇಲಕ್ಕೆತ್ತಲು ಪ್ರಯತ್ನಿಸಿದರೂ ಸಾಧ್ಯವಾಗದಿದ್ದಾಗ,ಸ್ಥಳೀಯ ನೇತ್ರಾವತಿ ವೀರರಾದ ನಿಶಾರ್, ಎಂ.ಕೆ ಇಬ್ರಾಹಿಂ ಅವರು ಶವವನ್ನು ಮೇಲಕ್ಕೆತ್ತುವಲ್ಲಿ ಯಶಸ್ವಿಯಾಗಿದ್ದಾರೆ. ಅಪಘಾತದಿಂದ ಕಾಲಿಗೆ ನೋವಾಗಿದ್ದರೂ ಕೂಡ ಇದನ್ನು ಲೆಕ್ಕಿಸದೆ ಶವವನ್ನು ಮೇಲಕ್ಕೆತ್ತುವಲ್ಲಿ ಇವರು ತೋರಿದ ಸಾಹಸ, ಮಾನವೀಯ ಕಾರ್ಯ ವ್ಯಾಪಕ ಪ್ರಶಂಸೆಗೆ ಕಾರಣವಾಗಿದೆ. ಸಾಮಾಜಿಕ ಜಾಲತಾಣದಲ್ಲೂ ಈ ವೀಡಿಯೋ ವೈರಲ್ ಆಗಿದೆ. ಶವವನ್ನು ಬಂಟ್ವಾಳ ಸರಕಾರಿ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ.ಬಂಟ್ವಾಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು,ವಾರಿಸುದಾರರಿದ್ದಲ್ಲಿ ಠಾಣೆಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಹಾವು ಕಡಿತಕ್ಕೆ ಮಹಿಳೆ ಬಲಿ

ಕೊಲ್ಲೂರು: ಹುಲ್ಲು ಕೊಯ್ಯುತ್ತಿದ್ದ ಮಹಿಳೆಯೊಬ್ಬರು ಹಾವು ಕಡಿತಕ್ಕೆ ಒಳಗಾಗಿ ಮೃತಪಟ್ಟ ಘಟನೆ ಮೇ 1 ರಂದು ಸಂಜೆ ವೇಳೆ ನಡೆದಿದೆ. ಮೃತರನ್ನು ಕೆರಾಡಿ ಗ್ರಾಮದ ಪ್ರೇಮ ಶೆಡ್ತಿ (47) ಎಂದು ಗುರುತಿಸಲಾಗಿದೆ. ಇವರು ಮನೆಯ ಪಕ್ಕದಲ್ಲಿರುವ ತೋಟದಲ್ಲಿ ದನಗಳಿಗೆ ಹುಲ್ಲನ್ನು ಕೊಯ್ಯುತ್ತಿದ್ದಾಗ ಕಾಲಿಗೆ ವಿಷದ ಹಾವೊಂದು ಕಚ್ಚಿತ್ತೆನ್ನಲಾಗಿದೆ. ಇದರಿಂದ ತೀವ್ರವಾಗಿ ಅಸ್ವಸ್ಥಗೊಂಡ ಅವರು, ಕುಂದಾಪುರ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗುವ ದಾರಿ ಮಧ್ಯೆ ಮೃತಪಟ್ಟರೆಂದು ತಿಳಿದು ಬಂದಿದೆ. ಈ ಬಗ್ಗೆ ಕೊಲ್ಲೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಸೂರಜ್ ಸಾಯಿ, ದಕ್ಷಿಣ ಶಿರ್ಡಿ, ಶಂಭೂರು, ಬೈಪಾಡಿ ರಸ್ತೆ, ಬಂಟ್ವಾಳ (ತಾ).
2. ಶಂಕರ ಶೆಟ್ಟಿ, ಮರಿಕಲಾ ಹೌಸ್, ನರಿಂಗಾನ, ಮೊಂಟೆಪದವು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
3. ರಘುನಾಥ ಎಸ್. ಶೆಟ್ಟಿ, ಬಟಾರ ಬಾಳಿಕೆ ಹೌಸ್, ಅತಿಕಾರಿಬೆಟ್ಟು, ಮೂಲ್ಕಿ – ಶ್ರೀ ಕಟೀಲು ಕ್ಷೇತ್ರ ಮಹಾಲಕ್ಷ್ಮೀ ಸದನ.
4. ರಾಘವೇಂದ್ರ, ರೂಪಶ್ರೀ, 'ಸ್ಕಂದಶ್ರೀ', ನಿಯರ್ ಸುಬ್ರಹ್ಮಣ್ಯ ದೇವಸ್ಥಾನ, ತೋಕೂರು.
5. ಶ್ರೀ ದುರ್ಗಾ ಯುವಕ ಮಂಡಲ, ಸಜಂಕಿಲ, ಬಾಯಾರು.
6. ಚರಣ್ ಜೆ. ಶೆಟ್ಟಿ, ಸುವಿಧಾ ಸಿ. ಶೆಟ್ಟಿ, 'ತಿರುಮಲ', ಬಂಟರ ಭವನ ರಸ್ತೆ, ಸುಭಾಷಿತ ನಗರ, ಸುರತ್ಕಲ್.
7. ಸಚೀಂದ್ರ ಹೆಗ್ಡೆ, 'ಸ್ವರ್ಣ ನಿಲಯ', ನಾಗೋಳಿ, ಅತ್ತೂರು ಚರ್ಚ್ ರಸ್ತೆ, ಕಾರ್ಕಳ (ತಾ).

ಶ್ರೀ ಧರ್ಮಸ್ಥಳ ಮೇಳ
ಕುಂದಾಪುರ ಚರ್ಚ್ ರೋಡ್‌ನಲ್ಲಿ ಶ್ರೀಮತಿ ಗಂಗಾ ಕೃಷ್ಣ ಪೂಜಾರಿ, ಓಂ ಮಂಜುಶ್ರೀ ಲಕ್ಷ್ಮಿ ನಿಲಯ

ಶ್ರೀ ಪೆರ್ಡೂರು ಮೇಳ
ಶೃಂಗೇರಿಯಲ್ಲಿ-ಪೌಂಡ್ರಕ ವಾಸುದೇವ-ಲಂಕಾದಹನ-ಕಾರ್ತವೀರ್ಯ

ಶ್ರೀ ಹನುಮಗಿರಿ ಮೇಳ
ಒಡ್ಡೂರಿನಲ್ಲಿ

ಶ್ರೀ ಪಾವಂಜೆ ಮೇಳ
ನಾಗವೃಜ ಕ್ಷೇತ್ರ, ಪಾವಂಜೆಯಲ್ಲಿ
ಜ್ವಾಲಾ ಪ್ರತಾಪ- ಬಬ್ರುವಾಹನ



ಕಾಸರಗೋಡು ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ದೇವಾಲಯದಲ್ಲಿ ನಡೆದ ಬ್ರಹ್ಮಕಲಶೋತ್ಸವದ ಶಾಂಸ್ಕೃತಿಕ ಚಟುವಟಿಕೆಗಳ ಅಂಗವಾಗಿ ಹನುಮಗಿರಿ ಮೇಳದವರಿಂದ ಶ್ರೀ ದೇವಿ ಮಹಾತ್ಮೆ ಎಂಬ ಯಕ್ಷಗಾನ ಪ್ರದರ್ಶನವು ರಸಿಕರನ್ನು ರಂಜಿಸಿತು.

ಜಾತಿ ನಿಂದನೆ-ಕೊಲೆ ಯತ್ನದ ಆರೋಪ ಸಾಬೀತು

ಅಪರಾಧಿಗೆ 10 ವರ್ಷ ಜೈಲು, 26 ಸಾವಿರ ರೂ.ದಂಡ

ಮಡಿಕೇರಿ: ವ್ಯಕ್ತಿಯೊಬ್ಬರಿಗೆ ಕೋವಿಯಿಂದ ಗುಂಡಿಕ್ಕಿ ಕೊಲೆಗೆ ಯತ್ನಿಸಿದ ಹಾಗೂ ಜಾತಿ ನಿಂದನೆ ಮಾಡಿದ ಆರೋಪ ಎದುರಿಸುತ್ತಿದ್ದ ಆರೋಪಿಗೆ ನ್ಯಾಯಾಲಯ ಜೈಲು ಶಿಕ್ಷೆಯೊಂದಿಗೆ ದಂಡ ವಿಧಿಸಿ ತೀರ್ಪು ಪ್ರಕಟಿಸಿದೆ. ಸೋಮವಾರಪೇಟೆ ಸಮೀಪದ ಕಕ್ಕೆಹೊಳೆ ಎಂಬಲ್ಲಿ 2019ರ ಅಕ್ಟೋಬರ್ 10ರಂದು ಡಿ. ಸುಜಿತ್ ಎಂಬವರ ಮೇಲೆ ಗುಂಡು ಹಾರಿಸಿ ಕೊಲೆಗೆ ಯತ್ನಿಸಿದ ಹಾಗೂ ಜಾತಿ ನಿಂದನೆ ಮಾಡಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಪಿ.ಎಂ. ಗಣಪತಿ ಎಂಬವರೇ ಶಿಕ್ಷೆಗೆ ಗುರಿಯಾದವರಾಗಿದ್ದಾರೆ.

2019ರ ಅ. 20ರಂದು ಡಿ. ಸುಜಿತ್ ಹಾಗೂ ಇತರರು ಕಕ್ಕೆಹೊಳೆ ಗ್ರಾಮದಲ್ಲಿ ಮಾತನಾಡಿಕೊಂಡು ನಿಂತಿರುವಾಗ ತನ್ನ ಕಾರಿನಲ್ಲಿ ಅಲ್ಲಿಗಾಗಮಿಸಿದ ಪಿ.ಎಂ. ಗಣಪತಿ ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರೆನ್ನಲಾಗಿದೆ. ಈ ಸಂದರ್ಭ ಬೈದಿರುವುದನ್ನು ಖಚಿತಪಡಿಸಿಕೊಳ್ಳಲು ಸುಜಿತ್ ಮಾತನಾಡಿದಾಗ ಇಬ್ಬರ ನಡುವೆ ವಾಗ್ವಾದ ಏರ್ಪಟ್ಟಿದೆ. ಅನಂತರ ಗಣಪತಿ ಕೋವಿ ಸಹಿತ ಕಾರಿನಲ್ಲಿ ಬಂದು ಸುಜಿತ್‌ಗೆ ಗುಂಡಿಕ್ಕಿ ಗಾಯಗೊಳಿಸಿದ್ದರು. ಗಾಯಾಳುವನ್ನು ತಕ್ಷಣ

ಕೊಲೆ ಯತ್ನ ಅಪರಾಧಕ್ಕಾಗಿ 10 ವರ್ಷಗಳ ಶಿಕ್ಷೆ, ಜಾತಿನಿಂದನೆಗಾಗಿ 2 ವರ್ಷಗಳ ಶಿಕ್ಷೆ ಮತ್ತು ಒಟ್ಟು ರೂ. 26 ಸಾವಿರ ದಂಡ

ಆಸ್ಪತ್ರೆಗೆದಾಖಲಿಸಿ ಚಿಕಿತ್ಸೆನೀಡಲಾಗಿತ್ತು. ಪ್ರಾಣಾಪಾಯದಿಂದ ಪಾರಾದ ಸುಜಿತ್ ಈ ಸಂಬಂಧ ದೂರು ನೀಡಿದ್ದರು.

ತನಿಖೆ ಕೈಗೊಂಡ ಅಂದಿನ ಸೋಮವಾರಪೇಟೆ ಡಿವೈಎಸ್‌ಪಿ ಪಿ.ಕೆ. ಮುರಳೀಧರ್ ಅವರು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

ಮಡಿಕೇರಿಯ ಒಂದನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜಿ. ಸುರೇಂದ್ರ ಅವರು ವಿಚಾರಣೆ ನಡೆಸಿ, ಕೊಲೆ ಯತ್ನ ಅಪರಾಧಕ್ಕಾಗಿ 10 ವರ್ಷಗಳ ಶಿಕ್ಷೆ, ಜಾತಿನಿಂದನೆಗಾಗಿ 2 ವರ್ಷಗಳ ಶಿಕ್ಷೆ ಮತ್ತು ಒಟ್ಟು ರೂ. 26 ಸಾವಿರ ದಂಡ ವಿಧಿಸಿ ತೀರ್ಪು ಪ್ರಕಟಿಸಿದ್ದಾರೆ. ದಂಡದ ಹಣವನ್ನು ಸುಜಿತ್ ಅವರಿಗೆ ನೀಡಬೇಕೆಂದು ಆದೇಶಿಸಿದ್ದಾರೆ. ಪ್ರಾಸಿಕ್ಯೂಷನ್ ಪರ ಸರಕಾರಿ ಅಭಿಯೋಜಕ ಎನ್.ಪಿ. ದೇವೇಂದ್ರ ವಾದ ಮಂಡಿಸಿದರು.

ಕೊಡಗು ಬಂಟರ ಭವನ ನಿರ್ಮಾಣಕ್ಕೆ ಶಂಕುಸ್ಥಾಪನೆ । ಒಡಿಯೂರು ಶ್ರೀ ಆಶೀರ್ವಚನ

ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ಕೊಡುಗೆ ಅಪಾರ

ಮಡಿಕೇರಿ : ಸುಸಂಸ್ಕೃ ತ ಸಮಾಜ ನಿರ್ಮಾಣಕ್ಕೆ ಬಂಟ ಸಮಾಜದ ಕೊಡುಗೆ ದೊಡ್ಡದಿದೆ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನಂನ ಗುರುದೇವಾನಂದ ಸ್ವಾಮೀಜಿ ಬಣ್ಣಿಸಿದರು.

ಕೊಡಗು ಜಿಲ್ಲಾ ಬಂಟರ ಭವನ ಟ್ರಸ್ಟ್ ಹಾಗೂ ಜಿಲ್ಲಾ ಬಂಟರ ಸಂಘದ ವತಿಯಿಂದ ಮಡಿಕೇರಿಯಲ್ಲಿ ಜರುಗಿದ ಬಂಟರ ಭವನ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

ಇಂದಿನ ಸಮಾಜಕ್ಕೆ ಸುಸಂಸ್ಕೃ ತ ಪ್ರಜೆಗಳ ಅಗತ್ಯವಿದೆ. ಮಕ್ಕಳಿಗೆ ಸಂಸ್ಕಾರ ಕಲಿಸುವ ಕಾರ್ಯವನ್ನು ಮನೆಯಿಂದಲೇ ಆರಂಭಿಸಬೇಕು. ಈ ವಿಚಾರದಲ್ಲಿ ಮಾತೆಯರಿಗೆ ಮಹತ್ತರ ಜವಾಬ್ದಾರಿ ಇದೆ. ನಾಡಿನ ವಿವಿಧೆಡೆ ಬಂಟರ ಭವನ ಇದೆ. ಆದರೆ ಕೊಡಗು ಜಿಲ್ಲೆಯಲ್ಲಿ ಸುಸಜ್ಜಿತವಾದ ಭವನ ಈವರೆಗೆ ಇರಲಿಲ್ಲ. ಉದ್ದೇಶಿತ ಯೋಜನೆ ಶೀಘ್ರವಾಗಿ ಈಡೇರಲು ಸಮುದಾಯ ಬಾಂಧವರೆಲ್ಲರೂ ಸಹೃದಯದಿಂದ ಸಂಘಟನೆ ಜೊತೆ ನಿಲ್ಲಬೇಕೆಂದು ಕರೆ ನೀಡಿದರು.

ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ, ನಾಡಿನಲ್ಲಿರುವ ಪ್ರಬಲ ಮತ್ತು ಪ್ರಭಾವಿ ಸಮುದಾಯಗಳಲ್ಲಿ ಬಂಟ ಸಮುದಾಯ ಕೂಡಾ ಒಂದು. ಉದ್ಯಮ, ಸಿನೆಮಾ ಕ್ಷೇತ್ರದಲ್ಲಿ ತನ್ನದೇ ಆದ ಅಸ್ತಿತ್ವವನ್ನು ಬಂಟ ಬಾಂಧವರು



ಹೊಂದಿದ್ದಾರೆ. ಉದ್ದೇಶಿತ ಭವನ ವ್ಯವಸ್ಥಿತವಾಗಿ ನಿರ್ಮಾಣವಾಗಬೇಕು. ಸಂಸ್ಕೃ ತಿ ಬಿಂಬಿಸುವ ಭವನವಾಗಿ ಕೊಡಗು ಬಂಟರ ಭವನ ರೂಪುಗೊಳ್ಳಬೇಕೆಂದು ಸಲಹೆ ನೀಡಿದರು.

ಪ್ರಾಸ್ತಾವಿಕ ನುಡಿಯಾಡಿದ ಕೊಡಗು ಜಿಲ್ಲಾ ಬಂಟರ ಸಂಘದ ಅಧ್ಯಕ್ಷ ಬಿ.ಡಿ. ಜಗದೀಶ್ ರೈ ಅವರು, ಅಂದುಕೊಂಡಂತೆ ಆಗಿದ್ದರೆ ಕೊಡಗು ಜಿಲ್ಲೆಯಲ್ಲಿ ಬಹಳ ವರ್ಷದ ಹಿಂದೆಯೇ ಭವನ ನಿರ್ಮಾಣವಾಗಬೇಕಿತ್ತು. ಒಳ್ಳೆಯ ಕೆಲಸಕ್ಕೆ ಕೈ ಹಾಕಿದಾಗ ಕಾಲೆಳೆಯುವವರು ಕೂಡಾ ಇದ್ದಾರೆ. ಜಿಲ್ಲೆಯಲ್ಲಿರುವ ಬಂಟ ಬಾಂಧವರು ಈಗ ಒಗ್ಗಟ್ಟಾಗಿದ್ದು, ಕಾಲೆಳೆಯುವವರಿಗೆ ಈಗಿನ ಆಡಳಿತ ಮಂಡಳಿ ಹೆದರುವುದಿಲ್ಲ. ಬಂಟರ ಏಳಿಗೆಯ ಉದ್ದೇಶದಿಂದ ಡಾ. ಪ್ರೇಮನಾಥ್ ಪೂಂಜಾರವರು ದಾನವಾಗಿ ಜಾಗವನ್ನು ನೀಡಿದ್ದಾರೆ. ಅವರ ಆಶಯದಂತೆ ಈ ಜಾಗದಲ್ಲಿ ಭವನ ನಿರ್ಮಾಣವಾಗುತ್ತಿದೆ ಎಂದರು. ಉದ್ದೇಶಿತ ಭವನವನ್ನು 12ರಿಂದ 15 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸುವ ಗುರಿ ಹೊಂದ ಲಾಗಿದೆ. ಎಲ್ಲರ ಸಹಕಾರವಿದ್ದರೆ ಉದ್ದೇಶಿತ ಅವಧಿಯಲ್ಲಿ ಮಡಿಕೇರಿಯಲ್ಲಿ ಸುಸಜ್ಜಿತ ಭವನ ತಲೆ ಎತ್ತಲಿದೆ ಎಂದು ಹೇಳಿದರು.

ಐದು ಲಕ್ಷ ರೂ.ಅನುದಾನ

ವಿಧಾನ ಪರಿಷತ್ ಸದಸ್ಯ ಎಂ.ಪಿ. ಸುಜಾ ಕುಶಾಲಪ್ಪ ಮಾತನಾಡಿ, ಭವನ ನಿರ್ಮಾಣಕ್ಕೆ ಐದು ಲಕ್ಷ ರೂ. ಅನುದಾನ ಒದಗಿಸುವುದಾಗಿ ಭರವಸೆ ನೀಡಿದರು. ಉದ್ಯಮಿ ಕುಸುಮೋಧರ ಡಿ. ಶೆಟ್ಟಿ ಮಾತನಾಡಿ, ಬಂಟರೆಂದರೆ ಉದ್ಯಮಿಗಳು ಅಂತ ಗುರುತಿಸುತ್ತಾರೆ. ಆದರೆ ಜಗತ್ತಿನಾದ್ಯಂತ ವಿವಿಧ ಕ್ಷೇತ್ರದಲ್ಲಿ ಬಂಟ ಸಮುದಾಯದ ಸಾಧಕರಿದ್ದಾರೆ. ಇಷ್ಟಿದ್ದರೂ ನಮ್ಮ ಸಮುದಾಯದಲ್ಲಿ ಒಗ್ಗಟ್ಟಿನ ಕೊರತೆ ಇದೆ. ಅದನ್ನು ನಾವೆಲ್ಲರೂ ದೂರ ಮಾಡಿ, ಎಲ್ಲರೂ ಒಗ್ಗಟ್ಟಿನಿಂದ ಬದುಕುವುದನ್ನು ಮೈಗೂಡಿಕೊಳ್ಳಬೇಕಿದೆ ಎಂದರು.

ಮಾಜಿ ಶಾಸಕ ಕೆ.ಜಿ. ಬೋಪಯ್ಯ ಮಾತನಾಡಿ, ಕೊಡಗು ಜಿಲ್ಲೆಯ ಬಂಟ ಬಾಂಧವರ ಪಾಲಿಗೆ ಈ ದಿನಚಿರಸ್ಮರಣೀಯವಾಗಿರಲಿದೆ. ಹಿಂದೂ ಧರ್ಮದ ಭಾಗವಾಗಿರುವ ಬಂಟರು ಎಲ್ಲಾ ಕ್ಷೇತ್ರದಲ್ಲೂ ಪಾರಮ್ಯತೆ ಹೊಂದಿದ್ದಾರೆ. ಹಿಂದೂ ಸಮಾಜಕ್ಕೆ ಡಾ. ಪ್ರೇಮನಾಥ್ ಪೂಂಜಾ ಅವರ ಕೊಡುಗೆ ದೊಡ್ಡದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಹೃದಯ ಶ್ರೀಮಂತಿಕೆ ಇರಬೇಕು

ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಮಾತನಾಡಿ, ಜನ ಕೇವಲ ಹಣದಲ್ಲಿ ಶ್ರೀಮಂತರಾದರೆ ಸಾಲದು. ಹೃದಯ ಶ್ರೀಮಂತಿಕೆ ಬಹಳ ಮುಖ್ಯವಾಗುತ್ತದೆ. ಭವನ ನಿರ್ಮಾಣದ ಜೊತೆಗೆ ಪಕ್ಕದಲ್ಲೆ ಹೆಚ್ಚುವರಿ ಜಾಗ ಖರೀದಿ ಮಾಡಿ ವಾಹನ ನಿಲುಗಡೆಗೂ ಅಗತ್ಯ ಗಮನಹರಿಸಬೇಕಿದೆ ಎಂದು ಸಲಹೆ ನೀಡಿದರು.

ಪೂಜಾ ಕಾರ್ಯವನ್ನು ಶ್ರೀಕೃಷ್ಣ ಭಟ್ ನೆರವೇರಿಸಿದರು. ಬಂಟ್ವಾಳ ಬಂಟರ ಸಂಘದ ಅಧ್ಯಕ್ಷ ಜಗನ್ನಾಥ ಚೌಟ, ಪುತ್ತೂರು ಬಂಟರ ಸಂಘದ ಅಧ್ಯಕ್ಷ ಹೇಮನಾಥ್ ಶೆಟ್ಟಿ, ಖ್ಯಾತ ಕಬಡ್ಡಿ ಆಟಗಾರ ಪ್ರಶಾಂತ್ ಕುಮಾರ್ ರೈ, ಪುತ್ತೂರು ಕಂಬಳ ಸಮಿತಿ ಅಧ್ಯಕ್ಷ ಚಂದ್ರಹಾಸ ಶೆಟ್ಟಿ, ಕೊಡಗು ಜಿಲ್ಲಾ ಬಂಟರ ಸಂಘದ ಗೌರವಾಧ್ಯಕ್ಷ ಬಿ.ಬಿ. ಐತಪ್ಪ ರೈ, ಜಾಗತಿಕ ಬಂಟರ ಸಂಘಗಳ ಒಕ್ಕೂಟದ ಯುವ ಘಟಕ ಅಧ್ಯಕ್ಷ ಗಿರೀಶ್ ತೆಳ್ಳಾರ್, ಯುವ ಘಟಕ ಜಿಲ್ಲಾಧ್ಯಕ್ಷ ಸದಾನಂದ ರೈ, ಉದ್ಯಮಿ ಪುರುಷೋತ್ತಮ ರೈ, ಮಡಿಕೇರಿ ನಗರಸಭೆ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ, ಬಂಟರ ಸಂಘದ ತಾಲೂಕು, ಹೋಬಳಿ, ನಗರ ಘಟಕ, ಮಹಿಳಾ ಘಟಕ ಅಧ್ಯಕ್ಷರು ವೇದಿಕೆಯಲ್ಲಿದ್ದರು. ಹಿತಾ ಯೋಗೇಶ್ ಶೆಟ್ಟಿ ಮತ್ತು ಅಪೇಕ್ಷಾ ರಾಧಾಕೃಷ್ಣ ಪ್ರಾರ್ಥಿಸಿದರು. ಉಪಾಧ್ಯಕ್ಷ ರತ್ನಾಕರ ರೈ ಸ್ವಾಗತಿಸಿದರು. ಬಾಲಕೃಷ್ಣ ಆಳ್ವ ನಿರೂಪಿಸಿದರು. ಸಂಘಟನಾ ಕಾರ್ಯದರ್ಶಿ ಬಾಲಕೃಷ್ಣ ರೈ ವಂದಿಸಿದರು.

ಬಿರುದು ಪ್ರದಾನ

ಇತ್ತೀಚೆಗೆ ನಿಧನರಾದ ಕೊಡಗಿನ ಹಿರಿಯ ಬೆಳೆಗಾರ, ಜನಪ್ರತಿಯ ವೈದ್ಯ ಡಾ. ಪ್ರೇಮನಾಥ್ ಪೂಂಜಾ ಅವರಿಗೆ ಮರಣೋತ್ತರವಾಗಿ 'ಬಂಟ ಬಹದ್ದೂರ್' ಬಿರುದು ನೀಡಿ ಗೌರವಿಸಲಾಯಿತು. ಪೂಂಜಾ ಅವರ ಸಾಧನೆಯ ಕುರಿತಾದ ವಿವರವನ್ನು ಸಂಘದ ಕಾರ್ಯದರ್ಶಿ ರವೀಂದ್ರ ವಿ. ರೈ ಓದಿದರು.

ಮೇ 5 ರಂದು ಉಳ್ಳಾಲ ತಾಲೂಕು ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನ

ಉಳ್ಳಾಲ: ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಆಶ್ರಯದಲ್ಲಿ 'ಮೇಲ್ತೆನೆ' ದೇರಳಕಟ್ಟೆ ಇದರ ಸಹಯೋಗದೊಂದಿಗೆ ಉಳ್ಳಾಲ ತಾಲೂಕು ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನವು ಮೇ 5ರಂದು ಮುಡಿಪು ಹೂಹಾಕುವ ಕಲ್ಲು ನಂದರ ಪದವಿನ ಎಸ್.ಕೆ ಮಲ್ಟಿಪರ್ಪಸ್ ಹಾಲ್ ನಲ್ಲಿ ನಡೆಯಲಿದೆ ಎಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು. ಎಚ್.ಉಮರ್ ಹೇಳಿದರು.

ತೊಕ್ಕೊಟ್ಟುವಿನ ಉಳ್ಳಾಲ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಮೇ 5 ಮಂಗಳವಾರ ಬೆಳಿಗ್ಗೆ 9.30ಕ್ಕೆ ಹೂಹಾಕುವ ಕಲ್ಲು ಜಂಕ್ಷನ್ ನಿಂದ ಸಮ್ಮೇಳನ ಸಭಾಂಗಣದ ತನಕ ನಡೆಯಲಿರುವ ಸಮ್ಮೇಳನಾಧ್ಯಕ್ಷರ ಮೆರವಣಿಗೆಯನ್ನು ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷ ಎಸ್.ಕೆ.ಅಬ್ದುಲ್ ಖಾದರ್ ಹಾಜಿ ಉದ್ಘಾಟಿಸಲಿದ್ದು, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು. ಹೆಚ್ ಧ್ವಜಾರೋಹಣ ನೆರವೇರಿಸಲಿದ್ದಾರೆ.

ಬೆಳಿಗ್ಗೆ 10.30ಕ್ಕೆ ಕರ್ನಾಟಕ ವಿಧಾನ ಸಭಾಧ್ಯಕ್ಷ ಡಾ. ಯು.ಟಿ.ಖಾದರ್ ಫರೀದ್ ಅವರು ಸಮ್ಮೇಳನ ಉದ್ಘಾಟಿಸಲಿದ್ದು, ಬಹುಬಾಷಾ ಕವಿ, ಹಾಡುಗಾರ ಬಶೀರ್ ಅಹ್ಮದ್ ಕಿನ್ಯ ಸಮ್ಮೇಳನಾಧ್ಯಕ್ಷರ ಭಾಷಣ ಮಾಡಲಿದ್ದಾರೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರನಾಥ್ ಗಟ್ಟಿ ಕಾಪಿಕಾಡ್, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಜೋಕಿಂ ಸ್ಟ್ಯಾನಿ ಆಲ್ವಾರಿಸ್, ಉಡುಪಿ ಜಿಲ್ಲಾ ಆಯುಷ್ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ.ಮೊಹಮ್ಮದ್ ಇಕ್ಬಾಲ್ ಕೆ, ಉಳ್ಳಾಲ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ರಫೀಕ್ ಅಂಬ್ಲಮೊಗರು, ಉಳ್ಳಾಲ ತಾಲೂಕು ಸ್ವಚ್ಛತಾ ರಾಯಭಾರಿ ಶೀನ ಶೆಟ್ಟಿ ಮತ್ತು ಮುಡಿಪು ಜನ ಶಿಕ್ಷಣ ಟ್ರಸ್ಟ್‌ನ ನಿರ್ದೇಶಕ ಕೃಷ್ಣ ಮೂಲ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಸಮಾರಂಭದಲ್ಲಿ ಝುಲೇಖ ಮುಮ್ತಾಜ್ ಅವರ 'ನಿಲಾವು' (ಲೇಖನಗಳ ಸಂಕಲನ), ಆಯಿಷಾ ಯು.ಕೆ. ಸಂಪಾದಕತ್ವದ 'ಹಸ್ರತ್' (ಕವನ ಸಂಕಲನ) ಬ್ಯಾರಿ ಕೃತಿಗಳು ಬಿಡುಗಡೆಯಾಗಲಿವೆ ಎಂದು ಹೇಳಿದರು.

ಮಧ್ಯಾಹ್ನ 12ಕ್ಕೆ ಸಮ್ಮೇಳನಾಧ್ಯಕ್ಷರ ಭಾಷಣದ ಮೇಲೆ ನಡೆಯಲಿರುವ ಚರ್ಚಾಗೋಷ್ಠಿಯನ್ನು ಉಪನ್ಯಾಸಕ ಪ್ರೊ.ಹೈದರಾಲಿ ಕೆ. ನಿರೂಪಿಸಲಿದ್ದು, ಪ್ರೊ. ನಿಯಾಝ್ ಪಡೀಲ್, ಕೆ.ಎಂ. ಅಬೂಬಕ್ಕರ್ ಸಿದ್ದೀಕ್ ಮೋಂಟುಗೋಳಿ, ಶಾಹಿದಾ ಬಿ.ಎಂ ಮತ್ತು ಶಮೀಮಾ ಕುತ್ತಾರ್ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದ ಬ್ಯಾರಿ ಕವಿಗೋಷ್ಠಿ ನಡೆಯಲಿದೆ ಎಂದರು.

ಸಂಜೆ 4.30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ಟಿ.ಇಸ್ಮಾಯಿಲ್ ಮಾಸ್ಟರ್, ಅಬ್ದುಲ್ ಖಾದರ್ ಸಣ್ಣಬೈಲ್ ಪರಪ್ಪು, ಖತೀಜಮ್ಮ ನಡುಪದವು, ಬೀಫಾತುಮ್ಮ ಮಾರ್ಗತಲೆ ಅವರುಗಳು ಸನ್ಮಾನ ಸ್ವೀಕರಿಸಲಿದ್ದಾರೆ. ಡಾ.ಹರೇಕಳ ಹಾಜಬ್ಬ, ಡಾ.ಪಿ.ಎಲ್ ಧರ್ಮ ಮತ್ತು ಝಾಹಿದ್ ಮಲಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಡಾ.ಅಬೂಬಕ್ಕರ್ ಸಿದ್ದೀಕ್ ಸಮಾರೋಪ ಭಾಷಣ ಮಾಡಲಿದ್ದು, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಉಮರ್ ಯು.ಹೆಚ್. ಅಧ್ಯಕ್ಷತೆ ವಹಿಸಲಿದ್ದಾರೆ.

ಸಮ್ಮೇಳನದಲ್ಲಿ ದಫ್, ಬ್ಯಾರಿ ಹಾಡುಗಳ ಸಂಭ್ರಮ ಮತ್ತು ಸತ್ತಾರ್ ಗೂಡಿನ ಬಳಿ ತಂಡದಿಂದ 'ತೆರು ತಪ್ಪಿರ್' ಬ್ಯಾರಿ ನಾಟಕ ಹಮ್ಮಿಕೊಳ್ಳಲಾಗಿದೆ. ಮಹಿಳೆಯರು ಮತ್ತು ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಯು.ಎಚ್ ಉಮರ್ ಮಾಹಿತಿ ನೀಡಿದರು.

ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷ ವಿ.ಇಬ್ರಾಹಿಂ ನಡುಪದವು, ಕಾರ್ಯಾಧ್ಯಕ್ಷ ಆಲಿಕುಂಞ ಪಾರೆ, ಸಂಚಾಲಕಿ ಸಹಾನ ಬಿ.ಎಂ, ಸಹ ಸಂಚಾಲಕಿ ಆಯಿಶಾ ಪೆರ್ನೆ, ಮೇಲ್ತೆನೆ ಅಧ್ಯಕ್ಷ ಮಂಗಳೂರ ರಿಯಾಝ್, ಮಾಧ್ಯಮ ಸಂಚಾಲಕ ಬಶೀರ್ ಕಲ್ಕಟ್ಟ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಕೇಸರ್ ಗದ್ದೆಯಲ್ಲಿ ಉಚಿತ ಆರೋಗ್ಯ ಶಿಬಿರ



ಮೂಡುಬಿದಿರೆ : ಇಲ್ಲಿನ ಕೇಸರ್ ಗದ್ದೆಯ ಸುನಂದಾ ಮಾಧವ ಪ್ರಭು ಸಭಾ ಭವನದಲ್ಲಿ ಶ್ರೀರಾಮ ಭಜನಾ ಮಂದಿರ ಕೆಸರುಗದ್ದೆ, ಮಿಜಾರು ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜು ಮತ್ತು ಆಳ್ವಾಸ್ ಆನಂದಮಯ ಆರೋಗ್ಯಧಾಮ ಸಹ ಭಾಗಿತ್ವದಲ್ಲಿ ಉಚಿತ ಆರೋಗ್ಯ ಶಿಬಿರ ಮೇ 3ರಂದು ಇಡೀ ದಿನ ನಡೆಯಿತು.

ಶಿಬಿರದ ಉದ್ಘಾಟನೆಯನ್ನು ಮೂಡುಬಿದಿರೆ ಶ್ರೀ ವೆಂಕಟರಮಣ ಮತ್ತು ಶ್ರೀ ಹನುಮಂತ ದೇವಸ್ಥಾನದ ಮೊಕ್ತೇಸರ ಎಂ. ದಯಾನಂದ ಪೈ ಅವರು ದೀಪ ಬೆಳಗಿಸುವುದರ ಮೂಲಕ ನೆರವೇರಿಸಿ ಶುಭ ಹಾರೈಸಿದರು. ಮೂಡುಬಿದಿರೆ ಶ್ರೀ ವೆಂಕಟರಮಣ ದೇವಸ್ಥಾನದ ಮೊಕ್ತೇಸರ ರಘುವೀರ ಶೆಣೈ ಅಧ್ಯಕ್ಷತೆ ವಹಿಸಿದ್ದರು.

ಶ್ರೀರಾಮ ಭಜನಾ ಮಂಡಳಿಯ ಅಧ್ಯಕ್ಷ ರಾಜೇಶ್ ಕಾಮತ್, ಮೂಡುಬಿದಿರೆಯ ವಾಸ್ತು ತಜ್ಞ ಎಂ. ರಾಘವೇಂದ್ರ ಭಂಡಾರ್ಕರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾಲೇಜಿನ ವೈದ್ಯೆ, ಅಸೋಸಿಯೇಟ್ ಪ್ರೊಫೆಸರ್ ಮತ್ತು ಮೆಡಿಕಲ್ ಆಫೀಸರ್ ಡಾ ಸ್ವಾತಿ ಕೆ.ಪಿ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿ ಡಾ. ಶ್ರೀನಿವಾಸ ಶೆಣೈ ಅವರು ಮಾತನಾಡುತ್ತಾ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಚಿಕಿತ್ಸೆಯಲ್ಲಿನ ರೋಗನಿರೋಧಕ ಶಕ್ತಿ ಹಾಗೂ ಈ ಚಿಕಿತ್ಸೆ ಮೂಲಕ ಯಾವುದೇ ಕಾಯಿಲೆಯನ್ನು ಹತೋಟಿಯಲ್ಲಿಡುವುದರ ಜೊತೆಗೆ ಸಂಪೂರ್ಣವಾಗಿ ಗುಣಪಡಿಸುವ ಶಕ್ತಿ ಪ್ರಾಚೀನ ಮತ್ತು ಪರಂಪರಾಗತ ಪದ್ಧತಿಯಾದ ಈ ನಮ್ಮ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯಲ್ಲಿದೆ. ಈ ನಿಟ್ಟಿನಲ್ಲಿ ಇಂತಹ ಶಿಬಿರದ ಮಹತ್ವವನ್ನು ಅರಿತು ಜನರು ಇದರ ಸದುಪಯೋಗ ಪಡಿಸಿಕೊಳ್ಳುವಲ್ಲಿ ಮುಂದಾಗಬೇಕು, ಮತ್ತು ಇಂತಹ ಉತ್ತಮ ಪ್ರಕೃತಿ ಮುಖಿ ಗುಣಮಟ್ಟದ ಚಿಕಿತ್ಸೆ ಆಳ್ವಾಸ್ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವಿಜ್ಞಾನ ಕಾಲೇಜಿನಲ್ಲಿ ನಾವು ವೈದ್ಯರು ನೀಡುತ್ತಿದ್ದೇವೆ ಎಂದರು.

ಕಾಲೇಜಿನ ವೈದ್ಯಕೀಯ ವಿದ್ಯಾರ್ಥಿನಿಯರು ಪ್ರಾರ್ಥನೆ ಹಾಡಿದರು. ವೈದ್ಯಕೀಯ ವಿದ್ಯಾರ್ಥಿನಿ ಭೂಮಿಕಾ ಟಿ. ಮನೆಕೋಟೆ ಸ್ವಾಗತಿಸಿದರು. ಗಣ್ಯರಾದ ಕೃಷ್ಣ ಶೆಣೈ , ನಿರ್ಮಲಾ ಆರ್. ಕಾಮತ್ ವಿವೇಕ ಪ್ರಭು, ವಿಠ್ಠಲ ಪ್ರಭು, ನಿತಿನ್ ಕಾಮತ್, ಪ್ರದ್ಯೋತ್ ಪ್ರಭು, ಸುಕುಮಾರ ಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

ಸುನಂದಾ ಮಾಧವ ಪ್ರಭು ಸಭಾಭವನದ ಮಾಲಕರಾದ ವಿಶ್ವನಾಥ ಪ್ರಭು ಶಿಬಿರದ ಸಂಪೂರ್ಣ ಪ್ರಯೋಜನ ಪಡೆಯುವಂತಾಗಲು ಸಭಾಭವನವನ್ನು ಉಚಿತವಾಗಿ ನೀಡಿ ಸಹಕರಿಸಿದರು.

ಕೋಯ್ಲಾರು ಶ್ರೀ ದುರ್ಗಾ ಮಹಮ್ಮಾಯಿ ದೇವಸ್ಥಾನದಲ್ಲಿ ಭಜನಾ ಸಂಗಮೋತ್ಸವ

ಭಜನೆ ಮೂಲಕ ದೇವರಿಗೆ ಹತ್ತಿರವಾಗೋಣ : ಡಾ.ಪ್ರಭಾಕರ ಭಟ್

ಬಂಟ್ವಾಳ: ಧಾರ್ಮಿಕತೆಯಲ್ಲಿ ಭಜನೆಗೆ ವಿಶಿಷ್ಟ ಶಕ್ತಿ ಇದ್ದು, ಭಜನೆಯಲ್ಲಿ ಶ್ರೀಮಂತ, ಬಡವ, ಮೇಲು ಕೀಳು ಎಂಬ ಯಾವುದೇ ತಾರತಮ್ಯವು ಇಲ್ಲ, ಭಕ್ತಿಯಿಂದ ಮಾಡುವ ಭಜನೆಯಿಂದ ದೇವರನ್ನು ಹತ್ತಿರದಿಂದ ಕಾಣಲು ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಪ್ರತಿ ಮನೆಯಲ್ಲೂ ಭಜನೆ ಹಾಡುವ ಮೂಲಕ ದೇವರಿಗೆ ಹತ್ತಿರವಾಗಿ ರಾಷ್ಟ್ರ ಕಾರ್ಯಕ್ಕೆ ಪ್ರತಿಯೋರ್ವರು ಸನ್ನದ್ಧರಾಗಬೇಕು ಎಂದು ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ.ಪ್ರಭಾಕರ ಭಟ್ ಕಲ್ಲಡ್ಕ ಹೇಳಿದ್ದಾರೆ.

ಬಂಟ್ವಾಳ ತಾಲೂಕಿನ ಕುಕ್ಕಿಪಾಡಿ ಗ್ರಾಮದ ಕೋಯ್ಲಾರು ಶ್ರೀ ದುರ್ಗಾ ಮಹಮ್ಮಾಯಿ ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮ ಕಲಶೋತ್ಸವ ಪ್ರಯುಕ್ತ ಪೊಳಲಿಯ ತತ್ವಮಸಿ ಶ್ರೀ ಅಯ್ಯಪ್ಪ ಭಜಕ ವೃಂದದ ನೇತೃತ್ವದಲ್ಲಿ ವಿವಿಧ ಭಜನಾ ಮಂಡಳಿಗಳಿಂದ ಏರ್ಪಡಿಸಲಾದ ಭಜನಾ ಸಂಗಮೋತ್ಸವಕ್ಕೆ ದೀಪ ಪ್ರಜ್ವಲನೆಗೈದು ಚಾಲನೆ ನೀಡಿ ಅವರು ಮಾತನಾಡಿದರು.



ಭಜನೆ ದೇವತಾ ಕಾರ್ಯದ ಪ್ರತೀಕವಾಗಿದ್ದು, ಇದರಲ್ಲಿ ಸ್ಪರ್ಧೆ ಏರ್ಪಡಿಸುವುದು ಔಚಿತ್ಯ ಪೂರ್ಣವಲ್ಲ ಎಂದ ಅವರು, ಭವಿಷ್ಯದಲ್ಲಿ ಭಾರತ ಬಲಿಷ್ಠ ರಾಷ್ಟ್ರವಾಗಿ ಹೊರ ಹೊಮ್ಮಲಿದ್ದು, ಭಾರತವು ವಿಶ್ವ ಗುರುವಾಗುವುದರೊಂದಿಗೆ ಜಗತ್ತಿನಲ್ಲಿ ನಡೆಯುತ್ತಿರುವ ಯುದ್ಧಗಳು ಕಡಿಮೆಯಾಗಲಿವೆ ಎಂದು ಅಭಿಪ್ರಾಯ ವ್ಯಕ್ತಪಟ್ಟರು.

ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತ ಮಂಡಳಿ ಗುರಿಕಾರ ಗೋಪಾಲ ಗೌಡ ಕೊಯ್ಲಾರು, ಎರಡನೇ ಗುರಿಕಾರ ಓಬಯ್ಯ ಗೌಡ, ಆಡಳಿತ ಮಂಡಳಿ ಮೊಕ್ತೇಸರ ಯಶೋದರ ಗೌಡ ಕೊಯ್ಲಾರು, ಆಡಳಿತ ಮಂಡಳಿ ಕಾರ್ಯದರ್ಶಿ ಲೋಕಯ್ಯ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಉಮೇಶ್ ಗೌಡ ಮಂಚಕಲ್ಲು, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಗಂಗಾಧರ ಗೌಡ ಕುಕ್ಕೇಡಿ, ಬ್ರಹ್ಮಕಲಶೋತ್ಸವ ಸಮಿತಿ ಗೌರವ ಅಧ್ಯಕ್ಷ ಹೇಮಚಂದ್ರ ಗೌಡ, ಕಾರ್ಯದರ್ಶಿ ಸಂಜೀವ ಎಲ್ವೇಲು, ಜೀರ್ಣದ್ಧಾರ ಸಮಿತಿ ಗೌರವ ಅಧ್ಯಕ್ಷರಾದ ದುರ್ಗಾದಾಸ್ ಶೆಟ್ಟಿ ಕರೆಂಕಜೆ, ಪ್ರಭಾಕರ ಪ್ರಭು, ಜೀರ್ಣೋದ್ಧಾರ ಸಮಿತಿ ಕಾರ್ಯದರ್ಶಿ ಗಣೇಶ್ ಕಣೆಯೂರು, ಆಡಳಿತ ಸಮಿತಿ ಸದಸ್ಯರಾದ ನಾರಾಯಣ ಗೌಡ ಕೊಡಂಗೆ, ಕರುಣ ಮಂಚಕಲ್ಲು, ಭಾಸ್ಕರ ಕೋಯ್ಲಾರು, ಬಾಬು ಹುಂಟೇನಿ, ಗೋಪಾಲಗೌಡ ದೇವಸ, ಮೋಹನ ಕುಂಬಾಡಿ, ಮಹಿಳಾ ಸಮಿತಿ ಅಧ್ಯಕ್ಷೆ ಶೋಭಾ ಕಲ್ಪನೆ, ಗೌರವಾಧ್ಯಕ್ಷರಾದ ಕುಸುಮ ಕೋಯ್ಲಾರು, ಉಷಾ ಅಚ್ಯುತ ಕಿರಣ್, ತಾರಾ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು.

ದೇವಣ್ಣ ಗೌಡ ಮೊಯಿಲ್ ಬೆಟ್ಟು ಸ್ವಾಗತಿಸಿ ವಂದಿಸಿದರು.

ಶಾಸಕರ ಭೇಟಿ

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಉಳಿಪಾಡಿ ಅವರು ಕೋಯ್ಲಾರು ಶ್ರೀ ದುರ್ಗಾ ಮಹಮ್ಮಾಯಿ ದೇವಸ್ಥಾನಕ್ಕೆ ಭೇಟಿ ನೀಡಿ ದೇವರದರ್ಶನ ಪಡೆದು, ಪ್ರಸಾದ ಸ್ವೀಕರಿಸಿದರು. ಕ್ಷೇತ್ರದ ವತಿಯಿಂದ ಶಾಸಕರನ್ನು ಗೌರವಿಸಲಾಯಿತು. ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ಕೆ ಶಾಸಕರ ನಿಧಿಯಿಂದ 5 ಲಕ್ಷ ರೂ.ಅನುದಾನ ಒದಗಿಸುವುದಾಗಿ ಅವರು ಪ್ರಕಟಿಸಿದರು. ಬಿಜೆಪಿ ಬಂಟ್ವಾಳ ಮಂಡಲದ ಪ್ರ. ಕಾರ್ಯದರ್ಶಿ ಸುದರ್ಶನ್ ಬಜ,ಸಮಿತಿ ಪದಾಧಿಕಾರಿಗಳು ಹಾಜರಿದ್ದರು.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	8	6	1	1	13	+1.043
ಆರ್‌ಸಿಬಿ	9	6	3	0	12	+1.420
ಹೈದರಾಬಾದ್	10	6	4	0	12	+0.644
ರಾಜಸ್ಥಾನ	10	6	4	0	12	+0.510
ಗುಜರಾತ್	9	5	4	0	10	-0.192
ಚೆನ್ನೈ	9	4	5	0	8	+0.005
ದಿಲ್ಲಿ	9	4	5	0	8	-0.895
ಕೆಕೆಆರ್	9	3	5	1	7	-0.539
ಮುಂಬೈ	9	2	7	0	4	-0.803
ಲಖನೌ	8	2	6	0	4	-1.106

ಕಮ್ಮಿನ್ಸ್ ಪಡೆ ಗೆಲುವಿನೋಟಕ್ಕೆ ಬ್ರೇಕ್ | ಕೆಕೆಆರ್‌ಗೆ ಹ್ಯಾಟ್ರಿಕ್ ಗೆಲುವು | ಹೆಡ್ ಹೋರಾಟ ವ್ಯರ್ಥ

ವರುಣ್ ಸ್ಪಿನ್‌ಗೆ ಉರುಳಿದ ಹೈದರಾಬಾದ್

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ತಂಡದ ಐದು ಪಂದ್ಯ ಗೆಲುವಿನ ಓಟಕ್ಕೆ ಕೋಲ್ಕತ್ತಾ ನೈಟ್ ರೈಡರ್ಸ್ ತಡೆಯೊಡ್ಡಿತು. ಇದರೊಂದಿಗೆ ಮೊದಲಾರ್ಧದ ಬಹುತೇಕ ಎಲ್ಲಾ ಪಂದ್ಯಗಳಲ್ಲಿ ಸೋತಿದ್ದ ಕೆಕೆಆರ್ ಸತತ ಮೂರನೇ ಗೆಲುವು ಸಾಧಿಸಿದೆ.

ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ರಹಾನೆ ಬಳಗ 7 ವಿಕೆಟ್ ಗೆಲುವು ದಾಖಲಿಸಿತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 19 ಓವರ್‌ಗಳಲ್ಲಿ 165 ರನ್ ಗಳಿಸಿ ಆಲೌಟ್ ಆಯಿತು. ಟ್ರಾವಿಸ್ ಹೆಡ್(61; 28ಎ, 9 ಬೌಂಡರಿ, 3ಸಿ), ಇಶಾನ್ ಕಿಶನ್(42; 29ಎ, 4 ಬೌ, 2ಸಿ) ಗಳಿಸಿದರು. ಕೆಕೆಆರ್ ಪರ ವರುಣ್ ಚಕ್ರವರ್ತಿ(4-0-36-3), ಕಾರ್ತಿಕ್ ತ್ಯಾಗಿ(4-0-30-2) ಮಿಂಚಿದರು. ಗುರಿ ಬೆನ್ನತ್ತಿದ ನೈಟ್ ರೈಡರ್ಸ್ 18.2 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿತು. ಅಂಗ್ರಿಶ್ ರಘುವಂಶಿ(59; 47ಎ, 5ಬೌ, 2ಸಿ), ಅಜಿಂಕ್ಯಾ ರಹಾನೆ(43; 36ಎ, 4 ಬೌ, 1ಸಿ) ಗಳಿಸಿದರು. ಹೈದರಾಬಾದ್ ಪರ ಸಾಕೀಬ್ (3-0-17-1) ಹೋರಾಡಿದರು.

ತಮ್ಮ ನಾಲ್ಕು ಓವರ್ ಕೋಟಾದ ಮೊದಲನೇ 1.5 ಓವರ್‌ಗಳಲ್ಲಿ 29 ರನ್ ದಂಡಿಸಿಕೊಂಡಿದ್ದ ಸ್ಪಿನ್ನರ್ ವರುಣ್ ಚಕ್ರವರ್ತಿ ಮುಂದಿನ 2.1 ಓವರ್‌ಗಳಲ್ಲಿ ಅಚ್ಚರಿಯ ಕಂಬ್ಯಾಕ್ ಮಾಡಿದರು. ಅಲ್ಲಿ 7 ರನ್ ಮಾತ್ರ ನೀಡಿದ ಅವರು, ಹೆಡ್, ರವಿಚಂದ್ರನ್ ಮತ್ತು ಅನಿಕೇತ್ ವಿಕೆಟ್ ಕಿತ್ತರು. ಅವರ ಶ್ರೇಯಕ್ಕೆ ಪಂದ್ಯಶ್ರೇಷ್ಠ ಪ್ರಶಸ್ತಿ ಒಲಿಯಿತು. ಬ್ಯಾಟಿಂಗ್ ಮಾಡುವ ವೇಳೆ ಕೆಕೆಆರ್‌ಗೆ ರಹಾನೆ, ಅಂಗ್ರಿಶ್ ಆಸರೆ ಸಿಕ್ಕಿತು. ಹೆಡ್ 61 ರನ್ ಗಳಿಸಿ ಪಂದ್ಯದ ಬೆಸ್ಟ್ ಬ್ಯಾಟರ್ ಅನಿಸಿಕೊಂಡರು.

ಪವರ್‌ಪ್ಲೇ: ಬ್ಯಾಟಿಂಗ್‌ಗಿಳಿದ ಹೈದರಾಬಾದ್‌ಗೆ ಅಬ್ಬರದ ಆರಂಭ ಸಿಕ್ಕಿತು. ಟ್ರಾವಿಸ್ ಹೆಡ್ ತಮ್ಮ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಮಿಂಚಿದರೆ, ಅಭಿಷೇಕ್ ಆತುರದಲ್ಲಿ ಔಟಾದರು. 9 ಸ್ಫೋಟಕ ಬೌಂಡರಿಗಳನ್ನು ಬಾರಿಸಿದ ಹೆಡ್ 3 ಬಾನೆತ್ತರದ ಸಿಕ್ಸರ್ ಕೂಡ ಚಚ್ಚಿದರು. ಪವರ್‌ಪ್ಲೇ ಅಂತ್ಯಕ್ಕೆ ಹೈದರಾಬಾದ್ 71 ರನ್ ಗಳಿಸಿತು.

ರಹಾನೆ ಮತ್ತು ಫಿನ್ ಅಲೆನ್ ಕೆಕೆಆರ್‌ಗೂ ಸ್ಫೋಟಕ ಅಡಿಪಾಯ ಹಾಕಿಕೊಟ್ಟರು. ರಹಾನೆ ಅಂಟಿಕೊಂಡು ನಿಂತರೆ, ಫಿನ್ ಬೌಂಡರಿ ಸಿಕ್ಸರ್‌ನೊಂದಿಗೆ ಡೀಲ್ ಮಾಡುತ್ತಾ ಸಾಗಿದರು. 29 ರನ್ ಗಳಿಸಿದ್ದ ಅಲೆನ್ ವಿಕೆಟ್ ಬಿತ್ತು. ಪಂದ್ಯ ನಿಧಾನಗತಿ ಪಡೆದುಕೊಂಡಿತು. ಪವರ್‌ಪ್ಲೇನಲ್ಲಿ ಒಂದೆರಡು ಆಕ್ರಮಣಕಾರಿ ಬೌಂಡರಿ ಬಾರಿಸಿದ ರಹಾನೆ ಸ್ಕೋರ್ ಅನ್ನು 71ಕ್ಕೆ ಕೊಂಡೊಯ್ದರು. ಕೆಕೆಆರ್ ಪರ ಅಂಗ್ರಿಶ್ ಮತ್ತು ರಹಾನೆ ನಿಧಾನವಾಗಿ ಇನ್ನಿಂಗ್ಸ್ ಕಟ್ಟಿದರು. ಆತುರಕ್ಕೆ ಬೀಳದ ಕೆಕೆಆರ್ ನಿಧಾನವಾಗಿ ಗೆಲುವಿನತ್ತ ಸಾಗಿತು. 43ಕ್ಕೆ ರಹಾನೆ ವಿಕೆಟ್ ಬಿದ್ದಿತು. ರಿಂಕು ಸಿಂಗ್ ನಿಲ್ಲುತ್ತಿದ್ದಂತೆ ಅಂಗ್ರಿಶ್ ಬೌಂಡರಿ ಸಿಕ್ಸರ್‌ಗಳೊಂದಿಗೆ ಅರ್ಧಶತಕ ಬಾರಿಸಿಬಿಟ್ಟರು. ಅಲ್ಲಿಂದ ಯಾವುದೇ ಲೋಪ ಇಲ್ಲದೆ ಕೆಕೆಆರ್ ಪಂದ್ಯ ಗೆದ್ದುಕೊಂಡಿತು. ಮಧ್ಯಮ ಓವರ್‌ಗಳಲ್ಲಿ 72 ರನ್ ಗಳಿಸಿ ಕೇವಲ 1 ವಿಕೆಟ್ ಮಾತ್ರ ಕಳೆದುಕೊಂಡಿತು.



ಡೆತ್ ಓವರ್

ಹೈದರಾಬಾದ್‌ಗೆ ಡೆತ್ ಓವರ್‌ನಲ್ಲೂ ಯಾರೊಬ್ಬರ ಆಸರೆ ಸಿಗಲೇ ಇಲ್ಲ. ಪ್ಯಾಟ್ 10, ಶಿವಾಂಗ್ 1, ಹರ್ಷಲ್ 6 ರನ್‌ಗೆ ವಿಕೆಟ್ ಒಪ್ಪಿಸಿದರು. 17 ರನ್ ಗಳಿಸುವಷ್ಟರಲ್ಲಿ ಹೈದರಾಬಾದ್ ಉಳಿದ 3 ವಿಕೆಟ್ ಕಳೆದುಕೊಂಡಿತು. ಇತ್ತ ಕೆಕೆಆರ್ ಹೆಚ್ಚೇನಿದ್ದೇನು ಮಾಡಬೇಕಿರಲಿಲ್ಲ. 26 ರನ್‌ಗಳಿಸಿದರೆ ಗೆಲುವಿನ ರೇಖೆ ಮೀರಿಸುತ್ತಿತ್ತು. ರಘುವಂಶಿ ವಿಕೆಟ್ ಒಪ್ಪಿಸಿದರೂ, ರಿಂಕು 22 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು.

ಸಂಕ್ಷಿಪ್ತ ಸ್ಕೋರ್

ಹೈದರಾಬಾದ್ 19 ಓವರ್‌ಗಳಲ್ಲಿ 165: ಹೆಡ್ 61, ಕಿಶನ್ 42; ವರುಣ್ 36/3
ಕೆಕೆಆರ್ 8.1 ಓವರ್‌ಗಳಲ್ಲಿ 169: ರಘುವಂಶಿ 59, ರಹಾನೆ 43; ಸಾಕೀಬ್ 17/1

ಮಧ್ಯಮ ಆಟ: ಮಧ್ಯಮ ಓವರ್‌ಗಳಲ್ಲಿ ಹೈದರಾಬಾದ್‌ಗೆ ಇಶಾನ್ ಕಿಶಾನ್ ಆಸರೆ ಸಿಕ್ಕಿತು. ಹೆಡ್ 61 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ 11, ಸ್ಮರಣ್ 4, ಅನಿಕೇತ್ 6 ಮತ್ತು ಸಲೀಲ್ ಆರೋರಾ 1 ರನ್‌ಗೆ ಔಟಾದರು. ಇದೇ ವೇಳೆ ಅಬ್ಬರದ ಬೌಲಿಂಗ್ ದಾಳಿ ಸಂಘಟಿಸಿದ ವರುಣ್, ತ್ಯಾಗಿ ಮಿಂಚಿದರು. ಆದಾಗ್ಯೂ ಒಂದು ಬದಿಯಲ್ಲಿ ವಿಕೆಟ್ ಉಳಿಸಿಕೊಂಡು ನಿಂತಿದ್ದ ಕಿಶನ್ 42 ರನ್‌ಗೆ ಔಟಾದರು. ಹೈದರಾಬಾದ್ ರನ್‌ರೇಟ್ ಬಿದ್ದಿತು. ಬ್ಯಾಟಿಂಗ್ ಪಡೆಯೇ ಪತನಗೊಂಡಿತು. ಮಧ್ಯಮ ಓವರ್‌ಗಳಲ್ಲಿ ತಂಡ 77 ರನ್ ಗಳಿಸುವಷ್ಟರಲ್ಲಿ 6 ಪ್ರಮುಖ ವಿಕೆಟ್ ಕಳೆದುಕೊಂಡಿತು.

ಕಿರುಸುದ್ದಿ

ಮ್ಯಾಡ್ರಿಡ್ ಓಪನ್: ಮಾರ್ತಾ, ಸಿನ್ನರ್ ಚಾಂಪಿಯನ್

ಮ್ಯಾಡ್ರಿಡ್: ಉಕ್ರೇನ್‌ನ ಮಾರ್ತಾ ಕೋಸ್ಟ್ಯುಕ್ ಅವರು ರಷ್ಯಾದ ಮಿರ್‍ರಾ ಆಂಡ್ರೀವಾ ಅವರೊಂದಿಗೆ 6-3, 7-5 ಅಂತರದಲ್ಲಿ ಗೆದ್ದು ಮ್ಯಾಡ್ರಿಡ್ ಓಪನ್ ಕಿರೀಟವನ್ನು ಮೊದಲ ಬಾರಿಗೆ ತಮ್ಮದಾಗಿಸಿಕೊಂಡಿದ್ದಾರೆ. ವಿಶ್ವ ಕ್ರಮಾಂಕ 23ರ ಮಾರ್ತಾ ಅವರಿಗೆ ಇದು ವುಮೆನ್ಸ್ ಟೆನಿಸ್ ಅಸೋಸಿಯೇಶನ್ ಸಾವಿರ ಮಟ್ಟದ ಮೊದಲ ಪ್ರಶಸ್ತಿಯಾಗಿದ್ದು, ಈ ಸೀಸನ್‌ನ ಎರಡನೇ ಕಿರೀಟವೂ ಆಗಿದೆ. ಅಗ್ರ 20ರ ಹೊರಗಿನ ಆಟಗಾರ್ತಿ ಈ ಟೂರ್ನಿಯನ್ನು ಗೆದ್ದಿರುವ ಎರಡನೇ ಆಟಗಾರ್ತಿಯಾಗಿ ಅವರು ಹೊರಹೊಮ್ಮಿದ್ದಾರೆ. ಪುರುಷರ ವಿಭಾಗದಲ್ಲಿ ಜ್ವೆರೆವ್ ಅವರನ್ನು ಸೋಲಿಸಿದ ಯಾನಿಕ್ ಸಿನ್ನರ್ 6-1, 6-1ರಿಂದ ಗೆದ್ದರು.

ಪೋಲ್ ವಾಲ್ಟ್: ದಾಖಲೆ ಬರೆದ ಬರನಿಕಾ ಎಳಂಗೋವನ್

ಭುವನೇಶ್ವರ: ತಮಿಳುನಾಡಿನ ಬರನಿಕಾ ಎಳಂಗೋವನ್ ಭಾನುವಾರ ಭುವನೇಶ್ವರದಲ್ಲಿ ನಡೆದ ಇಂಡಿಯನ್ ಇಂಡೋರ್ ಓಪನ್ ಕಂಬೈಂಡ್ ಇವೆಂಟ್ಸ್ ಮತ್ತು ಪೋಲ್ ವಾಲ್ಟ್ ಸ್ಪರ್ಧೆಯಲ್ಲಿ 4.23 ಮೀಟರ್ ದೂರ ಗುರಿಯನ್ನು ಸಾಧಿಸುವ ಮೂಲಕ ತಮ್ಮದೇ ಆದ ಮಹಿಳಾ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಏಪ್ರಿಲ್‌ನಲ್ಲಿ ನಡೆದ ಒಳಾಂಗಣ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಹಿಂದಿನ 4.22 ಮೀಟರ್ ರಾಷ್ಟ್ರೀಯ ದಾಖಲೆಯನ್ನು ಸ್ಥಾಪಿಸಿದ್ದ ಬರನಿಕಾ, 3.90 ಮೀಟರ್ ಮತ್ತು 3.95 ಮೀಟರ್ ಸಾಧಾರಣ ಅಂತರದೊಂದಿಗೆ ಪ್ರಾರಂಭಿಸಿ ನಂತರ ಬಾರ್ ಅನ್ನು ಸ್ಥಿರವಾಗಿ ಹೆಚ್ಚಿಸಿಕೊಂಡರು. ನಂತರ ಅವರು ತಮ್ಮ ಮೊದಲ ಪ್ರಯತ್ನದಲ್ಲಿ 4.00 ಮೀಟರ್ ಮತ್ತು 4.10 ಮೀಟರ್ ಎತ್ತರಕ್ಕೆ ಗುರಿಯಿಟ್ಟು ತಮ್ಮ ಮೂರನೇ ಮತ್ತು ಅಂತಿಮ ಪ್ರಯತ್ನದಲ್ಲಿ 4.23 ಮೀಟರ್ ಎತ್ತರಕ್ಕೆ ಹೋಗಿ ತಮ್ಮ ರಾಷ್ಟ್ರೀಯ ದಾಖಲೆಯನ್ನು ಸುಧಾರಿಸಿಕೊಂಡರು. ಈ ವರ್ಷದ ಆರಂಭದಲ್ಲಿ, ಬರನಿಕಾ ಇಂಡಿಯನ್ ಓಪನ್ ಜಂಪ್ಸ್‌ನಲ್ಲಿ 4.10 ಮೀ ತಡೆಗೋಡೆ ದಾಟಿದ್ದರು, ಏಷ್ಯನ್ ಗೇಮ್ಸ್‌ಗಾಗಿ ಅಥ್ಲೆಟಿಕ್ಸ್ ಫೆಡರೇಶನ್ ಆಫ್ ಇಂಡಿಯಾದ ಅರ್ಹತಾ ಅಂಕವನ್ನು ಮುರಿದರು. ಈ ವಾಲ್ಟರ್ ಪ್ರಸ್ತುತ ಕಾಮನ್‌ವೆಲ್ತ್ ಗೇಮ್ಸ್‌ಗಾಗಿ 4.45 ಮೀ ಅರ್ಹತಾ ಅಂಕವನ್ನು ಬೆನ್ನಟ್ಟುತ್ತಿದ್ದಾರೆ.

ರಿಲೇ: ಭಾರತ ದಾಖಲೆ

ಹೊಸದಿಲ್ಲಿ: ಭಾನುವಾರ ನಡೆದ ವಿಶ್ವ ಅಥ್ಲೆಟಿಕ್ಸ್ ರಿಲೇಸ್ 2026ರ ಹೀಟ್ಸ್‌ನಲ್ಲಿ ಭಾರತ ತಂಡವು 4X100 ಮೀಟರ್ ಮಿಶ್ರ ರಿಲೇ ರಾಷ್ಟ್ರೀಯ ದಾಖಲೆಯನ್ನು ಮುರಿದಿದೆ. ರಘುಲ್ ಕುಮಾರ್, ನಿತ್ಯಾ ಗಂಧೆ, ಅನಿಮೇಶ್ ಕುಜುರ್ ಮತ್ತು ಸ್ನೇಹಾ ಎಸ್‌ಎಸ್ ಅವರನ್ನೊಳಗೊಂಡ ತಂಡವು 41.35 ಸೆಕೆಂಡುಗಳಲ್ಲಿ ಗುರಿ ತಲುಪುವ ಮೂಲಕ ಮಾರ್ಚ್‌ನಲ್ಲಿ ಚಂಡೀಗಢದಲ್ಲಿ ನಡೆದ ಓಪನ್ ರಿಲೇ ಪಂದ್ಯಾವಳಿಯಲ್ಲಿ ಲಾಲು ಪ್ರಸಾದ್, ಉನ್ನತಿ ಅಯ್ಯಪ್ಪ, ಹರಿತಾ ಭದ್ರ ಮತ್ತು ಜಯರಾಮ್ ಡಿ ಅವರು ಸ್ಥಾಪಿಸಿದ್ದ 42.30 ಸೆಕೆಂಡುಗಳ ಹಿಂದಿನ ದಾಖಲೆಯನ್ನು ಉತ್ತಮಗೊಳಿಸಿತು. ರಾಷ್ಟ್ರೀಯ ದಾಖಲೆಯನ್ನು ಪುನಃ ಬರೆಯಲಾಗಿದ್ದರೂ, ಭಾರತೀಯರು ತಮ್ಮ ಹೀಟ್ಸ್‌ನಲ್ಲಿ ಆರನೇ ಸ್ಥಾನ ಮತ್ತು ಒಟ್ಟಾರೆಯಾಗಿ 10ನೇ ಸ್ಥಾನ ಪಡೆದ ಕಾರಣ ಫೈನಲ್‌ನಲ್ಲಿ ಸ್ಥಾನ ಪಡೆಯಲು ಸಮಯ ಸಾಕಾಗಲಿಲ್ಲ.

ಐಪಿಎಲ್‌ನಿಂದ ರಾಮಕೃಷ್ಣ ಹೊರಕ್ಕೆ

ಮುಂಬೈ: ಚೆನ್ನೈ ತಂಡದ ಪರ ಏಕಮಾತ್ರ ಪಂದ್ಯವಾಡಿರುವ ಆಲ್‌ರೌಂಡರ್ ರಾಮಕೃಷ್ಣ ಘೋಷ್ ಬಲಗಾಲಿಗೆ ಗಾಯ ಮಾಡಿಕೊಂಡಿದ್ದು ಪಂದ್ಯಾವಳಿಯಿಂದ ಹೊರಬಿದ್ದಿದ್ದಾರೆ. ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ನಡುವೆ ನಡೆದ ಪಂದ್ಯದಲ್ಲಿ ಚೆನ್ನೈ ತಂಡದ ಭಾಗವಾಗಿದ್ದ ಅವರು, ಆಕರ್ಷಕ ಕ್ಯಾಚ್‌ನೊಂದಿಗೆ ಮಿಂಚಿದ್ದರು. ನಂತರ ಬೌಲಿಂಗ್‌ನಲ್ಲೂ ರಯಾನ್ ವಿಕೆಟ್ ಪಡೆದಿದ್ದರು. ಬೌಲಿಂಗ್ ಮಾಡುವ ವೇಳೆ ಗಾಯ ಮಾಡಿಕೊಂಡಿದ್ದ ಅವರು ಕಾಲು ಮುರಿತಕ್ಕೊಳಗಾಗಿದ್ದಾರೆ. ಈ ನಿಟ್ಟಿನಲ್ಲಿ ಉಳಿದ ಪಂದ್ಯಾವಳಿಗೆ ಅವರು ಲಭ್ಯರಿಲ್ಲ ಎಂದು ಚೆನ್ನೈ ತಿಳಿಸಿದೆ.

ಜೂ. ಶೂಟಿಂಗ್: ಐಶ್ವರ್ಯ ಬಾಲೆಹೊಸೂರ್ ಆಯ್ಕೆ

ಹುಬ್ಬಳ್ಳಿ: ಉತ್ತರ ಕರ್ನಾಟಕ ಭಾಗದ ಹೆಮ್ಮೆಯ ಯುವ ಶೂಟರ್ ಐಶ್ವರ್ಯ ಬಾಲೆಹೊಸೂರ್ 50ಮೀಟರ್ ಫ್ರೀ ಪಿಸ್ತೋಲ್ ವಿಭಾಗದಲ್ಲಿ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ಗೆ ಭಾರತ ತಂಡಕ್ಕೆ ಆಯ್ಕೆಯಾಗಿದ್ದಾರೆ.

ಹುಬ್ಬಳ್ಳಿಯ ಐಶ್ವರ್ಯ, 50ಮೀಟರ್ ಫ್ರೀ ಪಿಸ್ತೋಲ್ ವಿಭಾಗದಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಸತತವಾಗಿ ಉತ್ತಮ ಪ್ರದರ್ಶನ ನೀಡಿ ಆಯ್ಕೆ ಸಮಿತಿಯ ಗಮನ ಸೆಳೆದಿದ್ದಾರೆ. ಕಠಿಣ ಪರಿಶ್ರಮ ಮತ್ತು ಶಿಸ್ತಿನ ಮೂಲಕ ಈ ಮೈಲಿಗಲ್ಲು ತಲುಪಿದ್ದಾರೆ.

ಭಾರತವನ್ನು ವಿಶ್ವ ವೇದಿಕೆಯಲ್ಲಿ ಪ್ರತಿನಿಧಿಸಲು ಸಿಕ್ಕ ಈ ಅವಕಾಶಕ್ಕೆ ಸಂತಸ ವ್ಯಕ್ತ ಪಡಿಸಿದ ತರಬೇತುದಾರಾದ ರವಿಚಂದ್ರ ಬಾಲೇಹೊಸೂರ್, ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಸಾಧನೆ ತೋರಿ ಭಾರತಕ್ಕೆ ಕೀರ್ತಿ ತರಲಿ ಎಂದು ಹಾರೈಸಿದ್ದಾರೆ. ಚಾಂಪಿಯನ್‌ಶಿಪ್ ಈ ವರ್ಷದ ಜುಲೈನಲ್ಲಿ ಜರ್ಮನಿಯ ಸೂಲ್‌ನಲ್ಲಿ ನಡೆಯಲಿದೆ. ಹುಬ್ಬಳ್ಳಿ ಸ್ಪೋರ್ಟ್ಸ್ ಶೂಟಿಂಗ್ ಅಕಾಡೆಮಿ ಐಶ್ವರ್ಯ ಅವರಿಗೆ ಅಭಿನಂದನೆ ಸಲ್ಲಿಸಿದ್ದು, ವಿಶ್ವ ಚಾಂಪಿಯನ್‌ಶಿಪ್‌ನಲ್ಲಿ ಉಜ್ವಲ ಸಾಧನೆ ಮಾಡಲಿ ಎಂದು ಅಕಾಡೆಮಿ ಸಂಸ್ಥಾಪಕರಾದ ಶಿವಾನಂದ ಬಾಳೆಹೊಸೂರ್ ಹಾರೈಸಿದ್ದಾರೆ.

> ನನ್ನ ಪಾಲಿಗೆ ಕನಸು ನನಸಾದಂತೆ. ನನ್ನ ತಂದೆ-ತಾಯಿ, ಕೋಚ್, ಕರ್ನಾಟಕ ಸ್ಟೇಟ್ ರೈಫಲ್ ಅಸೋಸಿಯೇಷನ್ ಬೆಂಬಲವಿಲ್ಲದೆ ಇದು ಸಾಧ್ಯವಾಗುತ್ತಿರಲಿಲ್ಲ. ದೇಶಕ್ಕಾಗಿ ಪದಕ ಗೆಲ್ಲುವುದು ನನ್ನ ಮುಂದಿನ ಗುರಿ.
> ■ ಐಶರ್ಯ ಬಾಲೆಹೊಸೂರ್, ಶೂಟರ್



ಗುಜರಾತ್ ಟೈಟಾನ್ಸ್‌ಗೆ ಸ್ಪರ್ಧಾತ್ಮಕ ಗುರಿ

ಅಹಮದಾಬಾದ್: ಜೇಸನ್ ಹೋಲ್ಡರ್ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಪಂಜಾಬ್ ಸೂರ್ಯಾಂಶ್ ಶೇಗ್ಡೆ ಅವರ ಆಸರೆ ಪಡೆದ ನಂತರ ಸ್ಪರ್ಧಾತ್ಮಕ ಗುರಿ ನಿರ್ಮಿಸಿತು.

ಅಗ್ರಸ್ಥಾನಿ ಪಂಜಾಬ್‌ನೊಂದಿಗಿನ ಪಂದ್ಯಕ್ಕೆ ತಮ್ಮ ಪ್ರಾಬಲ್ಯ ವಿಸ್ತರಿಸಿದ ಗುಜರಾತ್ ಟೈಟಾನ್ಸ್, ಆರಂಭದಲ್ಲಿ ಹಿಡಿತ ಸಾಧಿಸಿತ್ತು. ಆದರೆ ಯುವ ಆಟಗಾರ ಸೂರ್ಯಾಂಶ್(57; 29ಎ, 3 ಬೌ, 5ಸಿ) ಹಾಗೂ ಮಾರ್ಕಸ್ ಸ್ಟೋಯಿನಿಸ್(40; 31ಎ, 5ಬೌ, 1ಸಿ) ಆಸರೆಯಾದರು. ಅಂತಿಮದಲ್ಲಿ ಯಾನ್ಸನ್ ಸ್ಕೋರ್ ಹಿಗ್ಗಿಸಿದ ನಂತರ 20 ಓವರ್‌ಗಳಲ್ಲಿ ಪಂಜಾಬ್ 9 ವಿಕೆಟ್ ನಷ್ಟಕ್ಕೆ 163 ರನ್ ಗಳಿಸಿದೆ. ಗುಜರಾತ್ ಪರ ಹೋಲ್ಡರ್ 4 ಓವರ್‌ಗಳಲ್ಲಿ 24 ರನ್ ಮಾತ್ರ ನೀಡಿ 4 ವಿಕೆಟ್ ಕಿತ್ತರು.


ಆರಂಭಿಕ ಕುಸಿತ: ಟಾಸ್ ಗೆದ್ದು ಬ್ಯಾಟಿಂಗ್‌ಗಿಳಿದ ಪಂಜಾಬ್ ಆರಂಭಿಕ ಆಘಾತ ಎದುರಿಸಿತು. ಸ್ಫೋಟಕ ಬ್ಯಾಟರ್ ಪ್ರಿಯಾಂಶ್ ಆರ್ಯ 2 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಕೂಪರ್ ಕೊನೊಲಿ ಶೂನ್ಯ ಸುತ್ತಿದರು. ಮೊದಲನೇ ಓವರ್‌ನಲ್ಲೇ ಎರಡು ವಿಕೆಟ್ ಪಡೆದಿದ್ದ ಗುಜರಾತ್ ಒತ್ತಡ ಹೇರಲೆತ್ನಿಸಿತು. ಶ್ರೇಯಸ್ ಅಯ್ಯರ್ ಕೊಂಚ ಹೊತ್ತು ನಿಂತರು. ನಿಹಾಲ್ ವಧೇರಾ ಮತ್ತೊಮ್ಮೆ ಶೂನ್ಯಕ್ಕೆ ಔಟಾದರು. ಪವರ್‌ಪ್ಲೇನಲ್ಲಿ ಗುಜರಾತ್ ಪಂಜಾಬ್ ಮೇಲೆ ಪ್ರಾಬಲ್ಯ ಸಾಧಿಸಿತು.

ಸೂರ್ಯಾಂಶ್ ಅರ್ಧಶತಕ: 35 ರನ್‌ಗೆ 3 ವಿಕೆಟ್ ಕಳೆದುಕೊಂಡಿದ್ದ ಪಂಜಾಬ್ ಮಧ್ಯಮ ಓವರ್‌ಗಳಲ್ಲಿ ಚೇತರಿಸಿಕೊಂಡಿತು. ಆದಾಗ್ಯೂ ಶ್ರೇಯಸ್ 19 ರನ್‌ಗೆ ಔಟಾದರು. ಕುಸಿದ ಪಂಜಾಬ್‌ಗೆ ಯುವ ಬ್ಯಾಟರ್ ಸೂರ್ಯಾಂಶ್ ಆಸರೆ ಸಿಕ್ಕಿತು. ನಿಧಾನವಾಗಿ ಶುರು ಮಾಡಿದ ಅವರು, ಸ್ಟೋಯಿನಿಸ್‌ನೊಂದಿಗೆ ಇನ್ನಿಂಗ್ಸ್ ಕಟ್ಟಿದರು. ಮಧ್ಯಮ ಓವರ್‌ಗಳ ಅಂತ್ಯದಲ್ಲಿ ಸೂರ್ಯಾಂಶ್ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಮಾನವ್ ಸುಥರ್ ಮಾಡಿದ ಓವರ್‌ನಲ್ಲಿ 28 ರನ್ ಬಾರಿಸಿದರು. ಅರ್ಧಶತಕ ಬಾರಿಸುತ್ತಿದ್ದಂತೆ 57 ರನ್‌ಗೆ ಔಟಾದರು. ಮಧ್ಯಮ ಓವರ್‌ಗಳಲ್ಲಿ ಪಂಜಾಬ್ 91 ರನ್ ಗಳಿಸಿತು.

ಡೆತ್ ಓವರ್: ಡೆತ್ ಓವರ್‌ನಲ್ಲಿ ಹೋಲ್ಡರ್ ಪ್ರಖರ ದಾಳಿ ಸಂಘಟಿಸಿದರು. ಈ ಮೊದಲೇ ಶ್ರೇಯಸ್ ಹಾಗೂ ವಧೇರಾ ವಿಕೆಟ್ ಪಡೆದಿದ್ದ ಅವರು ಸ್ಟೋಯಿನಿಸ್ ಹಾಗೂ ಬಾರ್ಟ್‌ಲೆಟ್‌ಗೂ ಪೆವಿಲಿಯನ್ ದಾರಿ ತೋರಿಸಿದರು.ಯಾನ್ಸನ್ ಸ್ಫೋಟಕ ಬ್ಯಾಟಿಂಗ್ ಮಾಡಿರು.



ಚೆನ್ನೈ ಸೂಪರ್ ಕಿಂಗ್ಸ್‌ಗೆ ಗೆಲುವು



ಸಂಕ್ಷಿಪ್ತ ಸ್ಕೋರ್

ಮುಂಬೈ 20 ಓವರ್: 159/7: ನಮನ್ 57, ರಯಾನ್ 37; ಅನ್ಶುಲ್ 32/3
ಚೆನ್ನೈ 18.1 ಓವರ್: 160/2: ರುತುರಾಜ್ 67★, ಕಾರ್ತಿಕ್ 54; ಬೂಮ್ರಾ 20/1

- ಗಾಯಕ್ವಾಡ್, ಕಾರ್ತಿಕ್ ಅಬ್ಬರ
- ಪ್ಲೇಆಫ್ ಆಸೆ ಇನ್ನೂ ಜೀವಂತ

ಚೆನ್ನೈ: ನಾಯಕ ರುತುರಾಜ್ ಗಾಯಕ್ವಾಡ್ ಮತ್ತು ಯುವ ಬ್ಯಾಟರ್ ಕಾರ್ತಿಕ್ ಶರ್ಮ ಅವರ ಸಮಯೋಚಿತ ಬ್ಯಾಟಿಂಗ್ ಬಲದೊಂದಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ಮುಂಬೈ ಇಂಡಿಯನ್ಸ್ ವಿರುದ್ಧ 8 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿದೆ.

ಅಳಿವು-ಉಳಿವು ಪಂದ್ಯದಲ್ಲಿ ಮುಂಬೈ ಮೇಲೆ ಮತ್ತೊಮ್ಮೆ ಪ್ರಾಬಲ್ಯ ಸಾಧಿಸಿರುವ ಚೆನ್ನೈ ಈ ಆವೃತ್ತಿಯಲ್ಲಿ ಹಾರ್ದಿಕ್ ಪಡೆಗೆ ಎರಡನೇ ಸೋಲಿನಾಘಾತ ನೀಡಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 159 ರನ್ ಗಳಿಸಿತು. ನಮನ್ (57; 37ಎ, 4ಬೌ, 3ಸಿ), ರಯಾನ್(37; 24ಎ, 5ಸಿ) ಮಿಂಚಿದರು. ಚೆನ್ನೈ ಪರ ಅನ್ಶುಲ್ 3 ವಿಕೆಟ್ ಪಡೆದರು. ಗುರಿ ಬೆನ್ನತ್ತಿದ ಚೆನ್ನೈ 18.1 ಓವರ್‌ಗಳಲ್ಲಿ 2ವಿಕೆಟ್ ನಷ್ಟಕ್ಕೆ 160 ರನ್ ಗಳಿಸಿತು. ರುತುರಾಜ್ (67★; 48ಎ, 5 ಬೌ, 2ಸಿ), ಕಾರ್ತಿಕ್ ಶರ್ಮ (54★, 40ಎ, 4 ಬೌ, 3ಸಿ) ಗಳಿಸಿದರು. ಮುಂಬೈ ಪರ ಬೂಮ್ರಾ 1 ವಿಕೆಟ್ ಪಡೆದರು.

ಗುರಿ ಬೆನ್ನತ್ತಿದ ಚೆನ್ನೈಗೆ ಸ್ಫೋಟಕ ಆರಂಭ ಸಿಕ್ಕಿತು. ಸಂಜು ಸ್ಯಾಮ್ಸನ್ ಬೇಗನೇ ವಿಕೆಟ್ ಕಳೆದುಕೊಂಡರೂ ಮೂರನೇ ಕ್ರಮಾಂಕದಲ್ಲಿ ಬಂದ ಉರ್ವಿಲ್ ಪಟೇಲ್ ಬಿರುಸಿನ ಬ್ಯಾಟಿಂಗ್ ಶುರು ಮಾಡಿದರು. ರುತುರಾಜ್ ಕೂಡ ಸಮಯೋಚಿತ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇ ಉದ್ದಕ್ಕೂ ಇಬ್ಬರೂ ಮುಂಬೈ ಪಡೆಯನ್ನು ದಂಡಿಸಿದರು. ಗಾಯಕ್ವಾಡ್ ಅಸಲು ಲಯಕ್ಕೆ ಮರಳುತ್ತಿದ್ದಂತೆ ಪವರ್ ಪ್ಲೇನ ಕೊನೆಯ ಓವರ್‌ನಲ್ಲಿ ಉರ್ವಿಲ್(24; 12ಎ, 2ಬೌ, 2ಸಿ) ಔಟಾದರು. ಕಾರ್ತಿಕ್ ಶರ್ಮ ಇಂಪ್ಯಾಕ್ಟ್ ಆಟಗಾರರಾಗಿ ಬಂದರು. ಪವರ್‌ಪ್ಲೇ ಮುಕ್ತಾಯಕ್ಕೆ ಚೆನ್ನೈ 62 ರನ್ ಗಳಿಸಿತು. ಅಂತೆಯೇ 2 ಪ್ರಮುಖ ವಿಕೆಟ್‌ಗಳನ್ನೂ ಕಳೆದುಕೊಂಡಿತ್ತು. ಮುನ್ನಡೆಯಲ್ಲಿದ್ದ ಚೆನ್ನೈ ಮಧ್ಯಮ ಓವರ್‌ನಲ್ಲೂ ಆಕ್ರಮಣಕಾರಿ ಬ್ಯಾಟಿಂಗ್ ನಿಲ್ಲಿಸಲಿಲ್ಲ. ಓವರಿಗೆ 8 ರನ್ ಮಾಡುತ್ತಾ ಗುರಿ ಕ್ರಮಿಸಿತು. ಗಾಯಕ್ವಾಡ್ ತಮ್ಮ ಅಸಲು ಲಯಕ್ಕೆ ಬಂದರು. ಅರ್ಧ ಶತಕ ಬಾರಿಸಿದರು ಮಧ್ಯಮ ಓವರ್ ಮುಕ್ತಾಯದವರೆಗೂ ಈ ಜೋಡಿ ಉತ್ತಮ ಬ್ಯಾಟಿಂಗ್ ಮಾಡಿತು. ವಿಕೆಟ್ ನೀಡದೆ ಸಮಯೋಚಿತ ಬ್ಯಾಟಿಂಗ್ ಮಾಡಿದ ನಂತರ ಮಧ್ಯಮ ಓವರ್‌ಗಳಲ್ಲಿ ಚೆನ್ನೈ 76 ರನ್ ಗಳಿಸಿತು. ಡೆತ್ ಓವರ್‌ನಲ್ಲಿ ಈ ಜೋಡಿ ಸ್ಫೋಟಕ ಬ್ಯಾಟಿಂಗ್ ಮಾಡಿತು ಕಾರ್ತಿಕ್ ಶರ್ಮ, 39 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದರು. ಗಾಯಕ್ವಾಡ್ 67 ರನ್ ಗಳಿಸಿದರು. ಚೆನ್ನೈ 18.1 ಓವರ್‌ಗಳಲ್ಲಿ ಗುರಿ ಮುಟ್ಟಿತು.

ಇಂದು ಲಖನೌ-ಮುಂಬೈ ಪಂದ್ಯ

ಮುಂಬೈ: ಚೆನ್ನೈ ವಿರುದ್ಧದ ಪಂದ್ಯದಲ್ಲಿ ಸೋತ ನಂತರ ಪಂದ್ಯಾವಳಿಯಿಂದ ಬಹುತೇಕ ಹೊರಬಿದ್ದಿರುವ ಮುಂಬೈ ಇಂಡಿಯನ್ಸ್ ಮತ್ತು ಕೊನೆ ಸ್ಥಾನದಲ್ಲಿರುವ ಲಖನೌ ಸೂಪರ್ ಜೇಂಟ್ಸ್ ತಂಡಗಳು ಸೋಮವಾರದ ಐಪಿಎಲ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಸೋಲುಗಳಲ್ಲೇ ಮುಳುಗಿರುವ ಲಖನೌ ತಂಡಕ್ಕೂ ಇದು ಕೊನೆ ಅವಕಾಶ. ಅಂಕಪಟ್ಟಿಯ 3 ಮತ್ತು 4ನೇ ಸ್ಥಾನಕ್ಕಾಗಿ ಗುಜರಾತ್, ಹೈದರಾಬಾದ್, ಚೆನ್ನೈ ಮತ್ತು ದಿಲ್ಲಿ ಸ್ಪರ್ಧೆ ಮಾಡುತ್ತಿವೆ.

ಕೆಕೆಆರ್ ವಿರುದ್ಧದ ಪಂದ್ಯದಲ್ಲಿ ಲಖನೌ ಕೊನೆ ಕ್ಷಣದಲ್ಲಿ ಸೋತಿತ್ತು. ಇತ್ತ ಮುಂಬೈ ಚೆನ್ನೈ ವಿರುದ್ಧದ ಪಂದ್ಯದಲ್ಲಿ ಹೀನಾಯ ಸೋಲು ಕಂಡಿತ್ತು. ಮುಂಬೈ ಉಳಿದ ಪಂದ್ಯಗಳಲ್ಲಿ ಆಡುವ ಔಪಚಾರಿಕತೆಗಾಗಿ ಫೈಟ್ ಕೊಡಲಿದೆ. 7 ಪಂದ್ಯಗಳನ್ನು ಗೆದ್ದು ಪ್ಲೇಆಫ್‌ಗೆ ಹೋಗಬಲ್ಲ ಶೇ.1ರಷ್ಟು ಅವಕಾಶವನ್ನು ಹೊಂದಿದೆ. ಇತ್ತ ಲಖನೌ ಕೂಡ ಅದೇ ಸ್ಥಿತಿಯಲ್ಲಿದೆ. ಮುಂಬೈ ವಿರುದ್ಧ ಗೆದ್ದರೆ ಕೊನೆಯ ಸ್ಥಾನದಿಂದ ಮೇಲೇರಬಹುದು.

ಮುಂಬೈಗೆ ಪುಟಿದೇಳುವ ಸವಾಲು: ಚೆನ್ನೈ ವಿರುದ್ಧದ ಪಂದ್ಯದಲ್ಲಿ ಮತ್ತೊಮ್ಮೆ ಬ್ಯಾಟಿಂಗ್ ವೈಫಲ್ಯ ಕಂಡಿದೆ. ರಯಾನ್, ನಮನ್ ಉತ್ತಮ ಬ್ಯಾಟಿಂಗ್ ಮಾಡಿದ್ದರೂ ಇನ್ನುಳಿದವರು ಕೈಕೊಟ್ಟರು. ಮುಖ್ಯವಾಗಿ ಮಧ್ಯಮ ಕ್ರಮಾಂಕಿತ ಬ್ಯಾಟಿಗರಾದ ಸೂರ್ಯಕುಮಾರ್, ತಿಲಕ್ ಮತ್ತು ಹಾರ್ದಿಕ್ ಭಾರೀ ಹಿನ್ನಡೆ ಅನುಭವಿಸಿದ್ದಾರೆ. ಬೌಲಿಂಗ್ ವಿಚಾರಕ್ಕೆ ಬಂದರೆ ಬೂಮ್ರಾ, ಬೋಲ್ಟ್ ಮೊದಲಾದವರು ದುಬಾರಿಯಾಗಿದ್ದಾರೆ. ಕೃಷ್ಣ ಭಗತ್ ಕೂಡ ಹಿನ್ನಡೆ ಅನುಭವಿಸಿದ್ದಾರೆ. ಸ್ಯಾಂಟ್ನರ್‌ಗೆ ಗಾಯವಾಗಿರುವುದು ಹಿನ್ನಡೆ ತಂದಿದೆ. ರಘು ಶರ್ಮ ತಮ್ಮ ಮೊದಲ ಪಂದ್ಯದಲ್ಲಿ ಕಡಿಮೆ ರನ್ ಕೊಟ್ಟಿದ್ದಾರೆ.

ಸೋಲದಿರಲು ಲಖನೌ ಪಣ: ಇತ್ತ ಲಖನೌ ಸೂಪರ್ ಜೇಂಟ್ಸ್ ಎಲ್ಲಾ ಪಂದ್ಯಗಳಲ್ಲಿ ಕೊನೆ ಕ್ಷಣದ ತಪ್ಪುಗಳಿಂದಲೇ ಸೋತಿದೆ. ಸೂಪರ್ ಓವರ್ ನಡೆದ ಕೆಕೆಆರ್ ಪಂದ್ಯದಲ್ಲಿ ಬ್ಯಾಟಿಂಗ್ ವೈಫಲ್ಯದಿಂದ ಸೋತಿತ್ತು. ಮಾರ್ಷ್ ಹಿಡಿದು ಪಂತ್, ಪೂರಣ್, ಆಯುಷ್ ಲಯದಲ್ಲಿಲ್ಲ. ಯುವಕರಾದ ಮುಕುಲ್ ಮತ್ತು ಹಿಮ್ಮತ್ ಮೇಲೆ ಹೆಚ್ಚಿನ ಒತ್ತಡವಿದೆ. ಬೌಲಿಂಗ್ ವಿಭಾಗ ಉತ್ತಮ ಪ್ರದರ್ಶನವನ್ನೇ ನೀಡುತ್ತಿದೆ. ಶಮಿ, ಮೋಹ್ಸಿನ್ ಮತ್ತು ಪ್ರಿನ್ಸ್ ಉತ್ತಮ ಲಯದಲ್ಲಿದ್ದಾರೆ.

ಪಿಚ್: ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಹಿಂದಿನ ಪಂದ್ಯಗಳಲ್ಲಿ ಬ್ಯಾಟರ್ ಮತ್ತು ಬೌಲರ್‌ಗಳು ಸಮಾನ ಪ್ರದರ್ಶನ ನೀಡಿದ್ದಾರೆ. ಹೆಚ್ಚಿನ ಬೌನ್ಸ್ ಬ್ಯಾಟರ್‌ಗಳಿಗೆ ಕಾಟ ಕೊಟ್ಟರೆ, ಇಬ್ಬನಿ ಬೌಲರ್‌ಗಳಿಗೆ ಚಿಂತೆಯಾಗಿದೆ. ಮಳೆ ಸಾಧ್ಯತೆ ಕಮ್ಮಿ. ಮೊದಲು ಬೌಲಿಂಗ್ ಮಾಡಿದ ತಂಡಕ್ಕೆ ಲಾಭ ಸಿಗಬಹುದು.



ಪಂದ್ಯದ ವಿವರ

ಯಾವಾಗ: ಸೋಮವಾರ, ಎಲ್ಲಿ: ಮುಂಬೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಥಾಮಸ್ ಕಪ್: ಭಾರತಕ್ಕೆ ಕಂಚಿನ ಪದಕ

ಹೊಸದಿಲ್ಲಿ: ಡೆನ್ಮಾರ್ಕ್‌ನ ಹೋರ್ಸೆನ್ಸ್‌ನಲ್ಲಿ ನಡೆದ ಥಾಮಸ್ ಕಪ್‌ನಲ್ಲಿ ಭಾರತದ ಅಭಿಯಾನ ಕಂಚಿನ ಪದಕದೊಂದಿಗೆ ಅಂತ್ಯಗೊಂಡಿದ್ದು, ಫ್ರಾನ್ಸ್ ವಿರುದ್ಧ ಸೆಮಿಫೈನಲ್‌ನಲ್ಲಿ 0-3 ಅಂತರದ ಸೋಲು ಕಂಡಿದೆ.

ಲಕ್ಷ್ಯ ಸೇನ್ ಮೊಣಕೈ ಗಾಯದ ಕಾರಣ ಪಂದ್ಯದಿಂದ ಹೊರಗುಳಿದ ಹಿನ್ನೆಲೆಯಲ್ಲಿ ಆಯುಷ್ ಶೆಟ್ಟಿ ಮೊದಲ ಸಿಂಗಲ್ಸ್ ಆಡಿದರು. ಆದರೆ ವಿಶ್ವ ಕ್ರಮಾಂಕ ನಾಲ್ಕನೇ ಆಟಗಾರ ಕ್ರಿಸ್ಟೋ ಪೊಪೋವ್ ವಿರುದ್ಧ 11-21, 9-21 ಅಂತರದಲ್ಲಿ 39 ನಿಮಿಷಗಳಲ್ಲಿ ಸೋಲು ಕಂಡರು.

ಅನುಭವಿಯ ಕಿದಾಂಬಿ ಶ್ರೀಕಾಂತ್ ತಂಡಕ್ಕೆ ಸಮಬಲ ತರಲು ಪ್ರಯತ್ನಿಸಿದರೂ, ವಿಶ್ವ ಕ್ರಮಾಂಕ ಹತ್ತನೇ ಆಟಗಾರ ಅಲೆಕ್ಸ್ ಲಾನಿಯರ್ ವಿರುದ್ಧ 16-21, 18-21 ಅಂತರದಲ್ಲಿ ಸೋತರು. ನಿರ್ಣಾಯಕ ಮೂರನೇ ಸಿಂಗಲ್ಸ್‌ನಲ್ಲಿ ಎಚ್. ಎಸ್. ಪ್ರಣಯ್ ಉತ್ತಮ ಆರಂಭ ಮಾಡಿದರು. ಮೊದಲ ಗೇಮ್‌ನಲ್ಲಿ ಬಹುತೇಕ ಮುನ್ನಡೆ ಸಾಧಿಸಿದ್ದರೂ, ಕೊನೆಯಲ್ಲಿ ಟೋಮಾ ಜೂನಿಯರ್ ಪೊಪೋವ್ 21-18 ಅಂತರದಲ್ಲಿ ಗೆದ್ದು ಮುನ್ನಡೆ ಪಡೆದರು. ನಂತರ ಎರಡನೇ ಗೇಮ್‌ನಲ್ಲಿ 21-16 ಅಂತರದಲ್ಲಿ ಜಯ ಸಾಧಿಸಿ ಫ್ರಾನ್ಸ್ ತಂಡವನ್ನು ಇತಿಹಾಸದಲ್ಲೇ ಮೊದಲ ಬಾರಿಗೆ ಫೈನಲ್‌ಗೆ ಕೊಂಡೊಯ್ದರು.


ಈ ಸೋಲಿನೊಂದಿಗೆ ಭಾರತ ತನ್ನ ಐದನೇ ಪದಕವನ್ನು ಗೆದ್ದಿದೆ. ಇದಕ್ಕೂ ಮೊದಲು 1952, 1955 ಮತ್ತು 1979ರಲ್ಲಿ ಕಂಚಿನ ಪದಕಗಳನ್ನು ಜಯಿಸಿತ್ತು. ಇನ್ನೊಂದು ಸೆಮಿಫೈನಲ್‌ನಲ್ಲಿ ಚೀನಾ ತಂಡ ಡೆನ್ಮಾರ್ಕ್ ವಿರುದ್ಧ 3-0 ಅಂತರದಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು. ಶಿ ಯುಕೀ, ಲಿಯಾಂಗ್ ವೇಯ್ ಕೆಂಗ್ ವಾಂಗ್ ಚ ಚಾಂಗ್ ಜೋಡಿ ಮತ್ತು ಲಿ ಶಿ ಫೆಂಗ್ ತಮ್ಮ ತಮ್ಮ ಪಂದ್ಯಗಳಲ್ಲಿ ಗೆಲುವು ಸಾಧಿಸಿದರು.



ಪದಬಂಧ

5973

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ

2.ಆಕಾರವೂ ಕಾಣದಷ್ಟು ಕತ್ತಲೆ (5)
5.ವಿರಕ್ತಿಯಲ್ಲಿ ತಿರುಗಿ ಮೂಡಿದೆ (3)
6.ಕೂಲಂಕಷವಾಗಿ ವಿಶ್ಲೇಷಣೆ ಮಾಡುವುದು (3)
7.ಮನದಲ್ಲಿ ಅತಿ ಉತ್ಸಾಹದ ಭಾವವಿರುವುದು (5)
8.ಬಳ್ಳಿಗಳಿಂದ ರಚಿತವಾದ ಮಂಟಪ (4)
11.ಜ್ಞಾನ-ಕಲೆಯ ದೇವತೆ-ಶಾರದೆ (4)
13.ಕೆಂಪುಬಣ್ಣದ ನೆತ್ತರು (3)
14.ನಮಗಾರಿಗೂ ಸಿಗದ ಸಿಹಿತಿನಿಸು (3)
16.ಸಾಗರ ಮಂಥನಕ್ಕೆ ಬಳಸಿದ ಸರ್ಪ (3)
17.ಮನುಷ್ಯನಾಕಾರದ ಕಪಿ (5)

ಮೇಲಿನಿಂದ ಕೆಳಕ್ಕೆ

1.ಗಿರೀಶ್ ಕಾರ್ನಾಡರ ಈ ಕೃತಿ ಚಲನಚಿತ್ರವಾಗಿದೆ (5)
2.ಹಳ್ಳಿಯವನು-ಗ್ರಾಮವಾಸಿ (3)
3.ಈ ಕುಪ್ಪಸದ ಮೊದಲು ಸೂರ್ಯನಿದ್ದಾನೆ (3)
4.ಯಮಪುರಿಯೆಡೆಗೆ ಹೋಗುವುದು (5)
9.ಹಿಂದೆ ಬರವಣಿಗೆಗೆ ಬಳಸುತ್ತಿದ್ದ ಎಲೆ (4)
10.ಹುಲ್ಲು-ಎಲೆ ಸಸ್ಯಗಳ ಬಣ್ಣ (3)
11.ಸಲಿಗೆ-ಮುಕ್ತತೆಯಿದು (3)
12.ಕಷ್ಟವಾದುದನ್ನು ಸುಲಭವಾಗುವಂತೆ ಮಾಡು (4)
15.ಬೀರುತ್ತಿರುವ ಹಾಸ ತಲೆಕೆಳಗಾಗಿದೆ (2)
16.ಏಳು ದಿನಗಳ ಕಾಲ (2)

5972 ಉತ್ತರ

ಎಡದಿಂದ ಬಲಕ್ಕೆ:

1.ನದಿಸಾಗರ 3.ಮದನ
4.ಜಲಧಿ 6.ನರಭಕ್ಷಕ
7.ಗತಕಾಲ 10.ಸುಸಜ್ಜಿತ
12.ವಜನು 13.ಮರುಕ
15.ಪತನ 16.ನಯನಕರ್ಣ

ಮೇಲಿನಿಂದ ಕೆಳಕ್ಕೆ :

1.ನಮನ 2.ರಜಕ
3.ನವರಂಗ 5.ಧಿಕ್ಕರಿಸು
8.ತಳವೂರು 9.ಲವ
10.ತನು 11.ಸಹಮತ
14.ಮನ 15.ಪರ್ಣ

ಕಿರುಸುದ್ದಿ

ಕಾರ್ಕಳ: ಮದ್ಯದ ನಶೆಯಲ್ಲಿ ತಮ್ಮನಿಂದಲೇ ಅಣ್ಣನ ಬರ್ಬರ ಕೊಲೆ

ಕಾರ್ಕಳ: ಕುಡಿತದ ನಶೆಯಲ್ಲಿ ತಮ್ಮನೇ ಅಣ್ಣನನ್ನು ಹೊಡೆದು ಕೊಲೆಗೈದ ಘಟನೆ ಕಾರ್ಕಳದ ಶಿವತಿಕೆರೆ ಬಳಿಯ ಪರ್ಪಲೆ ಎಂಬಲ್ಲಿ ಶನಿವಾರ ತಡರಾತ್ರಿ ಸಂಭವಿಸಿದೆ. ರಿಚಾರ್ಡ್ ಡಿಸೋಜ (65) ಎಂಬವರು ತಮ್ಮನಿಂದಲೇ ಕೊಲೆಯಾದ ದುರ್ದೈವಿ. ಹೆರಾಲ್ಡ್ ಡಿಸೋಜ ಎಂಬಾತ ಅಣ್ಣನನ್ನು ಕೊಲೆಗೈದ ಆರೋಪಿ. ಹೆರಾಲ್ಡ್ ಡಿಸೋಜ ಶಿರ್ವದಲ್ಲಿ ವಾಸವಿದ್ದು, ಕೆಲ ದಿನಗಳ ಹಿಂದೆ ಕಾರ್ಕಳದ ಸಹೋದರ ರಿಚಾರ್ಡ್ ಡಿಸೋಜ ಮನೆಗೆ ಬಂದಿದ್ದ. ಕಾರ್ಕಳ ಆಸುಪಾಸಿನಲ್ಲಿ ಕೂಲಿ ಕೆಲಸ ಮಾಡಿಕೊಂಡಿದ್ದ ಈತ ಮದ್ಯ ವ್ಯಸನಿಯಾಗಿದ್ದು, ತಂದೆಯ ಆಸ್ತಿ ವಿಚಾರದಲ್ಲಿ ಸಹೋದರರ ನಡುವೆ ಆಗಾಗ ಜಗಳವಾಗುತ್ತಿತ್ತು ಎನ್ನಲಾಗಿದೆ. ಶನಿವಾರ ರಾತ್ರಿ ಅಣ್ಣ ರಿಚರ್ಡ್ ಡಿಸೋಜ ಹಾಗೂ ತಮ್ಮ ಹೆರಾಲ್ಡ್ ಡಿಸೋಜ ನಡುವೆ ಮಾತಿಗೆ ಮಾತು ಬೆಳೆದು ಪರಸ್ಪರ ಹೊಡೆದಾಟ ನಡೆದಿದೆ. ಮದ್ಯದ ನಶೆಯಲ್ಲಿದ್ದ ಹೆರಾಲ್ಡ್ ಮರದ ರೀಪಿನಿಂದ ಅಣ್ಣ ರಿಚಾರ್ಡ್ ಡಿಸೋಜ ಅವರಿಗೆ ತಲೆ, ಕೈ ಕಾಲಿಗೆ ಮನ ಬಂದಂತೆ ಹಲ್ಲೆ ನಡೆಸಿದ್ದಾನೆ. ಇದರಿಂದ ಗಂಭೀರವಾಗಿ ಗಾಯಗೊಂಡ ರಿಚಾರ್ಡ್ ಡಿಸೋಜ ತೀವ್ರ ರಕ್ತಸ್ರಾವದಿಂದ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಉಡುಪಿ ಎಸ್ಪಿ ಹರಿರಾಮ ಶಂಕರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಕಾರ್ಕಳ ನಗರ ಠಾಣೆ ಪೊಲೀಸರು ಆರೋಪಿ ಹೆರಾಲ್ಡ್ ಡಿಸೋಜನನ್ನು ಬಂಧಿಸಿದ್ದಾರೆ.

ಆ್ಯಂಬುಲೆನ್ಸ್-ಆಟೋ ರಿಕ್ಷಾ ಡಿಕ್ಕಿ: ಓರ್ವ ಸಾವು

ಮೂಡುಬಿದಿರೆ: ಕಾರ್ಕಳ-ಮೂಡುಬಿದಿರೆ ರಾಷ್ಟ್ರೀಯ ಹೆದ್ದಾರಿಯ ಬನ್ನಡ್ಕ ಎಂಬಲ್ಲಿ ಆ್ಯಂಬುಲೆನ್ಸ್ ಮತ್ತು ಆಟೋ ರಿಕ್ಷಾ ನಡುವೆ ಸಂಭವಿಸಿದ ಭೀಕರ ಅಪಘಾತದಲ್ಲಿ ಆಟೋ ಚಾಲಕ ಜಾನ್ ಕೊರೆಯಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಬನ್ನಡ್ಕ ಮಠದಲ್ಲಿ ನಡೆಯುತ್ತಿದ್ದ ಸಮಾರಂಭವೊಂದಕ್ಕೆ ಪ್ರಯಾಣಿಕರನ್ನು ಬಿಟ್ಟು ಆಟೋ ರಿಕ್ಷಾವನ್ನು ಹಿಂದಕ್ಕೆ (ರಿವರ್ಸ್) ತೆಗೆಯುತ್ತಿದ್ದ ಸಂದರ್ಭದಲ್ಲಿ ಮೂಡುಬಿದಿರೆ ಕಡೆಯಿಂದ ಕಾರ್ಕಳಕ್ಕೆ ಅತೀ ವೇಗವಾಗಿ ತೆರಳುತ್ತಿದ್ದ ಆ್ಯಂಬುಲೆನ್ಸ್ ಡಿಕ್ಕಿಯಾಗಿದೆ. ಅಪಘಾತದ ತೀವ್ರತೆಗೆ ಆಟೋ ರಿಕ್ಷಾದ ಮೇಲ್ಭಾಗ ಸಂಪೂರ್ಣವಾಗಿ ನುಜ್ಜುಗುಜ್ಜಾಗಿದ್ದು, ಆ್ಯಂಬುಲೆನ್ಸ್‌ನ ಮುಂಭಾಗ ಕೂಡ ಜಖಂಗೊಂಡಿದೆ. ನಿರಂತರ ಅಪಘಾತಗಳು ಸಂಭವಿಸುವ ಬನ್ನಡ್ಕ ವಲಯದಲ್ಲಿ ಈ ದುರ್ಘಟನೆ ನಡೆದಿದೆ.

ಯುವತಿ ನಾಪತ್ತೆ

ಬದಿಯಡ್ಕ: ಯುವತಿ ನಾಪತ್ತೆಯಾದ ಬಗ್ಗೆ ದೂರಲಾಗಿದೆ. ಬೇಳ ಕೊಲ್ಲಂಗಾನ ನಿವಾಸಿ ಫಾತಿಮ್ಮತ್ ಸನಾ (18) ನಾಪತ್ತೆಯಾದವಳು. ಏಪ್ರಿಲ್ 30ರಂದು ಸಂಜೆ ಮನೆಯಿಂದ ಹೊರಗಡೆ ತೆರಳಿದ ಆಕೆ ಮರಳಿ ಬಂದಿಲ್ಲವೆಂದು ಆಕೆಯ ತಾಯಿ ಬದಿಯಡ್ಕ ಪೊಲೀಸರಿಗೆ ದೂರು ನೀಡಿದ್ದಾರೆ. ಪೊಲೀಸರು ಕೇಸು ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

ಲಕ್ಷಾಂತರ ರೂ. ಮೌಲ್ಯದ ಚಿನ್ನದ ಕರಿಮಣಿ ಸರ ಕಳವು

ಬ್ರಹ್ಮಾವರ: ಮನೆಯ ಡ್ರಾವರ್‌ನಲ್ಲಿ ಇರಿಸಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನದ ಕರಿಮಣಿ ಸರ ಕಳವಾಗಿರುವ ಘಟನೆ ಕಾಡೂರು ಗ್ರಾಮದ ತಂತ್ರಾಡಿ ಹೊಸ್ಕೆರೆ ಎಂಬಲ್ಲಿ ನಡೆದಿದೆ. ಮುಂಬೈಯಲ್ಲಿ ವ್ಯವಹಾರ ಮಾಡಿಕೊಂಡಿದ್ದ ಹೊಸ್ಕೆರೆ ನಿವಾಸಿ ಉಮೇಶ್ ಶೆಟ್ಟಿ ಎಂಬವರ ಮನೆಯಲ್ಲಿ ತಾಯಿ ಮತ್ತು ತಂದೆ ಮಾತ್ರ ಇದ್ದು, ತಾಯಿ ಪಾರ್ವತಿ ಎಂಬವರ 4ಲಕ್ಷ ರೂ. ಮೌಲ್ಯದ 38 ಗ್ರಾಂ ತೂಕದ ಚಿನ್ನದ ಕರಿಮಣಿ ಸರವನ್ನು ಫೆ.16ರಂದು ಮನೆಯ ಕೋಣೆಯ ಡ್ರಾವರ್‌ನಲ್ಲಿ ಇಟ್ಟಿದ್ದರು. ಪಾರ್ವತಿ ಏ.23ರಂದು ಮೃತಪಟ್ಟಿದ್ದು, ಮುಂಬಯಿಯಿಂದ ಬಂದ ಉಮೇಶ್ ಶೆಟ್ಟಿ, ತಾಯಿ ಅಂತ್ಯಸಂಸ್ಕಾರದ ಕಾರ್ಯ ಮುಗಿಸಿ ಮೇ 1ರಂದು ಸಂಜೆ ಕೋಣೆಯ ಡ್ರಾವರ್ ನೋಡಿದಾಗ ಅದರಲ್ಲಿಟ್ಟಿದ್ದ ಚಿನ್ನದ ಕರಿಮಣಿ ಕಳವು ಆಗಿರುವುದು ಕಂಡುಬಂದಿದೆ. ಈ ಬಗ್ಗೆ ಬ್ರಹ್ಮಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆ

ಕಾಸರಗೋಡು: ವ್ಯಕ್ತಿಯೋರ್ವರು ಸೇತುವೆಯಲ್ಲಿ ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಕೂಡ್ಲು ತೈವಳಪ್ ಹೌಸ್‌ನ ರಾಮಚಂದ್ರ ಗಟ್ಟಿ (75) ಮೃತಪಟ್ಟವರು ಎಂದು ಗುರುತಿಸಲಾಗಿದೆ. ಶಿವಮಂಗಲದ ಸೇತುವೆಯಲ್ಲಿ ಅವರು ನೇಣು ಬಿಗಿದ ಸ್ಥಿತಿಯಲ್ಲಿ ಶುಕ್ರವಾರ ಮಧ್ಯಾಹ್ನ ಪತ್ತೆಯಾಗಿದ್ದು, ಮಾಹಿತಿ ತಿಳಿದ ಪೊಲೀಸರು ಮೃತದೇಹವನ್ನು ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ತಲುಪಿಸಿದ್ದಾರೆ. ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಇವರ ಪತ್ನಿ ಲೀಲಾ ಅವರು ಈ ಹಿಂದೆಯೇ ನಿಧನ ಹೊಂದಿದ್ದು, ಮೃತರು ಮಕ್ಕಳಾದ ಜಯಂತ, ರವಿ, ಹರಿಪ್ರಸಾದ್, ಜಯಶ್ರೀ ಅವರನ್ನು ಅಗಲಿದ್ದಾರೆ.

ಕೇರಳ ವಿಧಾನಸಭಾ ಚುನಾವಣೆ | ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ, ಎಸ್‌ಪಿ

ಮತ ಎಣಿಕೆಗೆ ಕಾಸರಗೋಡು ಜಿಲ್ಲೆ ಸಿದ್ಧ

ಕಾಸರಗೋಡು: ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ನಡೆದ ಚುನಾವಣೆಯ ಮತ ಎಣಿಕೆಗೆ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡಿವೆ ಎಂದು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ತಿಳಿಸಿದ್ದಾರೆ.

ಎಲ್ಲಾ ಕ್ಷೇತ್ರಗಳಲ್ಲಿ ಮೇ 4ರಂದು ಬೆಳಗ್ಗೆ 7 ಗಂಟೆಗೆ ಇಲೆಕ್ಟ್ರಾನಿಕ್ ಮತಯಂತ್ರಗಳನ್ನು ಇರಿಸಲಾಗಿರುವ ಸ್ಟ್ರಾಂಗ್ ರೂಮ್‌ಗಳನ್ನು ತೆರೆಯಲಾಗುವುದು ಎಂದು ಅವರು ಹೇಳಿದ್ದಾರೆ.

ಜಿಲ್ಲೆಯಲ್ಲಿ ಪಾರದರ್ಶಕ ಮತ್ತು ಶಾಂತಿಯುತ ರೀತಿಯಲ್ಲಿ ಮತ ಎಣಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಎಲ್ಲರ ಸಹಕಾರವನ್ನು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಕೋರಿದ್ದಾರೆ. ಮತ ಎಣಿಕೆಯ ನಂತರ ವಿಜಯೋತ್ಸವದ ಸಮಯದಲ್ಲಿ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ವರ್ತಿಸಬೇಕು ಮತ್ತು ಕಾನೂನು ಹಾಗೂ ಸುವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಪೊಲೀಸರ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿಗಳು ಸಾರ್ವಜನಿಕರಲ್ಲಿ ವಿನಂತಿಸಿದ್ದಾರೆ.

ಮಾಧ್ಯಮಗಳು ಮತ್ತು ಸಾರ್ವಜನಿಕರಿಗೆ ನಿಖರವಾದ ಚುನಾವಣಾ ಫಲಿತಾಂಶಗಳು ಮತ್ತು ಮತ ಎಣಿಕೆಯ ಪ್ರಗತಿಯನ್ನು ಒದಗಿಸಲು ಜಿಲ್ಲಾಡಳಿತವು ಮಾಧ್ಯಮ ಕೇಂದ್ರಗಳನ್ನು ಸ್ಥಾಪಿಸಿದೆ ಎಂದು ಅವರು ಸಮಗ್ರ ಮಾಹಿತಿ ನೀಡಿದರು.

ಸ್ಟ್ರಾಂಗ್ ರೂಮ್‌ಗಳ ಓಪನ್

ವಿಧಾನಸಭಾ ಚುನಾವಣೆಯ ಮತ ಎಣಿಕೆ ಕಾರ್ಯದ ಅಂಗವಾಗಿ ಕಾಸರಗೋಡು ಸರಕಾರಿ ಕಾಲೇಜಿನಲ್ಲಿ ಮತ ಎಣಿಕೆ ಕೇಂದ್ರಗಳು ಕಾರ್ಯನಿರ್ವಹಿಸುತ್ತಿರುವ ಮೂರು ವಿಧಾನಸಭಾ ಕ್ಷೇತ್ರಗಳ ಮತ್ತು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸ್ಥಾಪಿಸಲಾದ ಎರಡು ವಿಧಾನಸಭಾ ಕ್ಷೇತ್ರಗಳ ಇವಿಎಂ ಸ್ಟ್ರಾಂಗ್ ರೂಮ್‌ಗಳು ಮೇ 4ರಂದು ಬೆಳಗ್ಗೆ 7 ಗಂಟೆಗೆ ತೆರೆಯಲಿವೆ. ಅಂಚೆ ಮತಪತ್ರದ ಸ್ಟ್ರಾಂಗ್ ರೂಮ್ ಬೆಳಗ್ಗೆ 6 ಗಂಟೆಗೆ ತೆರೆಯಲಿದೆ.

ಜಿಲ್ಲಾ ಮಟ್ಟದ ಮಾಧ್ಯಮ ಕೇಂದ್ರ

ಮತ ಎಣಿಕೆ ಕಾರ್ಯದ ಅಂಗವಾಗಿ ಕಾಸರಗೋಡು ಕಲೆಕ್ಟರೇಟ್‌ನಲ್ಲಿರುವ ಮಿನಿ ಕಾನ್ಫರೆನ್ಸ್ ಹಾಲ್‌ನಲ್ಲಿ ಮಾಧ್ಯಮ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಅಲ್ಲಿ ಟ್ರೆಂಡ್ ಫಲಿತಾಂಶಗಳು ಲಭ್ಯವಿರುತ್ತವೆ. ಎಲ್ಲಾ ಮಾಧ್ಯಮ ಪ್ರತಿನಿಧಿಗಳಿಗೆ ಜಿಲ್ಲಾ ಮಟ್ಟದ ಮಾಧ್ಯಮ ಕೇಂದ್ರಕ್ಕೆ ಪ್ರವೇಶ ನೀಡಲಾಗುವುದು. ಈ ಕೇಂದ್ರದಲ್ಲಿ ಇತರ ರಾಜ್ಯಗಳ ಚುನಾವಣಾ ಫಲಿತಾಂಶ ಮಾಹಿತಿ ಲಭ್ಯವಾಗುವಂತೆ ಮಾಡಲಾಗುವುದು.

ಮಂಜೇಶ್ವರ, ಕಾಸರಗೋಡು, ಉದುಮ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶಗಳನ್ನು ಒದಗಿಸಲು ಕಾಸರಗೋಡು ಸರಕಾರಿ ಕಾಲೇಜಿನ ಮುಂಭಾಗದಲ್ಲಿ ವಿಶೇಷ ಮಾಧ್ಯಮ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕಾಞಂಗಾಡು ಮತ್ತು ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ಚುನಾವಣಾ ಫಲಿತಾಂಶಗಳನ್ನು ಒದಗಿಸಲು ಕಾಞಂಗಾಡು ದುರ್ಗಾ ಹೈಯರ್ ಸೆಕೆಂಡರಿ ಸ್ಕೂಲ್ ಬಳಿಯ ಸಭಾಂಗಣದಲ್ಲಿ ಮಾಧ್ಯಮ ಕೇಂದ್ರವನ್ನು ಸ್ಥಾಪಿಸಲಾಗಿದೆ. ಫಲಿತಾಂಶಗಳನ್ನು ಕಾಲಕಾಲಕ್ಕೆ ಲಭ್ಯವಾದ ತಕ್ಷಣ ಚುನಾವಣಾ ಆಯೋಗವು ಮಾಧ್ಯಮಗಳಿಗೆ ತಿಳಿಸುತ್ತದೆ.

ಚುನಾವಣಾ ಅಧಿಕಾರಿಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಒದಗಿಸುವ ಕಾರ್ಯವನ್ನು ಪ್ರತಿನಿಧಿಗಳಿಗೆ ವಹಿಸಲಾಗಿದೆ.

ಮೊದಲು ಅಂಚೆ ಮತಗಳ ಎಣಿಕೆ

ಮೊದಲು ಅಂಚೆ ಮತಗಳನ್ನು ಎಣಿಕೆ ಮಾಡಲಾಗುತ್ತದೆ. ಅಂಚೆ ಮತಗಳ ಎಣಿಕೆ ಬೆಳಗ್ಗೆ 7 ಗಂಟೆಗೆ ಪ್ರಾರಂಭವಾಗುತ್ತದೆ ಮತ್ತು ಇಲೆಕ್ಟ್ರಾನಿಕ್ ಮತ ಯಂತ್ರಗಳಲ್ಲಿನ ಮತಗಳ ಎಣಿಕೆ ಬೆಳಗ್ಗೆ 8 ಗಂಟೆಗೆ ಪ್ರಾರಂಭವಾಗುತ್ತದೆ ಎಂದು ಜಿಲ್ಲಾ ಚುನಾವಣಾ ವಿಭಾಗವು ತಿಳಿಸಿದೆ. ಜಿಲ್ಲೆಯಲ್ಲಿ ಒಟ್ಟು 5,525 ಅಂಚೆ ಮತಗಳು ಮತ್ತು 577 ಇಟಿಪಿಬಿಎಸ್ ಮತಗಳು ಬಂದಿವೆ. ಇದಲ್ಲದೆ 6,679 ಜನರು ಮನೆ ಮತದಾನದ ಮೂಲಕ ಮತ ಚಲಾಯಿಸಿದ್ದಾರೆ. ಮತಗಳನ್ನು ಎಣಿಸಲು ಪ್ರತಿ ಕ್ಷೇತ್ರದಲ್ಲಿ 14 ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ. ಅಂಚೆ ಮತಗಳು ಮತ್ತು ಇಟಿಪಿಬಿಎಸ್ ಮತಗಳಿಗಾಗಿ ಪ್ರತಿ ಕ್ಷೇತ್ರದಲ್ಲಿ ಪ್ರತ್ಯೇಕ ಟೇಬಲ್‌ಗಳನ್ನು ಸ್ಥಾಪಿಸಲಾಗಿದೆ. ಇಟಿಪಿಬಿಎಸ್ ಮತಗಳನ್ನು ಎಣಿಸಲು ಪ್ರತಿ ಕ್ಷೇತ್ರದಲ್ಲಿ ತಲಾ ಒಂದು ಹೆಚ್ಚುವರಿ ಟೇಬಲ್ ಇರುತ್ತದೆ. ಎಣಿಕೆ ಕೇಂದ್ರಗಳಲ್ಲಿ ಕಟ್ಟುನಿಟ್ಟಿನ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು ಮತ್ತು ಸೂಕ್ಷ್ಮ ವೀಕ್ಷಕರು ಕಾರ್ಯಕಲಾಪಗಳ ಮೇಲ್ವಿಚಾರಣೆ ನಡೆಸಲಿದ್ದಾರೆ. ಪ್ರತಿ ಮತ ಎಣಿಕೆ ಕೇಂದ್ರದಲ್ಲಿ ಪತ್ರಕರ್ತರಿಗಾಗಿ ಪ್ರತ್ಯೇಕ ಮಾಧ್ಯಮ ಕೊಠಡಿಗಳನ್ನು ಸ್ಥಾಪಿಸಲಾಗಿದೆ. ಪಾಸ್‌ಗಳನ್ನು ಹೊಂದಿರುವ ಎಣಿಕೆ ಏಜೆಂಟ್‌ಗಳಿಗೆ ಮಾತ್ರ ಎಣಿಕೆ ಸಭಾಂಗಣಕ್ಕೆ ಪ್ರವೇಶ ನೀಡಲಾಗುವುದು. ಪ್ರತಿ ಎಣಿಕೆ ಮೇಜಿನಲ್ಲೂ ಎಣಿಕೆ ಮೇಲ್ವಿಚಾರಕರು, ಎಣಿಕೆ ಸಹಾಯಕರು ಮತ್ತು ಸೂಕ್ಷ್ಮ ವೀಕ್ಷಕರು ಕಾರ್ಯಕಲಾಪಗಳನ್ನು ಗಮನಿಸುತ್ತಾರೆ.



ಮತ ಎಣಿಕೆ ಕೇಂದ್ರದಲ್ಲಿ ಸಿದ್ಧತೆ ಪರಿಶೀಲಿಸಿದ ಜಿಲ್ಲಾಧಿಕಾರಿ, ಎಸ್‌ಪಿ

ಪಟಾಕಿ ಅಂಗಡಿಗಳನ್ನು ತೆರೆಯುವಂತಿಲ್ಲ

ಭದ್ರತಾ ವ್ಯವಸ್ಥೆಗಳ ಭಾಗವಾಗಿ ಕಾಸರಗೋಡು ಜಿಲ್ಲೆಯಲ್ಲಿ ಯಾವುದೇ ಪಟಾಕಿ ಅಂಗಡಿಗಳು ಮತ್ತು ಸಂಬಂಧಿತ ಅಂಗಡಿಗಳನ್ನು ತೆರೆಯಬಾರದು. ಒಂದು ವೇಳೆ ಪಟಾಕಿ ಅಂಗಡಿಗಳನ್ನು ಓಪನ್ ಮಾಡಿದರೆ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಸ್ಪಷ್ಟವಾಗಿ ಎಚ್ಚರಿಸಿದ್ದಾರೆ.ಎಣಿಕೆಯ ದಿನದಂದು ರಾತ್ರಿ 7 ಗಂಟೆಯ ನಂತರ ಯಾವುದೇ ರೀತಿಯ ವಿಜಯೋತ್ಸವ ಅಥವಾ ಕಾರ್ಯಕ್ರಮಗಳನ್ನು ನಡೆಸಬಾರದು. ಸಮಯ ಮಿತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸಾರ್ವಜನಿಕ ಸ್ಥಳಗಳಲ್ಲಿ, ರಸ್ತೆಗಳಲ್ಲಿ ಅಥವಾ ಇತರ ಪಕ್ಷಗಳ ಕಾರ್ಯಕರ್ತರ ಮನೆಗಳ ಬಳಿ ಪಟಾಕಿಗಳನ್ನು ಬಳಸುವುದನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ಮುಖ್ಯಸ್ಥ ವಿಜಯ್ ಭರತ್ ರೆಡ್ಡಿ ಹೇಳಿದ್ದಾರೆ.

ಶ್ರೀಕ್ಷೇತ್ರ ಕಟೀಲಿನಲ್ಲಿ 49 ಜೋಡಿ ಸರಳ ವಿವಾಹ



ಕಟೀಲು ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದಲ್ಲಿ ಭಾನುವಾರ 49 ಜೋಡಿಗಳು ಸರಳ ವಿವಾಹವಾದರು. ದೇವೀ ಸನ್ನಿಧಿಯಲ್ಲಿ ವಿವಾಹವಾಗುವುದಾಗಿ ಹರಕೆ ಹೊತ್ತವರು, ಸರಳ ವಿವಾಹ ಆಗಬಯಸುವವರು ಕಟೀಲಿನಲ್ಲಿ ದೇವರ ಮುಂಭಾಗದಲ್ಲಿ ವಿವಾಹವಾಗುತ್ತಿದ್ದು, ಹೀಗೆ ವಿವಾಹವಾಗುವವರ ಸಂಖ್ಯೆ ವರ್ಷಂಪ್ರತಿ ಹೆಚ್ಚುತ್ತಿದೆ. ಇದೇ ಹೊತ್ತಿಗೆ ದೇಗುಲಕ್ಕೆ ಬರುವ ಭಕ್ತರ ಸಂಖ್ಯೆ ಹೆಚ್ಚುತ್ತಿದ್ದು, ವಾಹನಗಳ ಪಾರ್ಕಿಂಗ್ ಸಮಸ್ಯೆಯಿಂದಾಗಿ ಬಜಪೆ ಕಟೀಲು ರಸ್ತೆ ಬ್ಲಾಕ್ ಆಗುತ್ತಿರುವುದು ಹೆಚ್ಚುತ್ತಿದೆ.

ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರ ಕಾರ್ಯಾಚರಣೆ

ಎಂಡಿಎಂ ಸಾಗಾಟ: ಇಬ್ಬರ ಬಂಧನ

ಬಂಟ್ವಾಳ : ವಾಹನವೊಂದರಲ್ಲಿ ನಿಷೇಧಿತ ಮಾದಕ ವಸ್ತು ಎಂಡಿಎಂಎನ್ನು ಅಕ್ರಮವಾಗಿ ಸಾಗಾಟ ಮಾಡುತ್ತಿರುವುದನ್ನು ಬಂಟ್ವಾಳ ಗ್ರಾಮಾಂತರ ಠಾಣಾ ಪೊಲೀಸರು ಬಂಟ್ವಾಳ ತಾಲೂಕಿನ ಮಂಚಿ ಗ್ರಾಮದ ಪಂಜಾಲ ಎಂಬಲ್ಲಿ ಪತ್ತೆ ಹಚ್ಚಿದ್ದು, ಈ ಸಂಬಂಧ ಇಬ್ಬರನ್ನು ಬಂಧಿಸಿದ್ದಾರೆ.



ಪುತ್ತೂರು ಕಲೆಂಬಿ ನಿವಾಸಿಗಳಾದ ಮೊಹಮ್ಮದ್ ನಿಜಾಮುದ್ದೀನ್ (30) ಹಾಗೂ ಮೊಹಮದ್ ಶಾಹೀಂ (19) ಬಂಧಿತ ಆರೋಪಿಗಳಾಗಿದ್ದಾರೆ.

ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣಾ ಪೊಲೀಸ್ ಉಪ ನಿರೀಕ್ಷಕರು ಮತ್ತವರ ಸಿಬ್ಬಂದಿಗಳು ಮಂಚಿ ಗ್ರಾಮದ ಪಂಜಾಲ ಕ್ರಾಸ್ ಎಂಬಲ್ಲಿ ಹೊಂಚು ಹಾಕಿ ನಿಂತಿದ್ದ ವೇಳೆ ಬಂಟ್ವಾಳ ಕಡೆಗೆ ಅನುಮಾನಾಸ್ಪದವಾಗಿ ಬರುತ್ತಿದ್ದ ಬೊಲೆರೋ ವಾಹನವನ್ನು ತಡೆದು ನಿಲ್ಲಿಸಿ ಪರಿಶೀಲಿಸಿದಾಗ ಮಾದಕ ವಸ್ತು ಎಂಡಿಎಂಎ ಪತ್ತೆಯಾಗಿದೆಯೆನ್ನಲಾಗಿದೆ. ವಾಹನಗಳನ್ನುತಡೆದುತಪಾಸಣೆನಡೆಸಿದ ವೇಳೆ ಮಾದಕ ವಸ್ತುಗಳು ಪತ್ತೆಯಾಗಿದೆ. ವಾಹನದಲ್ಲಿದ್ದ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಮಾರಾಟ ಮಾಡಲು ಈ ಮಾದಕ ವಸ್ತುವನ್ನು ಸಾಗಿಸುತ್ತಿರುವುದಾಗಿ ಬಾಯಿಬಿಟ್ಟಿದ್ದಾರೆ. ತಕ್ಷಣ ಆರೋಪಿಗಳನ್ನು ಬಂಧಿಸಿ ವಾಹನದಲ್ಲಿದ್ದ ಸುಮಾರು 46 ಲಕ್ಷ ರೂ. ಮೌಲ್ಯದ 423 ಗ್ರಾಂ ಎಂಡಿಎಂ ಮಾದಕ ವಸ್ತು, ಮೊಬೈಲ್ ಫೋನ್, ಬೊಲೆರೋ ವಾಹನವನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ, ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ.

ಎಂಡಿಎಂಎ ಸೇವನೆಯ ಅಮಲಿನಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದ ಕುಖ್ಯಾತ ಆರೋಪಿ

ಕುಂಬಳೆ: ಸಾರ್ವಜನಿಕ ಸ್ಥಳದಲ್ಲಿ ಧೂಮಪಾನ ಮಾಡುತ್ತಿದ್ದ ವ್ಯಕ್ತಿಯನ್ನು ವಶಕ್ಕೆ ತೆಗೆದು ವಿಚಾರಿಸಿದಾಗ ಪೊಲೀಸ್ ಬಲೆಗೆ ಬಿದ್ದದ್ದು ಮೂರು ವಾರಂಟ್ ಪ್ರಕರಣದ ಕುಖ್ಯಾತ ಆರೋಪಿ.

ಸಾರ್ವಜನಿಕ ಸ್ಥಳದಲ್ಲಿ ಈತ ಎಂಡಿಎಂಎ ಸೇವಿಸುತ್ತಿದ್ದನೆಂದೂ ಗುರುತಿಸಿದ ಆತನನ್ನು ಪೊಲೀಸರಿಗೆ ಸೆರೆ ಹಿಡಿದರು. ಆದರೆ ಸೆರೆಗೀಡಾದ ವ್ಯಕ್ತಿ ಪೊಲೀಸರು ತಾವು ಹುಡುಕಾಡುತ್ತಿದ್ದ ಕುಖ್ಯಾತ ಆರೋಪಿಯಾಗಿದ್ದಾನೆ. ಮೀಂಜ ಕಳಾಯಿ ಅಡ್ಕ ಕೊಳ್ಚಪ್ಪು ನಿವಾಸಿ ಹುಸೇನ್ ಯಾನೆ ಮುಹ್ಸದ್ ಹುಸೈನ್ (32) ಬಂಧಿತ ವ್ಯಕ್ತಿಯಾಗಿದ್ದಾನೆ.

ಪೊಲೀಸರಿಗೆ ಸೆರೆ ಸಿಕ್ಕಿದಾಗ ಎಂಡಿಎಂಎ ಸೇವನೆಯ ಗುಂಗಿ ನಲ್ಲಿದ್ದ ಈತ ತಾನು ಘರ್ಷಣೆ, ಆಕ್ರಮಣ, ಗಾಂಜಾ, ಅಬಕಾರಿ ಕೇಸುಗಳ ಆರೋಪಿ ಎಂದು ಸ್ವಯಂ ಹೇಳಿಕೊಂಡಿದ್ದಾನೆ. ಈತ ಮೂರು ವಾರಂಟ್ ಪ್ರಕರಣಗಳಲ್ಲಿ ತಲೆಮರೆಸಿಕೊಂಡವನೆಂದು ಪೊಲೀಸರು ತಿಳಿಸಿದ್ದಾರೆ. ಆತನನ್ನು ಬಂಧಿಸಿ ನ್ಯಾಯಾಲಯದಲ್ಲಿ ಹಾಜರುಪಡಿಸಲಾಯಿತು.

ಸತತವಾಗಿ ಹೆಚ್ಚುತ್ತಿರುವ ತಾಪಮಾನಕ್ಕೆ ಕಂಗಾಲಾಗಿದೆ ನಾಡು

ರಾಷ್ಟ್ರೀಯ ಹೆದ್ದಾರಿಯ ಅಂಡರ್‌ಪಾಸ್‌ಗಳಲ್ಲಿ ಆಶ್ರಯ ಪಡೆಯುತ್ತಿರುವ ಜಾನುವಾರುಗಳು

ಕಾಸರಗೋಡು: ರಾಜ್ಯದಲ್ಲಿ ಬಿಸಿಲಿನ ತಾಪಮಾನ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಮನುಷ್ಯರು ಮಾತ್ರವಲ್ಲದೆ ಪ್ರಾಣಿಗಳು ಕೂಡಾ ನೆರಳನ್ನು ಹುಡುಕುತ್ತಾ ಅಲೆದಾಡುವ ಸ್ಥಿತಿ ಉಂಟಾಗಿದೆ.

ರಾಜ್ಯದಲ್ಲಿ ಪಾಲಕ್ಕಾಡ್ ಅತೀ ಹೆಚ್ಚು ತಾಪಮಾನವನ್ನು ದಾಖಲಿಸಿದ ಜಿಲ್ಲೆಯಾಗಿದ್ದರೂ ನಂತರದ ಸ್ಥಾನದಲ್ಲಿ ಕಾಸರಗೋಡು ಜಿಲ್ಲೆ ಇದೆ. ಜಿಲ್ಲೆಯಲ್ಲಿ ನಿರೀಕ್ಷಿತ ಬೇಸಿಗೆ ಮಳೆಯ ವಿಫಲತೆಯೇ ಈ ತೀವ್ರ ಬಿಸಿಲಿಗೆ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ.

ಸೂರ್ಯಾಘಾತದ ಆರೋಗ್ಯ ಸಮಸ್ಯೆ

ಜಿಲ್ಲೆಯ ವಿವಿಧ ಭಾಗಗಳಲ್ಲಿ ಸೂರ್ಯಾಘಾತದಿಂದ ಆರೋಗ್ಯ ಸಮಸ್ಯೆಗಳು ಹೆಚ್ಚುತ್ತಿವೆ. ವಿದ್ಯಾರ್ಥಿಗಳು ಮತ್ತು ಹಿರಿಯ ನಾಗರಿಕರಿಗೆ ಈಗಾಗಲೇ ಸುಟ್ಟುಗಾಯಗಳ ಪ್ರಕರಣಗಳು ವರದಿಯಾಗಿವೆ. ಬಿಸಿಲಿನಿಂದಾಗಿ ಮಾನವರಲ್ಲಿ ಮಾತ್ರವಲ್ಲದೆ ಜಾನುವಾರುಗಳಲ್ಲಿಯೂ ವಿವಿಧ ರೋಗಗಳು ವರದಿಯಾಗುತ್ತಿರುವುದು ಪರಿಸ್ಥಿತಿಯ ಗಂಭೀರತೆಯನ್ನು ಹೆಚ್ಚಿಸುತ್ತದೆ.

ಜಾನುವಾರುಗಳಿಗೆ ಅಂಡರ್‌ಪಾಸ್ ಆಶ್ರಯ

ಬಿಸಿಲಿನ ಆಘಾತದ ವೇದನೆಯಿಂದ ತಪ್ಪಿಸಿಕೊಳ್ಳಲು ಜಾನುವಾರುಗಳು ಹಿಂಡು ಹಿಂಡಾಗಿ ಅಲೆದಾಡುತ್ತಿವೆ. ರಾಷ್ಟ್ರೀಯ ಹೆದ್ದಾರಿಯ ಅಂಡರ್ ಪಾಸ್‌ಗಳನ್ನು ನೆರಳಿಗಾಗಿ ಬಳಸಿಕೊಂಡು ನಗರಗಳಲ್ಲಿ ಬೀಡುಬಿಟ್ಟಿರುವ ಅಲೆಮಾರಿ ದನಗಳನ್ನು ನೋಡುವುದು ಸಾಮಾನ್ಯ ದೃಶ್ಯವಾಗಿದೆ.

ಕಾಸರಗೋಡು ಕರಂದಕ್ಕಾಡು, ಹೊಸ ಬಸ್ ನಿಲ್ದಾಣ, ಮೊಗ್ರಾಲ್‌ನ ರಾಷ್ಟ್ರೀಯ ಹೆದ್ದಾರಿ ಅಂಡರ್ ಪಾಸ್ ಬಳಿಯಲ್ಲಿ ಜಾನುವಾರುಗಳು ಹಿಂಡು ಹಿಂಡಾಗಿ ಆಶ್ರಯ ಪಡೆಯುತ್ತಿರುವುದನ್ನು ಹೆಚ್ಚಾಗಿ ಕಾಣಬಹುದಾಗಿದೆ. ಆಶ್ರಯ ಪಡೆಯುತ್ತಿವೆ. ಶಾಖದ ತೀವ್ರತೆಯನ್ನು ಸ್ವತಃ ಅನುಭವಿಸಿದ ಸ್ಥಳೀಯರು ಈ ಮೂಕ ಜೀವಿಗಳನ್ನು ಓಡಿಸಲು ಮನಸ್ಸು ಮಾಡಿಲ್ಲ. ಬದಲಿಗೆ ಕಾಸರಗೋಡಿನ ಜನರು ಅವುಗಳಿಗೆ ಕುಡಿಯಲು ನೀರು ಮತ್ತು ಆಹಾರನ್ನು ಒದಗಿಸುತ್ತಿದ್ದಾರೆ. ಅಲ್ಲದೆ ಬಿಸಿಲಿನಲ್ಲಿ ಜಾನುವಾರುಗಳನ್ನು ಕಟ್ಟಿ ಹಾಕದಂತೆ ಪಶುಸಂಗೋಪನಾ ಇಲಾಖೆ ಎಚ್ಚರಿಕೆ ನೀಡಿದೆ.



ವಯಲಿನ್ ವಾದಕಿ ಗಂಗಾ ಶಶಿಧರನ್‌ಗೆ ಸನ್ಮಾನ

ಪಡುಬಿದ್ರಿ : ಸಮಗ್ರವಾಗಿ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿರುವ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಖ್ಯಾತ ವಯಲಿನ್ ವಾದಕಿ ಗಂಗಾ ಶಶಿಧರನ್‌ಗೆ ಸನ್ಮಾನ ಕಾರ್ಯಕ್ರಮ ಶನಿವಾರ ರಾತ್ರಿ ನಡೆಯಿತು.

ಸನ್ಮಾನ ನೆರವೇರಿಸಿದ ಜಗದ್ಗುರು ಶ್ರೀಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಪಲಿಮಾರು ಮಠಾಧೀಶರಾದ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಆಶೀರ್ವಚಿಸುತ್ತಾ, ಉತ್ತರ ಭಾರತದ ದೊಡ್ಡ ಕ್ಷೇತ್ರ ಕಾಶೀಯಷ್ಟೇ ಪಡುಬಿದ್ರಿಯ ಮಹಾಲಿಂಗೇಶ್ವರ ಸನ್ನಿಧಾನವು ಪಾವಿತ್ರ್ಯತೆಯೊಂದಿಗೆ ಶೋಭಿಸುತ್ತಿದೆ. ಮುಂದಕ್ಕೆ ಇತರೇ ದೇವಾಲಯಗಳಿಗೆ ಪಡುಬಿದ್ರಿ ಈಶ್ವರ ದೇವಸ್ಥಾನದ ಶಿಲ್ಪಶೈಲಿ ಅನುಕರಣೆಯಾಗಲಿದೆ. ಗಂಗೆಯಿಂದ ರುದ್ರ ದೇವರಿಗೆ ಅಭಿಷೇಕವಾದರೆ ಇಲ್ಲಿ ಪಡುಬಿದ್ರಿಯ ತರಂಗಿಣಿಯವರು ಸಾಧಕ ಕಲಾವಿದೆ ಗಂಗಾ ಶಶಿಧರನ್ ದೇವರಿಗೆ ಸಂಗೀತದ ಅಭಿಷೇಕವಾಗಲಿದೆ ಎಂಬ ಅಭಿಪ್ರಾಯ ಪಟ್ಟರು.

ಶ್ರೀ ಪಲಿಮಾರು ಮಠದ ಕಿರಿಯ ಶ್ರೀಗಳಾದ ಶ್ರೀ ವಿದ್ಯಾರಾಜೇಶ್ವರತೀರ್ಥ ಶ್ರೀಪಾದರು, ಬ್ರಹ್ಮಕಲಶೋತ್ಸವ, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾದ ಕೆ. ಪ್ರಕಾಶ್ ಶೆಟ್ಟಿ, ಆನುವಂಶಿಕ ಮೊಕ್ತೇಸರರಾದ ಪೇಟೆಮನೆ ಪಿ. ಭವಾನಿಶಂಕರ್ ಹೆಗ್ಡೆ ವೇದಿಕೆಯಲ್ಲಿದ್ದರು.

ಬಳಿಕ ತರಂಗಿಣಿ ಮಿತ್ರ ಮಂಡಳಿ ಪ್ರಾಯೋಜಕತ್ವದಲ್ಲಿ ಕೇರಳ ಗುರುವಾಯೂರಿನ ಗಂಗಾ ಶಶಿಧರನ್ ಅವರಿಂದ ವಯಲಿನ್ ವಾದನ ಕಿಕ್ಕಿರಿದ ಜನ ಸಂದಣಿಯ ನಡುವೆ ನಡೆಯಿತು.



ಕೊಡಗು ಜಿಲ್ಲೆಯಲ್ಲಿ 'ಕಲ್ಲುಗಣಿಗಾರಿಕೆ'ಗೆ ಗ್ರಾಮಸ್ಥರ ತೀವ್ರ ವಿರೋಧ

ಮಡಿಕೇರಿ: ಕೊಡಗಿನಲ್ಲಿ ಪ್ರಸ್ತಾವಿತ ಮತ್ತು ಹಾಲಿ ನಡೆಯುತ್ತಿರುವಕಲ್ಲುಗಣಿಗಾರಿಕೆಯವಿರುದ್ಧಎರಡು ಗ್ರಾಮಗಳ ನಿವಾಸಿಗಳು ತಮ್ಮ ಪ್ರತಿಭಟನೆಯನ್ನು ತೀವ್ರಗೊಳಿಸಿದ್ದಾರೆ. ಗಣಿಗಾರಿಕೆ ಚಟುವಟಿಕೆಗಳು ಮನೆಗಳು, ಕೃಷಿ ಭೂಮಿ, ಕಾಡುಗಳು ಮತ್ತು ಜಲ ಮೂಲಗಳಿಗೆ ಅಪಾಯವನ್ನುಂಟುಮಾಡಬಹುದು ಎಂದು ಅವರುಗಳು ಎಚ್ಚರಿಸಿದ್ದಾರೆ.

ಸೋಮವಾರಪೇಟೆ ತಾಲೂಕಿನ ನೇರುಗಳಲೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಯಲಕನೂರು (ಹಳೇ ಮದಲಾಪುರ) ಗ್ರಾಮಸ್ಥರು, ತಮ್ಮ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆಗೆ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ನೀಡುವ ಪ್ರಸ್ತಾಪವನ್ನು ವಿರೋಧಿಸಿದ್ದಾರೆ.

ಪ್ರಸ್ತಾವಿತ ಗಣಿಗಾರಿಕೆ ಸ್ಥಳವು ಸುಮಾರು 25 ಕುಟುಂಬಗಳು ವಾಸಿಸುವ ಬುಡಕಟ್ಟು ವಸಾಹತುವಿನಿಂದ ಕೇವಲ 10 ಮೀಟರ್ ದೂರದಲ್ಲಿದೆ. ಇದು ಸುರಕ್ಷತೆ ಮತ್ತು ಸ್ಥಳಾಂತರದ ಬಗ್ಗೆ ಕಳವಳವನ್ನು ವ್ಯಕ್ತಪಡಿಸುತ್ತದೆ ಎಂದು ಸ್ಥಳೀಯರು ಹೇಳಿದ್ದಾರೆ.

ಗ್ರಾಮದ ಶ್ರೀ ಬಸವೇಶ್ವರ ಮತ್ತು ಶ್ರೀ ಕುಮಾರಲಿಂಗೇಶ್ವರ ದೇವಾಲಯ ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಜೆ. ಉಮೇಶ್, ಈ ಯೋಜನೆಯು ಸಾಂಸ್ಕೃತಿಕ ಮತ್ತು ಪರಿಸರ ಪರಂಪರೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಹೇಳಿದ್ದಾರೆ. ಪ್ರಸ್ತಾವಿತ ಸ್ಥಳದ ಸಮೀಪದಲ್ಲಿಯೇ ಪ್ರಾಚೀನ ಬಸವಣ್ಣ ದೇವಾಲಯವಿದ್ದು, ಹತ್ತಿರದ ಬಸವೇಶ್ವರ ಮತ್ತು ಕುಮಾರಲಿಂಗೇಶ್ವರ ದೇವಾಲಯಗಳ ನಿರ್ಮಾಣಕ್ಕೆ ಮುಜರಾಯಿ ಇಲಾಖೆ ಈಗಾಗಲೇ 3 ಲಕ್ಷ ಮಂಜೂರು ಮಾಡಿದೆ ಎಂದು ತಿಳಿಸಿದ್ದಾರೆ.

ಈ ಪ್ರದೇಶದಲ್ಲಿ ಕೃಷಿ ಭೂಮಿ, ಹೊಳೆ, ಕಕ್ಕೆಹೊಳೆ ಮೀಸಲು ಅರಣ್ಯ ಮತ್ತು ಜೇನುಕಲ್ಲು ಬೆಟ್ಟಗಳಿವೆ. ಇಲ್ಲಿ ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ಪರಿಸರ ವ್ಯವಸ್ಥೆಗೆ ಶಾಶ್ವತ ಹಾನಿಯಾಗುತ್ತದೆ ಎಂದು ಅವರು ಹೇಳಿದ್ದಾರೆ.

ಕಿರಿದಾದ ವಸಾಹತು ರಸ್ತೆಗಳ ಮೂಲಕ ಭಾರೀ ವಾಹನಗಳ ಸಂಚಾರದ ಬಗ್ಗೆ ಗ್ರಾಮಸ್ಥರು ಕಳವಳ ವ್ಯಕ್ತಪಡಿಸಿದ್ದು, ಇದು ದೈನಂದಿನ ಜೀವನಕ್ಕೆ ತೀವ್ರವಾಗಿ ಅಡ್ಡಿಪಡಿಸುತ್ತದೆ ಮತ್ತು ನಿವಾಸಿಗಳಿಗೆ ಅಪಾಯವನ್ನುಂಟು ಮಾಡುತ್ತದೆ ಎಂದು ತಿಳಿಸಿದ್ದಾರೆ.

ಈ ಸಂಬಂಧ ಅರಣ್ಯ ಸಚಿವ ಈಶ್ವರ ಖಂಡ್ರೆ, ಕೊಡಗು ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಮತ್ತು ಗಣಿ ಮತ್ತು ಭೂವಿಜ್ಞಾನ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಅಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಗ್ರಾಮಸ್ಥರು, ಅಧಿಕಾರಿಗಳು ಅನುಮತಿ ನೀಡದಂತೆ ಒತ್ತಾಯಿಸಿದ್ದಾರೆ. ಅಲ್ಲದೆ ಮುಂದಿನ 15 ದಿನಗಳಲ್ಲಿ ಲಿಖಿತ ಭರವಸೆ ನೀಡಬೇಕು. ವಿಫಲವಾದರೆ ಜಿಲ್ಲಾಧಿಕಾರಿ ಕಚೇರಿ ಮತ್ತು ಅರಣ್ಯ ಇಲಾಖೆ ಕಚೇರಿ ಎದುರು ಪ್ರತಿಭಟನೆ ಹಮ್ಮಿಕೊಳ್ಳುವುದಾಗಿ ಎಚ್ಚರಿಸಿದ್ದಾರೆ.

ವೀರಾಜಪೇಟೆ ತಾಲೂಕಿನ ಕಡಂಗಮರೂರು ಮತ್ತು ಅರಮೇರಿ ಗ್ರಾಮಗಳ ನಿವಾಸಿ ಗಳು ಕಲ್ಲುಗಣಿಗಾರಿಕೆ ವಿರುದ್ಧ ತಮ್ಮ ಆಂದೋಲನವನ್ನು ತೀವ್ರಗೊಳಿಸಲು ನಿರ್ಧರಿಸಿದ್ದಾರೆ. ಸ್ಥಳೀಯರ ಬಲವಾದ ವಿರೋಧದ ಹೊರ ತಾಗಿಯೂ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು 4.5 ಎಕರೆಗಿಂತ ಹೆಚ್ಚಿನ ಗಣಿಗಾರಿಕೆಗೆ ಅನುಮತಿ ನೀಡಿದೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ. ನಾವು 2022 ರಿಂದ ಈ ಯೋಜನೆಯನ್ನು ವಿರೋಧಿಸುತ್ತಿದ್ದೇವೆ. ಆದರೆ ನಮ್ಮ ವಿರೋಧವನ್ನು ನಿರ್ಲಕ್ಷಿಸಲಾಗಿದೆ ಎಂದು ಗ್ರಾಮಸ್ಥರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.



ಪ್ರತಿಭಟನೆ ಎಚ್ಚರಿಕೆ

ಕ್ವಾರಿ ಕಾರ್ಯಾಚರಣೆಗಳಲ್ಲಿ ಈ ಹಿಂದೆ ಪ್ರತಿದಿನ 70 ರಿಂದ 80 ಲಾರಿ ಲೋಡ್ ಕಲ್ಲುಗಳನ್ನು ಸಾಗಿಸಲಾಗುತ್ತಿತ್ತು, ಇದು ಧೂಳು, ಶಬ್ದ ಮತ್ತು ರಸ್ತೆ ಹಾನಿಗೆ ಕಾರಣವಾಗಿತ್ತು ಎಂದು ಆರೋಪಿಸಿರುವ ಗ್ರಾಮಸ್ಥರು, ಅಧಿಕಾರಿಗಳು ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ತೀವ್ರಗೊಳಿಸುವುದಾಗಿ ಎಚ್ಚರಿಸಿದ್ದಾರೆ. ಅಲ್ಲದೆ, ಗಣಿಗಾರಿಕೆ ಪರವಾನಗಿಯನ್ನು ತಕ್ಷಣ ರದ್ದುಗೊಳಿಸುವಂತೆ ತ್ತಾಯಿಸಿದ್ದಾರೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 35° 27° | ಉಡುಪಿ 34° 28°

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಸೋಮವಾರ 04, ಮೇ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 2
ಪುತ್ತೂರು ಬಾಲವನ ಟ್ರಸ್ಟ್‌ನ 1.54 ಕೋ.ರೂ. ಬಳಕೆಗೆ ಚಿಂತನೆ



ಪುಟ 3
ಉಡುಪಿ 16ನೇ ಕನ್ನಡ ಸಾಹಿತ್ಯ ಸಂಭ್ರಮ: ಎಲ್ಲೆಲ್ಲೂ ಕನ್ನಡದ ಕಳೆ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಸುಡುವ ಬಿಸಿಲನ್ನೂ ಲೆಕ್ಕಿಸದೆ 'ನೀಟ್' ಆಗಿ ಬಂದು ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳು!



ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರಿನ ಕೆನರಾ ಕಾಲೇಜಿನಲ್ಲಿ ಭಾನುವಾರ ನೀಟ್ ಪರೀಕ್ಷೆ ಅತ್ಯಂತ ಸುಸೂತ್ರವಾಗಿ ನಡೆಯಿತು. ಪರೀಕ್ಷಾರ್ಥಿಗಳು ಸುಡುವ ಬಿಸಿಲನ್ನೂ ಲೆಕ್ಕಿಸದೆ ಅತ್ಯಂತ ಉತ್ಸಾಹದಿಂದ ಪರೀಕ್ಷಾ ಕೇಂದ್ರಕ್ಕೆ ಆಗಮಿಸಿ ಪರೀಕ್ಷೆ ಎದುರಿಸಿದರು. ಪರೀಕ್ಷೆಯ ಆರಂಭಕ್ಕೂ ಮುನ್ನ ವಿದ್ಯಾರ್ಥಿಗಳು ಅಂತಿಮ ಹಂತದ ಸಿದ್ಧತೆಯಲ್ಲಿ ತೊಡಗಿರುವುದು ಕ್ಯಾಮರಾ ಕಣ್ಣಿನಲ್ಲಿ ಸೆರೆ ಸಿಕ್ಕಿದ್ದು ಹೀಗೆ...

ಸುತ್ತ ಮುತ್ತ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಮತ್ತಷ್ಟು ಏರಿಕೆ: ಇಲಾಖೆ ಭವಿಷ್ಯ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಾಪಮಾನ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ಪೈಕಿ ಜಿಲ್ಲೆಯ ಕಡಬ ಹಾಗೂ ಪುತ್ತೂರು ತಾಲೂಕಿನಲ್ಲಿ ತಾಪದ ತೀವ್ರತೆ ಹೆಚ್ಚಾಗಿ ಕಾಣಿಸಲಿದೆ. ನಾಗರಿಕರು ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಬೇಕು ಎಂದು ಇಲಾಖೆ ಸೂಚಿಸಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾನುವಾರ ಗರಿಷ್ಠ 36 ಡಿಗ್ರಿ ಸೆಲ್ಸಿಯೆಸ್ ತಾಪಮಾನ ದಾಖಲಾಗಿತ್ತು.

ರೈಲು ನಿಲ್ದಾಣದಲ್ಲಿ ಪಾರ್ಕಿಂಗ್ ಶುಲ್ಕ: ಜನತೆ ಆಕ್ರೋಶ

ಕಾಸರಗೋಡು: ಇಲ್ಲಿನ ಕಾಸರಗೋಡು ರೈಲು ನಿಲ್ದಾಣದಲ್ಲಿ ವಾಹನಗಳಿಗೆ ಅಪಾರ ಪಾರ್ಕಿಂಗ್ ಶುಲ್ಕ ವಸೂಲಿ ಮಾಡುವುದು ಪ್ರಯಾಣಿಕರಿಗೆ ಸಮಸ್ಯೆಯಾಗುತ್ತಿದೆ.

ಇಲ್ಲಿನ ಕಾಸರಗೋಡು ರೈಲು ನಿಲ್ದಾಣದಲ್ಲಿ ನಿರ್ದಿಷ್ಟ ಪಾರ್ಕಿಂಗ್ ವ್ಯವಸ್ಥೆಯನ್ನು ತಿಳಿಯದೆ ವಾಹನಗಳನ್ನು ನಿಲುಗಡೆಗೊಳಿಸುವವರು ಇದರಿಂದಾಗಿ ಸಂಕಷ್ಟ ಅನುಭವಿಸಬೇಕಾಗುತ್ತದೆ.

ಎಷ್ಟು ತೆರಬೇಕು ಪಾರ್ಕಿಂಗ್ ಶುಲ್ಕ?

ಕೋಝಿಕ್ಕೋಡು ರೈಲು ನಿಲ್ದಾಣದಲ್ಲಿ 6 ಗಂಟೆಗಳ ಪಾರ್ಕಿಂಗ್‌ಗೆ 60 ರೂ., 12 ಗಂಟೆಗೆ 100 ರೂ., 24 ಗಂಟೆಗೆ 200 ರೂ., 36 ಗಂಟೆಗೆ 300 ರೂ. ಶುಲ್ಕ ಆಗಿದೆ. ಆದರೆ ಕಾಸರಗೋಡಿನಲ್ಲಿ ಪ್ರೀಮಿಯಂ ಪಾರ್ಕಿಂಗ್ ಶುಲ್ಕ 200ರೂ. ವಿಧಿಸಲಾಗುತ್ತದೆ. ಮಾತ್ರವಲ್ಲದೆ ಕಾಸರಗೋಡಿನಲ್ಲಿ ಪಾರ್ಕಿಂಗ್ ಏರಿಯಾ ಬಗ್ಗೆ ಸಮರ್ಪಕವಾದ ವ್ಯವಸ್ಥೆ ಇಲ್ಲದಿರುವುದು ಹಾಗೂ ಶುಲ್ಕ ಹೆಚ್ಚು ವಸೂಲಿ ಮಾಡುವ ಕುರಿತು ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿವೆ.

ಚೆಕ್ ಅಮಾನ್ಯ ಪ್ರಕರಣ: ರೂ. 5,75,000 ಹಣ ಪಾವತಿಸಲು ಆದೇಶ

ಬೈಂದೂರು: ಚೆಕ್ ಅಮಾನ್ಯ ಪ್ರಕರಣದಲ್ಲಿ ಬೈಂದೂರು ತಾಲೂಕು ನಾವುಂದ ಗ್ರಾಮದ ಮತ್ಸ್ಯೋದ್ಯಮಿ ಬಿ. ಎಸ್. ಶಾನಿಯಾಜ್ ಎಂಬವರ ವಿರುದ್ಧ ಉಮರುಲ್ ಫಾರೂಕ್ ದಾಖಲಿಸಿದ ಚೆಕ್ ಅಮಾನ್ಯ ಪ್ರಕರಣದಲ್ಲಿ ಬೈಂದೂರು ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯವು ಶಾನಿಯಾಜ್‌ಗೆ ರೂ. 5,75,000 ಹಣವನ್ನು ಪಾವತಿಸಲು ಆದೇಶಿಸಿದೆ. ಒಂದು ವೇಳೆ ಸದ್ರಿ ಮೊತ್ತವನ್ನು ಪಾವತಿಸದೇ ಇದ್ದ ಪಕ್ಷದಲ್ಲಿ ಒಂದು ವರ್ಷ ಕಾರಾಗೃಹ ಶಿಕ್ಷೆಯನ್ನು ಅನುಭವಿಸಲು ಆದೇಶಿಸಿದೆ.

ಪೊಯಿನಾಚಿ ಪರಿಸರದ ರಸ್ತೆಯ ಬದಿ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆ

ಕಾಸರಗೋಡು: ಪೊಯಿನಾಚಿ ಆಡಿಯತ್ ಎಂಬಲ್ಲಿ ವ್ಯಕ್ತಿಯೋರ್ವರು ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ.

ಈ ಬಗ್ಗೆ ಮಾಹಿತಿ ತಿಳಿದು ಸ್ಥಳಕ್ಕೆ ತಲುಪಿದ ಮೇಲ್ಪರಂಬ ಪೊಲೀಸರು ವಿಚಾರಣೆ ನಡೆಸಿ ಈ ಬಗ್ಗೆ ಕೇಸು ದಾಖಲಿಸಿ ತನಿಖೆ ಆರಂಭಿಸಿದ್ದಾರೆ.

ಮೃತಪಟ್ಟವರು ಅನ್ಯ ರಾಜ್ಯದ ಕಾರ್ಮಿಕ?

ಆಡಿಯತ್ ಎಂಬಲ್ಲಿ ರಸ್ತೆಯಲ್ಲಿ ಸಾಧಾರಣ 50 ವರ್ಷ ಪ್ರಾಯ ಅಂದಾಜಿನ ಅಪರಿಚಿತ ಮೃತಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಅನ್ಯರಾಜ್ಯ ಕಾರ್ಮಿಕನಾಗಿರಬೇಕೆಂದು ಶಂಕಿಸಲಾಗಿದೆ. ಮೃತದೇಹವನ್ನು ಈಗ ಕಾಸರಗೋಡು ಜನರಲ್ ಆಸ್ಪತ್ರೆಯ ಶವಾಗಾರದಲ್ಲಿರಿಸಲಾಗಿದೆ.

ಬೆವರಿಳಿಸಿ ಬೆಳೆ ಬೆಳೆದ ಕೃಷಿಕ ಕಂಗಾಲು

ಪಾತಾಳಕ್ಕೆ ಬಿದ್ದ ತೆಂಗು

ಕೇಜಿ ಒಂದಕ್ಕೆ ಏಕಾಏಕಿ 38 ರೂ. ಕುಸಿತ



ಸಂಗಮ ವಿಶೇಷ

ಕಾಸರಗೋಡು: ಜಿಲ್ಲೆಯಲ್ಲಿ ಈಗ ತೆಂಗು ಧಾರಣೆ ಭಾರೀ ಇಳಿಮುಖಗೊಂಡಿದೆ. ಇದರಿಂದ ಕೃಷಿ ವಲಯದ ಆದಾಯಕ್ಕೆ ಬಲುದೊಡ್ಡ ಪೆಟ್ಟು ಬಿದ್ದಿದೆ.

ತಿಂಗಳುಗಳ ಹಿಂದೆಯಷ್ಟೇ ಸಾರ್ವಕಾಲಿಕ ದಾಖಲೆ ದರವಿದ್ದ ತೆಂಗಿನಕಾಯಿಯ ಬೆಲೆ ಇದೀಗ ಅತ್ಯಂತ ಕುಸಿತ ಕಂಡಿದೆ.

ತೆಂಗಿನ ಎಣ್ಣೆ ದರವೂ ಇಳಿಕೆ

ಈ ಮೊದಲು 440 ರೂ. ಇದ್ದ ಪ್ರತೀ ಲೀಟರ್ ತೆಂಗಿನ ಎಣ್ಣೆ ದರ, 260– 280 ರೂಪಾಯಿಗಳಿಗೆ ಇಳಿಕೆ ಕಂಡಿದೆ. ಇದಲ್ಲದೆ ತೆಂಗಿನ ಉತ್ಪನ್ನಗಳಿಗೆ ಬೆಲೆ ಇನ್ನಷ್ಟು ಕುಸಿಯುವ ಸಾಧ್ಯತೆಯಿದೆ ಎಂದು ಇಲ್ಲಿನ ವ್ಯಾಪಾರಿ ವಲಯಗಳು ಅಂದಾಜಿಸಿವೆ.

ಕಳೆದ ವರ್ಷ ಕಿಲೋಗೆ 82 ರೂ. ತನಕ ತೆಂಗಿನಕಾಯಿಗೆ ಬೆಲೆ ಲಭಿಸುತ್ತಿತ್ತು. ಆದರೆ ಕೆಲವೇ ತಿಂಗಳಲ್ಲಿ ಶೇ. 40ಕ್ಕಿಂತ ಹೆಚ್ಚು ಬೆಲೆ ಕುಸಿದು ತೆಂಗು ಬೆಳೆಗಾರರನ್ನು ಸಂಕಷ್ಟಕ್ಕೀಡು ಮಾಡಿದೆ. »» ಪುಟ 6

ಅತ್ತ ಕೊಲ್ಲಿ ಯುದ್ಧ, ಇತ್ತ ತಮಿಳುನಾಡು ಎಂಟ್ರಿ

ತಮಿಳುನಾಡು ಸಹಿತ ಹೊರ ರಾಜ್ಯಗಳಲ್ಲಿ ತೆಂಗಿನಕಾಯಿ ಇಳುವರಿಯಲ್ಲಿ ಹೆಚ್ಚಳ, ತಮಿಳುನಾಡಿನಲ್ಲಿ ತೆಂಗಿನಕಾಯಿಗೆ ಬೆಲೆ ದಿಢೀರನೆ ಕುಸಿದಿರುವುದು ಮತ್ತು ಕೊಲ್ಲಿ ಯುದ್ಧ ಇತ್ಯಾದಿ ಬೆಲೆ ಕುಸಿತಕ್ಕೆ ಪ್ರಮುಖ ಕಾರಣವಾಗಿವೆ ಎಂದು ಹೇಳಲಾಗುತ್ತಿದೆ. ಗಲ್ಫ್ ಯುದ್ಧಕ್ಕೂ ಮೊದಲು ಒಣ ಮತ್ತು ಹಸಿ ತೆಂಗಿನಕಾಯಿಗಳನ್ನು ಪುಡಿ ಮಾಡಿ ಗಲ್ಫ್ ಸಹಿತ ವಿದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. ಆದರೆ ಯುದ್ಧ ಭೀತಿಯಿಂದಾಗಿ ರಫ್ತುಗೆ ಭಾರೀ ಪೆಟ್ಟು ಬಿದ್ದಿದ್ದು, ಈ ನಿಟ್ಟಿನಲ್ಲಿ ಕಂಪೆನಿಗಳು ತೆಂಗಿನಕಾಯಿ ಖರೀದಿ ನಿಲ್ಲಿಸಿರುವುದಾಗಿ ತಿಳಿದುಬಂದಿದೆ.

200 ರೂ.ನಿಂದ 150 ರೂ.ಗೆ ಇಳಿಕೆ

ತೆಂಗು ಬೆಳೆಗಾರರಿಗೆ ಕಳೆದ ಅನೇಕ ತಿಂಗಳುಗಳ ಕಾಲ ಸುವರ್ಣ ಯುಗವಾಗಿತ್ತು. ಕಾಸರಗೋಡು ಜಿಲ್ಲೆಯ ಮಾರುಕಟ್ಟೆಗಳಲ್ಲಿ ಒಂದು ಕಿಲೋ ಹಸಿ ತೆಂಗಿನಕಾಯಿ ಬೆಲೆ ಸರಾಸರಿ 40 ರೂ. ಮತ್ತು ಒಣ ತೆಂಗಿನಕಾಯಿ ಬೆಲೆ 47ರೂಪಾಯಿಗಳಿಗೆ ಇಳಿಮುಖಗೊಂಡಿದೆ. ಕಳೆದ ತಿಂಗಳುಗಳಿಗೆ ಹೋಲಿಸಿದರೆ ಇದೀಗ ಕಿಲೋವೊಂದಕ್ಕೆ 38ರೂ. ದರ ಕುಸಿದಿದೆ. 200ರೂ. ಗಡಿಯಲ್ಲಿದ್ದ ಕೊಬ್ಬರಿ ಬೆಲೆ 150ರೂ.ಗೆ ಇಳಿದಿದೆ. ಬಾಲ್ ಕೊಬ್ಬರಿಗೆ 225 ರೂ. ಇದ್ದ ಬೆಲೆಯು 180ಕ್ಕೆ ಇಳಿಕೆಯಾಗಿದೆ.

ಇಲ್ಲಿ ಗ್ರಾಮದ ಅಲ್ಲಲ್ಲಿ ನೀರಿನ ತೊಟ್ಟಿ

ಪಶು ಪಕ್ಷಿಗಳ ದಾಹ ತಣಿಸಲು ಟೀಂ ಆಸರೆ

ಎಲ್ಲೆಡೆ ಬಿಸಿಲಿನ ಬೇಗೆ ಹೆಚ್ಚುತ್ತಿದೆ. ಬಾವಿ, ಕೆರೆ, ನದಿ ನೀರಿನ ಮೂಲಗಳು ಬರಿದಾಗುತ್ತಿದ್ದು, ಪ್ರಾಣಿ – ಪಕ್ಷಿಗಳು ಕುಡಿಯುವ ನೀರಿಗಾಗಿ ಪರಿತಪಿಸಬೇಕಾದ ಪರಿಸ್ಥಿತಿ ನಿರ್ಮಾಣಗೊಂಡಿದೆ. ಇದನ್ನು ಮನಗಂಡ ಸಮಾನ ಮನಸ್ಕ ತಂಡವೊಂದು ನೀರಿನ ತೊಟ್ಟಿ ನಿರ್ಮಿಸಿ, ಅದಕ್ಕೆ ನಿತ್ಯ ನೀರು ಹಾಕುವ ಪುಣ್ಯದ ಕಾರ್ಯ ಮಾಡುತ್ತಿದ್ದಾರೆ.

ಕುಂದಾಪುರ: ಆಲೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ 7ನೇ ತರಗತಿಯ 95– 96ನೇ ಸಾಲಿನ ವಿದ್ಯಾರ್ಥಿಗಳ ತಂಡ ರಚಿಸಿರುವ ಟೀಂ ಆಸರೆ ಬಳಗವು ಜಾನುವಾರು, ಪ್ರಾಣಿ– ಪಕ್ಷಿಗಳಿಗೆ ಕುಡಿಯುವ ನೀರಿಗಾಗಿ ಆಲೂರು ಗ್ರಾಮದ ವ್ಯಾಪ್ತಿಯ ನೀರಿನ ಲಭ್ಯತೆ ಇರುವ ಕೆಲವು ಕಡೆಗಳಲ್ಲಿ ನೀರಿನ ತೊಟ್ಟಿ ನಿರ್ಮಿಸಿ, ನಿರ್ವಹಿಸುವ ಸಮಾಜಮುಖಿ ಕಾರ್ಯ ನಡೆಸಿದೆ. ಈ ಬಾರಿ ಬಿಸಿಲಿನ ಕಾವು ಹೆಚ್ಚಾಗುತ್ತಿದ್ದು, ಅಂತರ್ಜಲ ಮಟ್ಟವೂ ಗಣನೀಯವಾಗಿ ಇಳಿಮುಖವಾಗುತ್ತಿದೆ. ಈ ಕಾರಣದಿಂದಲೇ ನೀರಿನ ಕೊರತೆಯೂ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಪ್ರಾಣಿ – ಪಕ್ಷಿಗಳಿಗೂ ಅತೀ ಅಗತ್ಯವಾದ ಕುಡಿಯುವ ನೀರನ್ನು ಒದಗಿಸುವ ಇಂತಹ ಕಾರ್ಯ ಎಲ್ಲೆಡೆ ಆಗಬೇಕಾಗಿದೆ.

ಯೋಜನೆ ರೂವಾರಿಗೆ ಅಭಿನಂದನೆ ಸಲ್ಲಿಕೆ



ಆಲೂರು ರಾಮ ಭಜನಾ ಮಂದಿರ ಬಳಿ ತೊಟ್ಟಿಯನ್ನು ತಂಡದ ಸದಸ್ಯರಾದ ಶಾರದಾ ಜೋಯಿಸ್ ನೇತೃತ್ವದಲ್ಲಿ ಆರಂಭಿಸಲಾಯಿತು. ಪ್ರಭಾಕರ್ ಶೆಟ್ಟಿ, ದಿನೇಶ್ ಆಚಾರ್ಯ, ರಾಘವೇಂದ್ರ ದೇವಾಡಿಗ, ಸಂತೋಷ್ ಪೂಜಾರಿ, ರಾಜೇಶ್ ದೇವಾಡಿಗ ಉಪಸ್ಥಿತರಿದ್ದರು. ಈ ಯೋಜನೆಯ ಪ್ರಮುಖ ರೂವಾರಿ ಉಮೇಶ್ ಪ್ರಭು ಅವರಿಗೆ ಈ ಅಭಿನಂದನೆ ಸಲ್ಲಿಸಲಾಯಿತು.

ನಂತೂರು ಸರ್ಕಲ್ ನೆನಪಿಸಿತು ಇಲ್ಲಿನ ಬ್ರಹ್ಮಶ್ರೀ ನಾರಾಯಣಗುರು ವೃತ್ತ

ಬಿ.ಸಿ.ರೋಡ್ ಹೆದ್ದಾರಿಯಲ್ಲಿ ಟ್ರಾಫಿಕ್‌ನ ಬಿಸಿ!



ಬಂಟ್ವಾಳ: ಮದುವೆ ಮತ್ತಿತರ ವಿವಿಧ ಕಾರ್ಯಕ್ರಮ ಹಿನ್ನೆಲೆಯಲ್ಲಿ ಭಾನುವಾರ ದಿನ ಬಿ.ಸಿ. ರೋಡ್‌ನ ಹೆದ್ದಾರಿಯುದ್ದಕ್ಕೂ ವಾಹನ ದಟ್ಟಣೆ ವಿಪರೀತವಾಗಿ ಟ್ರಾಫಿಕ್ ಜಾಮ್ ಎಲ್ಲೆಡೆ ಉಂಟಾಯಿತು.

ಶ್ರಮಪಟ್ಟ ಪೊಲೀಸರು

ಬಂಟ್ವಾಳ ಟ್ರಾಫಿಕ್ ಪೊಲೀಸ್ ಉಪ ನಿರೀಕ್ಷಕ ಆದರ್ಶ್ ಮತ್ತು ಅವರ ಸಂಪೂರ್ಣ ಸಿಬ್ಬಂದಿ ಸ್ಥಳೀಯ ಗೃಹರಕ್ಷಕ ಸಿಬ್ಬಂದಿ ಸಹಿತ ಬಿ.ಸಿ. ರೋಡಿನ ಬ್ರಹ್ಮಶ್ರೀ ನಾರಾಯಣಗುರು ವೃತ್ತದ ಸುತ್ತಲೂ ಸಾಲುಗಟ್ಟಿ ನಿಂತಿದ್ದ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಬೆಳಗ್ಗೆ 11.30ರ ವೇಳೆಗೆ ಆರಂಭಗೊಂಡ ವಾಹನದಟ್ಟಣೆ, ಮಧ್ಯಾಹ್ನ 3 ರವರೆಗೂ ಮುಂದುವರಿದಿತ್ತು. ಬಿ.ಸಿ. ರೋಡ್‌ನ ಕೈಕಂಬದವರೆಗೆ, ಬಂಟ್ವಾಳ ಬೈಪಾಸ್‌ನ ನಾರಾಯಣಗುರು ಮಂದಿರದವರೆಗೆ ವಾಹನ ಸಾಲುಗಟ್ಟಿ ನಿಂತು ನಿಧಾನವಾಗಿ ಸಂಚರಿಸುತ್ತಿದ್ದವು. ಒಟ್ಟಿನಲ್ಲಿ ಭಾನುವಾರ ಬಿ.ಸಿ. ರೋಡ್‌ನ ಸರ್ಕಲ್ ನಂತೂರು ಸರ್ಕಲ್ ನಂತೆ ಕಂಡುಬಂತು.

ಇಲ್ಲಿ ಬಿ.ಸಿ. ರೋಡ್‌ನ ಕಡೆಯಿಂದ ಬಂಟ್ವಾಳ ಕೆಳಗಿನಪೇಟೆ ಕಡೆಗೆ ಸಾಗುವ ವಾಹನಗಳು ಪರದಾಡಬೇಕಾಯಿತು.

ಇಲ್ಲಿ ಪಾರ್ಕಿಂಗ್‌ಗೆ ಕೂಡಾ ಇತ್ತು ಪರದಾಟ

ಬಂಟ್ವಾಳ, ಬಿ.ಸಿ.ರೋಡ್, ಪಾಣೆಮಂಗಳೂರು ಸಹಿತ ಎಲ್ಲ ಕಡೆಗಳಲ್ಲೂ ಕಲ್ಯಾಣ ಮಂಟಪಗಳು ಭರ್ತಿ ಆಗಿದ್ದವು. ವಿವಾಹ ಸಮಾರಂಭಗಳಿಗೆ ತೆರಳುವವರು ಅಧಿಕವಿದ್ದ ಕಾರಣ ಕಾರುಗಳ ಓಡಾಟ ಸಂಖ್ಯೆ ಹೆಚ್ಚಳವಾಗಿತ್ತು. ಮದುವೆಗಳು ನಡೆಯುವ ಸಮೀಪದಲ್ಲಿ ರಸ್ತೆಯ ಇಕ್ಕೆಲಗಳಲ್ಲೂ ವಾಹನಗಳ ಪಾರ್ಕಿಂಗ್ ಗೆ ಪರದಾಟ ನಡೆಸುವ ದೃಶ್ಯ ಕಂಡುಬಂತು.

ಕುಕ್ಕೇಶನ ಸನ್ನಿಧಾನದಲ್ಲಿ ಭಕ್ತಾದಿಗಳ ಪ್ರವಾಹ



ಸರಣಿ ಸರ್ಕಾರಿ ರಜೆ, ಬೇಸಿಗೆ ರಜೆ ಹಿನ್ನೆಲೆಯಲ್ಲಿ ರಾಜ್ಯದ ಪ್ರಸಿದ್ಧ ಪುಣ್ಯಕ್ಷೇತ್ರ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ರಾಜ್ಯ, ಹೊರರಾಜ್ಯಗಳಿಂದ ಅಧಿಕ ಸಂಖ್ಯೆಯ ಭಕ್ತಾದಿಗಳು ಭಾನುವಾರ ಆಗಮಿಸಿ ಶ್ರೀ ದೇವರ ದರುಶನ ಪಡೆದು ಸೇವಾಗಳನ್ನು ನೆರವೇರಿಸಿ ಪ್ರಸಾದ ಸ್ವೀಕರಿಸಿದರು.

ಮೇಲ್ಸೇತುವೆ ಕಾಮಗಾರಿಯಿಂದ ನೀರಿನ ಹರಿವಿಗೆ ಅಡ್ಡಿ | ಪರಿಸರ, ಭೌಗೋಳಿಕ ಸಮತೋಲನದ ಮೇಲೆ ಪರಿಣಾಮ

ಮಳೆಗಾಲದಲ್ಲಿ ಕಾಡಲಿದೆ ಕೂಳೂರು ಫಲ್ಗುಣಿ ನದಿ ತೀರದಲ್ಲಿ ಭೂ ಸವಕಳಿ?



ಸಂಗಮ ವಿಶೇಷ

ಸುರತ್ಕಲ್: ಮಂಗಳೂರು ಸಮೀಪದ ಕೂಳೂರು ಭಾಗದಲ್ಲಿ ಫಲ್ಗುಣಿ ನದಿಯ ಮೇಲೆ ನಿರ್ಮಾಣವಾಗುತ್ತಿರುವ ಹೆದ್ದಾರಿ ಮೇಲ್ಸೇತುವೆ ಕಾಮಗಾರಿ ಇದೀಗ ಪರಿಸರ, ಭೌಗೋಳಿಕ ಸಮತೋಲನದ ಮೇಲೆ ಪರಿಣಾಮ ಬೀರುತ್ತಿದೆ ಎಂಬುದಾಗಿ ಸ್ಥಳೀಯರು ಆತಂಕ ವ್ಯಕ್ತಪಡಿಸಿದ್ದಾರೆ.

ಮರಗಳು ನೆಲಸಮವಾಗಿತ್ತು

ತಣ್ಣೀರುಬಾವಿ ರಸ್ತೆಯ ಅಕ್ಕಪಕ್ಕದ ಪ್ರದೇಶಗಳಲ್ಲಿ ನದಿ ತೀರ ಕುಸಿತದ ವೇಗ ಕಳೆದ ಮಳೆಗಾಲದಲ್ಲಿ ಹೆಚ್ಚಾಗಿತ್ತು. ಈಗಾಗಲೇ ಹಲವಾರು ಮರಗಳು ನೆಲಸಮವಾಗಿದ್ದು, ಇನ್ನೂ ಅನೇಕ ಮರಗಳು ಈ ಮಳೆಗಾಲದಲ್ಲಿ ಕೊಚ್ಚಿ ಹೋಗುವ ಸಾಧ್ಯತೆ ಇದೆ. ಕಳೆದ ಕೆಲವು ವರ್ಷಗಳಿಂದ ಹೆದ್ದಾರಿ ಮೇಲ್ಸೇತುವೆ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿದ್ದು, ಇದೀಗ ಪಿಲ್ಲರ್ ಅಳವಡಿಕೆ ಮುಗಿದು ಗರ್ಡರ್ ಅಳವಡಿಸುವ ಕೆಲಸ ನಡೆಯುತ್ತಿದೆ. ಈ ಮಳೆಗಾಲದಲ್ಲಿಯೂ ಯೋಜನೆ ಪೂರ್ಣವಾಗುವ ಲಕ್ಷಣಗಳು ಕಾಣುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ತಾಂತ್ರಿಕ ಕ್ರಮಗಳಿಗೆ ಒತ್ತಾಯ

ಪರಿಸ್ಥಿತಿ ಹದಗೆಡುವ ಮುನ್ನವೇ ಸಂಬಂಧಪಟ್ಟ ಇಲಾಖೆ ತಾಂತ್ರಿಕವಾಗಿ ಸಮಗ್ರ ಪರಿಶೀಲನೆ ನಡೆಸಿ, ನದಿ ಹರಿವು ಸಮತೋಲನಗೊಳಿಸುವ, ತೀರ ರಕ್ಷಣೆಗೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿದ್ದಾರೆ. ಮಳೆಗಾಲದ ಮುನ್ನ ತುರ್ತು ತಡೆಗೋಡೆಗಳು, ಗ್ಯಾಬಿಯನ್ ಗೋಡೆಗಳು ಹಾಗೂ ನದಿ ದಿಕ್ಕು ಸರಿಪಡಿಸುವ ಎಲ್ಲಾ ಕ್ರಮಗಳನ್ನು ಜಾರಿಗೆ ತರಬೇಕು ಎಂಬ ಒತ್ತಾಯ ವ್ಯಕ್ತವಾಗಿದೆ.

ಉತ್ತರ ಭಾಗದ ಕಡೆಗೆ ಹೆಚ್ಚುತ್ತಿರುವ ನೀರಿನ ಒತ್ತಡ

ಕಾಮಗಾರಿಯ ಹಿನ್ನೆಲೆಯಲ್ಲಿ ನದಿಯೊಳಗೆ ಹಾಕಲಾಗಿರುವ ಮಣ್ಣು ಗಟ್ಟಿಯಾಗಿ ನಿಂತು ನೀರಿನ ಸಹಜ ಹರಿವಿಗೆ ತಡೆ ಉಂಟುಮಾಡುತ್ತಿರುವುದರಿಂದ, ನದಿಯ ದಿಕ್ಕು ಬದಲಾಗುತ್ತಿದ್ದು ಉತ್ತರ ಭಾಗದ ಕಡೆಗೆ ಹೆಚ್ಚು ಒತ್ತಡದಿಂದ ನೀರು ಹರಿಯುತ್ತಿದೆ.

ಪ್ರವಾಸೋದ್ಯಮಕ್ಕೂ ಬೀಳಲಿದೆಯೇ ಹೊಡೆತ?

ಈ ಭಾಗವು ಬೋಟಿಂಗ್ ಸೇರಿದಂತೆ ವಿವಿಧ ಮನೋರಂಜನಾ ಚಟುವಟಿಕೆಗಳಿಗೆ ಪ್ರಸಿದ್ಧಿ ಪಡೆದಿದೆ. ಆದರೆ ನದಿ ತೀರ ಕುಸಿತದಿಂದ ಮಣ್ಣು ಕೊಚ್ಚಿಹೋಗಿದಲ್ಲಿ ದೋಣಿಗಳು ಮತ್ತು ಐಷಾರಾಮಿ ಬೋಟ್‌ಗಳನ್ನು ನಿಲ್ಲಿಸಲು ಸೂಕ್ತ ಸ್ಥಳವೇ ಇಲ್ಲದಂತಾಗುವ ಆತಂಕ ವ್ಯಕ್ತವಾಗಿದೆ. ಇದರಿಂದ ಸ್ಥಳೀಯ ಪ್ರವಾಸೋದ್ಯಮಕ್ಕೂ ಹೊಡೆತ ಬೀಳುವ ಸಾಧ್ಯತೆ ಇದೆ.

ಹರಿವಿನ ದಿಕ್ಕು ಬದಲು?

ನದಿಯೊಳಗೆ ಹಾಕಿದ ಮಣ್ಣಿನ ಪರಿಣಾಮ ನೀರಿನ ಹರಿವಿನ ದಿಕ್ಕು ಬದಲಾಗಿದ್ದು, ಸಮೀಪದ ಭೂಮಿ ಕೆರಕುಸಿತಕ್ಕೆ ಒಳಗಾಗುತ್ತಿದೆ. ಈಗಾಗಲೇ ಎಕರೆಗಟ್ಟಲೆ ಜಾಗ ನದಿ ಪಾಲಾಗಿರುವುದಾಗಿ ನಿವಾಸಿಗಳು ತಿಳಿಸಿದ್ದಾರೆ. ಮಳೆಗಾಲ ತೀವ್ರಗೊಂಡರೆ ಪರಿಸ್ಥಿತಿ ಇನ್ನಷ್ಟು ಗಂಭೀರವಾಗುವ ಸಾಧ್ಯತೆ ಇದೆ.

ಸಜೀಪಮುನ್ನೂರು ಮೂರ್ತೆದಾರರ ಸಂಘ: ಶಿರ್ಲಾಡಿ ಶಾಖೆ ಶುಭಾರಂಭ 2
ಗುರುಪುರ-ಕೈಕಂಬ, ಎಡಪದವಿನಲ್ಲಿ ಮಳೆಗಾಲದಲ್ಲಿ ಕೃತಕ ನೆರೆಯ ಭೀತಿ! 3
ಕೊಡಗು ಜಿಲ್ಲಾಡಳಿತ, ಪಂಚಾಯತ್ ನೇತೃತ್ವದಲ್ಲಿ ಭಗವಾನ್ ಬುದ್ಧ ಜಯಂತಿ 4
ಈ ವರ್ಷವೂ ಬೆರ್ಕಳ - ಜಾಲ್ಸೂರು ಹೆದ್ದಾರಿಯಲ್ಲೇ ಮಳೆನೀರು? 5

ಪುಟ ಸಂಖ್ಯೆ | website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb | ಸೋಮವಾರ 04, ಮೇ 2026

ಸುತ್ತ ಮುತ್ತ

ಶ್ರೀಗಳಿಂದ ವಸಂತಪೂಜೆ



ಸುಬ್ರಹ್ಮಣ್ಯ ಶ್ರೀ ಮಠದಲ್ಲಿ ನರಸಿಂಹ ಜಯಂತಿ ಅಂಗವಾಗಿ ಶನಿವಾರ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿಗಳು ನರಸಿಂಹ ದೇವರಿಗೆ ವಸಂತ ಪೂಜೆ ಸಮರ್ಪಿಸಿದರು.

6 ಗ್ರಾಮಗಳಿಗೆ ಕೊಳವೆ ಬಾವಿ ಮಂಜೂರು: ಅಶೋಕ್ ರೈ

ಪುತ್ತೂರು: ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಆರು ಗ್ರಾಮಗಳಲ್ಲಿ ಕುಡಿಯುವ ನೀರಿಗೆ ಬರ ಉಂಟಾಗಿದ್ದು, ಗ್ರಾಮಸ್ಥರಿಗೆ ನೀರು ಪೂರೈಕೆಗಾಗಿ 6 ಹೊಸ ಕೊಳವೆ ಬಾವಿ ಮಂಜೂರು ಮಾಡಲಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ.

ಆರ್ಯಾಪು ಗ್ರಾಮದ ಕಲ್ಲರ್ಪೆ ಹಾಗೂ ಸಂಪ್ಯದಲ್ಲಿ ಪುಷ್ಠಿಂಗ್, ಬಡಗನ್ನೂರು ಗ್ರಾಮದ ಕುತ್ಯಾಳ, ನರಿಮೊಗರು ಗ್ರಾಮದ ಮಾಯಂಗಳ, ನೆಕ್ಕಿಲಾಡಿ ಗ್ರಾಮದ ಬೊಳಂತಿ, ಒಳಮೊಗ್ರು ಗ್ರಾಮದ ಪರ್ಪುಂಜ, ನೆಟ್ಟಣಿಗೆ ಮುಡ್ನೂರು ಗ್ರಾಮದ ಸುರುಳಿಮೂಲೆಯಲ್ಲಿ ಹೊಸ ಕೊಳವೆ ಬಾವಿಯನ್ನು ತೆಗೆಯಲಾಗಿದೆ. ಬಹುತೇಕ ಕೊಳವೆ ಬಾವಿಗಳಲ್ಲಿ ನೀರು ಕಡಿಮೆ ಲಭ್ಯವಾಗಿದ್ದು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿದೆ.

ಗ್ರಾಮಸ್ಥರ ಬೇಡಿಕೆಯಂತೆ ತಕ್ಷಣ ಸ್ಪಂದಿಸಿ ನೀರಿನ ವ್ಯವಸ್ಥೆ ಮಾಡಲಾಗಿದೆ. ಗ್ರಾಮದಲ್ಲಿ ಬೇರೆ ಕಡೆಯಲ್ಲಿ ನೀರಿನ ಸಮಸ್ಯೆ ಇರುವ ಬಗ್ಗೆ ಮಾಹಿತಿ ಬಂದಲ್ಲಿ ಮತ್ತು ಎಲ್ಲಿಯಾದರೂ ಕುಡಿಯುವ ನೀರಿಗೆ ಸಮಸ್ಯೆಯಾದಲ್ಲಿ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವಂತೆ ಗ್ರಾ.ಪಂ.ಗಳಿಗೆ ಸೂಚನೆಯನ್ನು ನೀಡಲಾಗಿದೆ. ನೀರಿನ ಸಮಸ್ಯೆಯಾದಲ್ಲಿ ಶಾಸಕರ ಕಚೇರಿಗೆ ಮಾಹಿತಿ ನೀಡುವಂತೆ ಅಶೋಕ್ ರೈ ವಿನಂತಿ ಮಾಡಿದ್ದಾರೆ.

ನಿಡ್ವಾಳ್ ಶ್ರೀ ಮಹಾವಿಷ್ಣು ಶ್ರೀ ದೇವರಿಗೆ ಜಾತ್ರಾ ಮಹೋತ್ಸವ




ಸುಬ್ರಹ್ಮಣ್ಯ: ನಿಡ್ವಾಳ್ ಶ್ರೀ ಮಹಾವಿಷ್ಣು ದೇವಳದಲ್ಲಿ ಶ್ರೀ ದೇವರಿಗೆ ಪುನರ್ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶಾಭಿಷೇಕದ ಬಳಿಕ ಶನಿವಾರ ರಾತ್ರಿ ಶ್ರೀ ದೇವರಿಗೆ ಜಾತ್ರಾ ಮಹೋತ್ಸವ ನೆರವೇರಿತು. ಕ್ಷೇತ್ರದ ತಂತ್ರಿ ಬ್ರಹ್ಮಶ್ರೀ ಕೆಮ್ಮಿಂಜೆ ನಾಗೇಶ ತಂತ್ರಿಗಳ ನೇತೃತ್ವದಲ್ಲಿ ಜಾತ್ರಾ ಮಹೋತ್ಸವದ ವೈದಿಕ ವಿಧಿ ವಿಧಾನಗಳು ನೆರವೇರಿತು. ಶನಿವಾರ ರಾತ್ರಿ ಶ್ರೀ ದೇವರಿಗೆ ರಂಗಪೂಜೆ ಮತ್ತು ಮಹಾಪೂಜೆ ನಡೆದ ಬಳಿಕ ದೇವರ ಬಲಿ ಉತ್ಸವ ಆರಂಭವಾಯಿತು. ಅನಂತರ ಭೂತಬಲಿ ಮಹೋತ್ಸವ, ವಸಂತ ಕಟ್ಟೆಪೂಜೆ, ದರ್ಶನ ಬಲಿ, ಬಟ್ಟಲು ಕಾಣಿಕೆ ಮತ್ತು ಪ್ರಸಾದ ವಿತರಣೆ ನಡೆಯಿತು. ಈ ಮೊದಲು ಚಾಮುಂಡಿ ಅಮ್ಮನವರ ಮತ್ತು ಗುಳಿಗ ದೈವದ ಭಂಡಾರ ತೆಗೆಯುವ ಕಾರ್ಯಕ್ರಮ ನೆರವೇರಿತು. ಈ ಸಂದರ್ಭದಲ್ಲಿ ದೇವಳದ ಆಡಳಿತ ಟ್ರಸ್ಟ್ ಅಧ್ಯಕ್ಷ ಚಂದ್ರಪ್ರಕಾಶ್ ಕಂಬಳ, ಕೋಶಾಧಿಕಾರಿ ಗುರುಪ್ರಸಾದ್ ತೋಟ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಗೌರವ ಸಲಹೆಗಾರ ಡಾ. ದೇವಿಪ್ರಸಾದ್ ಕಾನತ್ತೂರು, ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನ, ಕೋಶಾಧಿಕಾರಿ ಕುಶಾಲಪ್ಪ ಮೇಲ್ಪಾಡಿ, ಪ್ರಧಾನ ಅರ್ಚಕ ಅಕ್ಷಯ್ ಭಟ್, ಭಕ್ತರು ಉಪಸ್ಥಿತರಿದ್ದರು.

ಮೂರುಕಾವೇರಿ: ಮೇ 5ರಿಂದ 7ರವರೆಗೆ ವಾರ್ಷಿಕ ಮಾರಿಪೂಜೆ

ಕಿನ್ನಿಗೋಳಿ: ಕಿನ್ನಿಗೋಳಿ ಮೂರುಕಾವೇರಿ ಒಂಬತ್ತು ಮಾಗಣೆಯ ಶ್ರೀ ಮಹಮ್ಮಾಯೀ ದೇವಸ್ಥಾನದಲ್ಲಿ ವಾರ್ಷಿಕ ಮಾರಿ ಪೂಜೆಯು ಮೇ 5ರಿಂದ 7ರ ತನಕ ನಡೆಯಲಿದೆ. ಮೇ 5ರಂದು ಪ್ರಾತಃ ತೋರಣ ಮುಹೂರ್ತ, ಕಿನ್ನಿಗೋಳಿ ಕಟ್ಟೆಯಲ್ಲಿ ಬಿಂಬ ಪ್ರತಿಷ್ಠೆ, ದೇವಸ್ಥಾನದಲ್ಲಿ ಮಹಾ ಪೂಜೆ, ದರ್ಶನ ಸೇವೆ, ಸಂಜೆ ಕಿನ್ನಿಗೋಳಿ ಕಟ್ಟೆಯಲ್ಲಿ ಯಕ್ಷಗಾನ, ಬಳಿಕ ಕಲ್ಲುರ್ಟಿ ಪಂಜುರ್ಲಿ ದೈವದ ನೇಮ, ರಾತ್ರಿ ಕಿನ್ನಿಗೋಳಿ ಕಟ್ಟೆಯಲ್ಲಿ ದರ್ಶನ ಸೇವೆ, ಬಿಂಬದ ಶೋಭಾಯಾತ್ರೆ, ದೇವಿ ದೈವಗಳ ಭೇಟಿ, ರಾತಿ ಪೂಜೆ ನಡೆಯಲಿದೆ.

ಮೇ 6ಕ್ಕೆ ಅರಮನೆ ಪೂಜೆ ದೇವಿ ದೈವಗಳ ಭೇಟಿ, ರಾಶಿ ಪೂಜೆ ದರ್ಶನ ಸೇವೆ ವಿಸರ್ಜನಾ ಪೂಜೆ ಬಿಂಬ ವಿಸರ್ಜನೆ, ಮೇ 7 ರಂದು ಗುಳಿಗ ದೈವದ ನೇಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೊಳಲುವಾದನ



ಸುಬ್ರಹ್ಮಣ್ಯ ಶ್ರೀ ಮಠದಲ್ಲಿ ನರಸಿಂಹ ಜಯಂತಿ ಅಂಗವಾಗಿ ಶನಿವಾರ ರಾತ್ರಿ, ವಿದ್ವಾನ್ ರಾಜ ಕಮೊಲ್ ಬೆಂಗಳೂರು ಮತ್ತು ಬಳಗದಿಂದ ಕೊಳಲು ವಾದನ ನಡೆಯಿತು. ಈ ಸಂದರ್ಭ ನೂರಾರು ಪ್ರೇಕ್ಷಕರು ಕಲಾ ವೈಭವಕ್ಕೆ ಮನಸೋತರು.


ಐತಿಹಾಸಿಕ ಸ್ಥಳ ಅಭಿವೃದ್ಧಿಗೆ ಮಾಸ್ಟರ್‌ಪ್ಲ್ಯಾನ್ | ನೂತನ ಬಾಲವನ ಸಮಿತಿ ಸಭೆ ಬಳಿಕ ಅಶೋಕ್ ರೈ ಮಾಹಿತಿ

ಪುತ್ತೂರು ಬಾಲವನ ಟ್ರಸ್ಟ್‌ನ 1.54 ಕೋ.ರೂ. ಬಳಕೆಗೆ ಚಿಂತನೆ

ಪುತ್ತೂರು: ಪರ್ಲಡ್ಕದಲ್ಲಿರುವ ಮೇರು ಸಾಹಿತಿ ಡಾ. ಕೆ. ಶಿವರಾಮಕಾರಂತರ ಬಾಲವನವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಲು ನಿರ್ಧರಿಸಲಾಗಿದ್ದು, ಇದಕ್ಕಾಗಿ ಮಾಸ್ಟರ್‌ಪ್ಲ್ಯಾನ್ ಸಿದ್ಧಪಡಿಸಲಾಗುವುದು ಎಂದು ಶಾಸಕ ಅಶೋಕ್ ರೈ ಹೇಳಿದರು.

ಇತ್ತೀಚೆಗೆ ಸರಕಾರ ರಚಿಸಿದ ನೂತನ ಬಾಲವನ ಸಮಿತಿಯ ಸಭೆ ಶನಿವಾರ ಸಂಜೆ ಪುತ್ತೂರು ಸಹಾಯಕ ಆಯುಕ್ತರ ಕಚೇರಿಯಲ್ಲಿ ನಡೆದ ಬಳಿಕ ಅವರು ಮಾಧ್ಯಮದ ಜತೆ ಮಾತನಾಡಿದರು.

ಕುಪ್ಪಳ್ಳಿಯಲ್ಲಿರುವ ಕುವೆಂಪು ಸ್ಮಾರಕ, ಕೊಟ್ಟಿಗೆಹಾರದಲ್ಲಿರುವ ಪೂರ್ಣಚಂದ್ರ ತೇಜಸ್ವಿ ಸ್ಮಾರಕ ತಾಣಗಳಿಗೆ ಶೀಘ್ರವೇ ನೂತನ ಸಮಿತಿ ಭೇಟಿ ನೀಡಿ ಅಧ್ಯಯನ ಮಾಡಲಿದೆ. ಇದಾದ ಬಳಿಕ ಬಾಲವನ ಅಭಿವೃದ್ಧಿಗೆ ಮಾಸ್ಟರ್‌ಪ್ಲ್ಯಾನ್ ರಚಿಸಲಾಗುವುದು. ಈ ಹಿಂದಿನ ಬಾಲವನ ಅಭಿವೃದ್ಧಿ ಟ್ರಸ್ಟ್‌ನ ಖಾತೆಯಲ್ಲಿ 1.54 ಕೋಟಿ ರೂ. ಇದೆ. ಅದನ್ನು ಬಳಸಿಕೊಳ್ಳುವ ಬಗ್ಗೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಶಾಸಕ ಅಶೋಕ್ ಕುಮಾರ್ ರೈ ತಿಳಿಸಿದರು.



ಬಾಲವನ ಈಜುಕೊಳದ ಖಾತೆಯಲ್ಲಿ 18.83 ಲಕ್ಷವಿದೆ. ಬಾಲವನ ನಿರ್ವಹಣೆಗೆ ಸಂಬಂಧಿಸಿದ ಸಹಾಯಕ ಆಯುಕ್ತರ ಖಾತೆಯಲ್ಲಿ ರೂ. 23 ಲಕ್ಷಗಳಿವೆ. ಪ್ರತೀ ವರ್ಷ ಬಾಲವನದಲ್ಲಿ ಸುಮಾರು 6 ಲಕ್ಷ ಆದಾಯ ಬರುತ್ತಿದೆ. ರೂ. 6.28 ಲಕ್ಷ ವಾರ್ಷಿಕ ಖರ್ಚು ಇದೆ ಎಂದು ಅಶೋಕ್ ರೈ ವಿವರಿಸಿದರು.

ರೂ. 2 ಕೋಟಿ ವೆಚ್ಚದಲ್ಲಿ ಸುಂದರ, ಸುಸಜ್ಜಿತ ಭವನ ನಿರ್ಮಿಸುವ ಯೋಚನೆಯಿದೆ. ಮಳೆಗಾಲದ ಹೊರತುಪಡಿಸಿ ವರ್ಷದ 8 ತಿಂಗಳು ಬಾಲವನದಲ್ಲಿ ತಿಂಗಳಿಗೊಂದು ಕಾರ್ಯಕ್ರಮ ಮಾಡಲಾಗುವುದು. ಯಕ್ಷಗಾನ, ನಾಟಕ, ಮಕ್ಕಳ ಸಂಬಂತ ಕಾರ್ಯಕ್ರಮ ನಡೆಸಲಾಗುವುದು. ಬಾಲವನ ಸ್ವಚ್ಛತೆಗೆ ವಾರದಲ್ಲಿ ಕ್ರಮಕೈಗೊಳ್ಳಲಾಗುವುದು.

ಕೊನೆಗೂ ಬಾಲವನ ಅಭಿವೃದ್ಧಿಗೆ ಮುಹೂರ್ತ

ಪರ್ಲಡ್ಕದಲ್ಲಿರುವ ಮೇರು ಸಾಹಿತಿ ಡಾ. ಕೆ. ಶಿವರಾಮ ಕಾರಂತರ ಬಾಲವನವನ್ನು ಸಮಗ್ರವಾಗಿ ಅಭಿವೃದ್ಧಿಯಾಗಬೇಕು ಎಂಬುದು ಹಿರಿಯ ಸಾಹಿತಿಗಳು ಹಾಗೂ ಈ ಭಾಗದ ನಾಗರಿಕರ ಕನಸಾಗಿದೆ. ಅನೇಕ ಬಾರಿ ಸಂಬಂಧಪಟ್ಟ ಪ್ರಮುಖರು ಸರ್ಕಾರದ ಗಮನ ಸೆಳೆಯುವ ಪ್ರಯತ್ನ ಮಾಡಿದ್ದಾರೆ. ಕೊನೆಗೂ ಇದೀಗ ಬಾಲವನ ಅಭಿವೃದ್ಧಿಯಾಗುವ ಕಾಲ ಕೂಡಿಬಂದಿದೆ.

> **ಕಾರಂತರ ಆಶಯಕ್ಕೆ ತಕ್ಕಂತೆ ಪ್ರಕೃತಿಗೆ ಹಾನಿಯಾಗದಂತೆ ಬಾಲವನ ಅಭಿವೃದ್ಧಿಪಡಿಸಲಾಗುವುದು. ಓದುವವರಿಗೆ ಅನುಕೂಲಕರ ಗ್ರಂಥಾಲಯ ವ್ಯವಸ್ಥೆ ಮಾಡಲಾಗುವುದು.**
> ● **ಅಶೋಕ್ ರೈ, ಶಾಸಕ**

ಪೈಂಟಿಂಗ್, ಲೈಟಿಂಗ್ ಸೇರಿದಂತೆ ಅಗತ್ಯ ಕಾಮಗಾರಿ ನಡೆಸಲಾಗುವುದು. ಮಕ್ಕಳ ಆಟಿಕೆ ಹಳತಾಗಿದ್ದು ಹೊಸದಾಗಿ ಅಳವಡಿಸಲಾಗುವುದು ಎಂದು ಶಾಸಕರು ಹೇಳಿದರು. ಬಾಲವನ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಸಹಾಯಕ ಆಯುಕ್ತೆ ಸ್ಟೆಲ್ಲಾ ವರ್ಗೀಸ್ ಮತ್ತು ಸಮಿತಿಯ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು. ಸಭೆ ಮುಗಿದ ಬಳಿಕ ಶಾಸಕರು ಸಮಿತಿಯ ಸದಸ್ಯರ ಜತೆ ಬಾಲವನಕ್ಕೆ ಭೇಟಿ ನೀಡಿ ಪರಿಶೀಲಿಸಿದರು.


ಶ್ರೀ ವೀರಸಾಗರ ಮುನಿ ಮಹಾರಾಜರಿಂದ ಧಾರ್ಮಿಕ ವಿಧಿ ವಿಧಾನ

ಉಪ್ಪಿನಂಗಡಿ ಬಸದಿಯಲ್ಲಿ ಬಿಂಬಗಳ ಪ್ರತಿಷ್ಠೆ

ಉಪ್ಪಿನಂಗಡಿ: ಇಲ್ಲಿನ ಗಾಂಧಿಪಾರ್ಕ್ ಎಂಬಲ್ಲಿ ಹೆದ್ದಾರಿ ಪಾರ್ಶ್ವದಲ್ಲಿ ಪುನರ್ ನಿರ್ಮಿತ ಕದಿಕಾರು ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಏಕಶಿಲಾ ಚತುರ್ಮುಖ ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳ ಪಂಚಕಲ್ಯಾಣ ಹಾಗೂ ಧಾಮ ಸಂಪ್ರೋಕ್ಷಣಾಪೂರ್ವಕ ಭಗವಾನ್ 1008 ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವವು ಪೂಜ್ಯ ಮುನಿ 108 ಶ್ರೀ ವೀರಸಾಗರ ಮುನಿ ಮಹಾರಾಜರಿಂದ ನೆರವೇರಿಸಲ್ಪಟ್ಟಿತ್ತು.

ಈ ಸಂದರ್ಭ ಕಾರ್ಕಳ ಜೈನ ಮಠದ ರಾಜಗುರು ಧ್ಯಾನ ಯೋಗಿ ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮಿ ಮತ್ತು ಮೂಡಬಿದ್ರೆ ಜೈನ ಮಠದ ಭಾರತಭೂಷಣ ಭಟ್ಟಾರಕ ಡಾ. ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಇದ್ದರು.

ಬಸದಿಯಲ್ಲಿ ಭಾನುವಾರ ಮುಂಜಾನೆಯಿಂದಲೇ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದಿದ್ದು, ಶ್ರೀ ಜಿನ ಭಗವಂತ ಮುನಿಮಹಾರಾಜರ ಆಹಾರ ದಾನ ವಿಧಿ, ಗಂಧಯಂತ್ರಧಾರಣಾ ವಿಧಾನ, ಮಂತ್ರನ್ಯಾಸ, ತಿಲಕನ್ಯಾಸ ಪೂರ್ವಕ ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯ ಬಿಂಬ ಪ್ರತಿಷ್ಠಾ





■ **ಲಲಿತಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ, ಡಾ. ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ ಭಾಗಿ**

ವಿಧಾನ, ಮುಖವಸ್ತ್ರ ಉದ್ಘಾಟನೆ, ಶಿಖರಾರೋಹಣ, ಮಾನಸ್ತಂಭೋಪರಿ ಶ್ರೀ ಜಿನ ಬಿಂಬಗಳ ಸ್ಥಾಪನೆ, ಪಂಚ ಕಲ್ಯಾಣ ಆರಾಧನಾ ವಿಧಾನ, ಸಮವಸರಣ ಪೂಜೆ, ಅಗ್ನಿತ್ರಯಾರ್ಚನಾ ಪೂರ್ವಕ ನಿರ್ವಾಣ ಕಲ್ಯಾಣ ವಿಧಿ, ಸಿದ್ಧಚಕ್ರ ಯಂತ್ರಾರಾಧನಾ ವಿಧಾನ, ಅಗ್ರೋಧಕ ಮೆರವಣಿಗೆ, ಮಹೋತ್ಸವ, ಮಾನಸ್ತಂಭೋಪರಿ ಶ್ರೀ ಜಿನಬಿಂಬಗಳಿಗೆ 108 ಕಲಶಗಳಿಂದ ಮಹಾ ಅಭಿಷೇಕ, ಮಹಾಮಂಗಳಾರತಿ, ಪಾದ ಪೂಜೆ, ತೋರಣ ವಿಸರ್ಜನೆ, ಕಂಕಾ ವಿಸರ್ಜನೆ ಮೊದಲಾದ ವಿಧಿ ವಿಧಾನಗಳು ನಡೆದವು.

ಈ ಸಂಧರ್ಭ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಜ್ರಕುಮಾರ್ ಜೈನ್, ಕಾರ್ಯಾಧ್ಯಕ್ಷ ಧನ್ಯಕುಮಾರ್ ರೈ, ಪಂಚಕಲ್ಯಾಣ ಸಮಿತಿಯ ಅಧ್ಯಕ್ಷ ವಿದ್ಯಾಧರ ಜೈನ್, ಪ್ರಮುಖರಾದ ಶಾಂತಿರಾಜ ನೆಲ್ಲೂರು, ಸಮಿತಿ ಸದಸ್ಯ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ನಿತೇಶ್ ಕುಮಾರ್ ಪುತ್ತಿಲ, ಪ್ರಭಾಕರ್ ರೈ, ರಕ್ಷಿತ್ ಕುಮಾರ್ ಪುತ್ತಿಲ, ಜಯರಾಜ್ ಜಾರಳಿಕೆ, ಸುಭಾಶ್ ಜೈನ್, ನಿರಂಜನ್ ಕೊಂಡೆ, ಅರುಣಾ ಡಿ. ರೈ, ಸುನಿಲ್ ಕುಮಾರ್ ಅಗರಿ, ಸಮಂತ್ ನೆಲ್ಯಾಡಿ, ಪುನಿತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್, ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ, ಮಹೇಶ್ ಪಡಿವಾಳ ಮೊದಲಾದವರು ಭಾಗವಹಿಸಿದ್ದರು.

ರಾಮಕೃಷ್ಣ ಮಿಷನ್‌ನಿಂದ ನಗರದಲ್ಲಿ 'ಸ್ವಚ್ಛ ಮಂಗಳೂರು' ಅಭಿಯಾನ

ರಸ್ತೆ ಇಕ್ಕೆಲಗಳಲ್ಲಿ ಸ್ವಚ್ಛತೆ, ಬ್ಲ್ಯಾಕ್ ಸ್ಪಾಟ್ ತೆರವು

ಮಂಗಳೂರು: ರಾಮಕೃಷ್ಣಮಿಷನ್ 'ಸ್ವಚ್ಛ ಮಂಗಳೂರು' ಅಭಿಯಾನದ ಮೇ ತಿಂಗಳ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮವನ್ನು ರೋಸಾರಿಯೋ ಚರ್ಚ್ ಮುಖ್ಯಸ್ಥ ಫಾ. ವಲೇರಿಯನ್ ಡಿಸೋಜಾ ಹಾಗೂ ಎಂ.ಆರ್.ಪಿ.ಎಲ್ ಸಂಸ್ಥೆಯ ನಿರ್ದೇಶಕ ಬಿ.ಎಚ್.ವಿ. ಪ್ರಸಾದ್ ಅವರು ಹಸಿರು ನಿಶಾನೆಯ ಮೂಲಕ ಚಾಲನೆ ನೀಡಿ, ಸ್ವಚ್ಛ ಮಂಗಳೂರು ಅಭಿಯಾನಕ್ಕೆ ಶುಭ ಕೋರಿದರು.

ನಿಟ್ಟೆ ಇನ್ಸ್‌ಟಿಟ್ಯೂಟ್ ಆಫ್ ಫಿಸಿಯೋಥೆರಪಿಯ ಅಧ್ಯಾಪಕ ಡಾ. ಪುರುಷೋತ್ತಮನ್ ಚಿಪ್ಪಳ, ಡಾ. ಜಯೇಶ್ ಚಂದ್ರನ್, ಡಾ.ರುಚಿತಾ ನರಸಿಯಾ ಮತ್ತು ಸೋಕ್ರೇಟ್ಸ್ ಅವರ ನೇತೃತ್ವದಲ್ಲಿ ವಿದ್ಯಾರ್ಥಿ ಸ್ವಯಂಸೇವಕರು ರೋಸಾರಿಯೋ ಚರ್ಚ್‌ನಿಂದ ಸೇಂಟ್ ಆನ್ಸ್ ಕಾಲೇಜುವರೆಗೆ ರಸ್ತೆಯ ಎರಡೂ ಬದಿ ಸ್ವಚ್ಛತಾ ಕಾರ್ಯ ಕೈಗೊಂಡರು.

ತ್ಯಾಜ್ಯ, ಬ್ಯಾನರ್ ತೆರವು

ಸಂಗ್ರಹ, ಮರುಬಳಕೆ ಆಗದ ಪ್ಲಾಸ್ಟಿಕ್ ವಸ್ತುಗಳ ಸಂಗ್ರಹ, ಅನಧಿಕೃತ ಬ್ಯಾನರ್‌ಗಳ ತೆರವು, ಅಂಗಡಿ ಮಾಲೀಕರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಅನಗತ್ಯ ಗಿಡಗಂಟಿಗಳನ್ನು ತೆರವುಗೊಳಿಸುವ ಕಾರ್ಯವನ್ನು

5 ಬ್ಲ್ಯಾಕ್ ಸ್ಪಾಟ್‌ಗಳ ತೆರವು

ಹಿರಿಯ ಸ್ವಯಂಸೇವಕ ಉದಯ್ ಕೆ.ಪಿ, ಬಾಲಕೃಷ್ಣ ಭಟ್, ವಿಠ್ಠಲ್ ದಾಸ್ ಪ್ರಭು, ಡಾ. ಕೃಷ್ಣ ಶರಣ್, ಅನಿರುದ್ಧ ನಾಯಕ್, ಪ್ರಕಾಶ್, ಗಂಗಾಧರ ಶಾಸ್ತ್ರಿ, ಅವಿನಾಶ್, ರಾಜೀವ ಚಂದ್ರಶೇಖರ್, ಯೋಗೇಶ್ ಕಾರ್ಯತಡ್ಕ, ತಾರಾನಾಥ ಆಳ್ವ, ನಾಗೇಶ್ ಸರಿಪಳ್ಳ, ಅಕ್ಷಿತ್ ಅತ್ತಾವರ, ದಾಮೋದರ್ ಭಟ್, ಸಚಿನ್ ಶೆಟ್ಟಿ, ಸುನಂದ ಶಿವರಾಮ್, ಪ್ರಜ್ವಲ್, ಪ್ರಥಮ್ ಹಾಗೂ ಇತರರು ರೋಸಾರಿಯೋ ಚರ್ಚ್ ನಿಂದ ಪೋಸ್ಟ್ ಆಫೀಸ್‌ವರೆಗೆ ಇರುವ ರಸ್ತೆಯಲ್ಲಿದ್ದ 5 ಪ್ರಮುಖ ಬ್ಲ್ಯಾಕ್ ಸ್ಪಾಟ್‌ಗಳನ್ನು ತೆರವುಗೊಳಿಸಿದರು.

ಮಳೆಗಾಲ ಮುನ್ನ ನೀರಿನ ಹರಿವು ತಡೆಗಟ್ಟುತ್ತಿದ್ದ ಕಾಲುವೆ ಶುದ್ಧಗೊಳಿಸಿ, ನೀರಿನ ಸರಾಗ ಹರಿವಿಗೆ ಅವಕಾಶ ಮಾಡಿಕೊಟ್ಟರು. ಎರಡೂ ತಂಡಗಳ ಒಟ್ಟಾರೆ ಶ್ರಮದಿಂದ ಸುಮಾರು 3000 ಕಿಲೋ ತ್ಯಾಜ್ಯವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.

ವಾಹನ ನಿಲುಗಡೆಗೆ ತಡೆಗೆ ಮನವಿ

ಈ ಶ್ರಮದಾನದ ವೇಳೆ, ರೋಸಾರಿಯೋ ಹಾಲ್‌ನಿಂದ ಸ್ಟೇಟ್ ಬ್ಯಾಂಕ್ ಸಂಪರ್ಕ ರಸ್ತೆಯವರೆಗೆ ಅನೇಕ ಲಾರಿಗಳು, ಕಾರುಗಳು ಮತ್ತು ಹಳೆಯ ವಾಹನಗಳನ್ನು ದೀರ್ಘಕಾಲ ರಸ್ತೆ ಬದಿಯಲ್ಲಿ ನಿಲ್ಲಿಸಲಾಗಿದ್ದು ಸಾರ್ವಜನಿಕ ರಸ್ತೆಯನ್ನು ಖಾಸಗಿ ಪಾರ್ಕಿಂಗ್ ಸ್ಥಳವಾಗಿ ಬಳಸಲಾಗುತ್ತಿದೆ. ಈ ರೀತಿಯ ಅನಧಿಕೃತ ಪಾರ್ಕಿಂಗ್‌ನಿಂದ ಕತ್ತಲು ಪ್ರದೇಶಗಳು ಉಂಟಾಗಿ, ಬ್ಲ್ಯಾಕ್ ಸ್ಪಾಟ್‌ಗಳು ರೂಪುಗೊಳ್ಳುತ್ತಿವೆ ಹಾಗೂ ಅಕ್ರಮ ಚಟುವಟಿಕೆಗಳಿಗೆ ಅವಕಾಶವಾಗಬಹುದು. ಇದರಿಂದ ಪ್ರತಿದಿನ ಸಂಚರಿಸುವ ವಿದ್ಯಾರ್ಥಿಗಳು ಮತ್ತು ಮಕ್ಕಳ ಆರೋಗ್ಯ ಹಾಗೂ ಭದ್ರತೆಗೆ ಅಪಾಯ ಉಂಟಾಗಬಹುದು. ಇಂತಹ ಪಾರ್ಕಿಂಗ್‌ಗೆ ತಡೆ ನೀಡಿ ಅಥವಾ ಪೇ ಪಾರ್ಕಿಂಗ್ ವ್ಯವಸ್ಥೆ ಜಾರಿಗೊಳಿಸಿ, ಸಾರ್ವಜನಿಕ ಶಿಸ್ತಿನೊಂದಿಗೆ ಆದಾಯವೂ ಸೃಷ್ಟಿಯಾಗುವಂತೆ ಕ್ರಮ ಕೈಗೊಳ್ಳಬಹುದು ಎಂದು ಅಭಿಯಾನದ ಸ್ವಯಂಸೇವಕರು ನಗರ ಪಾಲಿಕೆಗೆ ಮನವಿ ಸಲ್ಲಿಸಲಿದ್ದಾರೆ.



'ಅಪ್ಪೆ ಬೇರ್ ದ ತುಳುನಾಡ್' ಸಮ್ಮೇಳನದ ಆಮಂತ್ರಣ ಬಿಡುಗಡೆ



ಮುಲ್ಕಿ: ತುಳುನಾಡಿನ ಕೃಷಿ, ಸಂಸ್ಕೃತಿ ಹಾಗೂ ಮಾತೃಮೂಲ ಪರಂಪರೆಯೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಪಗ್ಗು-18, ತುಳುವರು ಬೀಜ ಬಿತ್ತುವ ಪವಿತ್ರ ದಿನದಂದು 'ಅಪ್ಪೆ ಬೇರ್ ದ ತುಳುನಾಡ್-ರಾಷ್ಟ್ರೀಯ ತುಳು ವಿಚಾರಗೋಷ್ಠಿ' ಕಾರ್ಯಕ್ರಮದ ಆಮಂತ್ರಣ ಪತ್ರಿಕೆಯನ್ನು ಸಮ್ಮೇಳನ ಅಧ್ಯಕ್ಷೆ ಡಾ. ಇಂದಿರಾ ಹೆಗ್ಗಡೆಯವರಿಗೆ ನೀಡಿ ಬಿಡುಗಡೆಗೊಳಿಸಲಾಯಿತು.

ಶ್ಲಾಘನೀಯ ಕಾರ್ಯ

ಡಾ. ಇಂದಿರಾ ಹೆಗ್ಗಡೆ ಮಾತನಾಡಿ 'ಪಗ್ಗು-18 ತುಳುವರು ಭೂಮಿಯಲ್ಲಿ ಬೀಜ ಬಿತ್ತುವ ದಿನ. ಇದೇ ದಿನ 'ಅಪ್ಪೆ ಬೇರ್" ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಬಿಡುಗಡೆ ಮಾಡುವುದು ತಾಯಿ ಬೇರು (ಅಪ್ಪೆ ಬೇರ್) ಸಂಸ್ಕೃತಿಯ ಬೀಜವನ್ನು ಮರು ಬಿತ್ತಿದಂತಾಗಿದೆ. ಈ ಸಾಂಸ್ಕೃತಿಕ ಬೀಜ ತುಳುನಾಡಿನಾದ್ಯಂತ ಪಸರಿಸಿ, ಮುಂದಿನ ಪೀಳಿಗೆಗಳಲ್ಲಿಯೂ ಜೀವಂತವಾಗಿ ಉಳಿಯಲಿ ಎಂದು ಶುಭ ಹಾರೈಸಿ, ನಮ್ಮ ಹಿರಿಯರು ಸುಮಾರು ನೂರು ವರ್ಷಗಳ ಹಿಂದೆ ಬಿತ್ತಿದ 'ತುಳುವ ಮಹಾಸಭೆ' ಎಂಬ ಬೀಜವನ್ನು ಇಂದಿಗೂ ಜೀವಂತವಾಗಿಡಲು ಪ್ರಯತ್ನಿಸುತ್ತಿರುವ ತುಳುವರ್ಲ್ಡ್ ಫೌಂಡೇಶನ್ ಕಾರ್ಯ ಶ್ಲಾಘನೀಯವಾಗಿದ್ದು, ಸಂಸ್ಥೆ ಮುಂದಿನ ದಿನಗಳಲ್ಲಿ ಇನ್ನಷ್ಟು ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪರಂಪರೆಯ ಬೆಳವಣಿಗೆಗಾಗಿ ವಿಸ್ತಾರವಾಗಿ ಕಾರ್ಯ ನಿರ್ವಹಿಸಲಿ ಎಂದು ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಡಾ. ರಾಜೇಶ್ ಆಳ್ವ, ಭಾನುಮತಿ ಶೆಟ್ಟಿ ಕಕ್ಕೆಪದವು, ಸರೋಜಿನಿ ಸುವರ್ಣ, ವಸಂತ ರೈ, ಹರಿಪ್ರಸಾದ್ ರೈ ಮತ್ತಿತರು ಉಪಸ್ಥಿತರಿದ್ದರು

ಶ್ರೀ ಶಂಕರ ವಸಂತ ವೇದಪಾಠ ಶಾಲೆಯಲ್ಲಿ ಶ್ರೀ ಶಂಕರ ಜಯಂತಿ




ಪುತ್ತೂರು: ಕಬಕದ ಬ್ರಹ್ಮಶ್ರೀ ಮಿತ್ತೂರು ಪುರೋಹಿತ ತಿಮ್ಮಯ್ಯ ಭಟ್ಟ ಸಂಪ್ರತಿಷ್ಠಾನದ ವತಿಯಿಂದ ಮಾಡಾವು ಶ್ರೀ ಶಂಕರ ವಸಂತ ವೇದ ಪಾಠ ಶಾಲೆಯಲ್ಲಿ ಆಯೋಜಿಸಲಾದ ವಸಂತ ವೇದ ಶಿಬಿರದಲ್ಲಿ ಶನಿವಾರ ಶ್ರೀ ಶಂಕರ ಜಯಂತಿ ನಡೆಯಿತು.

ಉಪನ್ಯಾಸಕ ಲಕ್ಷ್ಮೀ ಗಣೇಶ ದುಗ್ಗಲಡ್ಕ ಅವರು ಶ್ರೀ ಶಂಕರ ಜಯಂತಿ ಕುರಿತು ಉಪನ್ಯಾಸ ನೀಡಿ, 7ನೇ ವಯಸ್ಸಿಗೆ ಚತುರ್ವೇದ ಪಾರಂಗತರಾದ ಶ್ರೀ ಶಂಕರರು ಅಮ್ಮನ ರಕ್ಷಣೆ, ನೆರಳಲ್ಲಿ ಬೆಳೆದು, ಸನ್ಯಾಸಿಯಾದರು. ಗುರುವಿನ ಆದೇಶದಂತೆ ತಾಳೆ ಗರಿಯಲ್ಲಿ ಭಗವದ್ಗೀತೆ ಬರೆದು ಒಪ್ಪಿಸಿ ಪಾಠ ಕಲಿಕೆಯ ಅನುಗ್ರಹ ಪಡೆದರು. ಶಂಕರರು ಚಾಂಡಾಲನಿಗೂ ಗೌರವ ನೀಡಿದವರು. ಮಂಡನ ಮಿಶ್ರನ ಎದುರು ತತ್ವಜ್ಞಾನ ವಾದದಲ್ಲಿ ಗೆದ್ದು ದೇಶದ 4 ದಿಕ್ಕಿಗೆ ನಾಲ್ಕು ಪೀಠ ಸ್ಥಾಪಿಸಿದರು. ವೇದ ಜ್ಞಾನ ಪರಂಪರೆ ಮುಂದುವರಿಸಲು ಅನುಕೂಲ ಮಾಡಿಕೊಟ್ಟ ಆದಿ ಗುರು ಶಂಕರಾಚಾರ್ಯರು ಅಮ್ಮನ ಕೊನೆಗಾಲದಲ್ಲಿ ಸೇವೆ ಸಲ್ಲಿಸಿದ್ದು ಇಂದಿನ ಮಕ್ಕಳಿಗೆ ಮಾದರಿ ಎಂದರು.

ಇಂದು ಗಲ್ಲಿ ಗಲ್ಲಿಗಳಲ್ಲಿ ವೃದ್ಧಾಶ್ರಮ ಸ್ಥಾಪನೆಯಾಗುತ್ತಿರುವುದು ವಿಷಾದನೀಯ. ಆತ್ಮ ಬಲದಿಂದ ದುಶ್ಚಟ ಗೆಲ್ಲಬೇಕು. ದೇಶಕ್ಕಾಗಿ ಸಂಸ್ಕೃತಿ, ಸಂಸ್ಕಾರದಿಂದ ಬದುಕು ಮುನ್ನಡೆಸಬೇಕು ಎಂದವರು ಹೇಳಿದರು. ಶ್ರೀ ಶಂಕರ ವೇದಪಾಠ ಶಾಲೆಯ ಗುರು ಶ್ರೀಹರಿ ಭಟ್ ಬೆಂಗಳೂರು ಇದ್ದರು. ಪ್ರತಿಷ್ಠಾನದ ಸಂಚಾಲಕ ಮಿತ್ತೂರು ವೇ. ಮೂ. ತಿರುಮಲೇಶ್ವರ ಭಟ್ಟ ಸ್ವಾಗತಿಸಿ, ಶ್ರೀ ಶಂಕರ ವೇದಪಾಠ ಶಾಲೆ ಸಂಚಾಲಕ ಗಣೇಶ ಭಟ್ ಮಾಡಾವು ವಂದಿಸಿದರು.



ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ, ಸಂಗೀತ ಶಾರದಾ ಶೃಂಗೇರಿ, ಕೊಟ್ಟಾರ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಭರತಾಂಜಲಿ ಇವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಗರದ ಸುಬ್ರಹ್ಮಣ್ಯ ಸಭಾ ಇಲ್ಲಿ ಶ್ರೀ ಆದಿ ಗುರು ಶಂಕರಾಚಾರ್ಯ ಜಯಂತಿ ಉತ್ಸವದಲ್ಲಿ ಬೆಂಗಳೂರಿನ ವಿದುಷಿ ವಂದನಾ ರಾಣಿ, ಮಂಗಳೂರಿನ ವಿದುಷಿ ಮಾನಸ ಕಾರಂತ್, ಚೆನ್ನೈನ ವಿದುಷಿ ರಮ್ಯ ಮಂಗಳಲಕ್ಷ್ಮಿ ಅವರಿಂದ ಶಂಕರ ಸ್ತೋತ್ರ ರತ್ನ ಸಮರ್ಪಣಾ ಕಾರ್ಯಕ್ರಮ ಜರಗಿತು. ಪಕ್ಕವಾದ್ಯದಲ್ಲಿ ಮೃದಂಗದಲ್ಲಿ ವಿದ್ವಾನ್ ಮನೋಹರ ರಾವ್, ವಯೋಲಿನ್‌ನಲ್ಲಿ ವಿದುಷಿ ಧನಶ್ರೀ ಶಬರಾಯ ಸಹಕರಿಸಿದರು.



ಮಂಗಳೂರಿನ ಕಸ್ತೂರ್ಬಾ ಮೆಡಿಕಲ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಶೋಭಾ ಪೂಜಾರಿ ಅವರನು ಕಾಲೇಜಿನ ಹೌಸ್ ಕೀಪಿಂಗ್ ವಿಭಾಗದ ವತಿಯಿಂದ ಇತ್ತೀಚೆಗೆ ಸನ್ಮಾನಿಸಿ, ಬೀಳ್ಕೊಡುಗೆ ನೀಡಲಾಯಿತು. ಈ ಸಂದರ್ಭದಲ್ಲಿ ಮಾಹೆ ಮಂಗಳೂರು ವಿಭಾಗದ ಕ್ಲಸ್ಟರ್ ಮುಖ್ಯಸ್ಥೆ (ಎಚ್.ಆರ್) ಶಾಂತಲಾ ಡಿ.ಪೈ, ಕೆಎಂಸಿ ಎಚ್.ಆರ್.ಮುಖ್ಯಸ್ಥ ಸತೀಶ್ ಶೆಟ್ಟಿ ಕೆ., ಬ್ಲೂಸ್ಪಿಂಗ್ ಸಂಸ್ಥೆಯ ಎಚ್.ಆರ್. ಮುಖ್ಯಸ್ಥ ಶಾಫಿ ಕಲಂದರ್, ಶಿವರಾಮ್ ಎಸ್., ಸುಪ್ರೀತಾ, ಪುಂಡಲೀಕ್ ರಾವ್ ಮತ್ತಿತರರು ಉಪಸ್ಥಿತರಿದ್ದರು.

ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘದ 18ನೇ ಶಿರ್ತಾಡಿ ಶಾಖೆ ಶುಭಾರಂಭ

ಕರಾವಳಿಯಲ್ಲಿ ಬಲಿಷ್ಠವಾದ ಸಹಕಾರಿ ಸಂಘವಾಗಿ ಬೆಳೆಯುತ್ತಿದೆ: ರಮಾನಾಥ ರೈ

ಬಂಟ್ವಾಳ: ಸಜೀಪಮುನ್ನೂರು ಮೂರ್ತೆದಾರರ ಸೇವಾ ಸಹಕಾರಿ ಸಂಘ ಇದರ 18ನೇ ಶಿರ್ತಾಡಿ ಶಾಖೆಯು ಭಾನುವಾರ ಶಿರ್ತಾಡಿ ಮಕ್ಕಿ ಹೈಸ್ಕೂಲ್ ರಸ್ತೆಯ ಕಟ್ಟಡದಲ್ಲಿ ಶುಭಾರಂಭಗೊಂಡಿತು.

ಮಾಜಿ ಸಚಿವ ಬಿ. ರಮಾನಾಥ ರೈ ನೂತನ ಶಾಖೆ ಉದ್ಘಾಟಿಸಿದರು. ಬಳಿಕ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾಜಿ ಸಚಿವ ಮಾತನಾಡಿ, ಸಜೀಪಮುನ್ನೂರು ಮೂರ್ತೆದಾರರ ಸಹಕಾರಿ ಸಂಘ ಎಲ್ಲಾ ಜಾತಿ, ವರ್ಗದ ಜನರ ಸಹಕಾರದಿಂದ ಕರಾವಳಿ ಭಾಗದಲ್ಲಿ ಅತ್ಯಂತ ಬಲಿಷ್ಠವಾದ ಸಹಕಾರಿ ಸಂಘವಾಗಿ ಮೂಡಿ ಬಂದಿದೆ ಎಂದರು.

ಸಾಮಾಜಿಕ ನ್ಯಾಯದಿಂದ ವಂಚಿತರಾದವರಿಗೆ ಸಾಮಾಜಿಕ ಹಕ್ಕನ್ನು ಕೊಡುವ ಹೊಣೆಗಾರಿಕೆ ಎಲ್ಲರಿಗಿದ್ದು ಸಂಜೀವ ಪೂಜಾರಿಯವರು ತನ್ನ ಸಹಕಾರಿ ಸಂಘದ ಎಲ್ಲಾ ಶಾಖೆಯಲ್ಲಿ ಮಹಿಳೆಯರಿಗೆ ಉದ್ಯೋಗ ನೀಡುವ ಮೂಲಕ ಸಾಮಾಜಿಕ ನ್ಯಾಯಕ್ಕೆ ಅರ್ಥ ನೀಡಿದ್ದಾರೆ ಎಂದರು.



ಮುಖ್ಯ ಅತಿಥಿಯಾಗಿದ್ದ ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಕ್ಷಿತ್ ಶಿವರಾಂ ಮಾತನಾಡಿ, ಸಜೀಪಮುನ್ನೂರು ಮೂರ್ತೆದಾರರ ಸಹಕಾರಿ ಸಂಘವನ್ನು ಸ್ಥಾಪಿಸಿ 18 ಶಾಖೆಗಳನ್ನು ತೆರೆದಿರುವ ಸಂಜೀವ ಪೂಜಾರಿಯವರು ನಿಜವಾದ ಸಹಕಾರಿ ರತ್ನ ಎಂದರು. ಮಹಿಳೆಯರಿಗೆ ಮೀಸಲಾತಿ ನೀಡಬೇಕು ಎನ್ನುವ ಚರ್ಚೆ ಪ್ರಸ್ತುತ ನಡೆಯುತ್ತಿದ್ದು ಮಹಿಳೆಯರಿಗೆ ಉದ್ಯೋಗವಕಾಶವನ್ನು ನೀಡುವ ಮೂಲಕ ಸಂಜೀವ ಪೂಜಾರಿ ಈ ಕಾರ್ಯವನ್ನು ಈಗಾಗಲೇ ತನ್ನ ಸಹಕಾರಿ ಸಂಘದಲ್ಲಿ ಮಾಡಿದ್ದಾರೆ ಎಂದರು. ದ.ಕ. ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ಜಯಂತ್ ಕೋಟ್ಯಾನ್ ಮಾತನಾಡಿದರು. ಸಂಘದ ಅಧ್ಯಕ್ಷ ಕೆ. ಸಂಜೀವ ಪೂಜಾರಿ ಅಧ್ಯಕ್ಷತೆ ವಹಿಸಿದ್ದರು. ಶಿರ್ತಾಡಿ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿ ಮಾಜಿ ಅಧ್ಯಕ್ಷ ಪಿ.ಕೆ.ರಾಜು ಪೂಜಾರಿ ಕಾಶಿಪಟ್ಣ

> **ಸಂಘದ ಮೇಲೆ ಜನರು ವಿಶ್ವಾಸ ಇಟ್ಟುಕೊಂಡಿರುವುದರಿಂದ ಸಂಘವು ಈ ಹಂತಕ್ಕೆ ಬೆಳೆಯಲು ಸಾಧ್ಯವಾಗಿದೆ.**
> ● **ಕೆ. ಸಂಜೀವ ಪೂಜಾರಿ, ಸಂಘದ ಅಧ್ಯಕ್ಷ**

ಠೇವಣಿ ಪತ್ರ ವಿತರಿಸಿದರು.

ನವಮೈತ್ರಿ ಸೌಹಾರ್ದ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸತೀಶ್ ವಿ. ಶೆಟ್ಟಿ, ಕಟ್ಟಡ ಮಾಲಕ ರತ್ನಾಕರ ಬುಣ್ಣನ್, ಮಹಮ್ಮದ್ ದೋಣಿಬಾಗಿಲು, ಶಿರ್ತಾಡಿ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ ಗೌರವಾಧ್ಯಕ್ಷ ಅಶೋಕ್ ಮಾಂಟ್ರಾಡಿ, ಬೂಡ ಅಧ್ಯಕ್ಷ ಬೇಬಿ ಕುಂದರ್, ಸಂಘದ ಉಪಾಧ್ಯಕ್ಷ ವಿಠಲ ಬೆಳ್ಚಾಡ, ಹಿರಿಯ ನಿರ್ದೇಶಕ ಸುಂದರ ಪೂಜಾರಿ ಬೇಡಿನ ಪಾಲು ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಿರ್ದೇಶಕರಾದ ರಮೇಶ್ ಅನ್ನಪ್ಪಾಡಿ, ಕೆ.ಸುಜಾತ ಎಂ., ವಾಣಿವಸಂತ, ಆಶಿಶ್ ಪೂಜಾರಿ, ಚಿದಾನಂದ ಎಂ. ಕಡೇಶ್ವಾಲ್ಯ ಭಾಗವಹಿಸಿದ್ದರು. ನಿರ್ದೇಶಕ ಪ್ರಸಾದ್ ಎಂ.ಕೆ. ಸ್ವಾಗತಿಸಿದರು, ಜಯಶಂಕರ್ ಕಾನ್ಸಲೆ ವಂದಿಸಿದರು. ಗಿರೀಶ್ ಕುಮಾರ್ ಪೆರ್ವ ನಿರೂಪಿಸಿದರು.

ಸುತ್ತಮುತ್ತ

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಉಡುಪಿ: ಮಣಿಪಾಲ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11ಕೆವಿ ಪ್ರಗತಿನಗರ, ಎ.ಪಿ ನಗರ, ವಿ.ಆರ್.ನಗರ, ಮೂಡುಬೆಳ್ಳೆ ಫೀಡರ್ ಮಾರ್ಗದಲ್ಲಿ ನಿರ್ವಹಣೆ ಕಾಮಗಾರಿ ಹಮ್ಮಿಕೊಂಡಿರುವ ಕಾರಣ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ.

ಪ್ರಗತಿನಗರ, ಶಾಂತಿನಗರ, ರಾಜೀವನಗರ, 80 ಬಡಗುಬೆಟ್ಟು, ಸಿಂಡಿಕೇಟ್ ಸರ್ಕಲ್, ಎಂ.ಜಿ.ಸಿ ಸ್ಕೂಲ್, ಬಿ.ಎಸ್.ಎನ್.ಎಲ್, ಟೆಲಿಫೋನ್ ಎಕ್ಸ್‌ಚೇಂಜ್, ವಿದ್ಯಾರತ್ನನಗರ, ಡಿ.ಸಿ ಆಫೀಸ್, ಆರ್.ಟಿ.ಓ ಆಫೀಸ್, ಪೆರಂಪಳ್ಳಿ, ಸಗ್ರಿ, ನೋಳೆ, ಮಣಿಪುರ, ಮೂಡುಬೆಳ್ಳೆ, ಮರ್ಣೆ, ಕಟ್ಟಿಂಗೇರಿ, ಕೆಮ್ತೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮೇ 5ರಂದು ಬೆಳಿಗ್ಗೆ 9ರಿಂದ ಸಂಜೆ 5ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕುಂದಾಪುರ, ಹಾಲಾಡಿ, ಬೈಲೂರು

ಹಾಲಾಡಿ ವಿದ್ಯುತ್ ಉಪಕೇಂದ್ರದಿಂದ ಹೊರಡುವ 11ಕೆ.ವಿ ಬೈಲೂರು ಮಾರ್ಗದಲ್ಲಿ ಪಾಲನಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಬೈಲೂರು, ಬೆದ್ರಾಡಿ, ಕೊಂಡಳ್ಳಿ, ಕೋಣಿಹರ ಮತ್ತು ಶಂಕರನಾರಾಯಣ ಗ್ರಾಮಗಳ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಮೇ 5ರಂದು ಬೆಳಿಗ್ಗೆ 9.30ರಿಂದ ಸಂಜೆ 5.30ರವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಉಚಿತ ಕಣ್ಣಿನ ತಪಾಸಣಾ ಶಿಬಿರ

ಬೆಳ್ತಂಗಡಿ: ಭಾರತೀಯ ರೆಡ್ ಕ್ರಾಸ್ ಸೊಸೈಟಿ, ತುಳು ಶಿವಳ್ಳಿ ಸಭಾ ಬೆಳ್ತಂಗಡಿ ತಾಲೂಕು ಮಹಿಳಾ ಘಟಕ , ದ.ಕ ಜಿಲ್ಲಾ ಸಹಕಾರಿ ಆಸ್ಪತ್ರೆ, ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರ ಮಂಗಳೂರು ಇದರ ಸಹಯೋಗದೊಂದಿಗೆ ಕನ್ನಿಕಾ ವ್ಯಕ್ತಿತ್ವ ವಿಕಸನ ಶಿಬಿರದ ಅಂಗವಾಗಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಉಜಿರೆಯ ಶಾರದಾ ಮಂಟಪದಲ್ಲಿ ಏ.20 ರಂದು ನಡೆಯಿತು. ಶಿಬಿರದಲ್ಲಿ ಮಂಗಳೂರು ವೆನ್ಲಾಕ್ ಆಸ್ಪತ್ರೆಯ ನಿವೃತ್ತ ತಜ್ಞ ನೇತ್ರ ವೈದ್ಯ ಡಾ. ಅನಿಲ್ ರಾಮಾನುಜಂ ಮತ್ತು ತಂಡದ ವೈದ್ಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾರತೀಯ ರೆಡ್ ಕ್ರಾಸ್ ಸೊಸೈಟಿ ಬೆಳ್ತಂಗಡಿ ಘಟಕದ ಅಧ್ಯಕ್ಷ ಹರಿದಾಸ್ ಎಸ್.ಎಂ, ದ.ಕ ಜಿಲ್ಲಾ ಸಹಕಾರಿ ಆಸ್ಪತ್ರೆ , ವೈದ್ಯಕೀಯ ಶಿಕ್ಷಣ, ಸಂಶೋಧನಾ ಕೇಂದ್ರದ ಅಧ್ಯಕ್ಷ , ನ್ಯಾಯವಾದಿ ಶಿವಕುಮಾರ್ ಎಸ್.ಎಂ , ಸೇರಿದಂತೆ ತುಳು ಶಿವಳ್ಳಿ ಬ್ರಾಹ್ಮಣ ಸಂಘದ ಮಹಿಳಾ ಘಟಕದ ಪದಾಧಿಕಾರಿಗಳು ಉಪಸ್ಥಿತರಿದ್ದರು. ಶಿಬಿರದಲ್ಲಿ ಕಣ್ಣಿನ ತಪಾಸಣೆಯೊಂದಿಗೆ ಅರ್ಹರಿಗೆ ಉಚಿತ ಕನ್ನಡಕವನ್ನು ವಿತರಿಸಲಾಯಿತು. ತುರ್ತು ಅಗತ್ಯವಿರುವವರಿಗೆ ಜಿಲ್ಲಾ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಉನ್ನತ ಮಟ್ಟದ ಕಣ್ಣಿನ ಪರೀಕ್ಷೆ ನಡೆಸುವಂತೆ ಸೂಚಿಸಲಾಯಿತು.

ಗಾಲಿ ಕುರ್ಚಿ ವಿತರಣೆ

ಮುಲ್ಕಿ: ಇಲ್ಲಿನ ಮುಲ್ಕಿ ಲಯನ್ಸ್ ಕ್ಲಬ್ ಮತ್ತು ಲಿಯೋ ಕ್ಲಬ್ ಇಲ್ಲಿಗೆ ಪ್ರಾಂತೀಯ ಅಧ್ಯಕ್ಷರ ಭೇಟಿ ಮತ್ತು ವಲಯ ಸಮ್ಮಿಲನದ ಕಾರ್ಯಕ್ರಮದ ಸಂಧರ್ಭದಲ್ಲಿ ದಿವ್ಯಾಂಗರೊಬ್ಬರಿಗೆ 'ಗಾಲಿ ಕುರ್ಚಿ' ಉಚಿತವಾಗಿ ನೀಡಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಲಯನ್ಸ್ ಕ್ಲಬ್ ಮುಲ್ಕಿಯ ಅಧ್ಯಕ್ಷ ಹರ್ಷರಾಜ್ ಶೆಟ್ಟಿ ಜಿ.ಎಂ ವಹಿಸಿದ್ದರು. ಲಯನ್ಸ್ ಪ್ರಾಂತೀಯ ಅಧ್ಯಕ್ಷ ಮಾಧವ ಶೆಟ್ಟಿ ವಲಯ ಅಧ್ಯಕ್ಷ ಪೌಲ್ ರಾಲ್ಫಿ ಡಿ'ಕೋಸ್ತ ಕಾರ್ಯದರ್ಶಿ ಶೀತಲ್ ಸುಶೀಲ್, ಕೋಶಾಧಿಕಾರಿ ಸುಶೀಲ್ ಬಂಗೇರ, ಸುಜಿತ್ ಸಾಲ್ಯಾನ್ ಮತ್ತಿತರರಿದ್ದರು.

ದ.ಕ ಜಿಲ್ಲಾ ಮಟ್ಟದ ಸೌಹಾರ್ದ ಕ್ರೀಡಾಕೂಟ ಸಮಾರೋಪ

ಮುಲ್ಕಿ: ದ.ಕ., ಮುಲ್ಕಿ ತಾಲೂಕು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಆಶ್ರಯದಲ್ಲಿ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಹಾಗೂ ಗ್ರಾಮ ಪಂಚಾಯತ್ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ದ.ಕ ಜಿಲ್ಲಾ ಮಟ್ಟದ ಸೌಹಾರ್ದ ಕ್ರೀಡಾಕೂಟ 2026 ಸಮಾರೋಪ ಕಾರ್ಯಕ್ರಮ ಕಾರ್ನಾಡ್ ಸರಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಶುಕ್ರವಾರ ಸಂಜೆ ನಡೆಯಿತು. ದ.ಕ. ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಜಯಲಕ್ಷ್ಮೀ ರಾಯಕೋಡ ಅಧ್ಯಕ್ಷತೆ ವಹಿಸಿದ್ದರು. ದ.ಕ.ಜಿ. ಪಂ..ಯೋಜನಾ ನಿರ್ದೇಶಕರಾದ ಕೆ ಜಯರಾಮ್, ರಾಜ್ಯ ಸರ್ಕಾರಿ ನೌಕರರ ಸಂಘದ ಮುಲ್ಕಿ ಶಾಖೆಯ ಅಧ್ಯಕ್ಷೆ ಶರ್ಲಿ ಸುಮಾಲಿನಿ, ತಾಪಂ ಕಾರ್ಯ ನಿರ್ವಹಣಾಧಿಕಾರಿಗಳಾದ ಗುರುದತ್ ಎಮ್ ಎನ್, ಎಮ್ ಮಹೇಶ್ ಹೊಳ್ಳ, ಸಚಿನ್ ಕುಮಾರ್, ಬಂಟ್ವಾಳ ತಾಪಂ ಸಹಾಯಕ ನಿರ್ದೇಶಕ ವಿಶ್ವನಾಥ, ರಾಜ್ಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಕ್ಷೇಮಾಭಿವೃದ್ಧಿ ಸಂಘದ ದ.ಕ. ಜಿಲ್ಲಾ ಘಟಕ ಜಿಲ್ಲಾಧ್ಯಕ್ಷ ಅರುಣ್ ಪ್ರದೀಪ್ ಡಿಸೋಜಾ, ಕಿಲ್ಪಾಡಿ ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ಉಡುಪಿ 16ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಭಾಸ್ಕರಾನಂದ ಕುಮಾರ್ ಪ್ರತಿಪಾದನೆ

ಸಂವಹನವೇ ಕನ್ನಡ ಭಾಷೆಯ ಉಳಿವಿನ ಮಂತ್ರ



ಉಡುಪಿ: ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಲು ಇರುವ ಏಕೈಕ ಮತ್ತು ಅತ್ಯಂತ ಸರಳ ಮಾರ್ಗವೆಂದರೆ ನಮ್ಮ ನಿತ್ಯದ ಸಂವಹನದಲ್ಲಿ ಅದೇ ಭಾಷೆಯನ್ನು ಬಳಸುವುದು ಎಂದು ಖ್ಯಾತ ವೈದ್ಯ ಹಾಗೂ ನಾಟಕಕಾರ ಡಾ. ಭಾಸ್ಕರಾನಂದ ಕುಮಾರ್ ಖಚಿತವಾಗಿ ನುಡಿದರು.

ಉಡುಪಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ಮೇ 3ರಂದು ಉಡುಪಿಯ ಯಕ್ಷಗಾನ ಕಲಾರಂಗದ ಐವೈಸಿ ಸಭಾಂಗಣದಲ್ಲಿ ನಡೆದ ಉಡುಪಿ ತಾಲೂಕು 16ನೇ ಕನ್ನಡ ಸಾಹಿತ್ಯ ಸಮ್ಮೇಳನ 'ಭೀಷೋತ್ಸವ''ದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಕ್ಷಗಾನದಿಂದ ಅಪೂರ್ವ ಕೊಡುಗೆ

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಭಾಷೆಯ ಉಗಮ ಮತ್ತು ಬೆಳವಣಿಗೆಯ ಬಗ್ಗೆ ಮುಕ್ತವಾಗಿ ಮಾತನಾಡಿದ ಡಾ. ಭಾಸ್ಕರಾನಂದರು, ಕರಾವಳಿ ಭಾಗದಲ್ಲಿ ಕನ್ನಡ ಭಾಷೆ ಬೆಳೆಯಲು ಯಕ್ಷಗಾನವೇ ಪ್ರಮುಖ ಕಾರಣ. ಈ ಮಣ್ಣಿನ ಜನರಿಗೆ ರಾಮಾಯಣ, ಮಹಾಭಾರತದಂತಹ ಪುರಾಣ ಕಥೆಗಳು ಹಾಗೂ ಶುದ್ಧ ಕನ್ನಡದ ಪರಿಚಯವಾಗಿದ್ದು ಯಕ್ಷಗಾನದ ವಿದ್ವಾಂಸರಿಂದ. ಪಠ್ಯಪುಸ್ತಕದ ಕನ್ನಡ ಮತ್ತು ಆಡುಭಾಷೆಯ ನಡುವಿನ ಸೇತುವೆಯಾಗಿ ಯಕ್ಷಗಾನ ಅಪೂರ್ವ ಕೊಡುಗೆ ನೀಡಿದೆ ಎಂದರು. ಉದ್ಯೋಗಕ್ಕಾಗಿ ಹೊರ ಜಿಲ್ಲೆಗಳಿಂದ ಬಂದವರ ಜೊತೆ ನಾವು ಅವರ ಭಾಷೆಯಲ್ಲಿ ಮಾತನಾಡುವುದನ್ನು ಬಿಡಬೇಕು. ನಾವು ಅವರೊಂದಿಗೆ ಕನ್ನಡದಲ್ಲೇ ವ್ಯವಹರಿಸಿದಾಗ ಮಾತ್ರ ಅವರಿಗೆ ಕನ್ನಡ ಕಲಿಯುವುದು ಅನಿವಾರ್ಯವಾಗುತ್ತದೆ. ಆಗ ಸ್ಥಳೀಯ ಸಾಹಿತ್ಯವೂ ವೃದ್ಧಿಯಾಗುತ್ತದೆ ಎಂದು ಕರೆ ನೀಡಿದರು.

ಯುವಕರನ್ನು ಸಾಹಿತ್ಯದತ್ತ ಸೆಳೆಯಲು ಮಕ್ಕಳ ಸಮ್ಮೇಳನ ಹಾಗೂ ಸಾಹಿತ್ಯ ಸ್ಪರ್ಧೆಗಳನ್ನು ನಿರಂತರ ನಡೆಸುವ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.

ಪುಸ್ತಕ ಬಿಡುಗಡೆ ಮತ್ತು ಗಣ್ಯರ ಉಪಸ್ಥಿತಿ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ರಾಜ್ಯಾಧ್ಯಕ್ಷ ಹರಿಕೃಷ್ಣ ಪುನರೂರು ಅವರು ಪುಸ್ತಕ ಬಿಡುಗಡೆಗೊಳಿಸಿದರು. ನಿಕಟಪೂರ್ವ ಸಮ್ಮೇಳನಾಧ್ಯಕ್ಷ ಪ್ರೊ.ಎಂ.ಎಲ್.ಸಾಮಗ ಶುಭ ನುಡಿಗಳನ್ನಾಡಿದರು. ಉಡುಪಿ ಸಂಸ್ಕೃತಿ ವಿಶ್ವ ಪ್ರತಿಷ್ಠಾನದ ಸ್ಥಾಪಕ ಉಡುಪಿ ವಿಶ್ವನಾಥ ಶೆಣೈ, ಉಡುಪಿ ಪಿಯು ಶಿಕ್ಷಣ ಇಲಾಖೆ ಉಪನಿರ್ದೇಶಕ ಮಾರುತಿ, ಕರ್ಣಾಟಕ ಬ್ಯಾಂಕಿನ ರಮೇಶ್ ವೈದ್ಯ, ಕಸಾಪ ಉಡುಪಿ ತಾಲೂಕು ಗೌರವ ಸಲಹೆಗಾರ ಭುವನ ಪ್ರಸಾದ್ ಹೆಗ್ಡೆ ಉಪಸ್ಥಿತರಿದ್ದರು. ಸ್ವಾಗತ ಸಮಿತಿ ಕಾರ್ಯಾಧ್ಯಕ್ಷ ಜಯಕರ ಶೆಟ್ಟಿ ಇಂದ್ರಾಳಿ, ಕಸಾಪ ಉಡುಪಿ ತಾಲೂಕು ಅಧ್ಯಕ್ಷ ರವಿರಾಜ್ ಎಚ್.ಪಿ., ಗೌರವಕಾರ್ಯದರ್ಶಿ ರಂಜನಿ ವಸಂತ್, ಹಾಗೂ ಗೌರವ ಕೋಶಾಧ್ಯಕ್ಷ ರಾಜೇಶ್ ಭಟ್ ಪಣಿಯಾಡಿ ಇದ್ದರು. ಸ್ವಾಗತ ಸಮಿತಿ ಪ್ರಧಾನ ಕಾರ್ಯದರ್ಶಿ ಸತೀಶ್ ಕೊಡವೂರು ಸ್ವಾಗತಿಸಿ, ಕಸಾಪ ತಾಲೂಕು ಗೌರವ ಕಾರ್ಯದರ್ಶಿ ಜನಾರ್ದನ ಕೊಡವೂರು ವಂದಿಸಿದರು. ರಾಘವೇಂದ್ರ ಪ್ರಭು ಕರ್ವಾಲು ಸನ್ಮಾನಿತರನ್ನು ಪರಿಚಯಿಸಿದರು. ಪೂರ್ಣಿಮಾ ಜನಾರ್ದನ ನಿರೂಪಿಸಿದರು.

ಭವ್ಯ ಮೆರವಣಿಗೆ

ಸಮ್ಮೇಳನಕ್ಕೂ ಮುನ್ನ ಕುಂಜಿಬೆಟ್ಟು ಶಾರದಾ ಕಲ್ಯಾಣಮಂಟಪದಿಂದ ಭವ್ಯ ಮೆರವಣಿಗೆ ನಡೆಯಿತು. ಆಸ್ಟ್ರೋಮೋಹನ್ ಹಾಗೂ ಜನಾರ್ದನ ಕೊಡವೂರು ಸಂಪಾದಿತ 'ಚಿತ್ರ ಮಯ ಉಡುಪಿ' ಪ್ರದರ್ಶನ ಮತ್ತು ನಿತ್ಯಾನಂದ ನಾಯಕ್ ಅವರ ಮುರಲ್ ಕಲಾಕೃತಿಗಳ ಪ್ರದರ್ಶನ ನೋಡುಗರ ಗಮನ ಸೆಳೆಯಿತು.

ಕನ್ನಡ ಶಾಲೆಗಳ ಸಂರಕ್ಷಣೆಯಲ್ಲಿ ರಾಜ್ಯ ಸರಕಾರ ವಿಫಲ: ಡಾ. ಆಳ್ವ

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಆಳ್ವಾಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಮೋಹನ್ ಆಳ್ವ ಅವರು ಸರಕಾರದ ಧೋರಣೆಯ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ಸರಕಾರವು ಕನ್ನಡ ಮಾಧ್ಯಮ ಶಾಲೆಗಳನ್ನು ಗಟ್ಟಿಯಾಗಿ ಕಟ್ಟುವಲ್ಲಿ ಸಂಪೂರ್ಣ ಸೋತುಹೋಗಿದೆ. ಇತಿಹಾಸವಿರುವ ಕನ್ನಡ ಶಾಲೆಗಳು ಶಿಕ್ಷಕರಿಲ್ಲದೆ ಸೊರಗುತ್ತಿದ್ದು, ಪ್ರತಿವರ್ಷ ಶಾಲೆಗಳು ಮುಚ್ಚುತ್ತಿರುವುದು ಆತಂಕಕಾರಿ. ಕನ್ನಡವನ್ನು ಉಳಿಸಲು ಕೇವಲ ಸರಕಾರವನ್ನೇ ನಂಬಿ ಕುಳಿತುಕೊಳ್ಳಬಾರದು. ಕೈಗಾರಿಕೋದ್ಯಮಿಗಳು ತಮ್ಮ ಲಾಭಾಂಶದ ಒಂದು ಭಾಗವನ್ನು ಕನ್ನಡ ಶಾಲೆಗಳ ಉನ್ನತೀಕರಣಕ್ಕೆ ಮೀಸಲಿಟ್ಟು, ಆಂಗ್ಲ ಮಾಧ್ಯಮ ಶಾಲೆಗಳ ಮಾದರಿಯಲ್ಲಿ ಕನ್ನಡ ಶಾಲೆಗಳನ್ನು ಕಟ್ಟಬೇಕು ಎಂದು ಕಿವಿಮಾತು ಹೇಳಿದರು.

ಸಾಧಕರಿಗೆ ಗೌರವ ಪುರಸ್ಕಾರ

ಸಮ್ಮೇಳನದಲ್ಲಿ ವಿವಿಧ ಕ್ಷೇತ್ರಗಳ ಸಾಧಕ ತಿಲಕನಾಥ್ ಮಂಜೇಶ್ವರ, ಗೋಪಾಲ್ ಭಟ್ ಎಂ., ವಿಮಲಾ ಚಂದ್ರಶೇಖರ್, ಮರವಂತೆ ನಾಗರಾಜ್ ಹೆಬ್ಬಾರ್, ಲಕ್ಷ್ಮಿ ಹರಿಶ್ಚಂದ್ರ, ವಿಶ್ವೇಶ್ವರ ಅಡಿಗ, ಪಿ.ಎಂ.ವೇಣು ಗೋಪಾಲ್ ಹೆಬ್ಬಾರ್, ವಿದ್ಯಾಲತಾ ಯು.ಶೆಟ್ಟಿಗೆ ಕಸಾಪ ಉಡುಪಿ ತಾಲೂಕು ಗೌರವ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು.

ಗಮನ ಸೆಳೆದ ಅಚ್ಚುಕಟ್ಟಾದ ವ್ಯವಸ್ಥೆ

ಉಡುಪಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ ನಡೆದ 16ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿನ ಅಚ್ಚುಕಟ್ಟಿನ ವ್ಯವಸ್ಥೆ ಸಾಹಿತಿಗರನ್ನು ಹಾಗೂ ಪ್ರೇಕ್ಷಕರಿಗೆ ಖುಷಿಯನ್ನು ನೀಡಿದೆ. ಊಟ ಹಾಗೂ ತಿಂಡಿಯ ವ್ಯವಸ್ಥೆಗೂ ಮೆಚ್ಚುಗೆ ವ್ಯಕ್ತವಾಗಿದೆ.

ಕೃಷಿ, ಪಶು ವಿಜ್ಞಾನ ಪ್ರಾಯೋಗಿಕ ಪರೀಕ್ಷೆ ಅವಧಿ ವಿಸ್ತರಣೆ

ಉಡುಪಿ: ರೈತರ ಮಕ್ಕಳಿಗಾಗಿ ಮೀಸಲಿರುವ ಕೃಷಿ ವಿಜ್ಞಾನ ಹಾಗೂ ಪಶು ವೈದ್ಯಕೀಯ ವಿಜ್ಞಾನ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆಗಾಗಿ ಪ್ರಾಯೋಗಿಕ ಪರೀಕ್ಷೆಯು ಮೇ 10 ರಂದು ಬೆಳಿಗ್ಗೆ 9ಕ್ಕೆ ಕೃಷಿ ಮಹಾವಿದ್ಯಾಲಯ, ಶಿವಮೊಗ್ಗ ಮತ್ತು ತೋಟಗಾರಿಕೆ ಮಹಾವಿದ್ಯಾಲಯ, ಹಿರಿಯೂರು ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿದ್ದು ಅರ್ಹ ಅಭ್ಯರ್ಥಿಗಳು ಪರೀಕ್ಷಾ ಪ್ರಾಧಿಕಾರದ ಅಧಿಕೃತ ವೆಬ್ ಸೈಟ್‌ನಲ್ಲಿ ಹಾಲ್ ಟಿಕೆಟ್ ಪಡೆದು ಪರೀಕ್ಷೆಗೆ ಹಾಜರಾಗಬಹುದು.

ಕೃಷಿಕರ ಕೋಟಾದಲ್ಲಿ ಈಗಾಗಲೇ ಸಿ.ಇ.ಟಿ ಅರ್ಜಿ ಸಲ್ಲಿಸಿ, ಅನರ್ಹರಾಗಿರುವ ಅಭ್ಯರ್ಥಿಗಳು ಸೂಕ್ತ ದಾಖಲೆಗಳನ್ನು ಸಲ್ಲಿಸಲು ಮತ್ತು ಹೊಸದಾಗಿ ಅರ್ಜಿ ಸಲ್ಲಿಸಲು ಬಯಸುವ ಅಭ್ಯರ್ಥಿಗಳಿಗೆ ಕೊನೆಯ ದಿನಾಂಕವನ್ನು ಮೇ 04 ರವರೆಗೆ ವಿಸ್ತರಿಸಲಾಗಿದೆ.

ಪ್ರಾಯೋಗಿಕ ಪರೀಕ್ಷಾ ಫಲಿತಾಂಶವನ್ನು ಮೇ 14 ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ www.uasbangalore.edu.in , www.uasd.edu.in/www.uasd.edu, www.uhsbagalkot.edu.in/uhsbagalkot.karnataka.gov.in, www.uahs.edu.in, www.uasraichur.edu.in/raichur.karnataka.gov.in, www.kvafsu.edu.in , http//kea.kar.nic.in, http//pgadmission.kar.nic.in/ugcet/UG_Home.aspx, www.kvafsu.edu.inಗೆ ಭೇಟಿ ನೀಡಬಹುದು ಎಂದು ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಮಾರೂರಿನ ಶ್ರೀ ಗೋಪಾಲಕೃಷ್ಣ ಕೊಡಮಣಿತ್ತಾಯ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವದ ಶುಭ ಸಂದರ್ಭದಲ್ಲಿ ನೂತನವಾಗಿ ನಿರ್ಮಾಣವಾಗಿ ಶ್ರೀ ದೇವಳದ ಸ್ವಾಗತ ಗೋಪುರವನ್ನು ಮುಲ್ಕಿ-ಮೂಡುಬಿದಿರೆ ಕ್ಷೇತ್ರದ ಶಾಸಕ ಉಮಾನಾಥ್ ಕೋಟ್ಯಾನ್ ಉದ್ಘಾಟಿಸಿ, ಶುಭಹಾರೈಸಿದರು.

ಕೊಂಬಾಡಿ ಅಂಚೆ ಕಚೇರಿಯ ಸಿಬ್ಬಂದಿ ಮಾಧವ ಆಚಾರ್ಯರಿಗೆ ಬೀಳ್ಕೊಡುಗೆ



ಮಂಗಳೂರು: ಅಂಚೆ ಇಲಾಖೆಯಲ್ಲಿ ಸುದೀರ್ಘ 41 ವರ್ಷಗಳ ಕಾಲ ಅತ್ಯಂತ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿದ ಕೊಂಬಾಡಿ ಅಂಚೆ ಕಚೇರಿಯ ಎಂಟಿಎಸ್ ಸಿಬ್ಬಂದಿ ಮಾಧವ ಆಚಾರ್ಯ ಅವರು ಏ.30ರಂದು ವೃತ್ತಿ ಜೀವನದಿಂದ ನಿವೃತ್ತರಾದರು.

ಈ ನಿಮಿತ್ತ ಅವರ ಗೌರವಾರ್ಥವಾಗಿ ಎಯ್ಯಾಡಿಯ ಡಿಎಸ್‌ಐಎ ಆಡಿಟೋರಿಯಂ ಸಭಾಂಗಣದಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಂಗಳೂರು ಪಶ್ಚಿಮ ವಿಭಾಗದ ಅಂಚೆ ಅಧೀಕ್ಷಕ ಕೃಷ್ಣ ರಾಜ ವಿಠ್ಠಲ ಭಟ್ಟ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ನಿವೃತ್ತರನ್ನು ಸನ್ಮಾನಿಸಿ ಅವರ ಸುದೀರ್ಘ ಸೇವೆಯನ್ನು ಶ್ಲಾಘಿಸಿದರು. ಅಂಚೆ ಪಾಲಕಿ ಲೋನಾ, ನಿವೃತ್ತ ಅಂಚೆ ಪಾಲಕಿ ವಿಜಯಲಕ್ಷ್ಮಿ, ಹಂಪನಕಟ್ಟೆ ಅಂಚೆ ಪಾಲಕ ಸೂರ್ಯ ನಾರಾಯಣ ರಾವ್, ವಿದ್ಯಾ ಕಿಶೋರ್ ಬಾಗಲೋಡಿ ಸೇರಿದಂತೆ ಇಲಾಖೆಯ ಸಹೋದ್ಯೋಗಿಗಳು, ಊರಿನ ಗಣ್ಯರು ಹಾಗೂ ಹಿತೈಷಿಗಳು ಭಾಗವಹಿಸಿ ಮಾಧವ ಆಚಾರ್ಯ ಅವರಿಗೆ ಸುಖಕರ ನಿವೃತ್ತ ಜೀವನದ ಹಾರೈಕೆಗಳನ್ನು ಸಲ್ಲಿಸಿದರು.

■ ಅಂಚೆ ಇಲಾಖೆಯಲ್ಲಿ ಸುದೀರ್ಘ 41 ವರ್ಷಗಳ ಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆ

ಕುಲ್ಲೇಟಿರ ತಂಡದ ಮುಡಿಗೆ ಕೊಡವ ಕೌಟುಂಬಿಕ ಹಾಕಿ ಟ್ರೋಫಿಯ ಗರಿ



ನಾಪೋಕ್ಲು: ಪ್ರತಿಷ್ಠಿತ ಕೊಡವ ಕೌಟುಂಬಿಕ ಹಾಕಿ ಉತ್ಸವ ಚೇನಂಡ ಕಪ್-2026ರ ಚಾಂಪಿಯನ್ ತಂಡವಾಗಿ ಕುಲ್ಲೇಟಿರ ತಂಡ ಹೊರ ಹೊಮ್ಮಿದೆ.

ಕೊಡವ ಹಾಕಿ ಚಾಂಪಿಯನ್ಶಿಪ್ ಬಳಿಕ ಚೊಚ್ಚಲ ಕೊಡವ ಹಾಕಿ ನಮ್ಮೆ ಕಪ್ ಗೆಲ್ಲುವ ತವಕದಲ್ಲಿದ್ದ ಚೆಪ್ಪುಡಿರ ತಂಡ ರನ್ನರ್ ಅಪ್‌ಗೆ ತೃಪ್ತಿ ಪಟ್ಟುಕೊಂಡಿತು. ಸ್ಥಳೀಯ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಚೇನಂಡ ಹಾಕಿ ನಮ್ಮೆಯ ಫೈನಲ್ ಪಂದ್ಯದಲ್ಲಿ ಚೆಪ್ಪುಡಿರ ತಂಡವನ್ನು 3–1 ಗೋಲುಗಳಿಂದ ಮಣಿಸುವ ಮೂಲಕ ಕುಲ್ಲೇಟಿರ ತಂಡ 4ನೇ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿತು.

ಮೂರನೇ ಕ್ವಾರ್ಟರ್‌ನಲ್ಲಿ ಚೆಪ್ಪುಡಿರ ತಂಡ ತನ್ನ ಮೊದಲ ಗೋಲು ದಾಖಲಿಸಿತು. ಇದಾದ ಬಳಿಕ ಪೆನಾಲ್ಟಿ ಕಾರ್ನರ್ ಅವಕಾಶಗಳು ಸಿಕ್ಕರೂ ಕುಲ್ಲೇಟಿರ ತಂಡದಿಂದ ಗೋಲು ದಾಖಲಾಗಿರಲಿಲ್ಲ. ಆ ಹಂತದಲ್ಲಿ ಚೆಪ್ಪುಡಿರ ತಂಡ ಆಕ್ರಮಣಕಾರಿ ಆಟಕ್ಕೆ ಮುಂದಾಗಿತ್ತು. ಚೆಪ್ಪುಡಿರ ತಂಡ ಪ್ರಬಲ ಪೈಪೋಟಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ . ಇದರಿಂದ ಕುಲ್ಲೇಟಿರ ತಂಡ 4ನೇ ಬಾರಿಗೆ ಕೊಡವ ಕೌಟುಂಬಿಕ ಹಾಕಿ ಉತ್ಸವದ ಚಾಂಪಿಯನ್ ಎನಿಸಿಕೊಂಡಿತು. ಇತ್ತೀಚೆಗೆ ಮೂರ್ನಾಡುವಿನಲ್ಲಿ ನಡೆದ ಲೆವಿಸ್ಟಾ ಕೊಡವ ಹಾಕಿ ಚಾಂಪಿಯನ್ಸ್ ಟ್ರೋಫಿ ಫೈನಲ್‌ನಲ್ಲಿ ಇದೇ ಕುಲ್ಲೇಟಿರ ತಂಡದ ವಿರುದ್ಧ ಗೆಲುವು ಸಾಧಿಸಿದ್ದ ಚೆಪ್ಪುಡಿರ ತಂಡ ಚೇನಂಡ ಕಪ್ ಗೆಲ್ಲುವಲ್ಲಿ ವಿಫಲವಾಗಿ ರನ್ನರ್ ಅಪ್ ಸಮಾಧಾನಪಟ್ಟುಕೊಂಡಿತು. ಮಹಿಳಾ ಹಾಕಿ ಪಂದ್ಯಾವಳಿಯಲ್ಲಿ ಕಂಬೀರಂಡ ಮತ್ತು ಕೇಚೆಟ್ಟಿರ ತಂಡಗಳ ನಡುವೆ ನಡೆದ ಪಂದ್ಯದಲ್ಲಿ 1–2 ಗೋಲು ಗಳಿಸಿ ಕೇಚೆಟ್ಟಿರ ತಂಡ ಗೆಲುವು ಸಾಧಿಸಿತು.

ಮಾನಸಿಕ ದೈಹಿಕ ಕ್ಷಮತೆಗೆ ಪವರ್ ಲಿಫ್ಟಿಂಗ್ ಕ್ರೀಡೆ ಸಹಕಾರಿ: ಪುರಂದರ



ಕಿನ್ನಿಗೋಳಿ: ಮಾನಸಿಕ ದೈಹಿಕ ಕ್ಷಮತೆಗೆ ಪವರ್ ಲಿಫ್ಟಿಂಗ್ ನಂತಹ ಕ್ರೀಡೆಯಲ್ಲಿ ತೊಡಗಿಸಿ ಕ್ರೀಡಾ ಮನೋಭಾವ ಬೆಳಸುವುದರ ಮೂಲಕವಾಗಿ ಆರೋಗ್ಯ ಕಾಪಾಡಿ ಎಂದು ಮೂಲ್ಕಿ ಮಾನಂಪಾಡಿ ಶ್ರೀ ವೀರಭದ್ರ ಮಹಾಮ್ಮಾಯಿ ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷ ಪುರಂದರ ಶೆಟ್ಟಿಗಾರ್ ಹೇಳಿದರು.

ಅವರು ಕಿನ್ನಿಗೋಳಿ ನೇಕಾರ ಸೌಧದಲ್ಲಿ ಕರ್ನಾಟಕಪವರ್‌ಲಿಫ್ಟಿಂಗ್ ಅಸೋಸಿಯೇಶನ್ ಮಂಗಳೂರು ಇದರ ಆಶ್ರಯದಲ್ಲಿ ಕಿನ್ನಿಗೋಳಿ ಆಸ್ಪ ಫಿಟ್‌ನೆಸ್ ಇವರ ಸಹಭಾಗಿತ್ವದಲ್ಲಿ ರಾಜ್ಯ ಮಟ್ಟದ ಜೂನಿಯರ್ ಮತ್ತು ಸೀನಿಯರ್ (ಪುರುಷ ಮತ್ತು ಮಹಿಳೆ) ಪವರ್ ಲಿಫ್ಟಿಂಗ್ ಸ್ಪರ್ಧೆಯ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು.

ಯುಗಪುರುಷದ ಭುವನಾಭಿರಾಮ ಉಡುಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಮೆಸ್ಕಾಂ ನಿಯಂತ್ರಣಾಧಿಕಾರಿ ಉಮೇಶ್ ಗಟ್ಟಿ, ಕರ್ನಾಟಕ ಪವರ್ ಲಿಫ್ಟಿಂಗ್ ಸಂಸ್ಥೆಯ ಕೋಶಾಧಿಕಾರಿ ಎಂ. ಜಯರಾಮ್‌ಶೆಟ್ಟಿಗಾರ್, ಅಂತಾರಾಷ್ಟ್ರೀಯ ತೀರ್ಪುಗಾರ ಎಚ್ ದಾದಪೀರ್, ನೇಕಾರ ಸೌಧದ ಮುಖ್ಯಸ್ಥ ಮಾಧವ ಶೆಟ್ಟಿಗಾರ್, ಆಸ್ಪ ಫಿಟ್‌ನೆಸ್ ಸಂಸ್ಥೆಯ ಆಶ್ರಿತ್, ಸುಸ್ರಮ್, ಮತ್ತಿತರಿದ್ದರು. ಆಶ್ರೀಶ್ ಸ್ವಾಗತಿಸಿ, ಎಂ. ಜಯರಾಮ್ ಪ್ರಸ್ತಾವನೆಗೈದರು. ಸಾಕ್ಷಿ ಕಾರ್ಯಕ್ರಮ ನಿರೂಪಿಸಿದರು.

ಚತುಷ್ಪಥಗೊಳ್ಳುತ್ತಿರುವ ಮಂಗಳೂರು- ಸಾಣೂರು ನಡುವಿನ ರಾಷ್ಟ್ರೀಯ ಹೆದ್ದಾರಿ 169ರ ಕಾಮಗಾರಿ ಅಪೂರ್ಣ | ಪೂರ್ಣಗೊಳ್ಳದ ಚರಂಡಿ

ಗುರುಪುರ-ಕೈಕಂಬ, ಎಡಪದವಿನಲ್ಲಿ ಮಳೆಗಾಲದಲ್ಲಿ ಎದುರಾಗಿದೆ ಕೃತಕ ನೆರೆಯ ಭೀತಿ!

ಕೈಕಂಬ: ಚತುಷ್ಪಥಗೊಳ್ಳುತ್ತಿರುವ ಮಂಗಳೂರು–ಸಾಣೂರು ನಡುವಿನ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ ಕೈಕಂಬದಲ್ಲಿ ನಡೆಯುತ್ತಿರುವ ಅವ್ಯವಸ್ಥಿತ ಕಾಮಗಾರಿಯಿಂದ ಮಳೆಗಾಲದಲ್ಲಿ ಕೃತಕ ನೆರೆಯ ಭೀತಿ ಎದುರಾಗಿದ್ದು ಪೇಟೆ ಸಮಸ್ಯೆಗೆ ಸಿಲುಕುವ ಸಾಧ್ಯತೆ ಕಂಡುಬರುತ್ತಿದೆ.

ಪೇಟೆಯಲ್ಲಿ ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದ್ದರಿಂದ ತಕ್ಷಣಕ್ಕೆ ಮಳೆಯಾದರೆ ನೀರು ಹರಿದು ಹೋಗಲು ಸಾಧ್ಯವಾಗದೆ ಭಾರೀ ಪ್ರಮಾಣದ ನೀರು ಸೇರಿ ಕೃತಕ ನೆರೆಯಿಂದ ನಾಗರಿಕರು ನಾನಾ ರೀತಿಯ ಕಷ್ಟ ಅನುಭವಿಸಬೇಕಾಗುತ್ತದೆ ಎಂಬ ಆತಂಕ ಹೆಚ್ಚಿದೆ.

ಕೈಕಂಬದಲ್ಲಿ ರಸ್ತೆಯ ಎರಡೂ ಪಾರ್ಶ್ವದಲ್ಲಿ ನಿರ್ಮಾಣಗೊಂಡಿರುವ ಸರ್ವಿಸ್ ರಸ್ತೆಯ ಮಧ್ಯೆ ಕಿರು ಫ್ಲೈಓವರ್ ಸಹಿತ ಓವರ್ ಪಾಸ್ ಕಾಮಗಾರಿ





ನಡೆಯುತ್ತಿದ್ದು ಮಳೆ ನೀರು ಸರಾಗವಾಗಿ ಹರಿದು ಹೋಗಲು ಎರಡೂ ಕಡೆಯಲ್ಲಿ ಚರಂಡಿ ಅಗತ್ಯವಿದೆ. ಆದರೆ ಈಗ ಒಂದು ಬದಿಯಲ್ಲಿ ಮಾತ್ರ ಚರಂಡಿ ನಿರ್ಮಿಸಲಾಗುತ್ತಿದೆ. ಇದರಿಂದ ಎತ್ತರದ ಪ್ರದೇಶದ ಚರಂಡಿಯಿಂದ ತಗ್ಗು ಪ್ರದೇಶವಾಗಿರುವ ಮತ್ತೊಂದು ಕಡೆಗೆ ನೀರು ಹರಿದು ಬರಲಿದೆ. ಏಕಾಏಕಿಯಾಗಿ ಜೋರಾಗಿ ಮಳೆ ಸುರಿದರೆ ಇಲ್ಲಿ ಕೃತಕ ನೆರೆ ಸೃಷ್ಟಿಯಾಗುವುದು ಖಚಿತ.

ಕೈಕಂಬ ಜಂಕ್ಷನ್‌ನಲ್ಲಿ ರಾಶಿ ಹಾಕಲಾದ ಮಣ್ಣು ತೆರವು ಗೊಳಿಸಬೇಕು. ಅನಗತ್ಯ ಗುಂಡಿಗಳನ್ನು ಮುಚ್ಚಬೇಕು. ಜೊತೆಗೆ ಮಳೆ ನೀರು ಸರಾಗವಾಗಿ ಹರಿಯಲು ಸೂಕ್ತ ಚರಂಡಿ ವ್ಯವಸ್ಥೆಯಾಗಬೇಕು. ಇಲ್ಲವಾದಲ್ಲಿ ವಾಹನ ಸವಾರರು ಮತ್ತು ನಾಗರಿಕರಿಗೆ ಕಿರಿಕಿರಿ ಉಂಟಾಗಲಿದೆ. ಇಲ್ಲಿ ಹೆದ್ದಾರಿಯ ಎರಡೂ ಕಡೆ ಸೂಕ್ತ ಚರಂಡಿ ನಿರ್ಮಿಸದಿದ್ದಲ್ಲಿ ಮಳೆಗಾಲದಲ್ಲಿ ಅಂಗಡಿಗಳಿಗೆ ಕೆಸರು ನೀರು ನುಗ್ಗಲಿದೆ. ಕಳೆದ ವರ್ಷ ಸುರಿದ ಮೊದಲ ಮಳೆಗೆ ಕೆಲವು ಬಾರಿ ಇಲ್ಲಿ ನೀರು ತುಂಬಿ, ಅಂಗಡಿ ಮಾಲಕರು ತೊಂದರೆ ಅನುಭವಿಸಿದ್ದರು. ಈ ಬಾರಿ ಇನ್ನೊಂದು ವಾರದಲ್ಲಿ ಮಳೆಯಾದಲ್ಲಿ ಇಲ್ಲಿ ಕಳೆದ ವರ್ಷಕ್ಕಿಂತ ಹೆಚ್ಚಿನ ಸಂಕಷ್ಟ ಎದುರಾಗಲಿದೆ ಎಂದು ಸ್ಥಳೀಯ ಅಂಗಡಿ ಮಾಲಕರು ಭೀತಿ ವ್ಯಕ್ತಪಡಿಸಿದ್ದಾರೆ.

ಹೆದ್ದಾರಿ ವಿಸ್ತರಣೆ ಕಾಮಗಾರಿ ವೇಗದಿಂದ ನಡೆಯುತ್ತಿದ್ದು ಭಾರೀ ಪ್ರಮಾಣದ ಮಣ್ಣು ಅಗೆಯಲಾಗಿದ್ದು, ಹಾಗಾಗಿ ಇಳಿಜಾರು ಪ್ರದೇಶದಲ್ಲಿ ಮಣ್ಣು ಕುಸಿತ ತಪ್ಪಿಸಲು ಚರಂಡಿ, ಉಕ್ಕಿನ ನೆಟ್ ಅಥವಾ ಕಲ್ಲುಹಾಸು ವ್ಯವಸ್ಥೆ ಅನಿವಾರ್ಯ. ಎಡಪದವು ಕಾಲೇಜು ಬಳಿ ಮಳೆಗಾಲದಲ್ಲಿ ಭಾರೀ ಸಮಸ್ಯೆ ಸೃಷ್ಟಿಯಾಗಲಿದೆ. ಇಲ್ಲಿ ಮಳೆ ನೀರಿನ ಹರಿವಿಗೆ ವ್ಯವಸ್ಥೆ ಇಲ್ಲದೆ ಕೃತಕ ನೆರೆ ಉಂಟಾಗಲಿದೆ. ಬಸ್ಸುಗಳ ಸಂಚಾರವಿಲ್ಲದೇ ಎಡಪದವಿನ ನಾಗರಿಕರು ಪರದಾಡುತ್ತಿದ್ದು, ಮುಚ್ಚೂರು ಕ್ರಾಸ್ ಬಳಿ ಎಡಪದವು ಪೇಟೆಗೆ ಸಾಗುವ ಹಳೆಯ ಹೆದ್ದಾರಿ ಅಗೆದು ಹಾಕಿದ್ದು ಇಲ್ಲಿ ಮಳೆಗಾಲದಲ್ಲಿ ಭೂ-ಕುಸಿತ ಕಟ್ಟಿಟ್ಟ ಬುತ್ತಿ.

ಭೂಕುಸಿತದ ಆತಂಕ

ಹೆದ್ದಾರಿ ವಿಸ್ತರಣೆ ಕಾಮಗಾರಿ ವೇಗದಿಂದ ನಡೆಯುತ್ತಿದ್ದು ಕೈಕಂಬ, ಗಂಜಿಮಠ, ಎಡಪದವು ಹಾಗೂ ನೂಯಿ ಭಾಗದಲ್ಲಿ ಭಾರೀ ಪ್ರಮಾಣದ ಮಣ್ಣು ಅಗೆಯಲಾಗಿದ್ದು ಇದೀಗ ಹತ್ತಿರದ ಪ್ರದೇಶಗಳಲ್ಲಿ ಭೂಕುಸಿತದ ಸಾಧ್ಯತೆಯೂ ಹೆಚ್ಚಾಗಿದೆ.

ಸುತ್ತಮುತ್ತ

ನಿಡ್ವಾಳ ಶ್ರೀ ಕ್ಷೇತ್ರಕ್ಕೆ ಸಂಸದ ಕ್ಯಾಪ್ಟನ್ ಬ್ರಿಜೇಶ್ ಚೌಟ ಭೇಟಿ

ಸುಬ್ರಹ್ಮಣ್ಯ: ನಿಡ್ವಾಳ ಶ್ರೀ ಮಹಾವಿಷ್ಣು ದೇವಳಕ್ಕೆ ಶನಿವಾರ ಸಂಸದ ಕ್ಯಾ. ಬ್ರಿಜೇಶ್ ಚೌಟ ಭೇಟಿ ನೀಡಿ ಶ್ರೀ ದೇವರ ಪ್ರಸಾದ ಸ್ವೀಕರಿಸಿದರು. ಬಳಿಕ ಅವರನ್ನು ದೇವಳದ ವತಿಯಿಂದ ಗೌರವಿಸಲಾಯಿತು.

ಈ ಸಂದರ್ಭ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನೇಮಿರಾಜ ಪಲ್ಲೋಡಿ, ಆಡಳಿತ ಟ್ರಸ್ಟ್ ಅಧ್ಯಕ್ಷ ಮತ್ತು ಚಂದ್ರಪ್ರಕಾಶ್ ಕಂಬಳ, ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಕುಸುಮಾಧರ ಕರಿಮಜಲು, ಕಾರ್ಯದರ್ಶಿ ಅಶೋಕ್ ಮೇಲ್ಪಾಡಿ, ಪ್ರಧಾನ ಸಂಚಾಲಕ ರಾಮಕೃಷ್ಣ ಪುರಿಯಮನೆ, ದೇವಳದ ಆಡಳಿತ ಟ್ರಸ್ಟ್ ಕಾರ್ಯದರ್ಶಿ ಗುರುಪ್ರಸಾದ್ ತೋಟ, ಕೋಶಾಧಿಕಾರಿ ಕುಶಾಲಪ್ಪ ಗೌಡ ದೊಡ್ಡಮನೆ, ದೇವಳದ ಪ್ರಧಾನ ಅರ್ಚಕ ಅಕ್ಷಯ್ ಭಟ್ ಬಲ್ಯಾಯಬೆಟ್ಟು, ಪ್ರಮುಖರಾದ ವೆಂಕಟ್ ವಳಲಂಬೆ, ಅನೂಪ್ ಬಿಳಿಮಲೆ, ಶಿವರಾಮಯ್ಯ ಕರ್ಮಾಜೆ, ಜಗದೀಶ್ ಪುರಿಯಮನೆ, ಲೋಕೇಶ್ ಬರೆಮೇಲು, ದಯಾನಂದ ಮೇಲ್ಮನೆ, ಜಯರಾಮ್ ಕೋಟಿಯಡ್ಕ ಮತ್ತಿತರರು ಉಪಸ್ಥಿತರಿದ್ದರು.

ಕುಂದಾಪುರ ಇಂಜಿನಿಯರಿಂಗ್ ಕಾಲೇಜ್: ಸಾಂಸ್ಕೃತಿಕ ಹಬ್ಬ

ಕುಂದಾಪುರ: ಕುಂದಾಪುರದ ಮೂಡ್ಲಕಟ್ಟೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಆಯೋಜಿಸಿರುವ ರಾಷ್ಟ್ರಮಟ್ಟದ ಅಂತರ ಕಾಲೇಜು ಸಾಂಸ್ಕೃತಿಕ ಹಬ್ಬ 'ಸಾವಿಷ್ಕಾರ್' ಕಾರ್ಯಕ್ರಮದ ಮೊದಲ ದಿನದ ಪ್ರಮುಖ ಆಕರ್ಷಣೆಯಾಗಿ ಖ್ಯಾತ 'ಮೈಸೂರು ಎಕ್ಸ್‌ಪ್ರೆಸ್' ಬ್ಯಾಂಡ್ ತಂಡದಿಂದ ಭರ್ಜರಿ ಸಂಗೀತ ಕಚೇರಿ ನಡೆಯಿತು. ಕಾಲೇಜು ಆವರಣವು ಸಂಗೀತ ಪ್ರೇಮಿಗಳಿಂದ ತುಂಬಿ ತುಳುಕುತ್ತಿತ್ತು. ಮೈಸೂರು ಎಕ್ಸ್‌ಪ್ರೆಸ್ ತಂಡದ ವಿಶಿಷ್ಟ ಶೈಲಿಯ ಗಾಯನ ಮತ್ತು ಪ್ರದರ್ಶನಕ್ಕೆ ಯುವಜನತೆ ಮನಸೋತರು. ತಾಂತ್ರಿಕ ಮತ್ತು ಕ್ರೀಡಾ ಸ್ಪರ್ಧೆಗಳ ನಡುವೆ ನಡೆದ ಈ ಸಂಗೀತ ಕಾರ್ಯಕ್ರಮವು ಹಬ್ಬಕ್ಕೆ ಹೊಸ ಕಳೆ ತಂದಿತು. ಸಾವಿಷ್ಕಾರ್ ಹಬ್ಬದ ಮೊದಲ ದಿನವೇ ಇಂತಹ ಅದ್ಭುತ ಪ್ರದರ್ಶನ ನೀಡುವ ಮೂಲಕ ಮೈಸೂರು ಎಕ್ಸ್‌ಪ್ರೆಸ್ ತಂಡವು ನೆರೆದಿದ್ದವರ ಮನಗೆಲ್ಲುವಲ್ಲಿ ಯಶಸ್ವಿಯಾಯಿತು.

ಪ್ರತ್ಯೇಕ ಲೋಕಸಭೆ, ವಿಧಾನಸಭಾ ಕ್ಷೇತ್ರ: ಸಿಎನ್‌ಸಿ ಅಭಿಯಾನ

ಮಡಿಕೇರಿ: ಪ್ರಾಚೀನ ಕೊಡವ ಸಾಂಪ್ರದಾಯಿಕ ಆವಾಸಸ್ಥಾನದ ಪ್ರಾದೇಶಿಕ ಮಿತಿಯೊಳಗೆ ಪ್ರತ್ಯೇಕ ಕೊಡವ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಕ್ಷೇತ್ರಗಳ ಸ್ಥಾಪನೆ, ಅಥವಾ ಪರ್ಯಾಯವಾಗಿ ಸಿಕ್ಕಿಂನ ಬೌದ್ಧ ಸನ್ಯಾಸಿ ಸಮುದಾಯದ 'ಸಂಘ' ಚುನಾವಣಾ ಕ್ಷೇತ್ರದ ಮಾದರಿಯಲ್ಲಿ ಆದಿಮಸಂಜಾತ ಏಕ-ಜನಾಂಗೀಯ ಪ್ರಕೃತಿ ಆರಾಧಕ ಕೊಡವರಿಗಾಗಿ ಪ್ರತ್ಯೇಕ ಅಮೂರ್ತ ಕೊಡವ ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಕ್ಷೇತ್ರಗಳನ್ನು ರಚಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಕುರಿತು ಸರಕಾರದ ಗಮನ ಸೆಳೆಯಲು ಕಾವೇರಿ ನದಿಯ ಉಗಮಸ್ಥಾನ ತಲಕಾವೇರಿಯಿಂದ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಭಿಯಾನವನ್ನು ಆರಂಭಿಸಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ತಲಕಾವೇರಿಯಲ್ಲಿ ಧಾರ್ಮಿಕ ಪ್ರಾರ್ಥನೆ ಸಲ್ಲಿಸಿ, ಸದಸ್ಯರು ಮಾನವ ಸರಪಳಿ ಮೂಲಕ ಪ್ರತಿಜ್ಞಾ ವಿಧಿ ಸ್ವೀಕರಿಸಿದರು. ಸಿಎನ್‌ಸಿ ಬೇಡಿಕೆಗಳ ಕುರಿತು ಆಡಳಿತ ವ್ಯವಸ್ಥೆಯ ಗಮನ ಸೆಳೆಯಲು ಮೇ 12 ರಿಂದ 48 ಗಂಟೆಗಳ ಹಗಲು-ರಾತ್ರಿ ಶಾಂತಿಯುತ ಸತ್ಯಾಗ್ರಹ ನಡೆಸಲಾಗುವುದು ಎಂದು ನಾಚಪ್ಪ ತಿಳಿಸಿದರು.

ಬೊಟ್ಟಂಗಡ ಸವಿತಾ ಗಿರೀಶ್, ಅಪ್ಪಾರಂಡ ನಂದಿನಿ ನಂಜಪ್ಪ, ಅರೆಯಡ ಸವಿತಾ ತಿಮ್ಮಯ್ಯ, ಅಪ್ಪಾರಂಡ ನೀರು ಸೋಮಕ್ಕ, ಕಲಿಯಂಡ ಪ್ರಕಾಶ್, ಅಳ್ಮಂಡ ಜೈ ಗಣಪತಿ, ಪಟ್ಟಮಾಡ ಕುಶ, ನಂದೇಟಿರ ರವಿ ಸುಬ್ಬಯ್ಯ, ಬೊಟ್ಟಂಗಡ ಗಿರೀಶ್ ಪೆಮ್ಮಯ್ಯ, ಮಂದಪಂಡ ಮನೋಜ್ ಮಂದಣ್ಣ, ಅರೆಯಡ ಗಿರೀಶ್ ತಿಮ್ಮಯ್ಯ, ಚಂಬಂಡ ಜನತ್, ಕಿರಿಯಮಾಡ ಶೆರಿನ್, ಅಪ್ಪಾರಂಡ ಶ್ರೀನಿವಾಸ್, ಪುಟ್ಟೀಚಂಡ ಡಾನ್ ದೇವಯ್ಯ, ಚೋಳಪಂಡ ನಾಣಯ್ಯ, ಮಣವಟ್ಟಿರ ಚಿಣ್ಣಪ್ಪ, ಮಣವಟ್ಟಿರ ಜಗದೀಶ್, ಪುದಿಯೋಕ್ಕಡ ಕಾಶಿ ಕರುಂಬಯ್ಯ, ಪಟ್ಟಮಾಡ ಅಶೋಕ್, ಮೇದುರ ಕಂಠಿ ನಾಣೆಯಪ್ಪ, ಮಂಗೇರಿರ ಜಗದೀಶ್, ಕಲ್ಮಾಡಂಡ ಮೋಹನ್, ಕಲ್ಮಾಡಂಡ ವಾಸು ಉತ್ತಯ್ಯ, ಅಪ್ಪಾರಂಡ ತಿಮ್ಮಯ್ಯ, ಅರೆಯಡ ಸಾವನ್, ಕೊಟ್ಟುಕತ್ತಿರ ಬಾಬಿ ಪಳಂಗಪ್ಪ, ಕೊಟ್ಟುಕತ್ತಿರ ಗೌತಮ್ ಪೊನ್ನಣ್ಣ, ಸಾದೇರ ರಮೇಶ್, ಚೊಕ್ಕಂಡ ಕಟ್ಟಿ ಅವರೇಮಾದಂಡ ಚೆಂಗಪ್ಪ ಹಾಗೂ ಅಚ್ಚಕಾಳೇರ ನವೀನ್ ಮೊಣ್ಣಪ್ಪ ಪಾಲ್ಗೊಂಡಿದ್ದರು.

ಹಾಕಿ ತರಬೇತಿ ಬೇಸಿಗೆ ಶಿಬಿರದ ಸಮಾರೋಪ | ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಅಭಿಪ್ರಾಯ

ಯಶಸ್ವಿ ಶಿಬಿರ ಸಂಘಟಿಸಲು ಎಲ್ಲರ ಸಹಕಾರ, ಬದ್ಧತೆ ಮುಖ್ಯ

ನಾಪೋಕ್ಲು: ಯಶಸ್ವಿ ಶಿಬಿರವನ್ನು ಸಂಘಟಿಸಲು ಎಲ್ಲರ ಸಹಕಾರ ಮತ್ತು ಶಿಸ್ತು ಹಾಗೂ ಬದ್ಧತೆ ಮುಖ್ಯ ಎಂದು ಕೊಡವ ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಬೋಪಣ್ಣ ಹೇಳಿದರು.

ಸ್ಥಳೀಯ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕ್ರೀಡಾ ಅಕಾಡೆಮಿ ವತಿಯಿಂದ ಇಲ್ಲಿಯ ಕೆ.ಪಿ. ಎಸ್. ಶಾಲೆಯ ಆವರಣದಲ್ಲಿ ಆಯೋಜಿಸಲಾಗಿದ್ದ ಹಾಕಿ ತರಬೇತಿ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸತತ 26 ವರ್ಷಗಳ ಕಾಲ ಒಂದು ಶಿಬಿರವನ್ನು ನಡೆಸುವುದು ಸುಲಭದ ಮಾತಲ್ಲ ಎಂದ ಅವರು, ಮೈಸೂರಿನ ಆರ್‌ವಿ ವಿದ್ಯಾಸಂಸ್ಥೆ ಹಾಕಿ ಆಟಗಾರರಿಗೆ ಉಚಿತ ಟ್ಯೂಷನ್ ನೀಡುತ್ತದೆ. ಇವುಗಳ ಸದುಪಯೋಗವನ್ನು ಪಡೆದುಕೊಂಡು ಶಿಬಿರಾರ್ಥಿಗಳು ಕ್ರೀಡೆಗೆ ಆದ್ಯತೆಯನ್ನು ನೀಡಿ ಉನ್ನತ ಸಾಧನೆ ಮಾಡಬೇಕು ಎಂದರು.

ಇಲ್ಲಿಯ ಕೊಡವ ಸಮಾಜದ ಅಧ್ಯಕ್ಷ ಮುಂಡಂಡ



ಸಿ. ನಾಣಯ್ಯ ಮಾತನಾಡಿ, ಶಿಬಿರಾರ್ಥಿಗಳಲ್ಲಿ ಕೆಲವರು ತಂದೆ ತಾಯಿಗಳ ಒತ್ತಡದಿಂದ, ಆಯೋಜಕರ ಪ್ರೇರಣೆಯಿಂದ ಶಿಬಿರದಲ್ಲಿ ಭಾಗವಹಿಸುವುದು ಸರಿಯಲ್ಲ. ಶಿಬಿರದ ಪ್ರಯೋಜನಗಳ ಬಗ್ಗೆ ಅರಿತುಕೊಂಡು ಮುಂದಿನ ಭವಿಷ್ಯದ ಬಗ್ಗೆ ಶಿಬಿರಾರ್ಥಿಗಳು ಯೋಚಿಸಬೇಕು. ಉತ್ತಮ ಗುರಿಯಿಂದ ಉನ್ನತ ಸಾಧನೆ ಮಾಡಲು ಸಾಧ್ಯ ಎಂದ ಅವರು, ಅತಿಯಾಗಿ ಮೊಬೈಲ್ ಗೀಳಿನಿಂದ ಭವಿಷ್ಯಕ್ಕೆ ಮಾರಕ ಎಂದು ಶಿಬಿರಾರ್ಥಿಗಳಿಗೆ ಹಿತವಚನವನ್ನು ಹೇಳಿದರು.

ಈ ಸಂದರ್ಭ ಕ್ರೀಡಾ ಅಕಾಡೆಮಿಗೆ 50 ಸಾವಿರ ರೂ. ದೇಣಿಗೆ ನೀಡಿದರು. ಕೇಟೋಳಿರ ಹರೀಶ್ ಪೂವಯ್ಯ ಮಾತನಾಡಿ, 26 ವರ್ಷ ಸತತ ಶಿಬಿರವನ್ನು ನಡೆಸಿರುವುದು ಶ್ಲಾಘನೀಯ. ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳುವ ಶಿಬಿರಾರ್ಥಿಗಳ ಪೋಷಕರ ಜವಾಬ್ದಾರಿ ಪ್ರಮುಖವಾದದ್ದು. ಪೋಷಕರ ಉತ್ತೇಜನದಿಂದ ಶಿಬಿರ ಯಶಸ್ವಿ ಆಗುತ್ತದೆ. ಶಿಬಿರಾರ್ಥಿಗಳು ಒಂದು ಉತ್ತಮ ಗುರಿ ಇರಿಸಿ ಉನ್ನತ ಸ್ಥಾನಕ್ಕೇರಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕ್ರೀಡಾ ಅಕಾಡೆಮಿ ಅಧ್ಯಕ್ಷ ಕಾಂಡಂಡ ಜೋಯಪ್ಪ ಮಾತನಾಡಿ, ಶಿಬಿರದಲ್ಲಿ ತರಬೇತಿಯನ್ನು ಪಡೆಯುವುದರ ಮೂಲಕ ಉತ್ತಮ ಹಾಕಿ ಆಟಗಾರರಾಗಿ ರೂಪಗೊಂಡ ಹಲವು ಕ್ರೀಡಾಪಟುಗಳಿದ್ದಾರೆ ಎಂದರು.

ಕೊಡವ ಹಾಕಿ ಅಕಾಡೆಮಿ ಉಪಾಧ್ಯಕ್ಷರಾದಂತಹ ಕೂತಂಡ ಪೂಣಚ್ಚ ಮಾತನಾಡಿ, ಗೋಣಿಕೊಪ್ಪಲಿನಲ್ಲಿ ಮಕ್ಕಳಿಗೆ ಹಾಕಿ ತರಬೇತಿ ಶಿಬಿರವನ್ನು ನಡೆಸಿಕೊಂಡು ಬರುತ್ತಿದ್ದೇನೆ. ಮುಂದಿನ ಬಾರಿ ನಾಪೋಕ್ಲುವಿನ ಶಿಬಿರದ ವಿದ್ಯಾರ್ಥಿಗಳನ್ನು ಪೊನ್ನಂಪೇಟೆಯಲ್ಲಿರುವ ಟರ್ಫ್ ಮೈದಾನಕ್ಕೆ ಕರೆದುಕೊಂಡು ಬಂದು ಅಲ್ಲಿ ನಾಲ್ಕು ದಿನದ ತರಬೇತಿ ನೀಡಲು ತಾನು ಎಲ್ಲಾ ರೀತಿಯ ಸಹಕಾರ ಮಾಡುವೆನೆಂದು ಹೇಳಿದರು.

ನಿವೃತ್ತ ಶಿಕ್ಷಕಿ, ಮಹಿಳಾ ಹಿರಿಯ ತರಬೇತಿದಾರೆ ಬೋಪ್ಪಂಡ ಬೊಳ್ಳಮ್ಮ ನಾಣಯ್ಯ, ಕ್ರೀಡಾ ವೀಕ್ಷಕ ವರದಿಗಾರ ಮಾಲೇಟೀರ ಶ್ರೀನಿವಾಸ್ ಮಕ್ಕಳಿಗೆ ಹಿತವಚನ, ಕಿವಿ ಮಾತನ್ನು ಹೇಳಿ ಶುಭ ಹಾರೈಸಿದರು. ಶಿಬಿರಾರ್ಥಿಗಳ ತಾವು ಪಡೆದ ತರಬೇತಿಯ ಬಗ್ಗೆ ಅನುಭವವನ್ನು ಹಂಚಿಕೊಂಡರು. ಶಿಬಿರಾರ್ಥಿ ಪಾಡಿಯಮಂಡ ದುದುಂಬೀ 2026ನೇ ಸಾಲಿನ ವಾರ್ಷಿಕ ವರದಿ ಮಂಡಿಸಿದರು. ವೇದಿಕೆಯಲ್ಲಿ ಹಾಕಿ ಅಕಾಡೆಮಿ ಉಪಾಧ್ಯಕ್ಷ ಕೊಂಡಿರ ಗಣೇಶ್, ಕೊಡುವ ಹಾಕಿ ಅಕಾಡೆಮಿಯ ಕಾರ್ಯದರ್ಶಿ ನಾಯಕಂಡ ದೀಪಕ್ ಚಿಣ್ಣಪ್ಪ, ಶಿವಾಚಾಳೀಯಂಡ ಅಂಬಿ ಕಾರ್ಯಪ್ಪ, ಕುಂಡ್ಯೋಳಂಡ ದಿನೇಶ್ ಕಾರ್ಯಪ್ಪ, ಶಿವಾಚಾಳೀಯಂಡ ಸೀಮಾ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಹಾಕಿ ಅಕಾಡೆಮಿ ಕಾರ್ಯದರ್ಶಿ ಮಾಚೇಟಿರ ಕುಶು ಕುಶಾಲಪ್ಪ, ಮುಖ್ಯ ತರಬೇತಿದಾರರು ಹಾಗೂ ಅಕಾಡೆಮಿಯ ಖಜಾಂಚಿ ಮಾಜಿ ಸೈನಿಕ ಕೇಟೋಳಿರ ಅಚ್ಚಪ್ಪ, ಅರೇಯಡ ಗಣೇಶ, ಬಿದ್ದಾಟಂಡ ಮಮತಾ ಚಿನ್ನಪ್ಪ, ನಿರ್ದೇಶಕ ದುಗ್ಗಳ ಸದಾನಂದ, ಕುಂಚೆಟ್ಟೀರ ಸುದೀ ಉತ್ತಪ್ಪ, ಕುಡ್ಯೋಳಂಡ ಕವಿತಾ, ಪೋಷಕರಾದಂತಹ ಪಾಡಿಯಮಂಡ ಗಾಯತ್ರಿ, ಅರೆಯಡ ರತ್ನ ಪೆಮ್ಮಯ್ಯ, ಚೇರುವಳಂಡ ಜೋಯಪ್ಪ, ಕಲ್ಲೆಂಗಡ ಕಾರ್ಯಪ್ಪ, ಕ್ಯಾಲೇಟೀರ ಡಾ. ಬೋಪಣ್ಣ ಹಾಗೂ ಪೋಷಕರು ಉಪಸ್ಥಿತರಿದ್ದರು.

ಉಪ್ಪಿನಂಗಡಿ ಚಂದ್ರನಾಥ ಸ್ವಾಮಿ ಬಸದಿ ಪುನರ್ ಪ್ರತಿಷ್ಠಾ ಮಹೋತ್ಸವ

ಮತಾಂಧ ಶಕ್ತಿಗಳ ವ್ಯವಸ್ಥಿತ ದುರುಳತೆ ಬಗ್ಗೆ ಎಚ್ಚರವಿರಲಿ

ಉಪ್ಪಿನಂಗಡಿ: ಪ್ರಸಕ್ತ ದೇಶದಲ್ಲಿ ನಡೆಯುತ್ತಿರುವ ಶಿಕ್ಷಣ, ಉದ್ಯೋಗದ ಹೆಸರಿನಲ್ಲಿ ಮತಾಂಧ ಶಕ್ತಿಗಳ ವ್ಯವಸ್ಥಿತ ದುರುಳತನದ ವರ್ತುಲದೊಳಗೆ ಸಿಲುಕುತ್ತಿರುವ ಮಕ್ಕಳನ್ನು ರಕ್ಷಿಸುವಲ್ಲಿ ಹೆತ್ತವರು, ಪೋಷಕರು ಹೆಚ್ಚಿನ ನಿಗಾವಿರಿಸಬೇಕಾಗಿದೆ. ಧರ್ಮ ರಕ್ಷಣೆಯ ಕಾರ್ಯದೊಂದಿಗೆ ಮಕ್ಕಳ ರಕ್ಷಣೆಯ ಕಾರ್ಯವೂ ಆದ್ಯತೆಯಲ್ಲಿ ನಡೆಯಬೇಕಾಗಿದೆ ಎಂದು ಅತಿಶಯ ಕ್ಷೇತ್ರ ಸಿಂಹನಗದ್ದೆ ಬಸ್ತಿ ಮಠ ನರಸಿಂಹರಾಜಪುರದ ಶ್ರೀ ಲಕ್ಷ್ಮೀಸೇನ ಭಟ್ಟಾರಕ ಪಟ್ಟಾಚಾರ್ಯವರ್ಯ ಮಹಾಸ್ವಾಮೀಜಿ ಕರೆ ನೀಡಿದರು.

ಅವರು ಮೇ 2ರ ಶನಿವಾರದಂದು ಉಪ್ಪಿನಂಗಡಿ ಶ್ರೀ ಚಂದ್ರನಾಥ ಸ್ವಾಮಿ ಬಸದಿಯಲ್ಲಿ ಶ್ರೀ ಚಂದ್ರನಾಥ ಸ್ವಾಮಿ ಹಾಗೂ ಮಹಾಮಾತೆ ಶ್ರೀ ಪದ್ಮಾವತೀ ದೇವಿ ಬಿಂಬಗಳ ಪುನರ್ ಪ್ರತಿಷ್ಠಾ ಮಹೋತ್ಸವದ 4ನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮಾಜಿ ಸಚಿವ ಅಭಯಚಂದ್ರ ಜೈನ ಮಾತನಾಡಿದರು. ಕದಿಕ್ಕಾರು ಭಗವಾನ್ ಚಂದ್ರನಾಥ ಸ್ವಾಮಿ ಸೇವಾ ಟ್ರಸ್ಟ್ ಉಪಾಧ್ಯಕ್ಷ ಧನ್ಯಕುಮಾರ್ ರೈ ಅಧ್ಯಕ್ಷತೆ ವಹಿಸಿದ್ದರು. ಪ್ರಮುಖರಾದ ಜಿಲ್ಲಾ ಬಿಜೆಪಿ ಮುಖಂಡ ಕೆ.ಪಿ. ಜಗದೀಶ್, ಎಕ್ಸಲೆಂಟ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷ



ವಿವಿಧ ಕಾರ್ಯಕ್ರಮ

ಬಸದಿಯಲ್ಲಿ ಶನಿವಾರ ರಾಜ್ಯಾಭಿಷೇಕ ವಿಧಿ, ಪರಿನಿಷ್ಕ್ರಮಣ ಕಲ್ಯಾಣ, ದೀಕ್ಷಾಕಲ್ಯಾಣ ವಿಧಿ, ಶ್ರೀ ಗಣಧರವಲಯ ಆರಾಧನಾ ವಿಧಾನ, ಪಂಚ ಕಲ್ಯಾಣ ಆರಾಧನಾ ವಿಧಾನ , ಶ್ರೀ ಸ್ವಾಮಿಗೆ ನವ ಕಲಶಾಭಿಷೇಕ, ಮಹಾಪೂಜೆ. ಮಹಾಮಂಗಳಾರತಿ, ಶ್ರೀ ಜಿನಗಂಧೋಧಕ ವಿಧಿವಿಧಾನ ನಡೆದವು.

ಯುವರಾಜ ಜೈನ್, ಸದಾಶಿವ ರುದ್ರ ದೇವಸ್ಥಾನ ಸುರ್ಯ ಇದರ ಆಡಳಿತ ಮುಕ್ತೇಸರ ಡಾ. ಸತೀಶ್ಚಂದ್ರ , ಉದ್ಯಮಿ ಮಹಾವೀರ್ ಜೈನ್, ನ್ಯಾಯವಾದಿ ಶ್ವೇತಾ ಜೈನ್, ಸೇವಾದಾರ ನಾಭಿರಾಜ ಪೂವಣಿ, ಯಶೋಧರ ಪೂವಣಿ, ಶಾಂತಿಪ್ರಕಾಶ್, ಪಂಚಕಲ್ಯಾಣ ಸಮಿತಿಯ ಅಧ್ಯಕ್ಷ ವಿಧ್ಯಾಧರ ಜೈನ್ ಉಪಸ್ಥಿತರಿದ್ದರು.

ಅಜಿತ್ ಜೈನ್ ನಿರೂಪಿಸಿದರು. ಮಿತ್ರಸೇನ್ ಜೈನ್ ಸ್ವಾಗತಿಸಿದರು. ಸೇವಾಕರ್ತೃಗಳಾಗಿ ಪ್ರತಿಭಾ, ಶಾಂತಿಪ್ರಕಾಶ್, ಜಯಮಾಲಾ, ನಾಭಿರಾಜ ಪೂವಣಿ, ಸುಮನಾ, ಯಶೋಧರ ಪೂವಣಿ ಸಹಕರಿಸಿದರು.

ಡಾ. ಕೆ.ಜಿ. ಭಟ್, ಡಾ. ಸುಪ್ರೀತ್ ಲೋಬೋ, ಕೈಲಾರ್ ರಾಜಗೋಪಾಲಭಟ್, ಅಶ್ರಫ್ ಬಸ್ತಿಕಾರ್, ಇಸ್ಮಾಯಿಲ್ ಇಕ್ಬಾಲ್, ಇಸ್ಮಾಯಿಲ್ ಮೈನಾ, ಅಜೀಜ್ ಬಸ್ತಿಕಾರ್, ರಾಜಶೇಖರ್ ಜೈನ್, ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಜ್ರಕುಮಾರ್ ಜೈನ್ , ಸಮಿತಿ ಸದಸ್ಯ ಪ್ರಶಾಂತ್ ಜೈನ್ ಬಾರ್ಯ, ಅನುದೀಪ್ ರೈ, ನಿತೇಶ್ ಕುಮಾರ್ ಪುತ್ತಿಲ, ಪ್ರಭಾಕರ್ ರೈ, ರಕ್ಷಿತ್ ಕುಮಾರ್ ಪುತ್ತಿಲ, ಜಯರಾಜ್ ಜಾರಳಿಕೆ, ಸುಭಾಶ್ ಜೈನ್ , ನಿರಂಜನ್ ಕೊಂಡೆ, ಅರುಣಾ ಡಿ. ರೈ, ಸಮಂತ್ ನೆಲ್ಯಾಡಿ, ಪುನಿತ್ ನೆಲ್ಯಾಡಿ, ಉದಯ ಕುಮಾರ್ ಜೈನ್, ಅಭಯ್ ಜೈನ್, ವಿಜೇತ್ ಜೈನ್, ಸಂಪತ್ ಕುಮಾರ್ ಅಲಂಕಾರು, ಸನ್ಮತಿ ಹೆಗ್ಡೆ ಮಹೇಶ್ ಪಡಿವಾಳ ಮತ್ತಿತರರಿದ್ದರು.

ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್‌ನಿಂದ ಭಗವಾನ್ ಬುದ್ಧ ಜಯಂತಿ

ಸಮಾನತೆ ಸಮಾಜಕ್ಕೆ ಬುದ್ಧನ ಸಂದೇಶ ಮಾರ್ಗದರ್ಶಿ

ಮಡಿಕೇರಿ: ಶಾಂತಿಯುತ ಮತ್ತು ಸಮಾನತೆಯ ಸಮಾಜ ನಿರ್ಮಾಣಕ್ಕೆ ಭಗವಾನ್ ಬುದ್ಧನ ಸಂದೇಶಗಳು ಮಾರ್ಗದರ್ಶಿಯಾಗಿವೆ ಎಂದು ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ ತಿಳಿಸಿದರು.

ಕೊಡಗು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶುಕ್ರವಾರ ನಗರದ ಗಾಂಧಿ ಭವನದಲ್ಲಿ ನಡೆದ ಭಗವಾನ್ ಬುದ್ಧ ಜಯಂತಿ ಉದ್ಘಾಟಿಸಿ, ಅವರು ಮಾತನಾಡಿದರು.

ಸಂಘರ್ಷ, ಪರಿಸರ ಸಮಸ್ಯೆ, ಸಾಮಾಜಿಕ ಸಮಸ್ಯೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ಬುದ್ಧನ ಸಂದೇಶಗಳು ಪ್ರಸ್ತುತವಾಗಿದೆ. ಅಹಿಂಸೆ, ದಯೆ, ಆತ್ಮನಿಗ್ರಹ ಹಾಗೂ ಸಕಲ ಜೀವಿಗಳ ಗೌರವಯುತ ತತ್ವಗಳು ಶಾಂತಿಯುತ ಮತ್ತು ಸಮಾನತೆಯ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶಿ ಎಂದು ಹೇಳಿದರು.

ಭಗವಾನ್ ಬುದ್ಧನ ಜೀವನ ಮತ್ತು ಉಪದೇಶಗಳಿಗೆ ಸಂಬಂಧಿಸಿದ ಪವಿತ್ರ ಭೂಮಿಯಾಗಿರುವ ಭಾರತ ದೇಶವು ಧನ್ಯವಾಗಿದೆ. ಗೌತಮ ಬುದ್ಧನ ಜೀವನ ಮತ್ತು ಬೋಧನೆಗಳಲ್ಲಿ ಸಾರನಾಥ ಮತ್ತು ಕುಶಿನಗರ ಅತ್ಯಂತ ಪ್ರಮುಖವಾದ, ಪವಿತ್ರವಾದ ಎರಡು ಸ್ಥಳಗಳಾಗಿದ್ದು, ವಿಶ್ವದಾದ್ಯಂತ ಭಕ್ತರನ್ನು ಆಕರ್ಷಿಸುತ್ತಿದೆ. ಈ ಸಂದರ್ಭ ಬುದ್ಧನ ಆದರ್ಶನಗಳನ್ನು



ಜೀವನದಲ್ಲಿ ಅಳವಡಿಸಿಕೊಂಡು ಶಾಂತಿ, ಸೌಹಾರ್ದತೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ನಿತಿನ್ ಚಕ್ಕಿ ಅವರು ಕರೆ ನೀಡಿದರು.

ಶನಿವಾರಸಂತೆ ವಿಘ್ನೇಶ್ವರ ಬಾಲಕ ಪದವಿ ಪೂರ್ವ ಕಾಲೇಜಿನ ಶಿಕ್ಷಕ ಕೆ.ಪಿ.ಜಯಕುಮಾರ್ ಉಪನ್ಯಾಸ ನೀಡಿದರು. ಬೈಲುಕುಪ್ಪ ಸೆರಾ ಮಠದ ಗುರು ಕಾಂಗ್ ಗೆಶೆ ನ್ಗ್ವಾಂಗ್ ಜಂಗ್ನಿ ಅವರು ಮಾತನಾಡಿ, ಭಗವಾನ್ ಗೌತಮ ಬುದ್ಧರು ನಾಡಿಗೆ ಸಮಾನತೆ ಸಾರಿದ್ದಾರೆ. ಎಲ್ಲರೂ ಕುಡಿಯುವ ನೀರು, ತಿನ್ನುವ ಆಹಾರ, ನಡೆಯುವ ನೆಲ ಒಂದೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಆದ್ದರಿಂದ ಪ್ರತಿಯೊಬ್ಬರೂ ಅವರ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಮಾನವೀಯ ಮೌಲ್ಯ ಬೆಳೆಸಿಕೊಳ್ಳುವಂತೆ ಕರೆ ನೀಡಿದರು. ಕರ್ನಾಟಕ ದಲಿತ ಸಂಘರ್ಷ ಸಮಿತಿ ಹಾಗೂ ಸ್ವಾಭಿಮಾನಿ ಸಂಘಟನೆಯ ಜಿಲ್ಲಾ ಸಂಚಾಲಕ ಎಚ್. ಎಲ್.ದಿವಾಕರ್, ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಿಕ್ಷಣ ಸುಧಾರಣಾ ಸಮಿತಿ ಸದಸ್ಯ ಸಿ.ಜೆ.ಮೋಹನ್ ಮೌರ್ಯ, ಕರ್ನಾಟಕ ದಲಿತ ಸಂಘರ್ಷ ಸಮಿತಿ ಅಂಬೇಡ್ಕರ್ ಮಾರ್ಗ ಮತ್ತು ಬೌದ್ಧ ದರ್ಮ ಪ್ರಚಾರಕ ಕೆ.ಪಿ.ರಾಜು ಮಾತನಾಡಿದರು.

ಮಡಿಕೇರಿ ನಗರಸಭೆ ಆರೋಗ್ಯ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷ ಎಸ್. ಸಿ. ಸತೀಶ್, ಸೆರಾ ಮಠದ ಗುರು ನವಂಗ ಡಕ್ಪ, ಕುಶಾಲನಗರ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ಮಾರ್ಗ) ಅಧ್ಯಕ್ಷೆ ಸುಶೀಲಾ ತ್ಯಾಗರಾಜ್, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಕೆ.ಬಾಲಕೃಷ್ಣ ರೈ, ಪಿ.ಎಲ್. ದೇವರಾಜು, ಸೆರಾ ಮಠದ ಗುರುಗಳು, ವಿದ್ಯಾರ್ಥಿಗಳು ಹಾಜರಿದ್ದರು. ವಿದ್ವಾನ್ ಬಿ.ಸಿ. ಶಂಕರಯ್ಯ ನಾಡಗೀತೆ ಹಾಡಿದರೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ್ ಸ್ವಾಗತಿಸಿ, ಮಣಜೂರು ಮಂಜುನಾಥ್ ನಿರೂಪಿಸಿದರು. ಸೆರಾ ಮಠದ ಗುರುಗಳು ಗಣ್ಯರಿಗೆ ಶಾಲು ಹೊದಿಸಿ ಗೌರವಿಸಿದರು.

'ಮಾದಕ ವಸ್ತು ಮುಕ್ತ ಜಿಲ್ಲೆ' ಕುರಿತು ಜಾಗೃತಿ ಕಾರ್ಯಕ್ರಮ, ಉಪನ್ಯಾಸ



ಮಡಿಕೇರಿ: ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜ್ ಮಡಿಕೇರಿ ಎನ್ ಎಸ್‌ಎಸ್ ಘಟಕಗಳು ಸಂಯುಕ್ತವಾಗಿ 'ಮಾದಕ ವಸ್ತು ದುರುಪಯೋಗ ಮತ್ತು ಮಾದಕ ವಸ್ತು ಮುಕ್ತ ಜಿಲ್ಲೆ' ಕುರಿತು ಜಾಗೃತಿ ಉಪನ್ಯಾಸ ಆಯೋಜಿಸಿತು.

ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ವೃತ್ತ ನಿರೀಕ್ಷಕ ಪಿ.ಕೆ. ರಾಜು ಅವರು ಭಾಗವಹಿಸಿ, ಯುವಕರಲ್ಲಿ ಹೆಚ್ಚುತ್ತಿರುವ ಮದ್ಯ/ಮಾದಕ ವಸ್ತುಗಳ ಬಳಕೆ ಮತ್ತು ಅದರ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಿದರು. ವಿದ್ಯಾರ್ಥಿಗಳು ತುರ್ತು ಸಂದರ್ಭ ಬಳಸಿಕೊಳ್ಳಬಹುದಾದ ವಿವಿಧ ಸಹಾಯವಾಣಿ ಸಂಖ್ಯೆಗಳನ್ನು ಹಾಗೂ KSP ಆಪ್ ಸಂಬಂಧಿತ ಮಾಹಿತಿ ನೀಡಿದರು.

ಅದೇ ಸಂದರ್ಭದಲ್ಲಿ 'ಸಮ್ಮಿತ್ರಾ ಆ್ಯಪ್' ಕುರಿತು ಮಾಹಿತಿ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮೇಜರ್ ಪ್ರೊ. ರಾಘವ ಬಿ. ಮಾತನಾಡಿ, ನಮ್ಮ ಜಿಲ್ಲೆಯನ್ನು ಡ್ರಗ್ ಮುಕ್ತ ಜಿಲ್ಲೆಯಾಗಿಸಲು ಎಲ್ಲರೂ ಒಟ್ಟಾಗಿ ಕೆಲಸ ಮಾಡಬೇಕೆಂದು ಕರೆ ನೀಡಿದರು.

ಪ್ರತಿಜ್ಞೆ ಬೋಧನೆ

ಕಾರ್ಯಕ್ರಮದ ವೇಳೆ ಮುಖ್ಯ ಅತಿಥಿ ಪಿ. ಕೆ. ರಾಜು ಅವರು 'ವ್ಯಸನದಿಂದ ದೂರವಿರಿ, ಜೀವನವನ್ನು ಆನಂದಿಸಿ ಪ್ರತಿಜ್ಞೆಯನ್ನು' ಎಂಬ ಪ್ರತಿಜ್ಞೆಯನ್ನು ವಿದ್ಯಾರ್ಥಿಗಳಿಂದ ಸ್ವೀಕರಿಸಿದರು. ASI ಎಂ.ಡಿ. ಗಣೇಶ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಡಾ. ಪ್ರದೀಪ್ ಆರ್. ಭಂಡಾರಿ ಸ್ವಾಗತಿಸಿದರು. ಎನ್ನೆಸ್ಸೆಸ್ ಅಧಿಕಾರಿ ಆಲೋಕ್, ಡಾ. ಶೈಲಶ್ರೀ ಕೆ., ಎನ್‌ಎಸ್‌ಎಸ್ ಕಾರ್ಯಕ್ರಮ ಅಧಿಕಾರಿ, ಇತರ ಪೊಲೀಸ್ ಸಿಬ್ಬಂದಿ, ಎನ್ ಎಸ್‌ಎಸ್ ನಾಯಕರು, ಸ್ವಯಂಸೇವಕರು ಮತ್ತು ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

1 ಸಾವಿರ ವಿದ್ಯಾರ್ಥಿಗಳು ಒಲಿಂಪಿಯಡ್ ಪರೀಕ್ಷೆ ನೋಂದಣಿ ಗುರಿ: ಆನಂದ ಸುವರ್ಣ



ಬಂಟ್ವಾಳ: ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ ಟ್ರಸ್ಟ್ ಬಂಟ್ವಾಳ ತಾಲೂಕಿನ ಯೋಜನಾ ಕಚೇರಿ ವ್ಯಾಪ್ತಿಯಲ್ಲಿ ಪ್ರಸ್ತುತ ಸಾಲಿನಲ್ಲಿ ಸುಮಾರು ಒಂದು ಸಾವಿರ ಮಂದಿ ವಿದ್ಯಾರ್ಥಿಗಳು ಒಲಿಂಪಿಯಡ್ ಪರೀಕ್ಷೆ ನೋಂದಾವಣೆಯ ಗುರಿ ನೀಡಲಾಗಿದೆ ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ಆನಂದ ಸುವರ್ಣ ಹೇಳಿದರು.

ಗ್ರಾಮಾಭಿವೃದ್ಧಿ ಯೋಜನೆ ಬಂಟ್ವಾಳ ಯೋಜನಾ ಕಚೇರಿಯ ಉನ್ನತಿ ಸಭಾಂಗಣದಲ್ಲಿ ಭಾನುವಾರ ನಡೆದ ಸಿಎಸ್‌ಸಿ ಕೇಂದ್ರಗಳ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ಎರಡು ವರ್ಷಗಳಿಂದ 1 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರದ ಅನುಷ್ಠಾನಕ್ಕೆ ಒಳಪಡುವ ಒಲಿಂಪಿಯಡ್ ಪರೀಕ್ಷೆಯನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಸಿಎಸ್‌ಸಿ ಕೇಂದ್ರಗಳಲ್ಲಿ ನೊಂದವಣಿ ಮಾಡಲಾಗುತ್ತಿದ್ದು, ಕಳೆದ ವರ್ಷ ಒಲಿಂಪಿಯಡ್ 6.0 ಪರೀಕ್ಷೆಯಲ್ಲಿ ಬಂಟ್ವಾಳ ತಾಲೂಕಿನಲ್ಲಿ 384 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಹಾಜರಾಗಿದ್ದರು ಎಂದರು.

ಈ ಒಲಿಂಪಿಯಡ್ ಪರೀಕ್ಷೆಯಲ್ಲಿ ರಾಂಕ್ ಬಂದ ವಿದ್ಯಾರ್ಥಿಗಳಿಗೆ ಕೇಂದ್ರ ಸರ್ಕಾರವು 30,000 ಸಾ. ವರೆಗೆ ಸ್ಕಾಲರ್ ಶಿಪ್ ಹಾಗೂ ಪಾಸ್ ಆದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟ್ ಅನ್ನು ನೀಡಲಾಗುತ್ತದೆ. ಇದರ ಜೊತೆಗೆ ಸಿಎಸ್‌ಸಿ ಕೇಂದ್ರದಲ್ಲಿ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ, ಪಾಸ್ ಪೋರ್ಟ್, ವಾಹನಗಳ ವಿಮೆ, ಪಾನ್ ಕಾರ್ಡ್, ರಾಷ್ಟ್ರೀಯ ಪಿಂಚಣಿ ಯೋಜನೆ, ಮೊಬೈಲ್ ರೀಚಾರ್ಜ್, ವಿದ್ಯುತ್ ಬಿಲ್ ಪಾವತಿ, ಫಾಸ್ಟ್ ಟ್ಯಾಗ್ ರಿಚಾರ್ಜ್, ಸಿಪಿ ಗ್ರಾಮ ಇನ್ನೂ ಅನೇಕ ಸರ್ಕಾರದ ಸೇವೆಗಳನ್ನು ಯೋಜನೆಯ ಗ್ರಾಮೀಣ ಮಟ್ಟದ ಸಿಎಸ್‌ಸಿ ಕೇಂದ್ರದಲ್ಲಿ ಮಾಡಲಾಗುತ್ತಿದೆ ಎಂದು ತಿಳಿಸಿದರು. ದಿನೇಶ್ ಡಿ, ತಾಲೂಕು ಯೋಜನಾಧಿಕಾರಿ ಜಯಾನಂದ ಪಿ., ತಾಲೂಕು ನೋಡಲ್ ಪ್ರತಾಪ್, ತಾಲೂಕಿನ ಎಲ್ಲಾ ವಿಎಲ್‌ಇಗಳು ಉಪಸ್ಥಿತರಿದ್ದರು.



ಪುತ್ತೂರಿನ ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ ಎಂಡ್ ಟೆಕ್ನಾಲಜಿಯ ಎಂಬಿಎ ವಿಭಾಗ ಮತ್ತು ಇನ್‌ಸ್ಟಿಟ್ಯೂಶನ್ ಇನೋವೇಶನ್ ಸೆಲ್ ಇದರ ಆಶ್ರಯದಲ್ಲಿ ನಡೆದ 'ಇಂಪ್ಯಾಕ್ಟ್ ಸ್ಪಾರ್ಕ್-2026' ಸ್ಪರ್ಧೆಯಲ್ಲಿ ಕೊಣಾಜೆಯ ಯುನಿವರ್ಸಿಟಿ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ಕಲ್ಲಡ್ಕದ ಶ್ರೀರಾಮ ಕಾಲೇಜ್ ತಂಡ ದ್ವಿತೀಯ ಮತ್ತು ಪುತ್ತೂರು ವಿವೇಕಾನಂದ ಕಾಲೇಜ್ (ಸ್ವಾಯತ್ತ) ತಂಡ ತೃತೀಯ ಸ್ಥಾನವನ್ನು ಪಡೆದುಕೊಂಡರು. ಕಾಲೇಜಿನ ಪ್ರಾಂಶುಪಾಲ ಡಾ. ಮಹೇಶ್‌ಪ್ರಸನ್ನ ಕೆ. ವಿಜೇತರಿಗೆ ನಗದು ಬಹುಮಾನ ಮತ್ತು ಫಲಕಗಳನ್ನು ನೀಡಿ ಗೌರವಿಸಿದರು.



ಪುತ್ತೂರು ಸಂಪ್ಯದ ಅಕ್ಷಯ ಕಾಲೇಜಿನಲ್ಲಿ ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಡಾ. ಮಾಧವ ಎಂ.ಕೆ. ಕಾರ್ಯಕ್ರಮ ಉದ್ಘಾಟಿಸಿದರು. ಡಾ. ಅನಂತ ಕೃಷ್ಣ ಭಟ್, ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಜಯಂತ್ ನಡುಬೈಲ್, ಐ.ಕ್ಯೂ.ಎ.ಸಿ. ಸಂಯೋಜಕಿ ರಶ್ಮಿ ಕೆ., ಉಪಪ್ರಾಂಶುಪಾಲ ರಕ್ಷಣ್ ಟಿ., ಮಂಗಳೂರು ಕೆ.ಆರ್.ಎಂ.ಎಸ್.ಎಸ್.ನ ಡಾ. ಪ್ರಮೋದ್, ಕನ್ನಡ ವಿಭಾಗ ಉಪನ್ಯಾಸಕ ಹರಿಶ್ಚಂದ್ರ ಮತ್ತಿತರರಿದ್ದರು.

ಪೊಸರಡ್ಕ ಶ್ರೀ ದೈವ, ಶ್ರೀ ಕೊಡಮಣಿತ್ತಾಯ, ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನ, ಬ್ರಹ್ಮಬೈದರ್ಕಳ ಗರಡಿಯ ಬ್ರಹ್ಮಕುಂಭಾಭಿಷೇಕ ಸಂಭ್ರಮ

ಪೊಸರಡ್ಕ ದೈವಸ್ಥಾನ, ಬ್ರಹ್ಮಬೈದರ್ಕಳ ಗರಡಿ ತುಳುನಾಡಿನ ಭಕ್ತಿ, ಪ್ರೀತಿ ಬಾಂಧವ್ಯದ ನಾಡಿ ಆಗಿದೆ

ಬೆಳ್ತಂಗಡಿ: ಪೊಸರಡ್ಕ ತುಳುನಾಡಿನ ಭಕ್ತಿ, ಮಮತೆ, ಪ್ರೀತಿ ಬಾಂಧವ್ಯದ ನಾಡಿ ಆಗಿದೆ. ಹೃದಯ ಶ್ರೀಮಂತಿಕೆಯಿಂದ ನಿರ್ಮಿಸಿದ ಪೊಸರಡ್ಕ ಕ್ಷೇತ್ರ ನೂರಾರು ವರ್ಷಗಳ ಕಾಲ ಅಮರವಾಗಿರಲಿ, ಭಕ್ತಿಗೆ ಶಕ್ತಿಯಾಗಿ ದೈವಗಳು ಆಶೀರ್ವದಿಸಲಿ ಎಂದು ಧಾರ್ಮಿಕ ಮುಖಂಡ ಕಿರಣ್‌ಚಂದ್ರ ಪುಷ್ಪಗಿರಿ ಹೇಳಿದರು.

ಬೆಳ್ತಂಗಡಿ ತಾಲೂಕಿನ ಮರೋಡಿ ಗ್ರಾಮದ ಪೊಸರಡ್ಕ ಶ್ರೀ ದೈವ, ಶ್ರೀ ಕೊಡಮಣಿತ್ತಾಯ, ಶ್ರೀ ವ್ಯಾಘ್ರ ಚಾಮುಂಡಿ ದೈವಸ್ಥಾನ ಮತ್ತು ಶ್ರೀ ಬ್ರಹ್ಮ ಬೈದರ್ಕಳ ಗರಡಿಯ ಬ್ರಹ್ಮಕುಂಭಾಭಿಷೇಕ ಸಂಭ್ರಮದ ಕೊನೆಯ ದಿನದ ದಿನದ ಧಾರ್ಮಿಕ ಸಭೆಯಲ್ಲಿ ಮುಖ್ಯ ಅವರು ಅತಿಥಿಯಾಗಿ ಮಾತನಾಡಿದರು.

ಕೇಳ ಶ್ರೀ ಪಂಚಲಿಂಗೇಶ್ವರ ದೇವಸ್ಥಾನದ



ವೇದಮೂರ್ತಿ ಕೆ. ಅನಂತ ಅಸ್ರಣ್ಣ ದೀಪ ಪ್ರಜ್ವಲಿಸಿದರು. ಬ್ರಹ್ಮಕುಂಭಾಭಿಷೇಕ ಸಮಿತಿ ಅಧ್ಯಕ್ಷ ರಕ್ಷಿತ್ ಶಿವರಾಂ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಕಾರ್ಯ ನಿರ್ವಹಣಾಧಿಕಾರಿ ಅನಿಲ್ ಕುಮಾರ್ ಎಸ್. ಮಾತನಾಡಿ, ಪೊಸರಡ್ಕ ಕ್ಷೇತ್ರದ ಅಭಿಕಂಡು ಕಂಡು ಇಲ್ಲಿಯ ಜನರ ಭಕ್ತಿ, ವೈಶಾಲ್ಯತೆ ಅನಾವರಣ ಆಗಿದೆ. ಒಗ್ಗಟ್ಟು, ಸಮನ್ವಯತೆಯ ಮೂಲಕ ಐತಿಹಾಸಿಕವಾಗಿ ಕ್ಷೇತ್ರವನ್ನು ಪುನರ್ ನಿರ್ಮಿಸಲಾಗಿದೆ ಎಂದರು.

ಸ್ವಪ್ನ ಪ್ರವೀಣ್ ಪೂಜಾರಿ ಬೆಂಗಳೂರು ಮಾತನಾಡಿದರು. ಆಡಳಿತ ಸಮಿತಿ ಪ್ರಧಾನ ಕಾರ್ಯದರ್ಶಿ ಆದಿತ್ಯ ಪಿ.ಕೆ. ಪ್ರಾಸ್ತಾವಿಸಿದರು. ಉಮಲತ್ತಡೆ ಶ್ರೀ ಕೊಡಮಣಿತ್ತಾಯ ಬೈದರ್ಕಳ ಸಮಿತಿ ಅಧ್ಯಕ್ಷ ಪ್ರವೀಣ್ ಭಟ್, ಬ್ರಹ್ಮಕುಂಭಾಭಿಷೇಕ ಸಮಿತಿ ಕಾರ್ಯಾಧ್ಯಕ್ಷ ಎಂ.ಎಸ್. ಪೂಜಾರಿ, ತಾರಾ ಕಿರಣ್‌ಚಂದ್ರ ಪುಷ್ಪಗಿರಿ, ಅತುಲ್ ಕುಮಾರ್ ಕೆ.ಎನ್. ಹಲೇಜಿ, ನಳಿನಿ ಪಿ.ಕೆ. ಮತ್ತೊಟ್ಟು ಮರೋಡಿ, ಲಾವಣ್ಯ ಬಳ್ಳಾಲ್, ಆಡಳಿತ ಸಮಿತಿ ಅಧ್ಯಕ್ಷ ಜಯವರ್ಮ ಬುಣ್ಣು, ಗೌರವಾಧ್ಯಕ್ಷರಾದ ರಾಜೇಂದ್ರ ಬಳ್ಳಾಲ್, ಹೇಮರಾಜ್ ಕೆ. ಬೆಳ್ಳಿಬೀಡು, ಬ್ರಹ್ಮ ಕುಂಭಾಭಿಷೇಕ ಸಮಿತಿ ಕಾರ್ಯಾಧ್ಯಕ್ಷ ಎಂ.ಎಸ್. ಪೂಜಾರಿ, ನಾರಾಯಣ ಪೂಜಾರಿ, ಪ್ರಧಾನ ಕಾರ್ಯದರ್ಶಿ ಶೀತಲ್ ಕುಮಾರ್ ಜೈನ್, ಆಡಳಿತ ಸಮಿತಿ ಸದಸ್ಯರಾದ ರವೀಂದ್ರ ಪೂಜಾರಿ ನಾವ, ರಮೇಶ್ ಬಲಂತ್ಯರೊಟ್ಟು, ಜಿನೇಂದ್ರ ಜೈನ್ ಹರಂಬೆಟ್ಟುಗುತ್ತು, ಸುದರ್ಶನ ಜೈನ್ ಪಾಂಡಿಬೆಟ್ಟು ಗುತ್ತು , ಸತೀಶ್ ಕೆ. ಕಾಶಿಪಟ್ಣ ಇದ್ದರು. ಸತೀಶ್ ಉಚ್ಚೂರು ಪ್ರಾರ್ಥಿಸಿದರು. ಶಿಕ್ಷಕಿ ಸುಫಲ ಸ್ವಾಗತಿಸಿ, ದಿನೇಶ್ ರಾಯಿ ನಿರೂಪಿಸಿದರು.

ಉತ್ಸವಕ್ಕೆ ಸಹಕರಿಸಿದ ದಾನಿಗಳಿಗೆ ಸನ್ಮಾನ

ಅನಿಲ್ ಕುಮಾರ್ ಎಸ್., ಕಿರಣ್‌ಚಂದ್ರ ಪುಷ್ಪಗಿರಿ ದಂಪತಿ, ಸ್ವಪ್ನ ಪ್ರವೀಣ್ ಪೂಜಾರಿ ದಂಪತಿ, ಪಾರ್ಶ್ವನಾಥ ಜೈನ್, ಗಣೇಶ್ ಸಾವ್ಯ, ದಿನೇಶ್ ಸಾವ್ಯ, ಶುಭಕರ ಸಾವ್ಯ, ಕೃಷ್ಣಪ್ಪ ಮರೋಡಿ, ಸುಪ್ರಿಯಾ ನಾರಾಯಣ ಪೂಜಾರಿ, ಅಕ್ಷತಾ ಅನಿಲ್ ಪೂಜಾರಿ, ಗಿರಿಜಾ ಹೆಗ್ಡೆ, ದಯಾನಂದ ಬಂಗೇರ, ರಾಜೇಂದ್ರ ಬಳ್ಳಾಲ್, ಹೇಮರಾಜ್ ಕೆ. ಬೆಳ್ಳಿಬೀಡು, ರಕ್ಷಿತ್ ಶಿವರಾಂ, ಜಿನೇಂದ್ರ ಜೈನ್, ಶಶಿಕಾಂತ್ ಹೆಗ್ಡೆ ಸುದರ್ಶನ ಜೈನ್ ಎಂಎಸ್ ಪೂಜಾರಿ, ನಳಿನಿ ಪಿ.ಕೆ., ರಮೇಶ್ ಬಂಗೇರ ಸಹಿತ ಹಲವಾರು ಮಂದಿ ದಾನಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.

ಬ್ರಹ್ಮಬೈದರ್ಕಳ ನೇಮ

ಸಂಜೆ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅಳ್ವಾಸ್ ಧೀಂಕಿಟ ಯಕ್ಷಗಾನ ಅಧ್ಯಯನ ಕೇಂದ್ರದ ಕಲಾವಿದರಿಂದ ಸಿಂಧೂರ ಸಂಗ್ರಾಮ ಎಂಬ ಯಕ್ಷಗಾನ ನಡೆಯಿತು. ರಾತ್ರಿ ಶ್ರೀ ಬ್ರಹ್ಮಬೈದರ್ಕಳ ಹಾಗೂ ಶ್ರೀ ಮಾಯಾಂದಲೆ ನೇಮೋತ್ಸವ ನಡೆಯಿತು.

ಸುತ್ತಮುತ್ತ

ಇಂದು ಭಜನಾ ಸೇವೆ, ವಿಶೇಷ ಕಾರ್ತಿಕ ಪೂಜೆ

ಕಾಸರಗೋಡು: ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಲ್ಲಿ ಮೆ 4ರಂದು ರಾತ್ರಿ 7 ಗಂಟೆಯಿಂದ ತನಕ ಶ್ರೀ ಶಾರದಾಂಬಾ ಭಜನಾ ಸಂಘ ಅಣಂಗೂರು ಇವರಿಂದ ಭಜನಾ ಕಾರ್ಯಕ್ರಮ, 8 ಗಂಟೆಗೆ ಶ್ರೀ ಮಲ್ಲಿಕಾರ್ಜುನ ದೇವರಿಗೆ ವಿಶೇಷ ಕಾರ್ತಿಕ ಪೂಜಾ ಸೇವೆ ಜರಗಲಿದೆ. ಭಗವದ್ಭಕ್ತರು ಭಜನಾ ಸಂಕೀರ್ತನೆಯಲ್ಲಿ ಹಾಗೂ ಪೂಜಾ ವೇಳೆಯಲ್ಲಿ ಭಾಗವಹಿಸಬೇಕೆಂದು ಶ್ರೀ ಮಲ್ಲಿಕಾರ್ಜುನ ಭಜನಾ ಸೇವಾ ಸಮಿತಿ ಪ್ರಕಟಣೆಯಲ್ಲಿ ವಿನಂತಿಸಿದೆ.

ಗೋಸಾಡ: ನಾಳೆಯಿಂದ ಚಂಡಿಕಾಯಾಗ, ವಿಶೇಷ ಮೂಡಪ್ಪ ಸೇವೆ

ಮುಳ್ಳೇರಿಯ: ಗೋಸಾಡ ಶ್ರೀ ಮಹಿಷಮರ್ದಿನಿ ಕ್ಷೇತ್ರದಲ್ಲಿ ಚಂಡಿಕಾಯಾಗ ಮತ್ತು ವಿಶೇಷ ಮೂಡಪ್ಪ ಸೇವೆ ಕಾರ್ಯಕ್ರಮವು ಮೇ 5 ಮತ್ತು 6ರಂದು ವಿವಿಧ ವಿಧಿ ವಿಧಾನಗಳೊಂದಿಗೆ ಜರಗಲಿದೆ. ತಂತ್ರಿವರ್ಯ ಬ್ರಹ್ಮಶ್ರೀ ವರ್ಕಾಡಿ ಗಣೇಶ ತಂತ್ರಿಗಳು ಕಾರ್ಯಕ್ರಮಗಳ ನೇತೃತ್ವ ವಹಿಸುವರು.

ಇರಿಯಣ್ಣಿ ವೃತ್ತಿಪರ ಪ್ರೌಢಶಾಲೆಯಲ್ಲಿ ಹಳೆ ವಿದ್ಯಾರ್ಥಿ ಸಂಗಮ

ಕಾಸರಗೋಡು: ಇರಿಯಣ್ಣಿ ಸರಕಾರಿ ವೃತ್ತಿಪರ ಪ್ರೌಢಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳ ಸಂಗಮ ಕಾರ್ಯಕ್ರಮ ನಡೆಯಿತು. 1957ರಲ್ಲಿ ಪ್ರಾರಂಭವಾದ ಶಾಲೆಯ ವಿವಿಧ ಅವಧಿಗಳ ವಿದ್ಯಾರ್ಥಿಗಳ ಸಭೆ ಜರಗಿತು. ಕಾರಡ್ಕ ಬ್ಲಾಕ್ ಪಂಚಾಯತ್ ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷೆ ಕೆ.ಸುಗಂಧಿನಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಗ್ರಾ.ಪಂ. ಸದಸ್ಯ ಕೆ.ಪ್ರಭಾಕರ ಅಧ್ಯಕ್ಷತೆ ವಹಿಸಿದ್ದರು. ಪ್ರಭಾರ ಪ್ರಾಂಶುಪಾಲ ಸಜೀವನ್ ಮಾಡಪರಂಬತ್ತಿಲ್ ಪ್ರಾಸ್ತಾವಿಕ ಭಾಷಣ ಮಾಡಿದರು. ಶಿಕ್ಷಕ ರಕ್ಷಕ ಸಮಿತಿ ಅಧ್ಯಕ್ಷ ರಾಘವನ್ ಬೆಳ್ಳಿಪ್ಪಾಡಿ ಚಟುವಟಿಕೆಗಳ ಕುರಿತು ಮಾತನಾಡಿದರು. ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಿ.ಕೆ. ನಾರಾಯಣನ್, ಸ್ವಾತಂತ್ರ್ಯ ಹೋರಾಟಗಾರ ಗಾಂಧಿ ರಾಮನ್ ನಾಯರ್, ಸ್ಮಾರಕ ಟ್ರಸ್ಟ್ ಅಧ್ಯಕ್ಷ ಮೋಹನ್‌ಕುಮಾರ್ ನಾರಂತಟ್ಟ, ಕೆ.ರಾಘವನ್ ಮುಳಿಯಾರ್, ಡಾ.ಕೆ.ಗಂಗಾಧರನ್ ನಾಯರ್ ಓಲತ್ತುಕಯ, ಸುಧಾಮನ್ ನಾಯರ್, ಕೆ.ಪಿ.ಚಿದಾನಂದನ್, ಮಾಜಿ ಪಿಟಿಎ ಅಧ್ಯಕ್ಷ ಪಿ.ವಿನಯಕುಮಾರ್, ವಿ.ವಾಸು, ಪಿ.ಚೆರಿಯೋನ್, ಕೆ.ಶ್ರೀನಿವಾಸನ್, ವಕೀಲ ರಾಜನ್, ಅಬ್ದುಲ್ ಸಲಾಂ, ಬಾಬು ಮಂಜಕ್ಕಲ್, ಅನಿಮಾ ಅನಿಲ್ ಇದ್ದರು.

ಮೇ 10ರಂದು ಶ್ರೀ ಸತ್ಯನಾರಾಯಣ ಪೂಜೆ

ಪೆರ್ಲ: ಉಕ್ಕಿನಡ್ಕ ಶ್ರೀ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆಯು ಮೇ 10ರಂದು ವೇದಮೂರ್ತಿ ಪಳ್ಳತ್ತಡ್ಕ ಶಿವಶಂಕರ ಭಟ್ ಅವರ ನೇತೃತ್ವದಲ್ಲಿ ಜರಗಲಿದೆ. ರಾತ್ರಿ 7ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ ಆರಂಭಗೊಳ್ಳಲಿದೆ. 9.30ಕ್ಕೆ ಮಹಾ ಮಂಗಳಾರತಿ, ಪ್ರಸಾದ ವಿತರಣೆ, 10ಗಂಟೆಗೆ ಅನ್ನ ಸಂತರ್ಪಣೆ ನಡೆಯಲಿದೆ.

ಆಯುರ್ವೇದ ಆಸ್ಪತ್ರೆಗೆ ಸಿಬ್ಬಂದಿ ನೇಮಕಾತಿ

ಕಾಸರಗೋಡು: ಕಾಸರಗೋಡು ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಪುರುಷ ಸಿಬ್ಬಂದಿ ನೇಮಕಾತಿಗಾಗಿ ಮೇ 7 ರಂದು ಬೆಳಗ್ಗೆ 10 ಗಂಟೆಗೆ ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಸಂದರ್ಶನ ನಡೆಯಲಿದೆ. ಆಯುರ್ವೇದ ಚಿಕಿತ್ಸ ಅರ್ಹತೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಪ್ಲಸ್ ಟು ವಿದ್ಯಾರ್ಹತೆಯಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ, ಆಧಾರ್ ಕಾರ್ಡ್ ನಕಲು ಮತ್ತು ಮೂಲ ಪ್ರಮಾಣಪತ್ರಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 231624 ಸಂಪರ್ಕಿಸಬಹುದು.

ಪ್ರಯೋಗಾಲಯ ತಂತ್ರಜ್ಞರ ನೇಮಕಾತಿ

ಕಾಸರಗೋಡು: ಕಾಸರಗೋಡು ಸರಕಾರಿ ಆಯುರ್ವೇದ ಆಸ್ಪತ್ರೆಯಲ್ಲಿ ಲ್ಯಾಬ್ ತಂತ್ರಜ್ಞರ ಹುದ್ದೆಗೆ ನೇಮಕಾತಿ ಸಂದರ್ಶನವು ಮೇ 7ರಂದು ಬೆಳಗ್ಗೆ 9 ಗಂಟೆಗೆ ನಡೆಯಲಿದೆ. ಆಯುರ್ವೇದ ಚಿಕಿತ್ಸಕ ಅರ್ಹತೆ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಆಸಕ್ತರು ಅರ್ಜಿ, ದಾಖಲೆಗಳೊಂದಿಗೆ ಹಾಜರಾಗಬೇಕು. ಹೆಚ್ಚಿನ ಮಾಹಿತಿಗೆ 04994 231624 ಕರೆ ಮಾಡಬಹುದು.

ಸ್ವ-ಉದ್ಯೋಗ ಸಾಲ

ಕಾಸರಗೋಡು: ಕೇರಳ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಜಿಲ್ಲೆಯಲ್ಲಿ ಅಲ್ಪಸಂಖ್ಯಾತ ಮಹಿಳೆಯರಿಗೆ ವೈಯಕ್ತಿಕ (ಸ್ವ ಉದ್ಯೋಗ ಯೋಜನೆ) ಸಾಲಗಳನ್ನು ಒದಗಿಸುತ್ತದೆ. 18–55 ವರ್ಷದೊಳಗಿನ ನಿರುದ್ಯೋಗಿ ಮಹಿಳೆಯರಿಗೆ ವಾರ್ಷಿಕ 3 ಲಕ್ಷ ರೂ. ಗಿಂತ ಕಡಿಮೆ ಕುಟುಂಬದ ಆದಾಯವಿರುವವರಿಗೆ ಸ್ವ ಉದ್ಯೋಗ ಯೋಜನೆಗಳಿಗಾಗಿ ಐದು ವರ್ಷಗಳ ಮರುಪಾವತಿ ಅವಧಿಗೆ ಶೇಕಡಾ 6ರ ಬಡ್ಡಿದರದಲ್ಲಿ ವೈಯಕ್ತಿಕ ಸಾಲಗಳನ್ನು ನೀಡಲಾಗುವುದು. ಅಧಿಕೃತ, ಆಸ್ತಿ ಭದ್ರತೆಯ ಆಧಾರದ ಮೇಲೆ ಸಾಲಗಳನ್ನು ಮಂಜೂರು ಮಾಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ 0467 2999940 ಕರೆ ಮಾಡಬಹುದು.

ಅರ್ಜಿ ಸಲ್ಲಿಕೆ ದಿನಾಂಕ ವಿಸ್ತರಣೆ

ಕಾಸರಗೋಡು: ಕೇರಳ ಸರಕಾರಿ ಸಂಸ್ಥೆಯಾದ ಐಎಚ್‌ಆರ್‌ಡಿ ಕೇಂದ್ರಗಳಲ್ಲಿ ಪ್ರಾರಂಭವಾಗುವ ಡಿಪ್ಲೊಮಾ ಇನ್ ಜೆರಿಯಾಟ್ರಿಕ್ ಕೇರ್ ಕೋರ್ಸ್‌ಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಮೇ 29ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ 8547005000 ಸಂಪರ್ಕಿಸಬಹುದು.

ಈ ವರ್ಷವೂ ಚೆರ್ಕಳ - ಜಾಲ್ಸೂರು ಅಂತಾರಾಜ್ಯ ಹೆದ್ದಾರಿಯಲ್ಲೇ ಹರಿಯಲಿದೆ ಮಳೆನೀರು

ಬೋವಿಕ್ಕಾನ ಪೇಟೆಯ ಚರಂಡಿ ಸಮಸ್ಯೆಗೆ ಲಭಿಸಿಲ್ಲ ಪರಿಹಾರ





ಕಾಸರಗೋಡು: ಜಿಲ್ಲೆಯ ಪ್ರಮುಖ ರಸ್ತೆಗಳಲ್ಲಿ ಒಂದಾಗಿರುವ ಚೆರ್ಕಳ – ಮುಳ್ಳೇರಿಯ – ಜಾಲ್ಸೂರು ಅಂತಾರಾಜ್ಯ ಹೆದ್ದಾರಿಯ ವಿವಿಧೆಡೆಗಳಲ್ಲಿ ಸಂಕಷ್ಟಗಳು ಹೆಚ್ಚುತ್ತಾ ಹೋಗುತ್ತಿವೆ. ಈಗ ಈ ರಸ್ತೆಯ ಬೋವಿಕ್ಕಾನ ಪೇಟೆಯು ಸಮಸ್ಯೆಗಳ ಆಗರವಾಗಿ ಮಾರ್ಪಟ್ಟಿದ್ದು ಜನರ ಬವಣೆಗೆ ಪರಿಹಾರವಿಲ್ಲದಂತಾಗಿದೆ.

ಮುಳಿಯಾರು ಗ್ರಾ.ಪಂ. ವ್ಯಾಪ್ತಿಯ ಪ್ರಧಾನ ಪೇಟೆಯಾದ ಬೋವಿಕ್ಕಾನದಲ್ಲಿ ಮಳೆಗಾಲ ಬಂತೆಂದರೆ ನೀರು ಹರಿಯಲು ಸಮರ್ಪಕವಾಗಿ ಚರಂಡಿ ವ್ಯವಸ್ಥೆ ಇಲ್ಲದಿರುವುದು ವಿಪರ್ಯಾಸವಾಗಿದೆ. ಬೋವಿಕ್ಕಾನ ಪಟ್ಟಣದಲ್ಲಿ ಇನ್ನೂ ಕೂಡಾ ಸಮರ್ಪಕವಾದ ಚರಂಡಿ ನಿರ್ಮಿಸದಿರುವುದು ಸಮಸ್ಯೆಗೆ ಪ್ರಧಾನ ಕಾರಣವಾಗಿದೆ. ಬೋವಿಕ್ಕಾನ ಪೇಟೆ ಪ್ರದೇಶದಲ್ಲಿ ಮುಳಿಯಾರು ಗ್ರಾಮ ಪಂಚಾಯತ್ ಕಚೇರಿ, ಮುಳಿಯಾರು ಆರೋಗ್ಯ ಕೇಂದ್ರ, ಮುಳಿಯಾರು ಗ್ರಾಮ ಕಚೇರಿ, ಬ್ಯಾಂಕ್‌ಗಳು, ಶಿಕ್ಷಣ ಸಂಸ್ಥೆಗಳು, ಹಲವಾರು ವ್ಯಾಪಾರ ಸಂಸ್ಥೆಗಳು ಸಹಿತ ಇನ್ನಿತರ ಅನೇಕ ಸರಕಾರಿ, ಖಾಸಗಿ ವಲಯಗಳ ಕಟ್ಟಡಗಳಿವೆ. ದಿನಂಪ್ರತಿ ನೂರಾರು ಮಂದಿ ಈ ಪೇಟೆಗೆ ಬಂದು ಹೋಗುತ್ತಾರೆ.

ಸುಳ್ಯ, ಜಾಲ್ಸೂರು, ಮುಳ್ಳೇರಿಯ, ಅಡೂರು, ಬೆಳ್ಳೂರು, ಮಲ್ಲ, ಬಂದಡ್ಕ, ಕುತ್ತಿಕೋಲು, ಕುಂಡಂಗುಳಿ ಮೊದಲಾದ ಮುಖ್ಯ ಕೇಂದ್ರಗಳಿಗೆ ತೆರಳಲು ಬೋವಿಕ್ಕಾನ ಪೇಟೆ ಮೂಲಕವೇ ಸಾಗಬೇಕು. ಇಂತಹ ಪ್ರಮುಖ ಕೇಂದ್ರದಲ್ಲಿ ಮುಂಗಾರು ಪೂರ್ವ ಸಿದ್ಧತೆಗಾಗಿ ಯಾವುದೇ ಚಟುವಟಿಕೆಗಳು ಕಾರ್ಯಗತಗೊಂಡಿಲ್ಲ. ಚರಂಡಿ ಸಮಸ್ಯೆಗೆ ಶಾಶ್ವತ ವ್ಯವಸ್ಥೆಗಳೂ ನಡೆಯಲಿಲ್ಲ. ಸಣ್ಣಪುಟ್ಟ ಮಳೆ ಸುರಿದರೂ ಚರಂಡಿಯಲ್ಲಿ ಹರಿಯ ಬೇಕಾದ ನೀರು ರಸ್ತೆ ಮೂಲಕವೇ ಹರಿಯುತ್ತಿದೆ. ಕುಂಟುತ್ತಾ ಸಾಗುತ್ತಿರುವ ಚೆರ್ಕಳ – ಜಾಲ್ಸೂರು ರಸ್ತೆ ಅಭಿವೃದ್ಧಿ ಯೋಜನೆಯ ಅಂಗವಾಗಿಯಾದರೂ ಬೋವಿಕ್ಕಾನದಲ್ಲಿ ಸುಸಜ್ಜಿತ ಮಾದರಿಯ ಚರಂಡಿ ನಿರ್ಮಿಸಬೇಕಾಗಿತ್ತು.

ಈ ಮಧ್ಯೆ ಉದುಮ ಶಾಸಕರ ನಿಧಿ ಬಳಸಿ ಪೇಟೆಯಲ್ಲಿ ಮೋರಿ ಸಂಕ ನಿರ್ಮಾಣ ಮತ್ತು ಚರಂಡಿ ನಿರ್ಮಿಸಿ ಬೋವಿಕ್ಕಾನದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ನಿರ್ಧರಿಸಲಾಗಿದೆ. ಮುಂದಿನ ಕೆಲವೇ ದಿನಗಳಲ್ಲಿ ಮಳೆಗಾಲ ಸಮೀಪಿಸಲಿದೆ. ಆದರೆ ಮೋರಿ ಸಂಕ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ತಿಂಗಳುಗಳ ಕಾಲ ತಗಲಬಹುದು. ಕಳೆದ ವರ್ಷ ಮೇ ತಿಂಗಳಲ್ಲಿಯೇ ಮುಂಗಾರು ಪೂರ್ವ ಮಳೆ ಸುರಿಯಲು ಆರಂಭವಾಗಿತ್ತು. ಅಂತಹ ಪರಿಸ್ಥಿತಿ ಈ ವರ್ಷವೂ ಎದುರಾದರೆ ಬೋವಿಕ್ಕಾನ ಸಿಟಿಯಲ್ಲಿ ಸಾರಿಗೆ ಸಂಚಾರ ಅಸ್ತವ್ಯಸ್ತಗೊಳ್ಳಲಿದೆ. ರಸ್ತೆ ಕೆಸರುಗುಂಡಿಯಾಗಿ ಅಪಾರ ಸಮಸ್ಯೆಗೆ ಕಾರಣವಾಗಬಹುದು.

ಬೋವಿಕ್ಕಾನ ಪೇಟೆಯಲ್ಲಿ ಪ್ರಧಾನ ಶಿಕ್ಷಣ ಸಂಸ್ಥೆಯಿದ್ದು, ಮಳೆಗಾಲದಲ್ಲಿ ವಿದ್ಯಾರ್ಥಿಗಳು ರಸ್ತೆ ದಾಟುವಾಗ ತುಂಬಿ ಹರಿಯುವ ನೀರು ಆತಂಕಕ್ಕೂ ದಾರಿಮಾಡಿಕೊಡುತ್ತಿದೆ. ಆದಷ್ಟು ಶೀಘ್ರದಲ್ಲೇ ಮೋರಿ ಸಂಕ ನಿರ್ಮಾಣ ಕಾಮಗಾರಿಯನ್ನು ಪೂರ್ತಿಗೊಳಿಸಿ ಜನರ ಸಂಕಷ್ಟಗಳಿಗೆ ಶಾಶ್ವತ ಪರಿಹಾರ ಒದಗಿಸಬೇಕು. ಸೂಕ್ತವಾದ ಕಾಲುವೆ ನಿರ್ಮಾಣಗೊಂಡರೆ ಮಾತ್ರ ಸಮಸ್ಯೆಗೆ ಕಾಯಕಲ್ಪ ಲಭಿಸಬಹುದು ಎಂದು ಸಾರ್ವಜನಿಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಚರಂಡಿ ಅವ್ಯವಸ್ಥೆಯಿಂದ ವ್ಯಾಪಾರಿಗಳಿಗೆ ತೊಂದರೆ

ಬೋವಿಕ್ಕಾನ ಪೇಟೆಯಲ್ಲಿ ಚರಂಡಿ ಅವ್ಯವಸ್ಥೆಯು ವ್ಯಾಪಾರಿಗಳ ಪಾಲಿಗೆ ಬಹುದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಸಕಾಲದಲ್ಲಿ ಹೂಳೆತ್ತದ ಕಾರಣ ಮಳೆಗಾಲದಲ್ಲಿ ಕೊಳಚೆ ನೀರು ಸಹಿತ ಮಳೆನೀರು ವ್ಯಾಪಾರ ಕೇಂದ್ರಗಳ ಸುತ್ತಲೂ ಆವರಿಸುತ್ತದೆ. ಇದರಿಂದಾಗಿ ವ್ಯಾಪಾರಕ್ಕೆ ಆಗಮಿಸುವ ಗ್ರಾಹಕರಿಗೂ ಸಮಸ್ಯೆಯಾಗುತ್ತಿದೆ. ವಾರದ ಸಂತೆ ನಡೆಯುವ ಪ್ರದೇಶವೂ ಕೆಸರುಮಯವಾಗುತ್ತದೆ. ಇದಕ್ಕೊಂದು ಶಾಶ್ವತ ಪರಿಹಾರ ಬೇಕು ಎಂದು ವ್ಯಾಪಾರಿಗಳು ಆಗ್ರಹಿಸಿದ್ದಾರೆ.

ಮಿತ್ರಕಲಾ ವೃಂದದ ಸುವರ್ಣ ಸಂಭ್ರಮ: ಬಹುಭಾಷಾ ಕವಿ ಸಂಗಮ



ಕಾಸರಗೋಡು: ಮಧೂರು ಮಿತ್ರಕಲಾ ವೃಂದದ ಸುವರ್ಣ ಸಂಭ್ರಮದ ಅಂಗವಾಗಿ ಬಹುಭಾಷಾ ಕವಿ ಸಂಗಮ ಶನಿವಾರ ಮಧೂರು ಸೇವಾ ಸಹಕಾರಿ ಬ್ಯಾಂಕ್ ಸಭಾಂಗಣದಲ್ಲಿ ನಡೆಯಿತು. ಸಮಾರಂಭವನ್ನು ಸಾಹಿತಿ ಸೀತಾಲಕ್ಷ್ಮೀ ವರ್ಮ ವಿಟ್ಲ ಅರಮನೆ ದೀಪ ಬೆಳಗಿಸಿ ಉದ್ಘಾಟಿಸಿದರು. ಸಾಹಿತಿ, ಶಿಕ್ಷಣ ತಜ್ಞ ವಿ.ಬಿ.ಕುಳಮರ್ವ ಅಧ್ಯಕ್ಷತೆ ವಹಿಸಿದ್ದರು. ಕಸಾಪ ಕೇರಳ ಗಡಿನಾಡ ಘಟಕಾಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ ಮುಖ್ಯ ಅತಿಥಿಗಳಾಗಿದ್ದರು. ಜಿಲ್ಲಾ ಕನ್ನಡ ಲೇಖಕರ ಸಂಘದ ಕೋಶಾಧಿಕಾರಿ ವಿಶಾಲಾಕ್ಷ ಪುತ್ರಕಳ ಶುಭಾಶಂಸನೆಗೈದರು. ಮಿತ್ರಕಲಾ ವೃಂದದ ಅಧ್ಯಕ್ಷ ಚಂದ್ರಗೋಪಾಲ ಉಪಸ್ಥಿತರಿದ್ದರು. ಚುಟುಕು ಸಾಹಿತ್ಯ ಪರಿಷತ್ತು ಸುಳ್ಯ ತಾಲೂಕು ಅಧ್ಯಕ್ಷೆ ಅಶ್ವಿನಿ ಕೋಡಿಬೈಲು ಆಶಯ ನುಡಿಗಳನ್ನಾಡಿದರು. ಸುವರ್ಣ ಮಹೋತ್ಸವ ಸಮಿತಿ ಗೌರವ ಸಲಹೆಗಾರ, ಪತ್ರಕರ್ತ, ಸಾಹಿತಿ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಮಧುಕರ ಕೆ.ಗಟ್ಟಿ ಸ್ವಾಗತಿಸಿ, ಕೋಶಾಧಿಕಾರಿ ಸುಜಿತ್ ಕೆ.ಸಿ. ವಂದಿಸಿದರು. ದಿವ್ಯಾ ಗಟ್ಟಿ ಪರಕ್ಕಿಲ ಕಾರ್ಯಕ್ರಮ ನಿರೂಪಿಸಿದರು.

ಬಳಿಕ ವಿ.ಬಿ.ಕುಳಮರ್ವ ಅವರ ಅಧ್ಯಕ್ಷತೆಯಲ್ಲಿ ನಡೆದ ಬಹುಭಾಷಾ ಕವಿ ಸಂಗಮದಲ್ಲಿ ವೆಂಕಟ್ ಭಟ್ ಎಡನೀರು, ಪ್ರಮೀಳಾ ಚುಳ್ಳಿಕ್ಕಾನ, ವಿಜಯ ಕಾನ, ಜ್ಯೋತ್ಸ್ನಾ ಕಡಂದೇಲು, ಸುಭಾಶ್ ಪೆರ್ಲ, ಪ್ರೇಮಚಂದ್ರನ್ ಚೊಂಬಾಲ, ನಿರ್ಮಲ ಶೇಷಪ್ಪ ಖಂಡಿಗೆ, ಶಶಿಕಲಾ ಕುಂಬಳೆ, ಹರೀಶ್ ಜಿ.ನಾಯಕ್, ಆನಂದಕೃಷ್ಣನ್ ಎಡಚ್ಚೇರಿ, ಹರ್ಷಿತ ಪೆರ್ಲ, ಸುಮನ ಕರಿಂಬಿಲ, ಧನ್ಯಶ್ರೀಸರಳಿ, ಹರೀಶ್ ಸುಲಾಯ ಒಡ್ಡಂಬೆಟ್ಟು, ವಿರಾಜ್ ಅಡೂರು, ವಿಜಯರಾಜ ಪುಣಿಚಿತ್ತಾಯ, ರವೀಂದ್ರನ್ ಪಾಡಿ, ಶ್ರೀಹರಿ ಭಟ್ ಪೆಲ್ತಾಜೆ, ಸತ್ಯಶಂಕರ ಅನಂತಪುರ, ಸುಂದರ ಬಾರಡ್ಕ, ಪ್ರಭಾವತಿ ಕೆದಿಲ್ಲಾಯ, ಶರಣ್ಯ ನಾರಾಯಣನ್, ಸ್ನೇಹಲತಾ ದಿವಾಕರ್, ವನಜಾಕ್ಷಿ ಚೆಂಬ್ರಕಾನ, ಚಂದ್ರಿಕಾ ಶೆಣೈ ಮುಳ್ಳೇರಿಯ, ಚಂದ್ರಕಲಾ ನೀರಾಳ, ಅಶ್ವಿನಿ ಚಂದ್ರಶೇಖರ ಕೊಲ್ಯ, ಪುರುಷೋತ್ತಮ ಭಟ್ ಕೆ., ಅವನಿ ಕರಿಂಬಿಲ, ಮೋಹನದಾಸ ಅನ್ನೆಪಲ್ಲಡ್ಕ ವಿವಿಧ ಭಾಷೆಗಳ ಕವನ ವಾಚಿಸಿದರು. ದಿವ್ಯಾ ಗಟ್ಟಿ ಪರಕ್ಕಿಲ ಹಾಗೂ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಕಾರ್ಯಕ್ರಮ ನಿರ್ವಹಿಸಿದರು.

ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ಸಾಂಸ್ಕೃತಿಕ ಕಲಾ ವೈಭವ



ಕಾಸರಗೋಡು: ಪುರಾಣ ಪ್ರಸಿದ್ಧ ಕೂಡ್ಲು ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಪುನರ್ ಪ್ರತಿಷ್ಠಾ ಬ್ರಹ್ಮಕಲಶಾಭಿಷೇಕವು ವಿವಿಧ ವೈದಿಕ, ತಾಂತ್ರಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಬಹಳ ವಿಜೃಂಭಣೆಯಿಂದ ನಡೆಯಿತು.

ಸಮಾರಂಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ಕಾಸರಗೋಡು ಸಂಸ್ಥೆಯ ವತಿಯಿಂದ ಸಾಂಸ್ಕೃತಿಕ ಕಲಾ ವೈಭವಕಲಾವಿದರಕಲರವಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರಗಿತು. ಗುರುರಾಜ್ ಕಾಸರಗೋಡು ಅವರ ಸಂಯೋಜನೆ ಮತ್ತು ನಿರೂಪಣೆಯೊಂದಿಗೆ ಕಾರ್ಯಕ್ರಮ ನಡೆಯಿತು. ಅಲ್ಲದೆ ಕಾರ್ಯಕ್ರಮದಲ್ಲಿ ಸಂಸ್ಥೆಯ ಅಪ್ರತಿಮ ಕಲಾವಿದರು ಭಾಗವಹಿಸಿ ಪ್ರತಿಭಾ ಪ್ರದರ್ಶನ ನೀಡಿ ಜನಮನ ರಂಜಿಸಿದರು.

ಈ ಸುಂದರ ಕಾರ್ಯಕ್ರಮದಲ್ಲಿ ಸಂಸ್ಥೆಯ ಸುಮಧುರ ಗಾಯಕ ಹರೀಶ್ ಪಂಜಿಕಲ್ಲು ಅವರಿಗೆ ದೇವಸ್ಥಾನದ ಬ್ರಹ್ಮಕಲಶಾಭಿಷೇಕ ಸಮಿತಿಯ ಅಧ್ಯಕ್ಷ, ಧಾರ್ಮಿಕ ಮುಂದಾಳು ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಕೆ.ಜಗದೀಶ್ ಕೂಡ್ಲು, ಸಂಸ್ಥೆಯ ಗೌರವಾಧ್ಯಕ್ಷ ಗಣೇಶ್ ಪ್ರಸಾದ್ ಆಳ್ವ, ಜೊತೆ ಕಾರ್ಯದರ್ಶಿ ವರ್ಷಾ ಶೆಟ್ಟಿ, ಸಂಸ್ಥೆಯ ಸದಸ್ಯೆ ಜಯಪ್ರಭಾ ವೈ. ಮುಂತಾದ ಗಣ್ಯರ ಉಪಸ್ಥಿತಿಯಲ್ಲಿ ಸಂಸ್ಥೆಯ ಪ್ರತಿಷ್ಠಿತ ಗೌರವವಾದ ಸ್ವರಗಾನ ಸಿರಿ 2026 ಪ್ರಶಸ್ತಿ ನೀಡಿ ಸನ್ಮಾನಿಸಿ ಪುರಸ್ಕರಿಸಲಾಯಿತು.

ಹರೀಶ್ ಅವರ ಮಕ್ಕಳಾದ ಅಕ್ಷತಾ ಪಿ., ಅಖಿಲೇಶ್ ಪಿ., ಅಜೀಶ್ ಪಿ., ಅನೀಶ್ ಪಿ. ಜೊತೆಗಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಸಂಸ್ಥೆಯ ಪ್ರೋತ್ಸಾಹಕಿ, ನೃತ್ಯ ಕಲಾವಿದೆ, ನೃತ್ಯ ನಿರ್ದೇಶಕಿ ನಿಶ್ಮಿತಾ ಅವರನ್ನು ಗೌರವಿಸಲಾಯಿತು.

ಕೂಡ್ಲುಗುಡ್ಡೆ ದೇಗುಲ ಗರ್ಭಗುಡಿ, ನಮಸ್ಕಾರ ಮಂಟಪಕ್ಕೆ ಶಿಲಾನ್ಯಾಸ



ಕಾಸರಗೋಡು: ಇತಿಹಾಸ ಪ್ರಸಿದ್ಧ ಹಾಗೂ ಅತ್ಯಂತ ಕಾರಣಿಕ ಕ್ಷೇತ್ರಗಳಲ್ಲಿ ಒಂದಾದ ಕೂಡ್ಲು ಗುಡ್ಡೆ ಶ್ರೀ ಮಹಾಲಿಂಗೇಶ್ವರ ದೇವಾಲಯದ ಗರ್ಭಗುಡಿ ಮತ್ತು ನಮಸ್ಕಾರ ಮಂಟಪವನ್ನು ಸಂಪೂರ್ಣವಾಗಿ ಶಿಲಾಮಯವಾಗಿ ನವೀಕರಿಸುವ ಭಾಗವಾಗಿ ಶುಕ್ರವಾರ ಬೆಳಗ್ಗಿನ ಶುಭಮುಹೂರ್ತದಲ್ಲಿ ಶಿಲಾನ್ಯಾಸ ಕಾರ್ಯಕ್ರಮವು ಶ್ರದ್ಧಾಭಕ್ತಿಯಿಂದ ವಿವಿಧ ವಿಧಿ ವಿಧಾನಗಳೊಂದಿಗೆ ಜರಗಿತು.

ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ಉಚ್ಚಿಲ ಪದ್ಮನಾಭ ತಂತ್ರಿ ಮತ್ತು ಶಿಲ್ಪಿ ಬೆದ್ರಡ್ಕ ರಮೇಶ ಕಾರಂತ ಅವರ ನೇತೃತ್ವದಲ್ಲಿ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರ ದಿವ್ಯಹಸ್ತದಲ್ಲಿ ಶಿಲಾನ್ಯಾಸ ಕಾರ್ಯಕ್ರಮವು ವೈದಿಕ ವಿದ್ವಾಂಸರ ಮಂತ್ರಘೋಷಗಳೊಂದಿಗೆ ಸಾಂಗವಾಗಿ ನೆರವೇರಿತು.

ಊರ ಪರವೂರ ಅಪಾರ ಮಂದಿ ಭಕ್ತರು ಈ ಪುಣ್ಯಕಾರ್ಯದಲ್ಲಿ ಪಾಲ್ಗೊಂಡಿದ್ದರು. ನಂತರ ಭಕ್ತರ ಸಮ್ಮುಖದಲ್ಲಿ ಮಹಾಸಭೆ ನಡೆಯಿತು. ಡಾ.ಅನಂತ ಕಾಮತ್ ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಜೀರ್ಣೋದ್ಧಾರ ಸಮಿತಿಯ ವಿಪುಲೀಕರಣ ಮತ್ತು ಮುಂದಿನ ಕ್ಷೇತ್ರ ನಿರ್ಮಾಣ ಕಾರ್ಯ ಪ್ರಾರಂಭಿಸುವ ಕುರಿತು ಚರ್ಚಿಸಲಾಯಿತು. ಧನ ಸಂಗ್ರಹಕಾರ್ಯಗಳಬಗ್ಗೆಸಮಗ್ರವಾಗಿ ಸಮಾಲೋಚಿಸಲಾಯಿತು.

ಹಾಡಿ ರಂಜಿಸಿದ ಆರೋಗ್ಯ ನಿರೀಕ್ಷಕ ಜಯಕೃಷ್ಣನ್



ಕಾಸರಗೋಡು: ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದಲ್ಲಿ ನಡೆದ ಬ್ರಹ್ಮಕಲಶೋತ್ಸವವು ಧಾರ್ಮಿಕತೆಗೆ ಮಾತ್ರವಲ್ಲ, ಸಾಂಸ್ಕೃತಿಕ ಉತ್ಸವವಾಗಿಯೂ ಗಮನ ಸೆಳೆದಿದೆ. ನಿಗದಿತ ಕಲಾಕಾರ್ಯಕ್ರಮಗಳಲ್ಲದೆ, ಅವಕಾಶಗಳನ್ನು ನೋಡಿ ಕೊಂಡು ಸ್ವಯಂ ಪ್ರೇರಣೆ ಯಿಂದ ತಮ್ಮ ಪ್ರತಿಭೆಯನ್ನು ಕಲಾ ಸೇವೆಯಾಗಿ ಪ್ರದರ್ಶಿಸಿದ ಮಂದಿಯೂ ಇಲ್ಲಿನ ವೇದಿಕೆಗಳನ್ನು ಸಂಪನ್ನಗೊಳಿಸಿದ್ದಾರೆ. ಈ ಸಾಲಿನಲ್ಲಿ ಹಿರಿಯ ಹರಿದಾಸ ದೇವಕೀತನಯ ಕೂಡ್ಲು ಸಹಿತ ಅನೇಕ ಮಂದಿ ಪ್ರತಿಭಾ ಸೇವೆ ನಡೆಸಿ ಧನ್ಯರಾದವರು. ಈ ಸಾಲಿಗೆ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರೂ ಸೇರಿರುವುದು ಇತರರಿಗೆ ಮಾದರಿಯಾಗಿದೆ. ಕಾಸರಗೋಡು ಆರೋಗ್ಯ ಇಲಾಖೆಯಲ್ಲಿ ಜ್ಯೂನಿಯರ್ ಹೆಲ್ತ್ ಇನ್‌ಸ್ಪೆಕ್ಟರ್ ಆಗಿರುವ ಜಯಕೃಷ್ಣನ್ ಅವರು ಇಲ್ಲಿನ ಕರ್ತವ್ಯ ನಿರತರಾಗಿರುವ ವೇಳೆ ಗಮನಿಸಿದ ಕಲಾಕಾರ್ಯಕ್ರಮಗಳಿಂದ ಪ್ರಭಾವಿತರಾಗಿ ತಮ್ಮ ಕರ್ತವ್ಯದ ಬಿಡುವಿನ ವೇಳೆ ಸ್ವಯಂ ಪ್ರೇರಣೆಯಿಂದ ಭಕ್ತಿಗಾನ ಹಾಡಿ ರಂಜಿಸಿದ್ದಾರೆ. ತಮ್ಮ ಸುಮಧುರ ಕಂಠಶ್ರೀಯಿಂದ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸಿದ್ದಾರೆ. ಕಾಳ್ಯಂಗಾಡು ಬ್ರಹ್ಮಕಲಶದ ಪ್ರತೀ ದಿನ ಆರೋಗ್ಯ ಇಲಾಖೆಯು ಶಿಬಿರ ನಡೆಸಿದ್ದು, ಆಸ್ತಿಕರ ಆರೋಗ್ಯ ಕಾಪಾಡುವಲ್ಲಿ ತನ್ನ ಸೇವೆ ನಡೆಸುತ್ತಿದೆ. ಇಲ್ಲಿನ ಹೊಣೆಯನ್ನು ಜಯಕೃಷ್ಣನ್ ಹೊಂದಿದ್ದಾರೆ.

ಕನಿಲ ಶ್ರೀ ಭಗವತಿ ವಾರ್ಷಿಕ ಜಾತ್ರೆ, ಕ್ಷೇತ್ರಕ್ಕೆ ಕೊಪ್ಪರಿಗೆ ಸಮರ್ಪಣೆ



ಮಂಜೇಶ್ವರ: ಕನಿಲ ಶ್ರೀ ಭಗವತಿ ಕ್ಷೇತ್ರದ ವಾರ್ಷಿಕೋತ್ಸವದ ಜಾತ್ರೆ ಸಂದರ್ಭದಲ್ಲಿ ಮಚ್ಚಂಬಾಡಿ ಪಾವೂರು ವಿಭಾಗದ ವತಿಯಿಂದ ಕನಿಲ ಶ್ರೀ ಭಗವತಿ ಕ್ಷೇತ್ರಕ್ಕೆ ಅಕ್ಷಯ ಪಾತ್ರೆ (ಕೊಪ್ಪರಿಗೆ) ಸಮರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರದ ಗುರಿಕಾರರಾದ ಪುರುಷೋತ್ತಮ ಗುರಿಕಾರ, ಪ್ರಸಾದ್ ಗುರಿಕಾರ, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಗಣೇಶ್ ಪಾವೂರು, ಪಾವೂರು ವಿಭಾಗದ ಅಧ್ಯಕ್ಷ ಮನೋಜ್ ಕೊಪ್ಪಳ ಹಾಗೂ ಜಯರಾಜ್ ಬಜಾಲ್, ಶಿವಕುಮಾರ್ ಬಳ್ಳೂರು, ಸುರೇಶ್ ಬೋಲ್ಯಾಂಗೋಡಿ, ದಿವಾಕರ ಚೌಕಿ, ಸುಧಾಮಣಿ ಅರಿಬೈಲ್, ಮಲ್ಲಿಕಾ ಬೇಕರಿ, ಸರಿತಾ ಕುಂಡಾಪು, ಲಲಿತಾ ತಾವುಡುಗೋಳಿ, ಚಿರಶ್ರೀ ಬೇಕರಿ, ಚಂದ್ರಾವತಿ ಬೋಲ್ಯಾಂಗೋಡಿ, ನಾರಾಯಣ ಕಳ್ಳಜೆ, ವಿನೋದ್ ವಳಚ್ಚಿಲ್ ಹಾಗೂ ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಕೋತ್ಸವ



ಮಂಜೇಶ್ವರ: ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಕಲಿಕೋತ್ಸವ ಜರಗಿತು.

ಮಂಜೇಶ್ವರ ಬಿಪಿಸಿ ರಾಜಗೋಪಾಲನ್ ಕಾರ್ಯಕ್ರಮ ಉದ್ಘಾಟಿಸಿ, ಕಲಿಕೋತ್ಸವವು ವಿದ್ಯಾರ್ಥಿಗಳ ಉತ್ಸವವಾಗಿದೆ ಎಂದರು. ತಾನು ಆರ್ಜಿಸಿದನ್ನು ಪ್ರದರ್ಶಿಸುವ ಒಂದು ಉತ್ತಮ ವೇದಿಕೆಯಾಗಿದೆ. ಹೆತ್ತವರು ಹಾಗೂ ಸಮಾಜದ ಸಮ್ಮುಖದಲ್ಲಿ ತನ್ನ ಹಿರಿಮೆಯನ್ನು ತೋರ್ಪಡಿಸುತ್ತಾ ತನ್ನ ಸಾರ್ಥಕತೆಯ ಪ್ರತೀಕ ಆಗಿದೆ. ಇದೊಂದು ಶಾಲೆಯ ಹಾಗೂ ವಿದ್ಯಾರ್ಥಿಗಳ ಕೈಗನ್ನಡಿ ಎಂದು ಅವರು ಹೇಳಿದರು.

ಇದೇ ಸಂದರ್ಭದಲ್ಲಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವನ್ನು ವಿಭಿನ್ನವಾಗಿ ಆಚರಿಸಲಾಯಿತು. ಎಲ್ಲಾ ತರಗತಿಗಳ ವಿದ್ಯಾರ್ಥಿಗಳ ಸೃಜನ ಶೀಲತೆಯ ಉತ್ಪನ್ನಗಳಾದ ಕಥೆ, ಪದ್ಯ, ಸಂಭಾಷಣೆ ಒಗಟು, ಗಾದೆ, ನುಡಿಮುತ್ತು, ಚಿತ್ರಗಳು ರಸಪ್ರಶ್ನೆ ಮೊದಲಾದವುಗಳನ್ನೊಳಗೊಂಡ ಹಸ್ತ ಪತ್ರಿಕೆಯನ್ನು ಬಿಡುಗಡೆಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಎಸ್‌ಎಂಸಿ ಅಧ್ಯಕ್ಷ ಇಬ್ರಾಹಿಂ ಹನಿಫ, ಎಂಪಿಟಿಎ ಅಧ್ಯಕ್ಷೆ ಸುಷ್ಮಾ, ರಮೇಶ್ ಮತ್ತು ಸೈಬೂನಿಸ ಉಪಸ್ಥಿತರಿದ್ದು ಶುಭ ಹಾರೈಸಿದರು. ನಂತರ ಶಿಕ್ಷಕಿ ಜಸೀಲಾ ಅವರ ನೇತೃತ್ವದಲ್ಲಿ ಶಾಲಾ ಚಟುವಟಿಕೆಗಳಲ್ಲಿ ಗಮನಾರ್ಹ ಸಾಧನೆ ಗಳಿಸಿದವರಿಗೆ ಬಹುಮಾನ ವಿತರಿಸಲಾಯಿತು.

ಶಾಲಾ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ ಸ್ವಾಗತಿಸಿದರು. ಶಿಕ್ಷಕಿ ಧನ್ಯಾ ಪಿ.ವಿ. ವಂದಿಸಿದರು. ಅಬ್ದುಲ್ ಬಶೀರ್ ಕಾರ್ಯಕ್ರಮ ನಿರೂಪಿಸಿದರು. ಬಳಿಕ ವಿದ್ಯಾರ್ಥಿಗಳಿಂದ ಕಲಾ ಸಾಂಸ್ಕೃತಿಕ ಚಟುವಟಿಕೆ ನಡೆಯಿತು.

ಪೊಸೋಟು ಹೊಳೆ ಈಗ ಕಸದ ತೊಟ್ಟಿ

ಮಂಜೇಶ್ವರ: ಮಂಜೇಶ್ವರದ ಪೊಸೋಟು ಹೊಳೆ ಈಗ ಕಸದ ತೊಟ್ಟಿಯಾಗಿ ಮಾರ್ಪಡಾಗುತ್ತಿದ್ದು ಸಾರ್ವಜನಿಕರ ಆರೋಗ್ಯದ ಮೇಲೆ ತೀವ್ರ ಆತಂಕದ ಭೀತಿ ಮೂಡಿಸಿದೆ. ಜನಸಂದಣಿ ಇಲ್ಲದ ವೇಳೆಯಲ್ಲಿ ಸೆಪ್ಟಿ ಟ್ಯಾಂಕ್‌ಗಳಿಂದ ಸಂಗ್ರಹಿಸಿದ ಮಲತ್ಯಾಜ್ಯವನ್ನು ಟ್ಯಾಂಕ್‌ಗಳ ಮೂಲಕ ತಂದು ನೇರವಾಗಿ ಹೊಳೆಗೆ ಸುರಿಯಲಾಗುತ್ತಿದೆ ಎಂಬ ಬಗ್ಗೆ ಸ್ಥಳೀಯರು ದೂರಿದ್ದಾರೆ.

ಕೇವಲ ಮಲತ್ಯಾಜ್ಯ ಮಾತ್ರವಲ್ಲದೆ ಕೋಳಿ ಮತ್ತು ದನದ ಮಾಂಸದ ತ್ಯಾಜ್ಯಗಳನ್ನು ಕೂಡಾ ಇಲ್ಲಿ ಎಸೆಯಲಾಗುತ್ತಿದೆ. ಇದರಿಂದಾಗಿ ಇಡೀ ಪರಿಸರ ದುರ್ನಾತದಿಂದ ಕೂಡಿದ್ದು, ಈ ಭಾಗದ ಸುಮಾರು 60ಕ್ಕೂ ಹೆಚ್ಚು ಕುಟುಂಬಗಳು ಸಾಂಕ್ರಾಮಿಕ ರೋಗದ ಭೀತಿಯನ್ನು ಎದುರಿಸುತ್ತಿದ್ದಾರೆ. ಹೊಳೆಯ ನೀರು ಸಂಪೂರ್ಣ ಕಲುಷಿತಗೊಂಡಿದ್ದು, ಈ ಮಲಿನ ನೀರು ಸುತ್ತಮುತ್ತಲಿನ ಮನೆಗಳ ಬಾವಿ ನೀರಿಗೂ ಸೇರುತ್ತಿದೆ. ಕುಡಿಯುವ ನೀರಿಗೂ ಹಾಹಾಕಾರ ಉಂಟಾಗಿದೆ. ಅಧಿಕಾರಿ ಗಳು ತ್ಯಾಜ್ಯ ಸುರಿಯುತ್ತಿರುವ ಕಿಡಿಗೇಡಿಗಳನ್ನು ಪತ್ತೆಹಚ್ಚಿ ಕಠಿಣ ಕ್ರಮಕೈಗೊಳ್ಳಬೇಕೆಂದು ಸ್ಥಳೀಯರು ಒತ್ತಾಯಿಸಿದ್ದಾರೆ.

ಕೂಡ್ಲು ಪಾಯಿಚ್ಚಾಲು ಶ್ರೀಸ್ಕಂದ ಒಡ್ದೋಲಗ ಯಕ್ಷಗಾನ ಉತವದ ಸಮಾರೋಪ ಸಮಾರಂಭ । ನಾಗೇಂದ್ರ ಭಟ್ ಅಭಿಪ್ರಾಯ

ಯಕ್ಷಗಾನ ಕ್ಷೇತ್ರದಲ್ಲಿ ಯುವ ಪತಿಭೆಗಳಿಗೆ ಅವಕಾಶ ನೀಡುವ ಕಾರ್ಯ ಶ್ಲಾಘನೀಯ



ಕಾಸರಗೋಡು: ಯಕ್ಷಗಾನದಲ್ಲಿ ಯುವ ಪ್ರತಿಭೆಗಳಿಗೆ ಅವಕಾಶ ಕೊಡುವ ನಿಟ್ಟಿನಲ್ಲಿ ಹುಟ್ಟಿಕೊಂಡ ಸಂಸ್ಥೆಯಾದ ಶ್ರೀಸ್ಕಂದ ಯಕ್ಷಗಾನ ಕೇಂದ್ರ ಪಾಯಿಚ್ಚಾಲು ಇದರ ನೇತೃತ್ವದಲ್ಲಿ ಹಮ್ಮಿಕೊಂಡ ಶ್ರೀಸ್ಕಂದ ಒಡ್ಡೋಲಗ ಎಂಬ ಯಕ್ಷಗಾನ ಉತ್ಸವವು ಶ್ಲಾಘನೀಯ. ಆಯ್ದ ಐದು ಮಕ್ಕಳ ತಂಡಗಳಿಂದ ಅದ್ಭುತ ಪ್ರದರ್ಶನ ನಡೆದಿದೆ. ಅದರಲ್ಲೂ ಕೇರಳ ರಾಜ್ಯ ಶಾಲಾ ಕಲೋತ್ಸವದಲ್ಲಿ ಎ ಗ್ರೇಡ್ ಪಡೆದ ಕಲ್ಲಿಕೋಟೆ ಮತ್ತು ಕಣ್ಣೂರಿನ ತಂಡಗಳಿಂದ ಅತ್ಯುತ್ತಮ ಪ್ರದರ್ಶನವಾಗಿದೆ. ಒಟ್ಟಿನಲ್ಲಿ ಯಕ್ಷಗಾನದಲ್ಲಿ ಇದೊಂದು ಮಹತ್ತರ ಸಾಧನೆಯಾಗಿದೆ ಎಂದು ಶಿವಮಂಗಲ ಕ್ಷೇತ್ರದ ಪ್ರಧಾನ ಅರ್ಚಕ ನಾಗೇಂದ್ರ ಭಟ್ ಹೇಳಿದ್ದಾರೆ.

ಕೂಡ್ಲು ಪಾಯಿಚ್ಚಾಲು ಶ್ರೀಸ್ಕಂದ ಸಂಸ್ಥೆಯ ವತಿಯಿಂದ ಆಯೋಜಿಸಲಾಗಿದ್ದ ಶ್ರೀಸ್ಕಂದ ಒಡ್ಡೋಲಗ ಯಕ್ಷಗಾನ ಉತ್ಸವದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಕೂಡ್ಲು ಶಾಲೆಯ ವ್ಯವಸ್ಥಾಪಕ ಕೆ.ಜಿ.ಶ್ಯಾನುಭೋಗ್, ಶೇಷವನ ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಆಡಳಿತ ಮೊಕ್ತೇಸರ ವೇಣುಗೋಪಾಲ, ರಿಪೋರ್ಟರ್ ಚಾನೆಲ್ ಕ್ಯಾಮರಾಮೆನ್ ರಂಜಿತ್ ಮನ್ನಿಪ್ಪಾಡಿ ಶುಭಹಾರೈಸಿದರು. ಶ್ರೀಸ್ಕಂದ ಯಕ್ಷಗಾನ ಕೇಂದ್ರದ ಅಧ್ಯಕ್ಷ ಕಿರಣ್ ಪ್ರಸಾದ್ ಕೂಡ್ಲು ಅಧ್ಯಕ್ಷತೆ ವಹಿಸಿದ್ದರು. ಶಾಲಾ ತಂಡದಲ್ಲಿ ಉತ್ತಮ ಪುಂಡುವೇಷ ಸುಧನ್ವ ಪಾತ್ರಧಾರಿ ಹೃದ್ಯ ಸಿ.ಪಿ., ಉತ್ತಮ ಸ್ತ್ರೀ ವೇಷ ಪ್ರಭಾವತಿ ಪಾತ್ರಧಾರಿ ನೈನಿಕಾ ಕೆ.ಪಿ., ಉತ್ತಮ ಬಣ್ಣದ ವೇಷ ಅನುಸಾಲ್ವ ಪಾತ್ರಧಾರಿ ಡಿಯೋನಾ ಲಿಯೋ ಡೌಗ್ಲಸ್ (ಎಲ್ಲವೂ ಕಲ್ಲಿಕೋಟೆ ಜಿಲ್ಲೆಯ ಪ್ರೊವಿಡೆನ್ಸ್ ಹೈಯರ್ ಸೆಕೆಂಡರಿ ಶಾಲೆ ಪ್ರದರ್ಶಿಸಿದ ಸುಧನ್ವಾರ್ಜುನ ಕಾಳಗ ಪ್ರಸಂಗ) ಮತ್ತು ಉತ್ತಮ ಕಿರೀಟ ವೇಷ ಕಣ್ಣೂರಿನ ಸೈಂಟ್ ತೇರೇಸಾಸ್ ಆಂಗ್ಲೋ ಇಂಡಿಯನ್ ಹೈಯರ್ ಸೆಕೆಂಡರಿ ಶಾಲೆಯ ತರಣಿಸೇನ ಕಾಳಗದ ರಾಮ ಪಾತ್ರಧಾರಿ ಐತೀಯ ಎಲ್.ಟಿ. ಪಡೆದುಕೊಂಡರು.

ಹಿರಿಯರ ವಿಭಾಗದಲ್ಲಿ ಉತ್ತಮ ಪುಂಡುವೇಷ ಶ್ರೀ ವೆಂಕಟ್ರಮಣ ಸ್ವಾಮಿ ಕೃಪಾಶ್ರಿತ ಯಕ್ಷಗಾನ ಅಧ್ಯಯನ ಕೇಂದ್ರದ ನರಕಾಸುರ ಮೋಕ್ಷದ ಕೃಷ್ಣ ಪಾತ್ರಧಾರಿ ಪ್ರೀತಿ ಕಲ್ಲೂರಾಯ, ಉತ್ತಮ ಸ್ತ್ರೀ ವೇಷ ಅದೇ ಪ್ರಸಂಗದ ಸತ್ಯಭಾಮೆ ಪಾತ್ರಧಾರಿ ಭಾಗ್ಯಶ್ರೀ, ಉತ್ತಮ ಬಣ್ಣದ ವೇಷ ಕುತ್ಯಾಳ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ವೇದೋದ್ಧರಣದ ತಮಾಸುರ ಪಾತ್ರಧಾರಿ ಅರ್ಜುನ್ ಕೂಡ್ಲು, ಉತ್ತಮ ಕಿರೀಟ ವೇಷ ಅದೇ ಪ್ರಸಂಗದ ದೇವೇಂದ್ರ ಪಾತ್ರಧಾರಿ ಶ್ರೀವತ್ಸ ಆಯ್ಕೆಯಾದರು. ಸಂಸ್ಥೆಯ ಜೊತೆಕಾರ್ಯದರ್ಶಿ ಲಾವಣ್ಯ ಭುವನೇಶ್ ಸ್ವಾಗತಿಸಿ, ಮುರಳೀಧರ ಶೆಟ್ಟಿ ವಂದಿಸಿದರು. ಹರ್ಷಕುಮಾರ್ ಬೆಳಿಂಜ ಕಾರ್ಯಕ್ರಮ ನಿರೂಪಿಸಿದರು. ಕೇಂದ್ರದ ಗುರು ರಂಜಿತ್ ಗೋಳಿಯಡ್ಕ ನೇತೃತ್ವ ವಹಿಸಿದ್ದರು. ಶ್ರೀ ದುರ್ಗಾಂಬಾ ಯಕ್ಷಗಾನ ವೇಷಭೂಷಣ ಗೋಳಿಯಡ್ಕ ಮಲ್ಲ ಸಂಸ್ಥೆಯು ವೇಷಭೂಷಣದಲ್ಲಿ ಸಹಕರಿಸಿತು. ಅರ್ಪಿತ್ ಕೂಡ್ಲು, ಆಕಾಶ್ ಕೂಡ್ಲು, ಅರ್ಜುನ್ ಕೂಡ್ಲು, ಸುಜನ್, ಪ್ರವೀಣ, ಕುತ್ಯಾಳ ನವಜೀವನ ಸಮಿತಿ ಪ್ರತಿನಿಧಿಗಳು ಹಾಗೂ ಕೇಂದ್ರದ ಮಕ್ಕಳ ರಕ್ಷಕರು ಸಹಕರಿಸಿದರು.

ಹೊಸದಿಗಂತ

ನಮ್ಮ ಉಡುಪಿ

ನಿರಂತರ ಸುದ್ದಿ ಅಪ್ಡೇಟ್‌ಗಾಗಿ Google Lens ನಲ್ಲಿ ಈ QRಕೋಡ್ ಸ್ಕ್ಯಾನ್ ಮಾಡಿ WhatsApp ಗ್ರೂಪ್ ಇಂದೇ ಸೇರಿ!

website hosadigantha.com | E-paper epaper.hosadigantha.com | Email diganthamlr@gmail.com | Twitter HosadiganthaWeb

ಸೋಮವಾರ 04, ಮೇ 2026

ಸುತ್ತ ಮುತ್ತ

ಬಸ್ರೂರು ದೇಗುಲದಲ್ಲಿ ಪುನ: ಪ್ರತಿಷ್ಠಾ ವರ್ಧಂತಿ

ಕುಂದಾಪುರ: ಪುರಾಣ ಪ್ರಸಿದ್ಧ ಬಸ್ರೂರು ಶ್ರೀ ಮಹಾಲಸಾ ನಾರಾಯಣೀ ದೇವಸ್ಥಾನದಲ್ಲಿ ದೇವರ ಪುನ: ಪ್ರತಿಷ್ಠಾ 27ನೇ ವರ್ಧಂತಿ ಉತ್ಸವ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸಂಯಮೀಂದ್ರ ತೀರ್ಥ ಸ್ವಾಮೀಜಿಯವರ ಆಶೀರ್ವಾದಾನುಸಾರ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಶುಕ್ರವಾರ ನಡೆಯಿತು.



ಬೆಳಿಗ್ಗೆ ಪ್ರಾರ್ಥನೆಯೊಂದಿಗೆ ದೇವರ ಪುನ: ಪ್ರತಿಷ್ಠಾ 27ನೇ ವರ್ಧಂತಿ ಉತ್ಸವದ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭಗೊಂಡಿತು. ಬಳಿಕ ಸಾನಿಧ್ಯ ಹವನ, ಶತಕಲಶಾಭಿಷೇಕ, ಶ್ರೀ ನಾಗ ದೇವರಿಗೆ ಮತ್ತು ಜಟ್ಟಿಗ ದೈವಗಳಿಗೆ ವಿಶೇಷ ಪೂಜೆ, ಭಜನಾ ಕಾರ್ಯಕ್ರಮ, ಮಧ್ಯಾಹ್ನ ಹರಕೆ ಸೀರೆಗಳ ಏಲಂ, ಮಹಾ ಮಂಗಳಾರತಿ, ದರ್ಶನ ಸೇವೆ, ಸಮಾರಾಧನೆ ಸೇವೆ ನಡೆಯಿತು. ಸಂಜೆ ಭಜನಾ ಕಾರ್ಯಕ್ರಮ, ರಜತ ಪಲ್ಲಕ್ಕಿ ಉತ್ಸವ, ಅಷ್ಟಾವಧಾನ ಸೇವೆ, ವಸಂತ ಪೂಜೆ, ಪ್ರಸಾದ ವಿತರಣೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು. ಗುರುವಾರ ಶ್ರೀ ದೇವಳದ ಪರಿಸರದ ಶ್ರೀ ನಾಗ ದೇವರ ಮತ್ತು ಜಟ್ಟಿಗ ದೈವ ಪುನ: ಪ್ರತಿಷ್ಠಾ ವರ್ಧಂತಿ ಉತ್ಸವ ಜರಗಿತು. ದೇವಸ್ಥಾನದ ಅರ್ಚಕರು, ಪುರೋಹಿತರು, ಧರ್ಮದರ್ಶಿ ಮಂಡಳಿ ಸದಸ್ಯರು, ಸೇವಾದಾರರು, ಕುಳಾವಿ ಭಜಕರು, ಸಮಾಜಬಾಂಧವರು ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರಸಾದ ಸ್ವೀಕರಿಸಿದರು.

ನಾಳೆ ವಿದ್ಯುತ್ ವ್ಯತ್ಯಯ

ಕಾರ್ಕಳ: ಫೀಡರ್‌ಗಳ ನಿರ್ವಹಣಾ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಮೇ 5ರಂದು ಬೆಳಿಗ್ಗೆ 9ರಿಂದ ಸಂಜೆ 5 ಗಂಟೆಯವರೆಗೆ ಕಾರ್ಕಳ ವಿದ್ಯುತ್ ಕೇಂದ್ರದಿಂದ ಹೊರಡುವ ಹಿರ್ಗಾನ, ನೆಲ್ಲಿಕಟ್ಟೆ, ಜಾರ್ಕಳ ಫೀಡರ್ ಗಳು, ಬಜಗೋಳಿ ವಿದ್ಯುತ್ ಕೇಂದ್ರದಿಂದ ಹೊರಡುವ ಕರ್ಮಾರ್ ಕಟ್ಟೆ ಚೌಕಿ, ಹೊಸ್ಮಾರು ಎಕ್ಸ್ ಪ್ರೆಸ್, ಮಲ್ಲಾರು, ಬಜಗೋಳಿ ಟೌನ್, ಕೆರ್ವಾಶೆ ಮತ್ತು ನೆಲ್ಲಿಕಾರು ಫೀಡರ್ ಗಳಲ್ಲಿ ಮತ್ತು ಹೆಬ್ರಿ ಮತ್ತು ಅಜೆಕಾರು ವಿದ್ಯುತ್ ಉಪಕೇಂದ್ರ ದಿಂದ ಹೊರಡುವ ಎಲ್ಲಾ ಕೆವಿ ಫೀಡರ್ ಗಳಲ್ಲಿ, ಆದ್ದರಿಂದ ಕಾರ್ಕಳ ತಾಲೂಕಿನ ಕುಕ್ಕುಂದೂರು, ಪಿಲಿಚಂಡಿ ಸ್ಥಾನ, ಕುಂದೇಶ್ವರ, ಕಾನಂಗಿ, ಹಿರ್ಗಾನ, ಚಿಕ್ಕಲ್ ಬೆಟ್ಟು, ಮಂಗಿಲಾರು, ನೆಲ್ಲಿಕಟ್ಟೆ ಕಾಂತರಗೋಳಿ, ಎರ್ಲಪಾಡಿ, ಗೋವಿಂದೂರು, ಅಯ್ಯಪ್ಪನಗರ, ಮಂಗಳಕಲ್ಲು, ಗಣಿತನಗರ, ಬೈಲೂರು, ಜಾರ್ಕಳ, ನೀರೆ, ಕೌಡೂರು, ಬಜಗೋಳಿ, ಕೆರ್ವಾಶೆ, ಮುಡ್ರಾಲು, ಕಡಾರಿ, ಮುಲ್ಲೂರು, ಮಾಳ, ಗುರ್ಗಲ್ ಗುಡ್ಡೆ ಚೌಕಿ, ಹುಕ್ರಟ್ಟೆ ನೆಲ್ಲಿಕಾರು, ಚೆಂಡೆ ಬಸದಿ, ಪುಚ್ಚಬೆಟ್ಟು ಜ್ಯೋತಿನಗರ, ಪೇರಲ್ಕೆ ಪೆರ್ನೋಡಿ, ಹೊಸ್ಮಾರು, ಈದು, ನಲ್ಲೂರು, ನೆಲ್ಲಿಗುಡ್ಡೆ, ನೂರಾಳ್ ಬೆಟ್ಟು ಏರಿಯಾ ಮತ್ತು ಹೆಬ್ರಿ, ಹೆಬ್ರಿ ಪೇಟೆ, ತಾಣ, ಮುದ್ರಾಡಿ, ಮುನಿಯಾಲು, ಬಚ್ಚಪ್ಪು ಕಬ್ಬಿನಾಲೆ, ಮಂಡಾಡಿಜೆಡ್ಡು ಕಳ್ತೂರು, ಸಂತೆಕಟ್ಟೆ ಕರ್ಜೆ, ಕುರ್ಪಾಡಿ, ಬೆಳೆಂಜೆ, ಮಡಾಮಕ್ಕಿ ಕಾಸನಮಕ್ಕಿ ಶಿವಪುರ, ಕೆರೆಬೆಟ್ಟು ಕನ್ಯಾನ, ಚಾರ, ಹೊಸೂರು, ಹುತ್ತುರ್ಕೆ ವಾಟರ್ ಸಪ್ಲೈ, ಕಲ್ಲಿಲ್ಲು ವಾಟರ್ ಸಪ್ಲೈ, ಸೀತಾನದಿ, ಸೋಮೇಶ್ವರ, ನಾಡ್ಪಾಲು, ಅಂಡಾರು, ಶಿರ್ಲಾಲು, ಕಾಡುಹೊಳೆ, ಅಜೆಕಾರು, ಹೆರ್ಮುಂಡೆ, ಎಣ್ಣೆಹೊಳೆ, ಕಡ್ತಲ, ಕುಕ್ಕುಜೆ, ಎಳ್ಳಾರೆ, ವರಂಗ, ಮಾತಿಬೆಟ್ಟು ಮುಟ್ಲುಪಾಡಿ, ಚೆನ್ನಿ ಬೆಟ್ಟು, ಚಟ್ಕಲ್ ಪಾದೆ, ಪಡುಕುಡೂರು, ದೆಪ್ಪುತ್ತೆ, ದಾಸಗದ್ದೆ, ಬೊಂಡುಕುಮೇರಿ, ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ.

ಮೊದಲನೇ ಪುಟದಿಂದ

ಪಾತಾಳಕ್ಕೆ ಬಿದ್ದ ತೆಂಗು

ಕಾಸರಗೋಡು ಜಿಲ್ಲೆಯಲ್ಲಿ ಈ ಹಿಂದೆ ತೆಂಗಿನಕಾಯಿ ಬೆಲೆ ಕುಸಿದಾಗ ಕೇರಳ ಕೃಷಿ ಇಲಾಖೆಯ ನೇತೃತ್ವದಲ್ಲಿ ಕೇರಾಫೆಡ್ ಮೂಲಕ ಹಸಿ ತೆಂಗಿನಕಾಯಿಗಳನ್ನು ಕೃಷಿಕರಿಂದ ಖರೀದಿಸಲಾಗುತ್ತಿತ್ತು. ಈ ಮೂಲಕ ಬೆಲೆ ಒಂದು ಹಂತದ ವರೆಗೆ ನಿಯಂತ್ರಣದಲ್ಲಿರುತ್ತಿತ್ತು. ಆದರೆ ಪ್ರಸ್ತುತ ಕೇರಾಫೆಡ್ ಕಾಸರಗೋಡು ಜಿಲ್ಲೆಯ ನೀಲೇಶ್ವರದಲ್ಲಿ ಮಾತ್ರ ಸಂಗ್ರಹಣಾ ಸೌಲಭ್ಯವನ್ನು ಹೊಂದಿದೆ. ಆದ್ದರಿಂದ ತೆಂಗಿನಕಾಯಿ ಸಂಗ್ರಹಣಾ ವ್ಯವಸ್ಥೆಯನ್ನು ಜಿಲ್ಲೆಯ ಇನ್ನೂ ಹೆಚ್ಚಿನ ಕೇಂದ್ರಗಳಿಗೆ ವಿಸ್ತರಿಸಿ ತೆಂಗಿನಕಾಯಿ ಬೆಲೆಯನ್ನು ಏರಿಸುವ ಅಂಗವಾಗಿ ವಿವಿಧ ಯೋಜನೆಗಳನ್ನು ಜಾರಿಗೊಳಿಸಬೇಕೆಂದು ಕೃಷಿಕರು ಒತ್ತಾಯಿಸಿದ್ದಾರೆ.





ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಬ್ರಹ್ಮಕಲಶೋತ್ಸವ ಸಂಭ್ರಮ

ಶ್ರೀ ಗಣಪತಿ ದೇವರಿಗೆ ನೆರವೇರಿತು ಬ್ರಹ್ಮ ಕುಂಭಾಭಿಷೇಕ

ಪಡುಬಿದ್ರಿ: ರೂ.33 ಕೋಟಿ ವೆಚ್ಚದಲ್ಲಿ ಸಮಗ್ರವಾಗಿ ಜೀರ್ಣೋದ್ಧಾರಗೊಂಡ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ನೂತನವಾಗಿ ನಿರ್ಮಿಸಲ್ಪಟ್ಟ ಶಿಲಾಮಯ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಂಡ ಶ್ರೀ ಗಣಪತಿ ದೇವರಿಗೆ ಬ್ರಹ್ಮ ಕುಂಭಾಭಿಷೇಕವು ಶ್ರೀ ಕ್ಷೇತ್ರದ ತಂತ್ರಿಗಳಾದ ಕಂಬ್ಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಶನಿವಾರ ಜರಗಿತು.

ಭಾನುವಾರ ಬೆಳಿಗ್ಗೆ 6ರಿಂದ ಕವಾಟೋದ್ಘಾಟನೆ, ದಂತಧಾವನಾದಿ ಪ್ರಕ್ರಿಯೆಗಳು, ಸುವರ್ಣೋತ್ಸವ, ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾರುದ್ರ ಯಾಗ, ಗಣಪತಿ ದೇವರ ಬ್ರಹ್ಮಕುಂಭ ಸಹಿತ ತ್ರಿಶತ ಕಲಶಾಧಿವಾಸ, ಅಧಿವಾಸ ಯಾಗ, 9.49ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಬ್ರಹ್ಮಕುಂಭಾಭಿಷೇಕ ಜರಗಿತು. ಬಳಿಕ ಪ್ರಸನ್ನ ಪೂಜೆ, ನ್ಯಾಸ ಪೂಜೆ, ರುದ್ರದೇವರಿಗೆ ನವಕ ಪ್ರದಾನ ಕಲಶಾಭಿಷೇಕ, ಪ್ರಸನ್ನ ಪೂಜೆ, ಮಹಾಪೂಜೆ, ಬಲಿ ನೆರವೇರಿತು.

ಮಹಾ ಅನ್ನಸಂತರ್ಪಣೆ, ಸಂಸ್ಥಾನ ಪೂಜೆ

ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ನಡೆಯಿತು. ಸಂಜೆ ದುರ್ಗಾರಾಧನೆ, ಸಂಹಾರ ಬಲಿ, ಓಕುಳಿ, ಅವಭೃತ, ಧ್ವಜಾವರೋಹಣ, ರಾತ್ರಿ ಪೂಜೆ, ನಿತ್ಯ ಬಲಿ ಕಾರ್ಯಕ್ರಮ ಜರಗಿತು.

ಜಗದ್ಗುರು ಶ್ರೀಮಧ್ವಾಚಾರ್ಯ ಮೂಲ ಮಹಾಸಂಸ್ಥಾನ ಶ್ರೀ ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾಸಾಗರತೀರ್ಥ ಶ್ರೀಪಾದರ ದಿವ್ಯಸಾನಿಧ್ಯ ಮತ್ತು ಸಂಸ್ಥಾನ ಪೂಜೆಯು ಜರಗಿತು.






ಈ ಸಂದರ್ಭದಲ್ಲಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಡಾ. ಕೆ.ಪ್ರಕಾಶ್ ಶೆಟ್ಟಿ, ಗೌರವಾಧ್ಯಕ್ಷರಾದ ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಮಾಜಿ ಸಚಿವರಾದ ವಿನಯ ಕುಮಾರ್ ಸೊರಕೆ, ಕೊರ್ನಾಯ ಪದ್ಮನಾಭ ರಾವ್, ಅನುವಂಶಿಕ ಮೊಕ್ತೇಸರರಾದ ರತ್ನಾಕರರಾಜ ಅರಸು ಕಿನ್ನಕ್ಕ ಬಲ್ಲಾಳ್, ಪೇಟೆಮನೆ ಪಿ. ಭವಾನಿಶಂಕರ್ ಹೆಗ್ಡೆ ಕೊರ್ನಾಯ ಶ್ರೀಪತಿ ರಾವ್, ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ಅರ್ಚಕರಾದ ಎಚ್.ಪದ್ಮನಾಭ ಭಟ್, ವೈ.ಗುರುರಾಜ ಭಟ್, ಜೀರ್ಣೋದ್ಧಾರ ಸಮಿತಿಯ ಪ್ರಧಾನ ಕಾರ್ಯದರ್ಶಿ ಪಿ. ರಾಘವೇಂದ್ರ ನಾವಡ, ಕಾರ್ಯದರ್ಶಿಗಳಾದ ಶ್ರೀನಾಥ್ ಹೆಗ್ಡೆ ನಡ್ಸಾಲ್ ಗುತ್ತು, ವೈ. ಸುಕುಮಾರ್, ಸಹಕಾರ್ಯದರ್ಶಿಗಳಾದ ನವೀನ್ ಚಂದ್ರ ಜೆ. ಶೆಟ್ಟಿ ಸುಚರಿತ, ಖಜಾಂಚಿ ಕಾರ್ಯನಿರ್ವಾಹಕ ಅಧಿಕಾರಿ ರಾಜಗೋಪಾಲ ಉಪಾಧ್ಯಾಯ, ಉಪಾಧ್ಯಕ್ಷರಾದ ರವೀಂದ್ರನಾಥ ಜಿ. ಹೆಗ್ಡೆ ಸದಾಶಿವ ಪಡುಬಿದ್ರಿ, ಪ್ರಶಾಂತ್ ಶೆಣೈ, ಭಾಸ್ಕರ್ ಕೆ, ಪ್ರಕಾಶ್ ದೇವಾಡಿಗ, ಸುಕುಮಾರ್ ಶ್ರೀಯಾನ್, ಸದಸ್ಯರಾದ ವೈ ಗುರುರಾಜ್ ಭಟ್, ರಾಜೇಶ್ ಪಿ., ಪಿ.ಕೆ. ಸದಾನಂದ, ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಮುರಳಿನಾಥ ಶೆಟ್ಟಿ, ಉಪಾಧ್ಯಕ್ಷರಾದ ವೈ.ಎನ್. ರಾಮಚಂದ್ರ ರಾವ್, ಕೃಷ್ಣ ಶೆಟ್ಟಿ ಕಂಕಣಗುತ್ತು, ಪಿ.ಕೆ. ಸದಾನಂದ, ಅಶೋಕ್ ಸಾಲ್ಯಾನ್, ಪ್ರಶಾಂತ್ ಶೆಣೈ, ಭರತ್ ದೇವಾಡಿಗ, ಕಾರ್ಯದರ್ಶಿಗಳಾದ ಪ್ರಕಾಶ್ ದೇವಾಡಿಗ, ರಮಾಕಾಂತ್ ರಾವ್, ಗುರುಪ್ರಸಾದ್ ರಾವ್, ಪ್ರಮುಖರಾದ ಮಾತೃಮಂಡಳಿಯ ಗೌರವಾಧ್ಯಕ್ಷೆ ಆಶಾ ಪ್ರಕಾಶ್ ಶೆಟ್ಟಿ, ಶಕುಂತಳಾ ಬಿ. ಹೆಗ್ಡೆ ಕೃಷ್ಣಾಪುರ ಶಾಖಾ ಮಠದ ಶ್ರೀನಿವಾಸ ಉಪಾಧ್ಯಾಯ, ವಿ ಜಯ ಶೆಟ್ಟಿ ಪದ್ರ, ಪೇಟೆಮನೆ ಪ್ರಕಾಶ್ ಶೆಟ್ಟಿ ಮುರುಡಿ ಜಗದೀಶ್ ರಾವ್, ಸದಾಶಿವ ಆಚಾರ್, ವಿಷ್ಣುಮೂರ್ತಿ ಆಚಾರ್ಯ, ವೈ. ಸುಧೀರ್ ಕುಮಾರ್, ನವೀನ್ ಎನ್.ಶೆಟ್ಟಿ ಶಶಿಕಾಂತ್ ಪಡುಬಿದ್ರಿ, ಪ್ರಕಾಶ್ ಶೆಟ್ಟಿ ಪಾದೆಬೆಟ್ಟು, ಸತೀಶ್ ಆಚಾರ್ಯ, ರಮಾಕಾಂತ ದೇವಾಡಿಗ, ಮುಂಬೈ ಸಮಿತಿಯ ಮಹೇಶ್ ಶೆಟ್ಟಿ, ಡಾ. ವೈ.ಎನ್. ಶೆಟ್ಟಿ, ಬ್ರಹ್ಮಕಲಶೋತ್ಸವ ಮತ್ತು ಜೀರ್ಣೋದ್ಧಾರ ಸಮಿತಿ ಪದಾಧಿಕಾರಿಗಳು ಹಾಗೂ ವಿವಿಧ ಉಪಸಮಿತಿಗಳ ಸಂಚಾಲಕರು, ಸರ್ವ ಸದಸ್ಯರು ಊರಿನ ಹತ್ತು ಸಮಸ್ತರು, ಭಕ್ತ ಗಡಣ ಉಪಸ್ಥಿತರಿದ್ದರು.

ಶೃಂಗೇರಿ ಶ್ರೀಗಳ ಭೇಟಿ

ಸಂಜೆ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ ಭೇಟಿ ನೀಡಿದರು.

ಬಂಟಕಲ್ ಕಾಲೇಜಿಗೆ ರಾಷ್ಟ್ರೀಯ ಹ್ಯಾಕಥಾನ್‌ನಲ್ಲಿ ಶ್ರೇಷ್ಠತಾ ಪ್ರಶಸ್ತಿ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಿದ್ಯಾರ್ಥಿ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಮೆಷಿನ್‌ಲರ್ನಿಂಗ್ ವಿಭಾಗದ ವಿದ್ಯಾರ್ಥಿಗಳಾದ ಚೇತನ್ ವಿ ಕೋಟ್ಯಾನ್ ಮತ್ತು ಆಶ್ಲೇ ಫೆರ್ನಾಂಡಿಸ್ ಗೂಗಲ್ ಡೆವಲಪರ್ ಗ್ರೂಪ್ಸ್ ಬೆಂಗಳೂರು ಮತ್ತು ರೋಟರಿ ಇಂಟರ್ ನ್ಯಾಷನಲ್‌ನ ಸಹಯೋಗದೊಂದಿಗೆ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹ್ಯಾಕಥಾನ್‌ನಲ್ಲಿ 'ಶ್ರೇಷ್ಠತಾ ಪ್ರಶಸ್ತಿ'ಯನ್ನು ಪಡೆದಿದ್ದಾರೆ.

ವಿದ್ಯಾರ್ಥಿಗಳು ಪ್ರಸ್ತುತ ಪಡಿಸಿದ 'ವ್ಯಾಸ ಗುರು' ಯೋಜನೆಯು ಸ್ಟೇಟ್ ಬೋರ್ಡ್ ವಿದ್ಯಾರ್ಥಿಗಳಿಗಾಗಿ ವಿನ್ಯಾಸಗೊಳಿಸಿದ ಹೈಪರ್ ಪರ್ಸನಲೈಸ್ಡ್ ಧ್ವನಿ ಆಧಾರಿತ ಎಐ ಟ್ಯೂಟರಿಂಗ್ ವೇದಿಕೆಯಾಗಿದೆ. ರಾಜ್ಯ ಮಂಡಳಿ ಪಠ್ಯಕ್ರಮವನ್ನು ಅನುಸರಿಸುವ ವಿದ್ಯಾರ್ಥಿಗಳನ್ನು ಒಳಗೊಂಡಂತೆ, ಈ ವೇದಿಕೆಯು ಧ್ವನಿ ಆಧಾರಿತ ಎಐ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರತಿಯೊಬ್ಬ ವಿದ್ಯಾರ್ಥಿಗಳನ್ನು ಅಗತ್ಯಗಳಿಗೆ ತಕ್ಕಂತೆ ಶೈಕ್ಷಣಿಕ ಬೆಂಬಲವನ್ನು ಹೆಚ್ಚಿಸಿ ಕಲಿಕೆಯನ್ನು ಹೆಚ್ಚು ಸುಲಭ ಮಾಡುವ ಉದ್ದೇಶವನ್ನು ಹೊಂದಿದೆ.

ಪರಿಶಿಷ್ಟ ಜಾತಿ, ಪಂಗಡದ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಗೌರವಾರ್ಪಣೆ



ಕುಂದಾಪುರ: ಕಲಾಶ್ರೀ ಶಿಕ್ಷಣ ಪ್ರೇಮಿಗಳ ಬಳಗ ಗಂಗೊಳ್ಳಿ ಇದರ ವತಿಯಿಂದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎಸ್ಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಮೇಲ್‌ಗಂಗೊಳ್ಳಿಯ ಡಾ.ಬಿ.ಆರ್. ಅಂಬೇಡ್ಕರ್ ಸಭಾ ಭವನದಲ್ಲಿ ಭಾನುವಾರ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೈಂದೂರು ಅರಣ್ಯ ಇಲಾಖೆ ಅಧಿಕಾರಿ ಸದಾಶಿವ ಕೆ. ವಹಿಸಿದ್ದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಎಸೆಸ್ಸೆಲ್ಸಿ ಸಾಧಕ ವಿದ್ಯಾರ್ಥಿಗಳಾದ ಸೌಮ್ಯಾ ಸುಧಾಕರ, ಜ್ಞಾನ ರಮೇಶ, ಹರ್ಷಿತಾ, ಪಲ್ಲವಿ ಸನ್ಮಾನಿಸಿ ಗೌರವಿಸಲಾಯಿತು. ಕೆನರಾ ಬ್ಯಾಂಕಿನ ನಿವೃತ್ತ ಉದ್ಯೋಗಿ ಪ್ರಮೋದ ಗಾಣಿಗ, ಉದ್ಯಮಿ ದಯಾನಂದ ಬೆಂಗಳೂರು ಶುಭಾಶಂಸನೆಗೈದರು. ಗಂಗೊಳ್ಳಿ ಜೇಸಿಐ ಕಾರ್ಯದರ್ಶಿ ನಾಗರಾಜ ಖಾರ್ವಿ, ಕಲಾಶ್ರೀ ಶಿಕ್ಷಣ ಪ್ರೇಮಿಗಳ ಬಳಗದ ಅಧ್ಯಕ್ಷೆ ಸುಮಿತ್ರಾ ಜಿ., ಸಮಾಜ ಸೇವಕ ಮಹಮ್ಮದ್ ಹುಸೇನ್ ಗಂಗೊಳ್ಳಿ, ವಿಜೇತ ಕೆ., ಕಾರ್ತಿಕ ಎಂ.ಜಿ.ಜಿ. ಈಶ್ವರ, ರಮೇಶ ಎಂ.ಜಿ., ಜಗದೀಶ್ ಮೇಲ್‌ಗಂಗೊಳ್ಳಿ, ಸುಧಾಕರ ಜಿ.ಟಿ., ಪಲ್ಲವಿ, ರೇಖಾ, ಜ್ಯೋತಿ ರಮೇಶ್, ಇನ್ನಿತರರು ಉಪಸ್ಥಿತರಿದ್ದರು. ಸುಮಿತ್ರಾ ಜಿ. ಸ್ವಾಗತಿಸಿದರು. ವಿಜೇತ ಕೆ. ಕಾರ್ಯಕ್ರಮ ನಿರೂಪಿಸಿದರು. ಜಗದೀಶ ಎಂ.ಜಿ. ವಂದಿಸಿದರು.

ವಸತಿ, ನಿವೇಶನ ರಹಿತರಿಂದ ಅರ್ಜಿ ಆಹ್ವಾನ

ಉಡುಪಿ: ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ 2018ರ ವಸತಿ ರಹಿತ ಮತ್ತು ನಿವೇಶನ ರಹಿತರ ಸಮೀಕ್ಷೆಯ ಪಟ್ಟಿಯಲ್ಲಿ ಬಿಟ್ಟು ಹೋಗಿರುವ ಅರ್ಹ ಫಲಾನುಭವಿಗಳನ್ನು ಸೇರ್ಪಡೆಗೊಳಿಸಲು ಮೇ 15ರ ವರೆಗೆ ಅಂತಿಮ ಕಾಲಾವಕಾಶ ಕಲ್ಪಿಸಲಾಗಿದೆ. ಅರ್ಹರು ಅರ್ಜಿಯನ್ನು ಸಮೀಪದ ಗ್ರಾ.ಪಂ. ಕಚೇರಿಗೆ ಸಲ್ಲಿಸಬಹುದಾಗಿದೆ ಎಂದು ಕುಂದಾಪುರ ತಾ.ಪಂ. ಇಒ ಕಚೇರಿ ಪ್ರಕಟಣೆ ತಿಳಿಸಿದೆ.



ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ವಿಧಾನಸಭೆ ಸಭಾಪತಿ ಯು.ಟಿ. ಖಾದರ್ ದೇವಸ್ಥಾನಕ್ಕೆ ಭೇಟಿ ನೀಡಿದ ಸಂದರ್ಭ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಡಾ.ಕೆ. ಪ್ರಕಾಶ ಶೆಟ್ಟಿ ಗೌರವಿಸಿದರು. ಶಾಸಕ ಗುರ್ಮೆ ಸುರೇಶ್ ಶೆಟ್ಟಿ, ಗಣ್ಯರಾದ ನವೀನ್ ಚಂದ್ರ ಜೆ. ಶೆಟ್ಟಿ ವೈ.ಸುಕುಮಾರ್, ಡಾ. ದೇವಿಪ್ರಸಾದ್ ಶೆಟ್ಟಿ ಬೆಳಪು, ರಾಜರ್ಷಿ ಕೆ. ವಾಸುದೇವ ಶೆಟ್ಟಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.



ಕುಂದಾಪುರ ತಾಲೂಕಿನ ಮಾರಣಕಟ್ಟೆ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನ ಶ್ರೀ ಕ್ಷೇತ್ರ ಇದರ ವತಿಯಿಂದ 7ನೇ ವರ್ಷದ ಉಚಿತ 'ಮಾಂಗಲ್ಯ ಭಾಗ್ಯ' ಸಾಮೂಹಿಕ ಸರಳ ವಿವಾಹ ಕಾರ್ಯಕ್ರಮದಲ್ಲಿ ಸುಮಾರು 12 ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಿದರು. ದೇವಸ್ಥಾನದ ಅನುವಂಶೀಯ ಆಡಳಿತ ಮೊಕ್ತೇಸರ ಸಿ.ಸದಾಶಿವ ಶೆಟ್ಟಿ ಮೊದಲಾದವರು ಇದ್ದರು.

ಶ್ರೀ ವಿಠ್ಠಲ ರಕುಮಾಯಿ ತಥಾ ಮುಖ್ಯಪ್ರಾಣ ದೇಗುಲದಲ್ಲಿ ದೇವರ ಪುನ: ಪ್ರತಿಷ್ಠಾ ವರ್ಧಂತಿ ಉತ್ಸವ

ಕುಂದಾಪುರ: ಗಂಗೊಳ್ಳಿಯ ಪೇಟೆ ಶ್ರೀ ವಿಠ್ಠಲ ರಕುಮಾಯಿ ತಥಾ ಮುಖ್ಯಪ್ರಾಣ ದೇವಸ್ಥಾನದಲ್ಲಿ ದೇವರ ಪುನ: ಪ್ರತಿಷ್ಠಾ ವರ್ಧಂತಿ ಉತ್ಸವ ಸಂಪನ್ನಗೊಂಡಿತು.

ಬೆಳಿಗ್ಗೆ ಪ್ರಾರ್ಥನೆಯೊಂದಿಗೆ ದೇವರ ಪುನ: ಪ್ರತಿಷ್ಠಾ ವರ್ಧಂತಿ ಉತ್ಸವದ ಧಾರ್ಮಿಕ ವಿಧಿವಿಧಾನಗಳು ಪ್ರಾರಂಭಗೊಂಡಿತು. ಬಳಿಕ ಸಾನಿಧ್ಯ ಹವನ, ಶತಕಲಶಾಭಿಷೇಕ, ಮಹಾ ಮಂಗಳಾರತಿ, ಸಮಾರಾಧನೆ ಸೇವೆ ನಡೆಯಿತು.





ನವರಸ ನಾಯಕ ನಟ ಹಾಗೂ ರಾಜ್ಯಸಭಾ ಸದಸ್ಯರಾದ ಜಗ್ಗೇಶ್ ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನಕ್ಕೆ ಭಾನುವಾರ ಭೇಟಿ ನೀಡಿ ದೇವರ ದರ್ಶನ ಪಡೆದರು. ಈ ಸಂದರ್ಭದಲ್ಲಿ ಶ್ರೀ ಕ್ಷೇತ್ರದ ವತಿಯಿಂದ ಗೌರವಿಸಲಾಯಿತು. ಶ್ರೀ ಕ್ಷೇತ್ರದ ಅಧ್ಯಕ್ಷ ಗಿರಿಧರ್ ಸುವರ್ಣ, ಶೇಖರ್ ಪುತ್ರನ್, ಪುರೋಹಿತರಾದ ಶ್ರೀನಿವಾಸ್ ಉಪಾಧ್ಯಾಯ, ಶ್ರೀಷ ಉಪಾಧ್ಯಾಯ, ಪದ್ಮನಾಭ ಕೋಟ್ಯಾನ್ ಇದ್ದರು.

ಶ್ರೀ ಶಂಕರನಾರಾಯಣ ದೇವಸ್ಥಾನದಲ್ಲಿ ಮಹಾರುದ್ರಯಾಗ

ಉತ್ಸವದ ಪೂರ್ವಭಾವಿಯಾಗಿ ಚಪ್ಪರ ಮುಹೂರ್ತ

ಉಡುಪಿ: ಕೊಡವೂರು ಶಂಕರನಾರಾಯಣ ದೇವಸ್ಥಾನದಲ್ಲಿ ಲೋಕ ಕಲ್ಯಾಣಾರ್ಥ, ನಾಡಿನ ಜನರ ಸುಭಿಕ್ಷೆಗಾಗಿ ಮೇ 14ರಿಂದ 19ರವರೆಗೆ ಮಹಾ ರುದ್ರಯಾಗದ ಪೂರ್ವಭಾವಿಯಾಗಿ ಭಾನುವಾರ ಚಪ್ಪರ ಮುಹೂರ್ತ ಕಾರ್ಯಕ್ರಮ ಜರಗಿತು.

ಪ್ರಧಾನ ಅರ್ಚಕ ಸೀತಾರಾಮ ಆಚಾರ್ಯ ಅವರ ಪೌರೋಹಿತ್ಯದಲ್ಲಿ ಧಾರ್ಮಿಕ ವಿಧಿವಿಧಾನಗಳು ನಡೆಯಿತು. ಮಹಾರುದ್ರಯಾಗಸಮಿತಿಕಾರ್ಯಾಧ್ಯಕ್ಷ ಪ್ರಸಾದ್‌ರಾಜ್ ಕಾಂಚನ್, ಸಮಿತಿ ಸಂಚಾಲಕ ಕೆ. ಕೃಷ್ಣಮೂರ್ತಿ ಆಚಾರ್ಯ, ಶಂಕರನಾರಾಯಣದ ದೇಗುಲದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು, ರುದ್ರಯಾಗ ಸಮಿತಿ ಸಂಚಾಲಕರಾದ ರಮೇಶ್ ಎಸ್. ತಿಂಗಳಾಯ, ನಂದಕಿಶೋರ್ ಕೆಮ್ಮಣ್ಣು, ಬಾಲಕೃಷ್ಣ ಕೊಡವೂರು, ಭಜನಾ ಸಂಚಾಲಕ ಧನಂಜಯ ಕಾಂಚನ್, ವ್ಯವಸ್ಥಾಪನಾ ಸಮಿತಿಯ ಸದಸ್ಯರಾದ ಭಾಸ್ಕರ ಪಾಲನ್, ಎ. ರಾಜ ಸೇರಿಗಾರ, ವಾದಿರಾಜ್ ಸಾಲ್ಯಾನ್, ಯಶೋಧರ ಸಾಲ್ಯಾನ್, ಬಾಬ ಕೆ., ಉಷಾ ಆನಂದ ಸುವರ್ಣ, ಶೀಲಾ ದೇವಾಡಿಗ, ಪ್ರಮುಖರಾದ ಪಿ. ಗುರುರಾಜ್ ರಾವ್, ಯಾದವ ಅಮೀನ್, ಸದಾನಂದ ಮೂಲ್ಯ, ಬಿ. ಕುಶಲ ಶೆಟ್ಟಿ, ಆಶಾ ಚಂದ್ರಶೇಖರ್, ಸುರೇಂದ್ರ ಆಚಾರ್ಯ, ಸುನೀಲ್ ಪೂಜಾರಿ, ಶಂಕರ ಕುಂದರ್, ಹರಿಪ್ರಸಾದ್ ಮಲ್ಪೆ, ಶರತ್ ಹನುಮಾನ್‌ನಗರ, ಕುಸುಮ ಕರ್ಕೇರ, ಯಶೋದ ಕೆಮ್ಮಣ್ಣು, ಸತೀಶ್ ಕಲ್ಯಾಣಪುರ, ವಿಠಲ ಪೂಜಾರಿ, ಶಾಲಿನಿ ಸಾಲ್ಯಾನ್, ಅರ್ಚನಾ ದೇವಾಡಿಗ, ವಿಜಯ ಭಾಸ್ಕರ, ಸಂಧ್ಯಾ ಪ್ರಕಾಶ್, ಸುಕನ್ಯ ಪೂಜಾರಿ, ಶಕುಂತಳಾ ಸದಾನಂದ, ಉಮೇಶ್ ರಾವ್ ಕೊಡವೂರು ಇದ್ದರು.



ಮಾಬುಕಳದಲ್ಲಿ ಸಾಹಿತ್ಯ ಸಂಚಾರ 62ನೇ ಸರಣಿ ಕಾರ್ಯಕ್ರಮ

ಸಾಹಿತ್ಯದಿಂದ ಜನಸಂಸ್ಕೃತಿಗಳ ಬಗ್ಗೆ ತಾತ್ವಿಕ ಅರಿವು

ಕೋಟ: ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ಘಟಕದ ಸಾಹಿತ್ಯ ಸಂಚಾರ 62ನೇ ಸರಣಿ ಕಾರ್ಯಕ್ರಮ ಬ್ರಹ್ಮಾವರ ಮಾಬುಕಳ ಫಾರ್ಚೂನ್ ಅಕಾಡೆಮಿ ಆಫ್ ಸೈನ್ಸ್‌ನಲ್ಲಿ ಜರಗಿತು

ಕಾಲೇಜಿನ ವ್ಯವಸ್ಥಾಪಕ ತಾರಾನಾಥ ಶೆಟ್ಟಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಧ್ಯಾಪಕ ಪವನ, ಸಾಹಿತ್ಯ ಸಮಾಜ ಮತ್ತು ಜನಸಂಸ್ಕೃತಿಗಳ ಬಗ್ಗೆ ತಾತ್ವಿಕ ತಿಳುವಳಿಕೆ ಮೂಡಿಸುತ್ತದೆ ಎಂದು ಪ್ರಾಸ್ತಾವಿಕ ನುಡಿಗಳ ನಾಡುತ್ತಾ ಸ್ವಾಗತಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಬ್ರಹ್ಮಾವರ ಘಟಕದ ಅಧ್ಯಕ್ಷ ರಾಮಚಂದ್ರ ಐತಾಳ್ ಮಾತನಾಡಿ ಓದು ವ್ಯಕ್ತಿಯನ್ನು ರೂಪಿಸುತ್ತದೆ, ಸಾಹಿತ್ಯ ಆತನನ್ನು ಸಿದ್ಧಗೊಳಿಸುತ್ತದೆ, ಮತ್ತು ಪರಿಪೂರ್ಣವನ್ನಾಗಿಸುತ್ತದೆ ಎಂದು ವಿದ್ಯಾರ್ಥಿಗಳನ್ನು ಸಾಹಿತ್ಯದತ್ತ ಸೆಳೆದರು.



ಸಂಪನ್ಮೂಲ ವ್ಯಕ್ತಿ ಡಾ. ಸರಿತಾ ಉಪಾಧ್ಯಾಯ ಅವರು ವೈದ್ಯಕೀಯ ಮತ್ತು ಸಾಹಿತ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿ ಹೇಳಿದರು. ನರೇಂದ್ರ ಕುಮಾರ್ ಕೋಟ ಇವರು ಇತಿಹಾಸದಲ್ಲಿ ಛಾಪು ಮೂಡಿಸಿದ ವ್ಯಕ್ತಿಗಳ ವಿವರವನ್ನು ಎಳೆ ಎಳೆಯಾಗಿ ಹಂಚಿದರು. ಮಹಾಲಕ್ಷ್ಮಿ ಸೋಮಯಾಜಿ ಆಂಗೀಕ ಅಭಿನಯದ ಮೂಲಕ ಸಾಹಿತ್ಯದ ಮೆರಗನ್ನು ಸೃಷ್ಟಿಸಿದರು. ಅಚ್ಚುತ ಪೂಜಾರಿ ತಮ್ಮ ಸಾಧನೆಯ ದಾರಿ ಮತ್ತು ಕನ್ನಡ ಗೀತೆಗಳನ್ನು ಹಾಡಿ ರಂಜಿಸಿದರು. ವಿದ್ಯಾರ್ಥಿ ಚೇತನ್ ನಿರೂಪಿಸಿದರು.